ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

‘ಕ್ರಿಪ್ಟೊಕರೆನ್ಸಿ ಬಳಕೆ ಪರಿಶೀಲನೆ: ಸರ್ಕಾರ ಮುಕ್ತವಾಗಿದೆ’ 9
ಪ್ರಧಾನಿ ಅಹಂಕಾರದ ನೂರನೇ ದಿನ: ಯೋಗೇಂದ್ರ ಕಿಡಿ
ತಮಿಳುನಾಡು: 20 ಕ್ಷೇತ್ರಗಳಲ್ಲಿ ಬಿಜೆಪಿ ಸ್ಪರ್ಧೆ 8
‘ಕೃಷಿ ತಿದ್ದುಪಡಿ ಕಾಯ್ದೆಗಳು ಸತ್ತವು’ 8

ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್: ಭಾರತಕ್ಕೆ ರಹದಾರಿ

ಭಾರತಕ್ಕೆ 3–1ರಿಂದ ಸರಣಿ ಜಯ

ಟ್ರೋಫಿಯೊಂದಿಗೆ ನಾಯಕ ವಿರಾಟ್ ಕೊಹ್ಲಿ, ವಾಷಿಂಗ್ಟನ್ ಸುಂದರ್, ಅಕ್ಷರ್ ಪಟೇಲ್, ಮೊಹಮ್ಮದ್ ಸಿರಾಜ್ ಮತ್ತು ರಿಷಭ್ ಪಂತ್ –ರಾಯಿಟರ್ಸ್ ಚಿತ್ರ

4ನೇ ಟೆಸ್ಟ್ ಮೊದಲ ಇನಿಂಗ್ಸ್
ಇಂಗ್ಲೆಂಡ್ 205 (75.5 ಓವರ್‌ಗಳಲ್ಲಿ)
ಭಾರತ 365 (114.4 ಓವರ್‌ಗಳಲ್ಲಿ)

ಎರಡನೇ ಇನಿಂಗ್ಸ್
ಇಂಗ್ಲೆಂಡ್ 135 (54.5 ಓವರ್‌ಗಳಲ್ಲಿ)

ಫಲಿತಾಂಶ: ಭಾರತ ತಂಡಕ್ಕೆ ಇನಿಂಗ್ಸ್ ಮತ್ತು 25 ರನ್‌ಗಳ ಜಯ

ಡಬ್ಲ್ಯುಟಿಸಿ ಅಂಕಪಟ್ಟಿ

ತಂಡ	ಶೇಕಡಾ	ಅಂಕ	ಪಂದ್ಯಗಳಲ್ಲಿ ಸರಣಿ	ಜಯ	ಸೋಲು	ಡ್ರಾ
ಭಾರತ	72.2	520	6	12	4	1
ನ್ಯೂಜಿಲೆಂಡ್	70.0	420	5	7	4	0
ಆಸ್ಟ್ರೇಲಿಯಾ	69.2	332	4	8	4	2
ಇಂಗ್ಲೆಂಡ್	61.4	442	6	11	7	3

ವಿವರ ಪುಟ 14

ಸರ್ಕಾರದ ಬಳಿಯೇ ಇಲ್ಲ ಒತ್ತುವರಿ ಮಾಹಿತಿ • ದೂಳು ತಿನ್ನುತ್ತಿವೆ ದೂರುಗಳ ಕಡತ

ಗೋಮಾಳವೆಂಬ ಗೋಜಲು

• ರಾಜೇಶ್ ರೈ ಚಟ್ಲ

ಒಳನೋಟ
ಗೋ ರಕ್ಷಣೆಯ ಸಂಕಷ್ಟ
ಪ್ರತಿಕ್ರಿಯಿಸಿ: 9606038256

ಬೆಂಗಳೂರು: ‘ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಕಾಯ್ದೆ’ ರಾಜ್ಯದಲ್ಲಿ ಜಾರಿಯೇನೊ ಆಗಿದೆ. ಜೊತೆಗೇ ಗೋ ರಕ್ಷಣೆಯ ಹೊಣೆ ಸರ್ಕಾರದ ಹೆಗಲೇರಿದೆ. ಅದರ ಬೆನ್ನಲ್ಲೇ, ಗೋಶಾಲೆಗಳು ಮತ್ತು ಗೋಮಾಳಗಳ ವಿಚಾರ ಮುನ್ನೆಲೆಗೆ ಬಂದಿದೆ. ಕಾಯ್ದೆಯನ್ನು ಅನುಷ್ಠಾನಗೊಳಿಸಬೇಕಾದ ಸವಾಲು ಪಶು ಸಂಗೋಪನೆ ಇಲಾಖೆಯ ಮುಂದೆ ಇದೆ.

ಗೋಹತ್ಯೆ ನಿಷೇಧ ಕಾಯ್ದೆ ಜಾರಿಯಾದ ಮಾತ್ರಕ್ಕೆ, ವಯಸ್ಸಾದ, ಉಳುಮೆ ಮಾಡಲು ಸಾಧ್ಯವಾಗದ, ಸಾಕಲು ಹೊರೆ ಅನ್ನಿಸುವಂಥ ಗೋವುಗಳನ್ನು ಖರೀದಿಸಲು ಸರ್ಕಾರ ನಿರ್ಧರಿಸಿಲ್ಲ. ಅವುಗಳನ್ನು ಗೋಶಾಲೆಗಳಿಗೆ ಬಿಡಲು ಅವಕಾಶವಿದೆ. ವಿಪರ್ಯಾಸ ಎಂದರೆ, ಸರ್ಕಾರದ ಬಳಿ ಸ್ವಂತ ಗೋಶಾಲೆಗಳೇ ಇಲ್ಲ. ಚಿಕ್ಕಬಳ್ಳಾಪುರ ಹೊರತುಪಡಿಸಿ ಉಳಿದ 29 ಜಿಲ್ಲೆಗಳಲ್ಲಿ ವಿವಿಧ ಖಾಸಗಿ, ಸೇವಾ ಟ್ರಸ್ಟ್‌ಗಳು, ಮಠಗಳು ನಡೆಸುವ ಒಟ್ಟು 188 ಗೋಶಾಲೆಗಳಿವೆ. ಆ ಶಾಲೆಗಳಲ್ಲಿರುವ ಜಾನುವಾರುಗಳ ನಿರ್ವಹಣೆಗೆ ದಿನವೊಂದಕ್ಕೆ ಒಂದು ಜಾನುವಾರಿಗೆ ₹ 17ರಂತೆ (ಗರಿಷ್ಠ 200ಕ್ಕೆ) ಸರ್ಕಾರ ಅನುದಾನ ನೀಡುತ್ತಿದೆ.

ಮಾಹಿತಿಯೇ ಇಲ್ಲ: ಲಭ್ಯ ಅಂಕಿ ಅಂಶಗಳ ಪ್ರಕಾರ, ರಾಜ್ಯ ಸರ್ಕಾರದ ವಶದಲ್ಲಿ 17.59 ಲಕ್ಷ ಹೆಕ್ಟೇರ್ ಗೋಮಾಳವಿದೆ. ಲಕ್ಷಾಂತರ ಎಕರೆ ಗೋಮಾಳ ಒತ್ತುವರಿಯಾಗಿದೆ. ಆದರೆ ಒತ್ತುವರಿಯಾದ ಗೋಮಾಳ ಜಮೀನಿನ ಮಾಹಿತಿಯೇ ಸರ್ಕಾರದ ಬಳಿಯಿಲ್ಲ!

ಗೋಮಾಳ, ಗಾಯರಾಣ, ಹುಲ್ಲು ಬನ್ನಿ ಪ್ರದೇಶಗಳಲ್ಲಿ ಭೂರಹಿತರು ಸಾಗುವಳಿ ಮಾಡಿದರೆ ಅಂಥವರ ಪೂರ್ವಾಪರಗಳನ್ನು ಪರಿಶೀಲಿಸಿ, ಸಾಗುವಳಿ ಚೀಟಿ ನೀಡುವ ಪರಿಪಾಟ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಇದಕ್ಕೆ ಪ್ರತ್ಯೇಕ ಕಾನೂನು ಮತ್ತು ಭೂ ಮಂಜೂರಾತಿ ಸಮಿತಿಗಳಿವೆ.

ಹುಬ್ಬಳ್ಳಿಯ ನ್ಯೂ ಮೇದಾರ ಓಣಿ ವೃತ್ತದ ಹುಲ್ಲು ಮಾರಾಟ ಸ್ಥಳದಲ್ಲಿ ಕಂಡುಬಂದ ಬಿಡಾಡಿ ದನಗಳು ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ರಾಜ್ಯದಲ್ಲಿರುವ ಒಟ್ಟು ಜಾನುವಾರುಗಳು (ಕೋಟಿಗಳಲ್ಲಿ)

ವರ್ಷ	ಕೋಟಿಗಳಲ್ಲಿ
2007	3.29
2012	2.90
2019	3.03

ಪಶು ಸಂಗೋಪನೆ ಇಲಾಖೆಯ ಸಿಬ್ಬಂದಿ ಅಂಕಿಅಂಶ
ಮಂಜೂರಾದ ಹುದ್ದೆ 18,560
ಕಾರ್ಯನಿರ್ವಹಣೆ 9,891

6ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 6

‘ಗೋಮಾಳ ಒತ್ತುವರಿ ತೆರವು’

ರಾಜ್ಯದ ಕಂದಾಯ ಸಚಿವರು ಮತ್ತು ಎಲ್ಲ ಜಿಲ್ಲಾಧಿಕಾರಿಗಳ ಜೊತೆ ಚರ್ಚಿಸಿದ್ದೇನೆ. ಗೋಮಾಳ ಒತ್ತುವರಿ ಆಗಿದ್ದರೆ ತೆರವುಗೊಳಿಸುವ ಬಗ್ಗೆ ಮಾತನಾಡಿದ್ದೇನೆ. ಈ ಬಾರಿಯ ಬಜೆಟ್ ಪಶುಸಂಗೋಪನೆ ಇಲಾಖೆಗೆ ಆಶಾದಾಯಕವಾಗಿರಲಿದೆ.

ಬಜೆಟ್ ಅಧಿವೇಶನದ ನಂತರ ತಾಲ್ಲೂಕಿಗೊಂದು ಗೋಶಾಲೆ ಆರಂಭಿಸುವ ಕುರಿತು ಸ್ಪಷ್ಟ ನಿರ್ಧಾರ ಕೈಗೊಳ್ಳಲಾಗುವುದು.

ಪ್ರಭು ಚವಾಣ್
ಪಶು ಸಂಗೋಪನಾ ಸಚಿವ

ಭಾನುವಾರದ ಪುರವಣಿ

ಬೆಳಕನಿಟ್ಟು ತೂಗಿದಾಕೆ ಕತ್ತಲಲ್ಲೇ ಉಳಿದುದೇಕೇ? ಮಹಿಳಾ ದಿನದ ನೆಪದಲ್ಲಿ ಸ್ತ್ರೀ ಅಸ್ಮಿತೆ ಹುಡುಕಾಟದ ಅನನ್ಯ ಬರಹಗಳು

ಕವಿ ಲಕ್ಷ್ಮೀನಾರಾಯಣ ಭಟ್ಟ ನಿಧನ

ಬೆಂಗಳೂರು: ಕನ್ನಡದ ಜನಪ್ರಿಯ ಕವಿಗಳಲ್ಲಿ ಒಬ್ಬರಾದ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ (84) ಅವರು ಶನಿವಾರ ಮುಂಜಾನೆ ನಿಧನರಾದರು. ಅವರಿಗೆ ಪತ್ನಿ, ಪುತ್ರ ಮತ್ತು ಪುತ್ರಿ ಇದ್ದಾರೆ. 7

ಎನ್.ಎಸ್.ಎಲ್. ಎಂಬ ಶರೀಫ್ ಭಟ್ಟರು 7

ಕೃಷಿ ವಿಜ್ಞಾನಿ ಮಹದೇವಪ್ಪ ನಿಧನ



ಮೈಸೂರು: ಕೃಷಿ ವಿಜ್ಞಾನಿ, ಭತ್ತದ ತಳಿ ಸಂಶೋಧಕ ಪ್ರೊ. ಎಂ.ಮಹದೇವಪ್ಪ (83) ಶನಿವಾರ ಬೆಳಿಗ್ಗೆ ಇಲ್ಲಿನ ತಮ್ಮ ನಿವಾಸದಲ್ಲಿ ನಿಧನರಾದರು. ಅವರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ. 7

‘ಭತ್ತದ ಮಹಾದೇವಪ್ಪ’ ಬಳುವಳಿಯ ಹೆಗ್ಗಳಿಕೆ 7

ರೈತರ ಹೋರಾಟಕ್ಕೆ ನೂರು ದಿನ

ನವದೆಹಲಿ (ಪಿಟಿಐ): ಕೇಂದ್ರದ ಮೂರು ಕೃಷಿ ಕಾಯ್ದೆಗಳನ್ನು ವಿರೋಧಿಸಿ ರೈತರು ಆರಂಭಿಸಿದ ಹೋರಾಟವು ಶನಿವಾರ ನೂರು ದಿನಗಳನ್ನು ಪೂರೈಸಿದೆ. ಅದರ ಅಂಗವಾಗಿ ದೆಹಲಿ– ಹರಿಯಾಣ ಗಡಿಯಲ್ಲಿ ಐದು ಗಂಟೆಗಳ ಕಾಲ ರಸ್ತೆ ತಡೆ ನಡೆಸಲಾಗಿದೆ. 8

ಮಾ. 8ರಿಂದ ದಿನ 1.50 ಲಕ್ಷ ಮಂದಿಗೆ ಲಸಿಕೆ

ಬೆಂಗಳೂರು: ‘ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಳವಾಗುತ್ತಿರುವ ಕಾರಣ ಎರಡು ತಿಂಗಳು ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸಬೇಕಿದೆ. ಸೋಮವಾರದಿಂದ ನಿತ್ಯ 1.50 ಲಕ್ಷ ಮಂದಿಗೆ ಲಸಿಕೆ ವಿತರಿಸುವ ಗುರಿಯಿದೆ’ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ದೇಶದಲ್ಲಿ ಶನಿವಾರ ಬೆಳಿಗ್ಗೆ 8 ಗಂಟೆಯವರೆಗಿನ 24 ತಾಸುಗಳಲ್ಲಿ 18,327 ಕೋವಿಡ್–19 ಪ್ರಕರಣಗಳು ದೃಢಪಟ್ಟಿವೆ. ಮಹಾರಾಷ್ಟ್ರದಲ್ಲಿ (10,216) ಅತ್ಯಧಿಕ ಪ್ರಕರಣ ದಾಖಲಾಗಿದೆ. 8

ಚಿನಕುರಳಿ
ಪ್ರಕಾಶ್ ಶೆಟ್ಟಿ

ಜಾರಕಿಹೊಳಿ ರಾಜೀನಾಮೆ ಬೆನ್ನಲ್ಲೆ ಎಚ್ಚೆತ್ತುಕೊಂಡ ಆರು ಸಚಿವರು

‘ಷಡ್ಯಂತ್ರ’ ಭಯ: ಕೋರ್ಟ್‌ಗೆ ಮೊರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿ.ಡಿ. ಬಹಿರಂಗವಾದ ಕಾರಣಕ್ಕೆ ರಮೇಶ ಜಾರಕಿಹೊಳಿ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ ಬೆನ್ನಲ್ಲೇ, ಮಾಧ್ಯಮಗಳು ಹಾಗೂ ಸಾಮಾಜಿಕ ಜಾಲತಾಣಗಳು ತಮ್ಮ ವಿರುದ್ಧ ಮಾನಹಾನಿಕರ ಸುದ್ದಿ ಪ್ರಕಟಿಸದಂತೆ ನಿರ್ಬಂಧಿಸಬೇಕೆಂದು ಕೋರಿ ಆರು ಸಚಿವರು ನ್ಯಾಯಾಲಯದ ಮೊರೆ ಹೋಗಿರುವುದು ರಾಜಕೀಯ ವಲಯದಲ್ಲಿ ದೊಡ್ಡ ಮಟ್ಟದ ಚರ್ಚೆಗೆ ಕಾರಣವಾಗಿದೆ.

ಈ ಆರು ಸಚಿವರಲ್ಲದೆ, ಕಾಂಗ್ರೆಸ್, ಜೆಡಿಎಸ್ ತ್ಯಜಿಸಿ ಮುಂಬೈಯಲ್ಲಿ ಕೆಲವು ದಿನ ಠಿಕಾಣಿ ಹೂಡಿ, ಬಳಿಕ ಬಿಜೆಪಿ ಜೊತೆ ಕೈಜೋಡಿಸಿ ಸಚಿವರಾದ ಇನ್ನೂ ಕೆಲವರು ಕೋರ್ಟ್ ಮೊರೆ ಹೋಗಲು ತಯಾರಿ ನಡೆಸಿದ್ದಾರೆ ಎಂದೂ ಹೇಳಲಾಗುತ್ತಿದೆ.

‘ಜೆಡಿಎಸ್– ಕಾಂಗ್ರೆಸ್ ಮೈತ್ರಿ ಸರ್ಕಾರವನ್ನು ಕೆಡವಿದ ಕಾರಣಕ್ಕೆ ನಮ್ಮನ್ನು ಗುರಿ ಮಾಡಿ ರಾಜಕೀಯ ಷಡ್ಯಂತ್ರ ರೂಪಿಸಲಾಗಿದೆ’ ಎಂದು ಆರೂ ಸಚಿವರು ತಿಳಿಸಿದ್ದಾರೆ.

7ನೇ ಪುಟ ನೋಡಿ

ಗೋಜಲು ಸೃಷ್ಟಿ ಸರಿಯಲ್ಲ: ಡಿವಿಎಸ್

‘ಅನವಶ್ಯಕವಾಗಿ ಕೋರ್ಟ್‌ಗೆ ಹೋಗುವುದು, ಇಂತಹ ವಿಷಯಗಳನ್ನು ಮತ್ತಷ್ಟು ಗೋಜಲು ಮಾಡುವುದು ಖಂಡಿತಾ ಒಳ್ಳೆಯದಲ್ಲ’ ಎಂದು ಕೇಂದ್ರ ರಸಗೊಬ್ಬರ ಸಚಿವ ಡಿ.ವಿ. ಸದಾನಂದಗೌಡ ಹೇಳಿದರು.

ಆರು ಸಚಿವರು ಕೋರ್ಟ್‌ಗೆ ಹೋಗಿರುವ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ವೈಯಕ್ತಿಕವಾಗಿ ಕೆಲವರಿಗೆ ಏನೇನೊ ಭಾವನೆಗಳನ್ನು ಇರುತ್ತವೆ. ಅವುಗಳನ್ನು ಕೋರ್ಟ್‌ಗಳಲ್ಲಿ ವ್ಯಕ್ತಪಡಿಸಬಾರದು ಎಂದು ಹೇಳಲು ನಾವು ಯಾರು? ಪ್ರತಿಯೊಬ್ಬ ವ್ಯಕ್ತಿಗೂ ತನ್ನದೇ ಆದ ಭವಿಷ್ಯದ ಸಾಧಕ ಬಾಧಕ ಮನಸ್ಸಿನಲ್ಲಿ ಇರುತ್ತದೆ. ಅದನ್ನು ನೋಡಿ ಕೊಂಡು ಮುಂದಿನ ಹೆಜ್ಜೆ ಇಡುತ್ತಾರೆ’ ಎಂದರು.

• ಅರ್ಕಾವತಿ • ಆರ್.ಎಂ.ವಿ.
• ಜೆ.ಪಿ.ನಗರ • ಬಿಟಿಎಂ
• ಅಂಜನಾಪುರ • ಬನಶಂಕರಿ
• ಹೆಚ್.ಎಸ್.ಆರ್.
• ಸರ್ ಎಂ. ವಿಶ್ವೇಶ್ವರಯ್ಯ
ಸೇರಿದಂತೆ ಹಲವು ಪ್ರತಿಷ್ಠಿತ ಬಡಾವಣೆಗಳ ಮೂಲೆ ನಿವೇಶನಗಳು ಲಭ್ಯ



ಮಧ್ಯವರ್ತಿಗಳ ತೊಂದರೆಯಿಲ್ಲ, ನೇರವಾಗಿ ಇ-ಹರಾಜಿನಲ್ಲಿ ಭಾಗವಹಿಸಿ.
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560 020.

ನಿವೇಶನಗಳ ಇ–ಬಿಡ್ಡಿಂಗ್ ಪ್ರಾರಂಭವಾಗಿದೆ

ಪ್ರಕಟಣೆ ಕ್ರಮ ಸಂಖ್ಯೆ	ಇ–ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ ಮತ್ತು ಸಮಯ	ಇ–ಹರಾಜನ್ನು ಮುಕ್ತಾಯಗೊಳಿಸುವ ದಿನಾಂಕ ಮತ್ತು ಸಮಯ
01 TO 69	29.03.2021 ; 6.00 pm IST	30.03.2021 ; 6.00 pm IST
70 TO 139	30.03.2021 ; 6.00 pm IST	31.03.2021 ; 6.00 pm IST
140 TO 209	31.03.2021 ; 6.00 pm IST	01.04.2021 ; 6.00 pm IST
210 TO 279	01.04.2021 ; 6.00 pm IST	03.04.2021 ; 6.00 pm IST
280 TO 349	03.04.2021 ; 6.00 pm IST	05.04.2021 ; 6.00 pm IST
350 TO 421	05.04.2021 ; 6.00 pm IST	06.04.2021 ; 6.00 pm IST

ಇ–ಹರಾಜಿನಲ್ಲಿ ಭಾಗವಹಿಸಲು ಮತ್ತು ಬಿಡ್ಡಿಂಗ್‌ಗಾಗಿ
https://eproc.karnataka.gov.in
080-46010000 / 22631200 / 68948777

ಇ–ಹರಾಜಿನ ಡೆಮೊ ವೀಡಿಯೊ ಹಾಗೂ ಹೆಚ್ಚಿನ ಮಾಹಿತಿಗಾಗಿ
www.bdabangalore.org
080-23368423 / 23368036

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಆರ್‌ಜಿಯುಎಚ್‌ಎಸ್ ಬೆಳ್ಳಿ ಹಬ್ಬ: 9ರಿಂದ ರಾಜ್ಯಮಟ್ಟದ ದೈಹಿಕ ಶಿಕ್ಷಣ ವಿಚಾರ ಸಂಕಿರಣ

ಬೆಂಗಳೂರು: ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು (ಆರ್‌ಜಿಯುಎಚ್‌ಎಸ್) ಬೆಳ್ಳಿ ಹಬ್ಬ ಆಚರಣೆಯ ಅಂಗವಾಗಿ ದೈಹಿಕ ಶಿಕ್ಷಣಕ್ಕೆ ಸಂಬಂಧಿಸಿ ಇದೇ 9 ಮತ್ತು 10ರಂದು ರಾಜ್ಯಮಟ್ಟದ ವಿಚಾರ ಸಂಕಿರಣ ಆಯೋಜಿಸಿದೆ.

'ವಿ.ವಿ.ಆವರಣದಲ್ಲಿಸಂಕಿರಣನಡೆಯಲಿದೆ.ಅಧೀನ ಶಿಕ್ಷಣ ಸಂಸ್ಥೆಗಳಲ್ಲಿ ವಿವಿಧ ಕ್ರೀಡೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು ಉದ್ದೇಶವಾಗಿದೆ. ಕ್ರೀಡಾ ಕ್ಷೇತ್ರದಲ್ಲಿನ ಇತ್ತೀಚಿನ ವಿದ್ಯಮಾನಗಳು, ಬೆಳವಣಿಗೆಗಳ ಕುರಿತು ದೈಹಿಕ ಶಿಕ್ಷಣ ನಿರ್ದೇಶಕರಿಗೆ ತಿಳಿವಳಿಕೆ ನೀಡಲಾಗುವುದು' ಎಂದು ವಿ.ವಿ ಉಪಕುಲಪತಿ ಡಾ.ಎಸ್. ಸಚ್ಚಿದಾನಂದ ತಿಳಿಸಿದ್ದಾರೆ.

ಸಾರ್ವಜನಿಕ ಸೂಚನೆ

ಪುರವಾಂಕರ ಲಿಮಿಟೆಡ್ (ಈ ಹಿಂದೆ ಪುರವಾಂಕರ ಪ್ರಾಜೆಕ್ಟ್ಸ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು), ಕಂಪನಿಯು ನಂ. 130/1, ಅಲಸೂರು ರಸ್ತೆ, ಬೆಂಗಳೂರು – 560 042 (**'ಮಾಲೀಕರು'**) ಈ ವಿಳಾಸದಲ್ಲಿ ನೋಂದಾಯಿತ ಕಚೇರಿಯನ್ನು ಹೊಂದಿದೆ. ಕಂಪನಿ ಹೊಂದಿರುವ ಜಮೀನಿನ ಮುನಿಸಿಪಲ್ ನಂ. 1–15– ಸರ್ವೆ ಸಂ. 4/1ಇ, ಪಿಐಡಿ ಸಂ. 85–79–1–15, (ಈ ಹಿಂದೆ ಸರ್ವೆ ಸಂಖ್ಯೆ 4/1 ಬಿ, 4/1 ಸಿ, 4/1 ಡಿ ಮತ್ತು 4/1 ಇ ಭಾಗವಾಗಿದೆ) ಅಂದಾಜು 1,93,945 ಚದರ ಅಡಿ, ಭಿನ್ನಮಂಗಲ ಮನವರ್ತೆಕಾವಲ್ ಗ್ರಾಮ, ಕೃಷ್ಣರಾಜಪುರಂ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ ಈ ಕುರಿತಂತೆ ವಿವರಗಳನ್ನು ಕೆಳಗೆ ನಮೂದಿಸಲಾಗಿರುವ ಷೆಡ್ಯೂಲ್‌ನಲ್ಲಿ ತಿಳಿಸಲಾಗಿದೆ ಮತ್ತು ಇನ್ನು ಮುಂದೆ ಇದನ್ನು **"ಸದರಿ ಸ್ವತ್ತು"** ಎಂದು ಉಲ್ಲೇಖಿಸಲಾಗುವುದು, ಅದರ ಶೀರ್ಷಿಕೆಯನ್ನು ನಾವು ಪರಿಶೀಲಿಸುತ್ತಿದ್ದೇವೆ.

ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ, ಷೆಡ್ಯೂಲ್ ಸ್ವತ್ತಿಗೆ ಸಂಬಂಧವಾಗಿ ಅಥವಾ ಅದರ ಯಾವುದೇ ಭಾಗ ಯಾವುದೇ ಹಕ್ಕು, ಹಕ್ಕುಬಾಧ್ಯತೆ, ಕ್ಲೇಮು ಅಥವಾ ಹಿತಾಸಕ್ತಿಯನ್ನು ಯಾವುದೇ ವ್ಯಕ್ತಿಗಳು ಹೊಂದಿದ್ದರೆ ಅಥವಾ ಯಾವುದೇ ರೀತಿಯ ಕ್ರಯ, ಕರಾರು, ಅನುಭವ, ಪಾಲುದಾರಿಕೆ, ಆಧಾರ, ಭೋಗ್ಯ, ಅದಲು ಬದಲು, ವ್ಯವಸ್ಥಾ ಪತ್ರ, ಒಪ್ಪಂದ, ದಾನ, ಕೌಟುಂಬಿಕ ವ್ಯವಸ್ಥೆ, ಅನುಭೋಗದ ಹಕ್ಕು, ಉತ್ತರಾಧಿಕಾರತ್ವ ಅಭಿವೃದ್ಧಿಯ ಹಕ್ಕು, ಋಣ ಇವುಗಳ ಆಧಾರದ ಮೇಲೆ ಷೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ಹಕ್ಕು/ಹಿತಾಸಕ್ತಿಯ/ಕ್ಲೇಮು ಹೊಂದಿದ್ದರೆ ಅಥವಾ ಮೇಲಿನ ವ್ಯವಹಾರದ ಬಗ್ಗೆ ಯಾವುದೇ ರೀತಿಯ ಆಕ್ಷೇಪಣೆಗಳನ್ನು ಹೊಂದಿದ್ದರೆ, ಅಂತಹವರು ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ ಹದಿನೈದು (15) ದಿನಗಳ ಒಳಗೆ ಬೆಂಬಲಾರ್ಥ ದಾಖಲೆಗಳೊಡನೆ ಕೆಳಸಹಿದಾರರಿಗೆ ಅವುಗಳನ್ನು ಸಲ್ಲಿಸಬೇಕು.

ಈ ನೋಟೀಸ್ ಪ್ರಕಟವಾದ ದಿನಾಂಕದಿಂದ ಹದಿನೈದು (15) ದಿನಗಳಲ್ಲಿ ಅಂತಹ ಯಾವುದೇ ಸೂಚನೆಯನ್ನು ನಾವು ಸ್ವೀಕರಿಸದಿದ್ದರೆ, ಸದರಿ ಸ್ವತ್ತು ಮಾಲೀಕರಿಗೆ ಸಂಬಂಧಿಸಿದಂತೆ ಮಾಲೀಕರ ಶೀರ್ಷಿಕೆ ಸ್ಪಷ್ಟ, ಮಾರುಕಟ್ಟೆ ಮತ್ತು ಉಚಿತ ಎಂದು ಭಾವಿಸಬಹುದು. ಸದರಿ ಸ್ವತ್ತು ಅಥವಾ ಅದರ ಯಾವುದೇ ಭಾಗದಲ್ಲಿ ಯಾವುದೇ ರೀತಿಯ ಮತ್ತು ಯಾವುದೇ ವ್ಯಕ್ತಿಗೆ ಯಾವುದೇ ಪ್ರತ್ಯೇಕ ಹಕ್ಕು, ಶೀರ್ಷಿಕೆ ಅಥವಾ ಆಸಕ್ತಿಯಿಲ್ಲ. ಈ ಪ್ರಕಟಣೆಯನ್ನು ಪ್ರಕಟಿಸಿದ ದಿನಾಂಕದಿಂದ ಹದಿನೈದು (15) ದಿನಗಳಲ್ಲಿ ಸ್ವೀಕರಿಸದ ಹಕ್ಕುಗಳು ಅಥವಾ ಆಪಾದಿತ ಆಸಕ್ತಿ ಯಾವುದಾದರೂ ಇದ್ದರೆ, ಎಲ್ಲಾ ಉದ್ದೇಶಗಳು ಮತ್ತು ಉದ್ದೇಶಗಳಿಗಾಗಿ ಮನ್ನಾ ಮಾಡಲಾಗಿದೆ ಮತ್ತು ನಿರ್ಲಕ್ಷಿಸಲಾಗಿದೆ ಎಂದು ಪರಿಗಣಿಸಲಾಗುತ್ತದೆ ಮತ್ತು ನಮ್ಮ ಕಕ್ಷಿದಾರರು ಬದ್ಧರಾಗಿರುವುದಿಲ್ಲ.

ಷೆಡ್ಯೂಲ್

ಈ ಷೆಡ್ಯೂಲ್ ಆಸ್ತಿಯು ಈ ಹಿಂದೆ ನಿವೇಶನಗಳ ಭಾಗಗಳಾಗಿ ಪರಿವರ್ತಿಸಿದ್ದು, ಸರ್ವೆ ಸಂಖ್ಯೆಗಳು 4/1 ಬಿ, 4/1 ಸಿ, 4/1 ಡಿ ಮತ್ತು 4/1 ಇ, ಅಂದಾಜು ವಿಸ್ತೀರ್ಣ ಸುಮಾರು 2,34,489 ಚದರ ಅಡಿ ಒಳಗೊಂಡಿದೆ, ಭಿನ್ನಮಂಗಲ ಮನವರ್ತೆಕಾವಲ್ ಗ್ರಾಮ, ಕೃಷ್ಣರಾಜಪುರಂ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ನಿವೇಶನಗಳ ವಿವರಗಳು ಕೆಳಗಿನಂತಿದೆ:

ನಿವೇಶನ ಸಂ.	ಅಳತೆ ಚದರ ಅಡಿಗಳಲ್ಲಿ: ಪೂರ್ವ ಮತ್ತು ಪಶ್ಚಿಮ	ಉತ್ತರ ಮತ್ತು ದಕ್ಷಿಣ	ಒಟ್ಟು
ಸರ್ವೆ ಸಂ. 4/1ಬಿ (ಹಿಂದಿನ ವಿ.ಪಿ. ಸಂ. 157)			
ಭೂಮಿ	40	70	2800
ಭೂಮಿ	220	30	6600
ಭೂಮಿ	35	178	6230
4	50	82	4100
5	50	82	4100
6	50	40	2000
	50	40	2000
7	50	38	1900
	50	38	1900
8	50	60	3000
9	50	62+66/2	3200
10	50	66+68/2	3350
11	50	72+74/2	3650
16	50	100	5000
17	50	100	5000
18	50	100	5000
19 & 20	65	90	5850
ಸರ್ವೆ ಸಂ. 4/1ಸಿ (ಹಿಂದಿನ ವಿ.ಪಿ. ಸಂ. 154)			
ಭೂಮಿ	150	30	4500
ಭೂಮಿ	25	160	4000
2	50	71.5	3575
3	50	72	3600
4	50	100	5000
4	100	50	5000
5			
5	50	100	5000
6	59	59	3481
7	53	60	3180
7	50	20	1000
10	45	65	2925
10	45	70	3150
11	56+46/2	90+102/2	4896
9	72+52/2	65	4030
ಸರ್ವೆ ಸಂ. 4/1ಡಿ (ಹಿಂದಿನ ವಿ.ಪಿ. ಸಂ. 155)			
ಭೂಮಿ	150	30	4500
ಭೂಮಿ	15	160	2400
1	50	80	4000
2	50	80	4000
3	50	80	4000
4	50	80	4000
5	50	80	4000
11	100	65	6500
12	50	80	4000
13	50	80	4000
14	50	80	4000
15 & 16	100.5+116/2	60+100/2	8660
ಭೂಮಿ	31	26	1382
	16	36	
ಸರ್ವೆ ಸಂ. 4/1ಇ (ಹಿಂದಿನ ವಿ.ಪಿ. ಸಂ. 156)			
1	50	110	5500
ಭೂಮಿ	250	30	7500
ಭೂಮಿ	6	230	1380
2	50	108	5400
3	50	105	5250
4	50	102	5100
5	50	98	4900
14	50	100	5000
15	50	100	5000
16	50	100	5000
17	50	100	5000
18	50	100	5000

ಷೆಡ್ಯೂಲ್ ಆಸ್ತಿಯ ವಿವರಗಳ ಚಕ್ಕುಬಂದಿ ಈ ಕೆಳಗಿನಂತಿದೆ:

ಭೂಮಿ ಹೊಂದಿರುವ ಮುನಿಸಿಪಲ್ ಸಂ.1–15– ಸರ್ವೆ ಸಂ. 4/1ಇ, ಪಿಐಡಿ ಸಂ. 85–79–1–15, (ಈ ಹಿಂದೆ ರೂಪುಗೊಂಡಿರುವ ಭಾಗದ ಸರ್ವೆ ಸಂಖ್ಯೆಗಳು. 4/1ಬಿ, 4/1ಸಿ, 4/1ಡಿ ಮತ್ತು 4/1ಇ) ವಿಸ್ತೀರ್ಣ ಅಂದಾಜು 1,93,945 ಚದರ ಅಡಿ ಭಿನ್ನಮಂಗಲ ಮನವರ್ತೆಕಾವಲ್ ಗ್ರಾಮ, ಕೃಷ್ಣರಾಜಪುರಂ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆಯಲ್ಲಿರುವ ಚಕ್ಕುಬಂದಿ:

ಪೂರ್ವಕ್ಕೆ:	ಹಿಂದಿನ ಉಳಿದ ಭಾಗದ ಸರ್ವೆ ಸಂ. 4/1ಡಿ ಮತ್ತು 4/1ಇ ಮತ್ತು ಪ್ರಸ್ತುತ ಖಾಸಗಿ ಆಸ್ತಿ.
ಪಶ್ಚಿಮಕ್ಕೆ:	ಹಿಂದಿನ ಉಳಿದ ಭಾಗದ ಸರ್ವೆ ಸಂ. 4/1ಸಿ ಮತ್ತು 4/1ಬಿ ಮತ್ತು ಪ್ರಸ್ತುತ ರಸ್ತೆ ಮತ್ತು ಖಾಸಗಿ ಆಸ್ತಿ.
ಉತ್ತರಕ್ಕೆ:	ಬೈಯಪ್ಪನಹಳ್ಳಿ ಗ್ರಾಮ ಗಡಿ ಮತ್ತು ಪ್ರಸ್ತುತ ರಸ್ತೆ ಮತ್ತು ಖಾಸಗಿ ಆಸ್ತಿ.
ದಕ್ಷಿಣಕ್ಕೆ:	ಬೆಂಗಳೂರು ಮೆಟ್ರೋ ರೈಲು ಕಂಪನಿ ಲಿಮಿಟೆಡ್‌ಗೆ ಸೇರಿದ ಭೂಮಿ ಮತ್ತು ಹಳೆ ಮದ್ರಾಸ್ ರಸ್ತೆ.

ದಿನಾಂಕ: 7ನೇ ಮಾರ್ಚ್, 2021

ಮಾಲಿನಿ ರಾಜು, ಪಾಲುದಾರರು
ಜೆ. ಸಾಗರ್ ಅಸೋಸಿಯೇಟ್ಸ್, ವಕೀಲರು ಮತ್ತು ಸೊಲಿಸಿಟರ್ಸ್
ಹಂತ 3, ಪ್ರೆಸ್ಟಿಜ್ ಒಬೆಲಿಸ್ಕ್, 3, ಕಸ್ತೂರ್‌ಬಾ ರಸ್ತೆ,
ಬೆಂಗಳೂರು–560 001. ದೂ. 43503600
ಇ–ಮೇಲ್: malini.raju@jsalaw.com

ಸದಾಶಿವ ಆಯೋಗ ವರದಿ ಅನುಷ್ಠಾನ: ಶಿಫಾರಸಿಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಶಿಷ್ಟ ಜಾತಿ ಒಳ ಮೀಸಲಾತಿ ಕುರಿತು ನಿವೃತ್ತ ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗದ ವರದಿ ಅನುಷ್ಠಾನಗೊಳಿಸುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಬೇಕು' ಎಂದು ಒತ್ತಾಯಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಪದಾಧಿಕಾರಿಗಳು ನಗರದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು.

ಮೈಸೂರು ಬ್ಯಾಂಕ್ ವೃತ್ತದಲ್ಲಿ ಸೇರಿದ್ದ ಪ್ರತಿಭಟನಕಾರರು, ವರದಿಯ ತ್ವರಿತ ಅನುಷ್ಠಾನಕ್ಕೆ ಆಗ್ರಹಿಸಿದರು.

'ಒಳ ಮೀಸಲಾತಿ ಬಗ್ಗೆ ವೈಜ್ಞಾನಿಕವಾಗಿ ವರ್ಗೀಕರಿಸಿ ಅಧ್ಯಯನ ನಡೆಸಿದ್ದ ಆಯೋಗ, ಒಂಬತ್ತು ವರ್ಷಗಳ ಹಿಂದೆಯೇ ಈ ಕುರಿತು ಶಿಫಾರಸುಗಳನ್ನು ಮಾಡಿದೆ. ಹಿಂದುಳಿದ ಪರಿಶಿಷ್ಟ ಉಪ ಜಾತಿಗಳಿಗೆ ಸೌಲಭ್ಯ ತಲುಪಿಸುವ ಉದ್ದೇಶದಿಂದ ಒಟ್ಟು ಶೇ 15ರಷ್ಟು ಮೀಸಲಾತಿ ನೀಡಿ, ಸೌಲಭ್ಯ ನೀಡುವಂತೆ ವರದಿಯಲ್ಲಿ ಪ್ರಸ್ತಾಪಿಸಲಾಗಿದೆ. ವರದಿಯನ್ನು ತ್ವರಿತವಾಗಿ ಜಾರಿಗೆ ತರಬೇಕು. ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ ಜಾರಿಗೆ ತರಬೇಕು' ಎಂದರು.

'ವರದಿ ಜಾರಿಗೆ ತರುವಲ್ಲಿ ರಾಜ್ಯ ಸರ್ಕಾರ ನಿರ್ಲಕ್ಷ್ಯ ಧೋರಣೆ ಅನುಸರಿಸುತ್ತಿದೆ. ಇದು ಅತ್ಯಂತ ಶೋಚನೀಯ. ವರದಿ ಅನುಷ್ಠಾನಕ್ಕೆ ಆಗ್ರಹಿಸಿ ಇದೇ 25ರಿಂದ ಆದಿ ಜಾಂಬವ ಜನಾಂಗದ ಸ್ವಾಮೀಜಿಗಳ ನೇತೃತ್ವದಲ್ಲಿ ಬೃಹತ್ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ. ಇದಕ್ಕೆ ನಮ್ಮ ಬೆಂಬಲವಿದೆ' ಎಂದೂ ಪ್ರತಿಭಟನಕಾರರು ಹೇಳಿದರು.

ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ ಅವರು ಮನವಿ ಪತ್ರ ಸ್ವೀಕರಿಸಿದರು – ಪ್ರಜಾವಾಣಿ ಚಿತ್ರ

ಒಕ್ಕಲಿಗರ ಸಂಘ: ಚುನಾವಣಾಧಿಕಾರಿ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಒಕ್ಕಲಿಗರ ಸಂಘಕ್ಕೆ ಚುನಾವಣೆ ನಡೆಸಲು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಯುಕ್ತ ಪಿ.ಎನ್. ರವೀಂದ್ರ ಅವರನ್ನು ಚುನಾವಣಾಧಿಕಾರಿಯನ್ನಾಗಿ ನೇಮಿಸಿ ಸರ್ಕಾರ ಆದೇಶ ಹೊರಡಿಸಿದೆ.

ಸದಸ್ಯರ ಸಂಖ್ಯೆ ಹೆಚ್ಚಿರುವ ಕಾರಣ ಸುಸೂತ್ರವಾಗಿ ಚುನಾವಣೆ ನಡೆಸಲು ಹಿರಿಯ ಅಧಿಕಾರಿಯೊಬ್ಬರನ್ನು ಚುನಾವಣಾಧಿಕಾರಿಯಾಗಿ ನೇಮಿಸಬೇಕು ಎಂದು ಆಡಳಿತಾಧಿಕಾರಿ ಎಂ.ಕೆ. ಶಂಕರಲಿಂಗೇಗೌಡ ಪ್ರಸ್ತಾವನೆ ಸಲ್ಲಿಸಿದ್ದರು.

ನಿಯಮಾನುಸಾರ ಚುನಾವಣೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

'ಎರಡೂವರೆ ವರ್ಷಗಳಿಂದ ಆಡಳಿತಾಧಿಕಾರಿ ಅವಧಿ ವಿಸ್ತರಣೆ ಮಾಡಿಕೊಂಡು ಬರಲಾಗುತ್ತಿದೆ. ಮೂರು ತಿಂಗಳಲ್ಲಿ ಚುನಾವಣೆ ನಡೆಸಬೇಕು' ಎಂದು ಸರ್ಕಾರಕ್ಕೆ ಹೈಕೋರ್ಟ್ ಶುಕ್ರವಾರ ನಿರ್ದೇಶನ ನೀಡಿತ್ತು.

• 10 am to 8 pm • Open on Sundays • Master/Visa Card Accepted

Venues in Bangalore

- **Gandhi Bazaar:** Sree Nagareshwaraswamy Kalyana Mantapa, No.92/2, East Anjaneya Temple Street, Basavanagudi - 560 004
- **Jayanagar:** Prema Chandra Kalyana Mahal, #264/266, T.Mariyappa Road, 2nd Block, (Near Ashoka Pillar) - 560 011
- **Bannerghatta Road:** Santhome Parish Church Hall, Hulimavu, Near Meenakshi Mall - 560 076
- **Banashankari:** Nagalakshmi Kalyana Mantapa, No.5, II Stage, Near Post Office - 560 070
- **Infantry Road:** Safina Plaza, No.84/85 - 560 001
- **Malleswaram:** The Canara Union, No.42, 8th Main, Canara Union Road - 560 003
- **Vijay Nagar:** Five O Gallery, No.50, 17th Cross, M.C. Road, Near Vijay Nagar Bus Stop - 560 040
- **Rajajinagar:** Raja Rajeshwari Kalyana Mantapa, (First Floor), No. 608/C, 2nd Block, Dr. Rajkumar Road - 560 010
- **Rajarajeswari Nagar:** Vasavi Mahal Kalyana Mantapa, No.606, Next To Reliance Digital, Ideal Homes I Phase - 560 098
- **Koramangala:** Apoorva International, #35A, Raheja Arcade, Opp Star Box - 560 095
- **Basavanagudi:** Amolak Apparels, #104, Bull Temple Road, Near Ramakrishna Ashram - 560 019

Org. by: Surya Agency Pvt. Ltd.

ಮಹಿಳೆಯರ ಸುರಕ್ಷತೆಗೆ ಬದಲು ಸಿಬ್ಬಂದಿಗಾಗಿ ಬಳಕೆ

ಬೆಂಗಳೂರು: ನಿರ್ಭಯ ಯೋಜನೆಯಡಿ ಮಹಿಳೆಯರ ಸುರಕ್ಷತೆಗೆ ನೆರವಾಗಲು ಬಿಎಂಟಿಸಿ ಖರೀದಿಸಿದ ಪಿಂಕ್ ಸಾರಥಿ ವಾಹನಗಳು ಚಾಲಕ ಮತ್ತು ನಿರ್ವಾಹಕರ ವಿರುದ್ಧ ಮೊಕದ್ದಮೆ ದಾಖಲಿಸಲು ಬಳಕೆಯಾಗುತ್ತಿವೆಯೇ?... ಹೌದು ಎನ್ನುತ್ತಿದೆ ಬಿಎಂಟಿಸಿ ಅಧಿಕಾರಿಗಳೇ ನೀಡಿರುವ ಮಾಹಿತಿ.

ಕೇಂದ್ರದ ನಿರ್ಭಯ ಯೋಜನೆಯಡಿ ಬಿಎಂಟಿಸಿಗೆ ದೊರೆತಿದ್ದ ₹56 ಕೋಟಿ ಅನುದಾನದಲ್ಲಿ ₹4.30 ಕೋಟಿಯಲ್ಲಿ 25 ಪಿಂಕ್ ಸಾರಥಿ ವಾಹನಗಳನ್ನು ಬಿಎಂಟಿಸಿ ಖರೀದಿ ಮಾಡಿತ್ತು. 2019ರ ಜೂನ್‌ನಲ್ಲಿ ಈ ವಾಹನಗಳ ಕಾರ್ಯಾಚರಣೆ ಆರಂಭಿಸಿದ್ದವು.

ಆರ್‌ಟಿಐ ಕಾರ್ಯಕರ್ತ ಎನ್. ಶ್ರೀನಿವಾಸ್ ಅವರು ಮಾಹಿತಿ ಹಕ್ಕು ಕಾಯ್ದೆಯಡಿ ಸಲ್ಲಿಸಿದ್ದ ಅರ್ಜಿಗೆ ಬಿಎಂಟಿಸಿ ಸಾರ್ವಜನಿಕ ಮಾಹಿತಿ ಅಧಿಕಾರಿ ಉತ್ತರ ನೀಡಿದ್ದಾರೆ. ಅದರ ಪ್ರಕಾರ, 2021ರ ಜನವರಿ ತನಕ ಈ ಸಾರಥಿ ವಾಹನಗಳ ಮೂಲಕ 189 ಪ್ರಕರಣಗಳಲ್ಲಿ ಮಹಿಳೆಯ ಸುರಕ್ಷತೆಗೆ ನೆರವಾಗಿದ್ದು, ಚಾಲಕ ಮತ್ತು ನಿರ್ವಾಹಕರ ನ್ಯೂನತೆಗಳಿಗೆ ಸಂಬಂಧಿಸಿದ 71,356 ಪ್ರಕರಣ ದಾಖಲಿಸಲಾಗಿದೆ.

'ನಿರ್ಭಯಾ ಯೋಜನೆಯಡಿ ಮಹಿಳೆಯರ ಸುರಕ್ಷತೆಗೆ ನೆರವಾಗಲು ಖರೀದಿಸಿದ ವಾಹನಗಳನ್ನು ಬಿಎಂಟಿಸಿ ಅಧಿಕಾರಿಗಳು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ನಿರ್ಭಯ ಯೋಜನೆ ಅನುಷ್ಠಾನದಲ್ಲೂ ವಿಫಲರಾಗಿದ್ದಾರೆ. ಈ ವಾಹನಗಳನ್ನು ಬಳಸಿಕೊಂಡು ಚಾಲಕ ಮತ್ತು ನಿರ್ವಾಹಕರ ಮೇಲೆ ಶೋಷಣೆ ಮಾಡುತ್ತಿದ್ದಾರೆ' ಎಂದು ಶ್ರೀನಿವಾಸ್ ಆರೋಪಿಸಿದರು.

ನ್ಯಾ.ಸದಾಶಿವ ವರದಿ ಜಾರಿ ಹೋರಾಟ ಸಮಿತಿ

ನ್ಯಾ. ಸದಾಶಿವ ವರದಿ ಜಾರಿಗಾಗಿ ಮಾದಿಗ ವಿರಾಟ್ ಶಕ್ತಿ ಪ್ರದರ್ಶನ

ಮಾನ್ಯ ಸುಪ್ರೀಂಕೋರ್ಟ್ ತೀರ್ಪಿನಂತೆ ಮತ್ತು ಶಿರಾ ಉಪಚುನಾವಣೆಯಲ್ಲಿ ಮಾದಿಗರಿಗೆ ನೀಡಿದ ಭರವಸೆಯಂತೆ ಬಿಜೆಪಿ ಸರ್ಕಾರವು ಕೂಡಲೇ ಕರ್ನಾಟಕದಲ್ಲಿ ಸದಾಶಿವ ವರದಿ ಜಾರಿ ಮಾಡಿ ಒಳ ಮೀಸಲಾತಿ ನೀಡಬೇಕೆಂದು ಆಗ್ರಹಿಸಿ, ಮಾದಿಗ ಮತ್ತು ಸಂಬಂಧಿತ 47 ಜಾತಿಗಳ 10 ಲಕ್ಷ ಜನರ ಬೃಹತ್ ವಿರಾಟ್ ಶಕ್ತಿ ಪ್ರದರ್ಶನ ಮತ್ತು ಅನಿರ್ದಿಷ್ಟಾವಧಿ ಪ್ರತಿಭಟನೆ. ಕರ್ನಾಟಕ ಬಂದ್ ದಿನಾಂಕವನ್ನು ಮುಂದೆ ತಿಳಿಸಲಾಗುವುದು. ಸದಾಶಿವ ವರದಿ ಜಾರಿಮಾಡದಿದ್ದರೆ 40 ಸಾವಿರ ಮಾದಿಗ ಮತದಾರರಿರುವ ಮಸ್ಕಿ, 50 ಸಾವಿರ ಮಾದಿಗ ಮತದಾರರಿರುವ ಬಸವಕಲ್ಯಾಣದಲ್ಲಿ ಬಿಜೆಪಿಯನ್ನು ಸೋಲಿಸುತ್ತೇವೆ.

ದಿನಾಂಕ: 08.03.2021 ಬೆಳಿಗ್ಗೆ: 10.00 ಗಂಟೆಗೆ

ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಿಂದ ಫ್ರೀಡಂ ಪಾರ್ಕ್‌ಗೆ ಮೆರವಣಿಗೆ

ಮಾದಿಗ ವಿರೋಧಿ ಮೇಲ್ಜಾತಿ ನಾಯಕತ್ವದ ಬಿಜೆಪಿ, ಕಾಂಗ್ರೆಸ್, ದಳಗಳು ಮಾದಿಗರಿಗೆ 70 ವರ್ಷಗಳಿಂದ ಒಳಮೀಸಲಾತಿ ನೀಡದ ಕಾರಣ ಪ್ರತಿವರ್ಷ ಮಾದಿಗರಿಗಾಗುವ ನಷ್ಟ

1. ಕರ್ನಾಟಕದಲ್ಲಿರುವ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರದ ಕಛೇರಿ ಕಾರ್ಖಾನೆ, ಕಾರ್ಪೊರೇಷನ್, ಬೋರ್ಡ್, ನಿಗಮ, ಕಂಪನಿ, ಬ್ಯಾಂಕ್, ವಿಮಾ ಸಂಸ್ಥೆಗಳು, ರೈಲ್ವೆ ಇತ್ಯಾದಿ ಉದ್ಯೋಗ ಕ್ಷೇತ್ರಗಳಲ್ಲಿ 3 ಲಕ್ಷ ಎಸ್‌ಸಿ ನೌಕರರಿದ್ದಾರೆ. 1.50 ಲಕ್ಷ ಮಾದಿಗರು ಇರಬೇಕಾದ ಕಡೆ ಕೇವಲ 26 ಸಾವಿರ ನೌಕರರಿದ್ದಾರೆ. ಇದರಲ್ಲಿ 16 ಸಾವಿರ ಪೌರಕಾರ್ಮಿಕರು.
2. ಮೆಡಿಕಲ್, ಡೆಂಟಲ್, ಇಂಜಿನಿಯರಿಂಗ್, ಐಐಟಿ, ಐಎಎಂ ಮತ್ತು ಇತರ ವೃತ್ತಿಪರ ಕೋರ್ಸ್‌ಗಳು ಹಾಗೂ ವಿದೇಶಿ ವ್ಯಾಸಂಗ ನಿಧಿ, ಸ್ಕಾಲರ್‌ಶಿಪ್‌ಗಳು, ನವೋದಯ, ಮೊರಾರ್ಜಿ ಇತ್ಯಾದಿ ವಸತಿ ಶಾಲೆಗಳಲ್ಲಿ ಒಳಮೀಸಲಾತಿ ಇಲ್ಲದ ಕಾರಣ ಅಲ್ಲಿ ಮಾದಿಗರ ಪ್ರವೇಶ ಕೇವಲ ಶೇ.2ರಷ್ಟು ಮಾತ್ರವಿದೆ. ಕೆಲವು ಕೋರ್ಸ್‌ಗಳಲ್ಲಿ ಶೇ.0.2ರಷ್ಟು ಸಹ ಇಲ್ಲ. ರಾಜ್ಯ ಮತ್ತು ಕೇಂದ್ರ ಸರ್ಕಾರದ ಉನ್ನತ ಶಿಕ್ಷಣ ಯೋಜನೆಗಳಲ್ಲಿ ಮಾದಿಗರು ಶೇ.1ರಷ್ಟನ್ನು ಸಹ ಪಡೆದುಕೊಳ್ಳುತ್ತಿಲ್ಲ. ಇಲ್ಲಿ ಒಳಮೀಸಲಾತಿ ಇದ್ದರೆ ಮಾದಿಗ ವಿದ್ಯಾರ್ಥಿಗಳಿಗೆ ಪ್ರತಿವರ್ಷ 5000 ಕೋಟಿ ರೂಪಾಯಿ ಸಿಗುತ್ತಿತ್ತು.
3. ಪಿಡಬ್ಲ್ಯೂಡಿ, ಬಿಬಿಎಂಪಿ ಇತ್ಯಾದಿ ಸರ್ಕಾರಿ ಕಾಮಗಾರಿಗಳ ಗುತ್ತಿಗಳಲ್ಲಿ ಇರುವ ಶೇ.25ರಷ್ಟು ಮೀಸಲಾತಿಯಲ್ಲಿ ಮಾದಿಗರಿಗೆ ಶೇ.1ರಷ್ಟು ಸಹ ಸಿಗುತ್ತಿಲ್ಲ. ಒಳಮೀಸಲಾತಿ ಇದ್ದರೆ ವಾರ್ಷಿಕ 50000 ಕೋಟಿಗೂ ಮೇಲ್ಪಟ್ಟು ಗುತ್ತಿಗೆ ಕೆಲಸ ಸಿಗುತ್ತಿತ್ತು.
4. ಚಿಲ್ಲರೆ ವೈನ್‌ಶಾಪ್, ಹೋಲ್‌ಸೇಲ್ ವೈನ್‌ಶಾಪ್, ಕೆಐಎಡಿಬಿ ಕೈಗಾರಿಕಾ ಜಮೀನುಗಳು ಮತ್ತು ಶೆಡ್‌ಗಳು, ಸೊಸೈಟಿ ನಿವೇಶನಗಳು, ಬಿಡಿಎ ಮತ್ತಿತರ ನಗರಾಭಿವೃದ್ಧಿ ಇಲಾಖೆಯ ನಿವೇಶನಗಳು, ಕೆಹೆಚ್‌ಬಿ, ಕೊಳಚೆ ನಿರ್ಮೂಲನ ಮಂಡಳಿ ಮತ್ತಿತರ ವಸತಿ ಯೋಜನೆಗಳಲ್ಲಿ, ಸಮಾಜ ಕಲ್ಯಾಣ ಇಲಾಖೆ, ಕೃಷಿ ಇಲಾಖೆ, ಪ್ರವಾಸೋದ್ಯಮ ಇಲಾಖೆ, ಕೆಎಸ್‌ಎಫ್‌ಸಿ, ಕೇಂದ್ರ ಸರ್ಕಾರದ ವಾಣಿಜ್ಯ ಬ್ಯಾಂಕುಗಳ ಕಲ್ಯಾಣ ಯೋಜನೆಗಳು, ನಬಾರ್ಡ್ ಯೋಜನೆಗಳು ಇತ್ಯಾದಿ ಸರ್ಕಾರಿ ಆರ್ಥಿಕ ಯೋಜನೆಗಳಲ್ಲಿ ಮಾದಿಗರ ಪಾಲು ಶೇ.1ರಷ್ಟೂ ಇಲ್ಲ. ಒಳಮೀಸಲಾತಿ ಇದ್ದಿದ್ದರೆ ಪ್ರತಿವರ್ಷ ಮಾದಿಗರಿಗೆ 10000 ಕೋಟಿ ರೂಪಾಯಿಗೂ ಹೆಚ್ಚು ಸಿಗುತ್ತಿತ್ತು.

ಮಾದಿಗ ಜನಾಂಗದ ಯುವಕರು ಮಕ್ಕಳ ಕಷ್ಟ, ಸಂಕಟಗಳ ಪರಿಹಾರ ಇರುವುದು ತಿರುಪತಿ, ಧರ್ಮಸ್ಥಳ, ಅಲೋಲಿಯದಲ್ಲಿ ಅಲ್ಲ, ಸದಾಶಿವ ವರದಿ ಜಾರಿಯಲ್ಲಿ!

ಸಂವಿಧಾನದ ಸ್ಪಷ್ಟ ಉಲ್ಲಂಘನೆ

ಸಂವಿಧಾನದ 14,15 ರಲ್ಲಿ ಕಾನೂನಿನ ಮುಂದೆ ಎಲ್ಲರೂ ಸಮಾನರು, ಜಾತಿ, ಭಾಷೆ, ಧರ್ಮ, ಪ್ರಾಂತ್ಯ, ಲಿಂಗದ ಆಧಾರದ ಮೇಲೆ ತಾರತಮ್ಯ ಮಾಡಬಾರದು ಅಂತ ಅಂಬೇಡ್ಕರ್ ಹೇಳಿದ್ದರೂ, ಹಿಂದುಳಿದ ಜಾತಿಗಳಿಗೆ ಒಳಮೀಸಲಾತಿ ನೀಡುವ ನೀಚ ಬಿಜೆಪಿ, ಕಾಂಗ್ರೆಸ್, ದಳ ಸರ್ಕಾರಗಳು 101 ಜಾತಿಗಳಿರುವ ಎಸ್‌ಸಿ ಪಟ್ಟಿಯಲ್ಲಿ ಮಾದಿಗರಿಗೆ ಒಳಮೀಸಲಾತಿ ನೀಡದೆ ಮೋಸ ಮಾಡುತ್ತಾರೆ.

"ನಿಮ್ಮ ಗುಲಾಮಗಿರಿಯನ್ನು ವಿಮೋಚನೆ ಮಾಡಲು ಯಾವ ಮಹಾತ್ಮರು, ಅವತಾರ ಪುರುಷರು ಜನ್ಮವೆತ್ತಿ ಬರುವುದಿಲ್ಲ, ನಿಮ್ಮ ಉದ್ಧಾರ ನಿಮ್ಮಿಂದ ಮಾತ್ರ.
| ಡಾ.ಬಿ.ಆರ್.ಅಂಬೇಡ್ಕರ್

"ನೀವು ಮೇಲ್ಜಾತಿಯವರಿಗೆ ಗುಲಾಮರಾಗಿ, ಪ್ರಾಣಿಗಳಿಗಿಂತ ಹೀನವಾಗಿ ಬದುಕುತ್ತಿರುವುದನ್ನು ನೋಡಿದಾಗ ನನಗೆ ಹೊಟ್ಟೆಯಲ್ಲಿ ಬೆಂಕಿಬಿದ್ದ ಹಾಗೆ ಆಗುತ್ತದೆ. ಈ ರೀತಿ ಗುಲಾಮರಾಗಿ ಬದುಕುವುದಕ್ಕಿಂತ ತಾಯಿ ಗರ್ಭದಲ್ಲಿಯೇ ಸತ್ತು ಹೋಗಿದ್ದರೆ ಚೆನ್ನಾಗಿತ್ತು.
| ಡಾ.ಬಿ.ಆರ್.ಅಂಬೇಡ್ಕರ್

ಕುಲ ಬಾಂಧವರಿಗೆ ಸುಸ್ವಾಗತ

ಮಾನ್ಯರೇ ಖಾಸಗಿ ವಾಹನಗಳಲ್ಲಿ ಬರುವವರು ಚಾಲಕರು ವೇಗವಾಗಿ ವಾಹನಗಳನ್ನು ಓಡಿಸದಂತೆ ಎಚ್ಚರಿಕೆ ವಹಿಸಿ. ರೈಲು ಮತ್ತು KSRTC ಬಸ್ಸುಗಳಲ್ಲಿ ಬನ್ನಿ. ಬೆಂಗಳೂರಲ್ಲಿ ಪೇಪರ್ ತಟ್ಟೆಗಳು ಅಭಾವ ಇರುವ ಕಾರಣ ಮನೆಯಿಂದ ತಟ್ಟೆ, ಖಾಲಿ ನೀರಿನ ಬಾಟಲ್ ಮತ್ತು ಹೊದಿಕೆ ತನ್ನಿ. ಧನ್ಯವಾದಗಳು

ಜಿಲ್ಲಾ ತಾಲೂಕು ಮಾದಿಗ ನಾಯಕರು ನಿಮ್ಮ ವಿಧಾನಸಭಾ ಕ್ಷೇತ್ರದ ಎಂಎಲ್‌ಎಗಳಿಗೆ ಈ ರೀತಿ ಮನವಿ ನೀಡಿ

ಗೆ,
....
....
....

ವಿಷಯ: ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗದ ವರದಿ ಮಂಡನೆಗಾಗಿ ಶಿಫಾರಸ್ಸು ಮಾಡುವ ಕುರಿತು ರಾಜ್ಯದ ಆಯ-ವ್ಯಯ ಬಜೆಟ್ ಅಧಿವೇಶನದಲ್ಲಿ ಪ್ರಸ್ತಾಪ ಮಾಡುವ ಕುರಿತು.

ಮಾನ್ಯರೆ,

ಈ ಮೇಲ್ಕಂಡ ವಿಷಯದ ಬಗ್ಗೆ ಕುರಿತು ಮುಂಬರುವ 2021–2022ರ ರಾಜ್ಯ ಆಯ–ವ್ಯಯ (ಬಜೆಟ್) ಮುಂಗಡ ಪತ್ರ ಅಧಿವೇಶನದಲ್ಲಿ ಬಹುವರ್ಷಗಳ ಸಾಮಾಜಿಕ ಬೇಡಿಕೆಯಾದ ನ್ಯಾಯಮೂರ್ತಿ ಎ.ಜೆ.ಸದಾಶಿವ ಆಯೋಗದ ವರದಿಯನ್ನು ಅನುಷ್ಠಾನಗೊಳಿಸಲು ಮತ್ತು ಶೋಷಿತ ಸಮುದಾಯಗಳಿಗೆ ಸಮಾನತೆ–ಸಮಪಾಲು–ಸಮಬಾಳು ಸಾಮಾಜಿಕ ನ್ಯಾಯ ದೊರಕಿಸಿ ಕೊಡುವ ನಿಟ್ಟಿನಲ್ಲಿ ಆಡಳಿತಾರೂಢ ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಬಿ.ಎಸ್.ಯಡಿಯೂರಪ್ಪನವರ ನೇತೃತ್ವದ ಸರ್ಕಾರವು 30 ವರ್ಷಗಳ ಪ್ರಸ್ತುತ ಒಳಮೀಸಲಾತಿ ವರ್ಗೀಕರಣದ ಬೇಡಿಕೆಯನ್ನು ಕೂಡಲೇ ಈಡೇರಿಸುವಂತೆ ಒತ್ತಾಯಿಸಿ ಸದನದಲ್ಲಿ ಮಾದಿಗರ ಪರವಾಗಿ ಧ್ವನಿ ಎತ್ತಬೇಕೆಂದು ತಮ್ಮಲ್ಲಿ ಮನವಿ ಮಾಡುಕೊಳ್ಳುತ್ತೇವೆ. ತಾವುಗಳು ಮಾದಿಗರ ಪರವಾಗಿ ನ್ಯಾಯ ಕೊಡಿಸಿದರೆ ತಮ್ಮನ್ನು ಮಾದಿಗ ಜನಾಂಗ ಅಜೀವ ಪರ್ಯಂಥ ತಮ್ಮನ್ನು ಸ್ಮರಿಸುತ್ತದೆ ಮತ್ತು ಸಂಪೂರ್ಣ ಮಾದಿಗ ಮತದಾರರು ತಮಗೆ ಮತಗಳನ್ನು ನೀಡಿ ಕೃತಜ್ಞತೆಗಳನ್ನು ಸಲ್ಲಿಸುತ್ತಾರೆ. ಒಂದು ವೇಳೆ ತಾವುಗಳು ನಮ್ಮ ಪರವಾಗಿ ಧ್ವನಿ ಎತ್ತದಿದ್ದರೆ ಮುಂಬರುವ 2023 ವಿಧಾನಸಭಾ ಚುನಾವಣೆಯಲ್ಲಿ ತಮ್ಮ ವಿರುದ್ಧ ಮತಗಳನ್ನು ಚಲಾಯಿಸುತ್ತಾರೆ ಎಂಬುದಾಗಿ ಈ ಮೂಲಕ ತಮಗೆ ತಿಳಿಯಪಡಿಸುತ್ತೇವೆ.

ಧನ್ಯವಾದಗಳೊಂದಿಗೆ..,

ತಮ್ಮ ವಿಶ್ವಾಸಿಕರು
ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗದ
ವರದಿ ಜಾರಿ ಹೋರಾಟ ಸಮಿತಿ



ಹೆಣ್ಣೂರು ಲಕ್ಷ್ಮೀನಾರಾಯಣ
ಮಹಾ ಸಂಚಾಲಕರು
ಅಂಬಣ್ಣ: ಮೊ.94486 95537
ಆರ್.ಕಾಂಬ್ಳೆ: ಮೊ.72594 19666

ಮಾದಿಗ ಜನಶಕ್ತಿ

224 ಕ್ಷೇತ್ರಗಳಲ್ಲಿ 5ರಿಂದ 60 ಸಾವಿರ ಮಾದಿಗ ಮತದಾರರಿದ್ದೇವೆ. 75 ಕ್ಷೇತ್ರಗಳಲ್ಲಿ ಯಾರು ಗೆಲ್ಲಬೇಕೆಂದು ನಿರ್ಧರಿಸುವವರು ಮಾದಿಗ ಮತದಾರರು. 2018ರಲ್ಲಿ ಸದಾಶಿವ ವರದಿ ಜಾರಿ ಮಾಡದ ಕಾಂಗ್ರೆಸ್ ಸೋಲಿಸಿ ಅತಂತ್ರ ವಿಧಾನಸಭೆ ನಿರ್ಮಾಣ ಮಾಡಿದ್ದೇ ಮಾದಿಗ ಮತದಾರರು. ಇದು ಬಿಜೆಪಿ ಗಮನದಲ್ಲಿರಲಿ.

ಮಾದಿಗರ ಹೋರಾಟಕ್ಕೆ ದ್ರಾವಿಡರ ಬೆಂಬಲ

ರಥಯಾತ್ರೆ ಪ್ರವಾಸದಲ್ಲಿ ಮಾದಿಗ ಚಳವಳಿಗೆ ರಾಜ್ಯದ ಹಲವಾರು ತಾಲೂಕುಗಳಲ್ಲಿ ಬೆಂಬಲ ನೀಡಿ ಬೆಂಗಳೂರು ವಿರಾಟ್ ಶಕ್ತಿ ಪ್ರದರ್ಶನಕ್ಕೆ ಬರಲಿರುವ ಲಿಂಗಾಯತ, ಒಕ್ಕಲಿಗ, ಕುರುಬ, ವಾಲ್ಮೀಕಿ, ಚಲವಾದಿ, ಗಂಗಾಮತಸ್ಥರು, ಉಪ್ಪಾರ, ಹಡಪದ, ಗೊಲ್ಲ, ಅಕ್ಕಸಾಲಿಗ, ತಿಗಳ, ಈಡಿಗ, ಬ್ರಾಹ್ಮಣ, ಬಲಿಜ, ಮರಾಠ, ನೇಕಾರ, ಸವಿತಾ, ಮುಸ್ಲಿಂ ಸಮಾಜದ ದ್ರಾವಿಡ ಬಂಧುಗಳಿಗೆ ವಂದನೆಗಳು ಮತ್ತು ಆತ್ಮೀಯ ಸ್ವಾಗತ.

ಕಮಲನಾಭನ್ – ನಿವೃತ್ತ ಐಪಿಎಸ್ ಅಧಿಕಾರಿ | ಪ್ರೊ.ಹರಿರಾಂ – ಹೈಕೋರ್ಟ್ ವಕೀಲರು | ಸುಬ್ಬುರಾಜು – ಉದ್ಯಮಿ | ನಾಗರಾಜು – ಉದ್ಯಮಿ | ರಾಜಶೇಖರ್ – ಉದ್ಯಮಿ | ಜನಾನಾಗಪ್ಪ – ಸಿವಿಲ್ ಇಂಜಿನಿಯರ್ | ದಿಲೀಪ್ ಕುಮಾರ್ – ಪ್ರಿನ್ಸಿಪಾಲರು, ವಕೀಲರು | ಉಪೇಂದ್ರ – ಉದ್ಯಮಿ | ಅಂಬಣ್ಣ ಆರೋಲಿಕರ್ – ಪತ್ರಿಕೋದ್ಯಮಿ | ಮುನಿಕೃಷ್ಣಯ್ಯ – ಉದ್ಯಮಿ

ದೈಹಿಕ ಅಂತರ ಕಾಪಾಡಿ, ಕಡ್ಡಾಯವಾಗಿ ಮಾಸ್ಕ್ ಧರಿಸಿರಿ. ದಯವಿಟ್ಟು ನಿಮ್ಮ ಹೆಸರು, ಜಿಲ್ಲೆಯನ್ನು ಈ ವಾಟ್ಸ್ ಆಫ್ ನಂಬರಿಗೆ ಕಳುಹಿಸಿಕೊಡಿ. 80505 79593 / 80505 79594

ಜಿಲ್ಲಾಡಳಿತದಿಂದ ಏಕಕಾಲದಲ್ಲಿ ನಾಲ್ಕು ತಾಲ್ಲೂಕುಗಳಲ್ಲಿ ಕಾರ್ಯಾಚರಣೆ

18 ಎಕರೆ ಒತ್ತುವರಿ ತೆರವು

ಪ್ರಜಾವಾಣಿ ವಾರ್ತೆ

ಅಗರ ಗ್ರಾಮದಲ್ಲಿ ಜಮೀನು ಒತ್ತುವರಿಯನ್ನು ಕಂದಾಯ ಅಧಿಕಾರಿ ದಿವಾಕರ, ಪ್ರೊಬೇಷನರಿ ತಹಶೀಲ್ದಾರ್ ಬಸವರಡ್ಡೆಪ್ಪ ರೋಣದ, ಉಪವಿಭಾಗಾಧಿಕಾರಿ ಎಂ.ಜಿ.ಶಿವಣ್ಣ ಹಾಗೂ ತಹಶೀಲ್ದಾರ್ ಶಿವಪ್ಪ ಎಚ್.ಲಮಾಣಿ ಪರಿಶೀಲಿಸಿದರು.

ಬೆಂಗಳೂರು: ಬೆಂಗಳೂರು ನಗರ ಜಿಲ್ಲೆಯ ನಾಲ್ಕೂ ತಾಲ್ಲೂಕುಗಳಲ್ಲಿ ಒತ್ತುವರಿ ತೆರವು ಕಾರ್ಯಾಚರಣೆಯನ್ನು ಏಕಕಾಲದಲ್ಲಿ ನಡೆಸಿರುವ ಜಿಲ್ಲಾಡಳಿತದ ಅಧಿಕಾರಿಗಳು ಶನಿವಾರ ಒಟ್ಟು 18 ಎಕರೆಗಳಷ್ಟು ಸರ್ಕಾರಿ ಜಮೀನನ್ನು ಮತ್ತೆ ಸ್ವಾಧೀನಕ್ಕೆ ಪಡೆದಿದ್ದಾರೆ. ಈ ಜಮೀನುಗಳ ಒಟ್ಟು ಮೌಲ್ಯ ₹ 34.50 ಕೋಟಿ ಎಂದು ಅಂದಾಜಿಸಲಾಗಿದೆ.

ಜೆ.ಮಂಜುನಾಥ್ ಅವರು ಜಿಲ್ಲಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡ ಬಳಿಕ ನಡೆದ ಮೊದಲ ಒತ್ತುವರಿ ತೆರವು ಕಾರ್ಯಾಚರಣೆ ಇದು. ಕಂದಾಯ ಇಲಾಖೆ ಅಧಿಕಾರಿಗಳು ಶನಿವಾರ ಮುಂಜಾನೆಯೇ ಬೆಂಗಳೂರು ಮಹಾನಗರ ಕಾರ್ಯಪಡೆ (ಬಿ.ಎಂ.ಟಿ.ಎಫ್) ಹಾಗೂ ಪೊಲೀಸ್ ಅಧಿಕಾರಿಗಳ ನೆರವಿನಿಂದ ತೆರವು ಕಾರ್ಯಾಚರಣೆ ಆರಂಭಿಸಿದರು.

ದಕ್ಷಿಣ ತಾಲ್ಲೂಕಿನ ಕೆಂಗೇರಿ ಹೋಬಳಿಯ ಚನ್ನಸಂದ್ರ ಗ್ರಾಮದಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗೆ ಸೇರಿದ 10 ಸಾವಿರ ಅಡಿಗಳಷ್ಟು ಜಾಗವನ್ನು ಅಧಿಕಾರಿಗಳು ವಶಕ್ಕೆ ಪಡೆದರು. ಕೆಂಗೇರಿ ಹೋಬಳಿಯ ಅಗರ ಗ್ರಾಮದ ಸರ್ವೆ ನಂಬರ್ 31ರಲ್ಲಿದ್ದ 14 ಎಕರೆ 34 ಗುಂಟೆ ಸರ್ಕಾರಿ ಗೋಮಾಳದಲ್ಲಿ 1 ಎಕರೆ ಒತ್ತುವರಿಯಾಗಿದ್ದು, ಇದನ್ನೂ ತೆರವುಗೊಳಿಸಿದರು. ಇದೇ ಗ್ರಾಮದ ಸರ್ವೆ ನಂ. 73 ರಲ್ಲಿ ಕಬಳಿಕೆಯಾಗಿದ್ದ 2 ಎಕರೆಯನ್ನು ಸ್ವಾಧೀನಕ್ಕೆ ಪಡೆದರು. ತಾಲ್ಲೂಕಿನಲ್ಲಿ ಒತ್ತುವರಿ ತೆರವುಗೊಂಡ ಸ್ವತ್ತುಗಳ ಒಟ್ಟು ಮೌಲ್ಯ ₹ 4 ಕೋಟಿ ಎಂದು ಅಂದಾಜಿಸಲಾಗಿದೆ.

ಉತ್ತರ ತಾಲ್ಲೂಕಿನ ದಾಸನಪುರ ಹೋಬಳಿಯ ಕುದುರೆಗೆರೆ ಗ್ರಾಮದಲ್ಲಿ ಸರ್ವೆ ನಂಬರ್ 100 ರಲ್ಲಿ ಒತ್ತುವರಿಯಾಗಿದ್ದ 30 ಗುಂಟೆ ಜಮೀನಿನನ್ನು ಅಧಿಕಾರಿಗಳು ಮತ್ತೆ ವಶಕ್ಕೆ ಪಡೆದರು. ಇದೇ ಗ್ರಾಮದ ಸರ್ವೆ ನಂಬರ್ 81 ರಲ್ಲಿ 2 ಎಕರೆ 30 ಗುಂಟೆ ಸರ್ಕಾರಿ ಗುಂಡುತೋಪನ್ನು ಜಿಲ್ಲಾಧಿಕಾರಿ ಮಂಜುನಾಥ್ ಸಮ್ಮುಖದಲ್ಲಿ ಸ್ವಾಧೀನಪಡಿಸಿಕೊಳ್ಳಲಾಯಿತು. ಈ ಗ್ರಾಮದಲ್ಲಿ ಒತ್ತುವರಿಯಾಗಿದ್ದ ಜಮೀನಿನ ಮೌಲ್ಯ ₹ 6.50 ಕೋಟಿ ಎಂದು ಅಂದಾಜಿಸಲಾಗಿದೆ.

ಯಲಹಂಕ ತಾಲ್ಲೂಕಿನ ಹೆಸರಘಟ್ಟ ಹೋಬಳಿಯ ಕಾಳತಿಮ್ಮನಹಳ್ಳಿ ಗ್ರಾಮದ ಸರ್ವೆ ನಂ. 25 ರಲ್ಲಿ 4 ಎಕರೆ, ಮೈಲಪ್ಪನಹಳ್ಳಿ ಗ್ರಾಮದ ಸರ್ವೆ ನಂ. 91ರಲ್ಲಿ 2 ಎಕರೆ 11 ಗುಂಟೆ ಹಾಗೂ ಮಾದಪ್ಪನಹಳ್ಳಿ ಗ್ರಾಮದ ಸರ್ವೆ ನಂ. 73ರಲ್ಲಿ 20 ಗುಂಟೆ ಜಾಗಗಳು ಒತ್ತುವರಿಯಾಗಿದ್ದವು. ಇವುಗಳನ್ನು ಅಧಿಕಾರಿಗಳು ವಶಕ್ಕೆ ಪಡೆದರು. ಇವೆಲ್ಲವೂ ಕೆರೆಗೆ ಸಂಬಂಧಿಸಿದ ಜಾಗಗಳು. ತಾಲ್ಲೂಕಿನಲ್ಲಿ ಮರು ಸ್ವಾಧೀನಪಡಿಸಿಕೊಂಡ ಜಾಗಗಳ ಒಟ್ಟು ಮೌಲ್ಯ ₹ 9 ಕೋಟಿ ಎಂದು ಅಂದಾಜಿಸಲಾಗಿದೆ.

ಪೂರ್ವ ತಾಲ್ಲೂಕಿನ ಬಿದರಹಳ್ಳಿ ಹೋಬಳಿಯ ಬೊಮ್ಮೇನಹಳ್ಳಿ ಗ್ರಾಮದ ಸರ್ವೆ ನಂ. 96 ರಲ್ಲಿ 4 ಎಕರೆ ಗೋಮಾಳವನ್ನು, ವರ್ತೂರು ಹೋಬಳಿ ಮುಳ್ಳೂರು ಗ್ರಾಮದಲ್ಲಿ ಸರ್ವೆ ನಂ. 30 ರಲ್ಲಿ ಒತ್ತುವರಿಯಾಗಿದ್ದ 20 ಗುಂಟೆ ಗುಂಡುತೋಪು ಜಮೀನನ್ನು ಹಾಗೂ ನಂ. 31 ರಲ್ಲಿ ಒತ್ತುವರಿಯಾಗಿದ್ದ 2 ಗುಂಟೆ ಗುಂಡುತೋಪನ್ನು ಅಧಿಕಾರಿಗಳು ಮತ್ತೆ ಸ್ವಾಧೀನಕ್ಕೆ ಪಡೆದರು. ಇದೇ ಹೋಬಳಿಯ ಗುಂಜೂರು ಗ್ರಾಮದಲ್ಲಿ ಸರ್ವೆ ನಂ. 290ರಲ್ಲಿ ಒತ್ತುವರಿಯಾಗಿದ್ದ 7 ಗುಂಟೆ ಖರಾಬು ಜಮೀನನ್ನೂ ವಶಕ್ಕೆ ಪಡೆದರು. ತಾಲ್ಲೂಕಿನಲ್ಲಿ ಮರುವಶಪಡಿಸಿಕೊಂಡ ಭೂಮಿಯ ಒಟ್ಟು ಮೌಲ್ಯ ₹15 ಕೋಟಿ ಎಂದು ಅಂದಾಜಿಸಲಾಗಿದೆ.

> **ಸರ್ಕಾರಿ ಜಾಗಗಳ ಒತ್ತುವರಿಯನ್ನು ಸಹಿಸಲು ಸಾಧ್ಯವಿಲ್ಲ. ಎಲ್ಲ ಒತ್ತುವರಿಗಳನ್ನು ತೆರವುಗೊಳಿಸಲು ಮುಲಾಜಿಲ್ಲದೇ ಹಂತ ಹಂತವಾಗಿ ಕ್ರಮ ಕೈಗೊಳ್ಳುತ್ತೇವೆ**
> **ಜೆ.ಮಂಜುನಾಥ್,** ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ

‘ಅನೇಕ ಕಡೆ ಸರ್ಕಾರಿ ಜಾಗ ಒತ್ತುವರಿಯಾಗಿರುವುದು ಹಾಗೂ ಯಾವುದೇ ಮಂಜೂರಾತಿ ಪಡೆಯದೆಯೇ ಕೆಲವೆಡೆ ಅನಧಿಕೃತವಾಗಿ ಬಡಾವಣೆಗಳ ನಿರ್ಮಾಣ ಮಾಡುತ್ತಿರುವುದು ಗಮನಕ್ಕೆ ಬಂದಿತ್ತು. ಹಾಗಾಗಿ ಏಕಕಾಲದಲ್ಲಿ ನಾಲ್ಕೂ ತಾಲ್ಲೂಕುಗಳಲ್ಲಿ ಒತ್ತುವರಿ ತೆರವು ಕಾರ್ಯಾಚರಣೆ ನಡೆಸಿದ್ದೇವೆ. ಒತ್ತುವರಿದಾರರ ವಿರುದ್ಧ ಪ್ರಕರಣ ದಾಖಲಿಸುತ್ತೇವೆ’ ಎಂದು ಜಿಲ್ಲಾಧಿಕಾರಿ ತಿಳಿಸಿದರು.

‘ಈ ಹಿಂದೆ ಜಿಲ್ಲಾಡಳಿತ ಒತ್ತುವರಿ ತೆರವುಗೊಳಿಸಿ ಸ್ವಾಧೀನಕ್ಕೆ ಕೆಲವು ಜಾಗಗಳು ಮತ್ತೆ ಒತ್ತುವರಿಯಾಗಿರುವ ಮಾಹಿತಿ ಲಭಿಸಿದೆ. ಒತ್ತುವರಿ ಕುರಿತು ಈ ಹಿಂದೆ ಸಿದ್ಧಪಡಿಸಿದ ವರದಿಗಳನ್ನು ಆಧರಿಸಿ ಅವುಗಳ ತೆರವಿಗೆ ಕ್ರಮ ಕೈಗೊಳ್ಳುತ್ತೇವೆ. ಭೂ ಕಬಳಿಕೆ ಮಾಡಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಜಿಲ್ಲೆಯ ಪ್ರತಿ ಗ್ರಾಮದ ಗ್ರಾಮ ಲೆಕ್ಕಿಗ ಹಾಗೂ ಕಂದಾಯ ನಿರೀಕ್ಷಕರಿಗೆ ಸೂಚನೆ ನೀಡಿದ್ದೇನೆ’ ಎಂದರು.

ಹೆಚ್ಚುವರಿ ಜಿಲ್ಲಾಧಿಕಾರಿ ಅನಿತಾಲಕ್ಷ್ಮೀ, ಉತ್ತರ ಉಪವಿಭಾಗಾಧಿಕಾರಿ ಕೆ.ರಂಗನಾಥ, ದಕ್ಷಿಣ ಉಪವಿಭಾಗಾಧಿಕಾರಿ ಎಂ.ಜಿ ಶಿವಣ್ಣ, ಉತ್ತರ ತಾಲ್ಲೂಕಿನ ತಹಶೀಲ್ದಾರ್ ಬಾಲಕೃಷ್ಣ, ಯಲಹಂಕ ತಹಶೀಲ್ದಾರ್ ನರಸಿಂಹಮೂರ್ತಿ, ದಕ್ಷಿಣ ತಾಲ್ಲೂಕಿನ ತಹಶೀಲ್ದಾರ್ ಶಿವಪ್ಪ ಎಚ್. ಲಮಾಣಿ, ಪೂರ್ವ ತಾಲ್ಲೂಕಿನ ತಹಶೀಲ್ದಾರ್ ಅಜಿತ್ ರೈ ಸಾರೋಕೆ ಕಾರ್ಯಾಚರಣೆಯ ನೇತೃತ್ವ ವಹಿಸಿದ್ದರು.

ವಿದ್ಯಾರ್ಥಿಗಳ ಪ್ರಾರ್ಥನೆಗೂ ಇರಲಿಲ್ಲ ಜಾಗ!

ಕೆಂಗೇರಿ ಹೋಬಳಿಯ ಚನ್ನಸಂದ್ರ ಗ್ರಾಮದಲ್ಲಿ 1930ರಿಂದ ಸರ್ಕಾರಿ ಶಾಲೆ ಇದೆ. ಇಲ್ಲಿ ಅಂಗನವಾಡಿಯಿಂದ ಹಿಡಿದು ಎಂಟನೇ ತರಗತಿವರೆಗೆ 500ಕ್ಕೂ ಅಧಿಕ ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಈ ಶಾಲೆಗೆ ಸಂಬಂಧಿಸಿ ಜಾಗದ ಖಾತಾ ತನ್ನ ಹೆಸರಿಗೆ ಆಗಿದೆ ಎಂದು ವ್ಯಕ್ತಿಯೊಬ್ಬರು ಇತ್ತೀಚೆಗೆ ಬೇಲಿ ಹಾಕಿದ್ದರು. ಇದರಿಂದಾಗಿ ವಿದ್ಯಾರ್ಥಿಗಳು ಪ್ರಾರ್ಥನೆ ಮಾಡುವುದಕ್ಕೂ ಜಾಗ ಇಲ್ಲದ ಸ್ಥಿತಿ ನಿರ್ಮಾಣವಾಗಿತ್ತು. ಮಕ್ಕಳು ಇಲ್ಲಿನ ರಸ್ತೆಯಲ್ಲೇ ಪ್ರಾರ್ಥನೆ ಮಾಡಬೇಕಾಗಿತ್ತು. ಸ್ಥಳೀಯರ ವಾಹನ ಓಡಾಟಕ್ಕೂ ಸಮಸ್ಯೆ ಎದುರಾಗಿತ್ತು.

‘ಶಾಲೆಯವರು ಈ ಒತ್ತುವರಿ ಬಗ್ಗೆ ಗಮನಕ್ಕೆ ತಂದಿದ್ದರು. ಪಹಣಿ ದಾಖಲೆಗಳನ್ನು ಪರಿಶೀಲಿಸಿದಾಗ ಇದು ಸರ್ಕಾರಿ ಜಾಗ ಎಂದಿದೆ. ಹಾಗಾಗಿ ಖಾಸಗಿಯವರು ಹಾಕಿದ್ದ ಬೇಲಿಯನ್ನು ತೆರವುಗೊಳಿಸಿದ್ದೇವೆ. ಇನ್ನೊಮ್ಮೆ ಸರ್ವೆ ನಡೆಸಿ ಶಾಲೆಯ ಜಾಗವನ್ನು ಉಳಿಸಿಕೊಳ್ಳಲು ಕ್ರಮಕೈಗೊಳ್ಳುತ್ತೇವೆ’ ಎಂದು ತಹಸೀಲ್ದಾರ್ ಶಿವಪ್ಪ ಎಚ್. ಲಮಾಣಿ ‘ಪ್ರಜಾವಾಣಿ’ಗೆ ತಿಳಿಸಿದರು.

ಒಆರ್‌ಒಪಿ ಯೋಜನೆ ಮರು ನಿಗದಿ ಕೋರಿ ಪಿಐಎಲ್

ಬೆಂಗಳೂರು: ಸಮಾನ ಶ್ರೇಣಿಗೆ ಸಮಾನ ಪಿಂಚಣಿ (ಒಆರ್‌ಒಪಿ) ಯೋಜನೆಯನ್ನು ಏಕ ಸದಸ್ಯ ನ್ಯಾಯಾಂಗ ಸಮಿತಿಯ ಶಿಫಾರಸಿನ ಪ್ರಕಾರ ಮರು ನಿಗದಿ ಮಾಡಬೇಕು ಎಂದು ಕೋರಿ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಕೆಯಾಗಿದೆ.

ಕೇಂದ್ರ ಸರ್ಕಾರ, ರಕ್ಷಣಾ ಸಚಿವಾಲಯ ಮತ್ತು ಹಣಕಾಸು ಸಚಿವಾಲಯಕ್ಕೆ ನೋಟಿಸ್ ನೀಡಲು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ಆದೇಶಿಸಿದೆ.

ಭಾರತೀಯ ವಾಯುಪಡೆಯ ವಿಂಗ್ ಕಮಾಂಡರ್ ಆಗಿ ನಿವೃತ್ತಿ ಹೊಂದಿರುವ ಜಿ.ಬಿ. ಅತ್ರಿ ಅರ್ಜಿ ಸಲ್ಲಿಸಿದ್ದು, ‘ಯೋಜನೆ ಮಾರ್ಪಡಿಸದೇ ಇದ್ದರೆ 20 ಲಕ್ಷ ಮಾಜಿ ಸೈನಿಕರು ಮತ್ತು 4 ಲಕ್ಷಕ್ಕೂ ಹೆಚ್ಚು ವಿಧವೆಯರಿಗೆ ಅನ್ಯಾಯವಾಗಲಿದೆ’ ಎಂದು ತಿಳಿಸಿದ್ದಾರೆ.

‘ಒಆರ್‌ಒಪಿ ಎನ್ನುವುದು ಅವರ ನಿವೃತ್ತಿಯ ದಿನಾಂಕ ಲೆಕ್ಕಿಸದೆ, ಅದೇ ಶ್ರೇಣಿಯಲ್ಲಿ ನಿವೃತ್ತಿ ಹೊಂದಿದ ರಕ್ಷಣಾ ಸಿಬ್ಬಂದಿಗೆ ಪಾವತಿಸುವ ಏಕರೂಪದ ಪಿಂಚಣಿ. 2014ರಿಂದ ಜಾರಿಗೆ ತರಲಾಗಿದ್ದು, ಆ ಆದೇಶದ ಪ್ರಕಾರ ಪ್ರತಿ ಐದು ವರ್ಷಗಳಿಗೊಮ್ಮೆ ಮರು ನಿಗದಿ ಮಾಡಬೇಕು. 2019ರ ಜೂನ್ 30ಕ್ಕೆ 5 ವರ್ಷಗಳ ಅವಧಿ ಪೂರ್ಣಗೊಂಡಿದೆ. ಸಮಿತಿಯಿಂದ ವರದಿ ಪಡೆದಿದ್ದರೂ ಈವರೆಗೆ ಮರು ನಿಗದಿ ಮಾಡಿಲ್ಲ’ ಎಂದು ಅರ್ಜಿಯಲ್ಲಿ ವಿವರಿಸಿದ್ದಾರೆ.

ಕಸ ನಿರ್ವಹಣೆ ಸಂಸ್ಥೆ ಸ್ಥಾಪನೆಗೆ ಅನುಮೋದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯೂ ಸೇರಿದಂತೆ ಸಂಪೂರ್ಣ ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಕಸ ಸಂಗ್ರಹಣೆ, ಸಾಗಣೆ ಮತ್ತು ವಿಲೇವಾರಿಗಾಗಿ ‘ಬೆಂಗಳೂರು ಕಸ ನಿರ್ವಹಣೆ ನಿಯಮಿತ’ ಸಂಸ್ಥೆಯನ್ನು ಸ್ಥಾಪಿಸಲು ನಗರಾಭಿವೃದ್ಧಿ ಇಲಾಖೆ ಅನುಮೋದನೆ ನೀಡಿದೆ.

ಕಂಪನಿಗಳ ಕಾಯ್ದೆಯಡಿ ಸ್ಥಾಪಿಸಲಾಗುವ ಈ ಸಂಸ್ಥೆಗೆ ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಧ್ಯಕ್ಷ ಹಾಗೂ ಬಿಬಿಎಂಪಿ ಆಯುಕ್ತರು ಸಹ ಅಧ್ಯಕರಾಗಲಿದ್ದಾರೆ. ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯನ್ನು ಆಡಳಿತ ಮಂಡಳಿ ನೇಮಿಸಲಿದೆ. ಬಿಬಿಎಂಪಿಯಿಂದ ವಿಶೇಷ ಆಯುಕ್ತರು (ಕಸ ನಿರ್ವಹಣೆ) ಮತ್ತು ಜಂಟಿ ಆಯುಕ್ತ (ಕಸ ನಿರ್ವಹಣೆ) ಅವರು ಪದನಿಮಿತ್ತ ನಿರ್ದೇಶಕರಾಗಿ ಕಾರ್ಯನಿರ್ವಹಿಸಲಿದ್ದಾರೆ. ರಾಜ್ಯ ಸರ್ಕಾರವು ಕಸ ನಿರ್ವಹಣೆ ತಜ್ಞರಿಬ್ಬರನ್ನು ಸಂಸ್ಥೆಯ ನಿರ್ದೇಶಕರಾಗಿ ನಾಮನಿರ್ದೇಶನ ಮಾಡಲಿದೆ. ಅರಣ್ಯ ಪರಿಸರ ಮತ್ತು ಜೀವಿವಿಜ್ಞಾನ ಇಲಾಖೆಯ ಕಾರ್ಯದರ್ಶಿ, ಆರ್ಥಿಕ ಇಲಾಖೆಯ ಕಾರ್ಯದರ್ಶಿ (ವೆಚ್ಚ) ಮತ್ತು ಬೆಂಗಳೂರಿನ ಪ್ರಾದೇಶಿಕ ಆಯುಕ್ತರನ್ನು ಸರ್ಕಾರದ ಪರವಾಗಿ ಪದನಿಮಿತ್ತ ಸದಸ್ಯರನ್ನಾಗಿ ನೇಮಿಸಲಾಗುತ್ತದೆ.

ವೈದ್ಯಕೀಯ ತ್ಯಾಜ್ಯ, ಸಾರ್ವಜನಿಕ ಶೌಚಾಲಯಗಳಲ್ಲಿ ತ್ಯಾಜ್ಯವನ್ನು ಹೊರತುಪಡಿಸಿ ಉಳಿದೆಲ್ಲ ಬಗೆಯ ಕಸ ಸಂಗ್ರಹ, ಸಾಗಣೆ ಮತ್ತು ವಿಲೇವಾರಿ ಈ ಸಂಸ್ಥೆಯ ಹೊಣೆ. ಕಸದಿಂದ ಗೊಬ್ಬರ ತಯಾರಿಸುವುದು, ಕಸದ ಮರುಬಳಕೆಯ ಬಗ್ಗೆಯೂ ಸಂಸ್ಥೆ ಕ್ರಮ ಕೈಗೊಳ್ಳಲಿದೆ.

ಕೆರೆ ಒತ್ತುವರಿ: ಹೊಸ ಸರ್ವೆಗೆ ನಿರ್ದೇಶನ

ಬೆಂಗಳೂರು: ಕಗ್ಗದಾಸಪುರ ಮತ್ತು ಬೇಗೂರು ಕೆರೆಗಳ ಅತಿಕ್ರಮಣಕ್ಕೆ ಸಂಬಂಧಿಸಿದಂತೆ ಹೊಸದಾಗಿ ಸರ್ವೆ ನಡೆಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಈಗ ನಡೆಸಿರುವ ಸರ್ವೆಯಲ್ಲಿ ಮೀಸಲು ಪ್ರದೇಶಗಳ ಗಡಿರೇಖೆ ಗುರುತಿಸಿಲ್ಲ ಎಂದು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ಅಭಿಪ್ರಾಯಪಟ್ಟಿದೆ.

ಸರ್ಕಾರ ಸಲ್ಲಿಸಿದ್ದ ಅಫಿಡವಿಟ್ ಪರಿಶೀಲಿಸಿದ ಪೀಠ, ‘ಅತಿಕ್ರಮಣ ಕಂಡು ಹಿಡಿಯಲು ಮೀಸಲು ಪ್ರದೇಶದ ಗಡಿರೇಖೆ ಅತ್ಯಗತ್ಯ ಮತ್ತು ಅದನ್ನು ಮೊದಲು ಮಾಡಬೇಕು’ ಎಂದು ತಿಳಿಸಿತು.

‘ಕೆರೆ ಒತ್ತುವರಿ ಮತ್ತು ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸಲು ಕೂಡಲೇ ಕ್ರಮ ಕೈಗೊಳ್ಳಬೇಕು’ ಎಂದು ಪೀಠ ನಿರ್ದೇಶನ ನೀಡಿತು.

ಸುಬ್ರಹ್ಮಣ್ಯಪುರ ಕೆರೆ ಸರ್ವೆ ನಡೆಸಲು ಒಂದು ತಿಂಗಳ ಕಾಲಾವಕಾಶ ನೀಡಿದ ಪೀಠ, ವಿಚಾರಣೆಯನ್ನು ಇದೇ 19ಕ್ಕೆ ಮುಂದೂಡಿತು.

ಉಪಮುಖ್ಯಮಂತ್ರಿ ಅಶ್ವತ್ಥನಾರಾಯಣ ಪ್ರತಿಪಾದನೆ

ಬಿಬಿಎಂಪಿ ತೆರಿಗೆ ಪದ್ಧತಿ ಜನಸ್ನೇಹಿಯಾಗಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಬಿಎಂಪಿಯಲ್ಲಿ ಚಾಲ್ತಿಯಲ್ಲಿರುವ ತೆರಿಗೆ ಪದ್ಧತಿ ಸರಳವಾಗಿಲ್ಲ. ಹೀಗಾಗಿ ಇಡೀ ತೆರಿಗೆ ವ್ಯವಸ್ಥೆಯನ್ನು ಜಾಗತಿಕ ಮಾನದಂಡಕ್ಕೆ ಅನುಗುಣವಾಗಿ ಆಮೂಲಾಗ್ರ ಸುಧಾರಣೆ ಮಾಡಬೇಕು. ಇದನ್ನು ಇನ್ನಷ್ಟು ಜನಸ್ನೇಹಿಯಾಗಿ ರೂಪಿಸಬೇಕು’ ಎಂದು ಉಪಮುಖ್ಯಮಂತ್ರಿ ಸಿ.ಎನ್. ಅಶ್ವತ್ಥನಾರಾಯಣ ಅಭಿಪ್ರಾಯಪಟ್ಟರು.

ಸುಲಲಿತ ಜೀವನ ನಿರ್ವಹಣೆ ಸೂಚ್ಯಂಕದಲ್ಲಿ ಬೆಂಗಳೂರು ನಗರವು ಅಗ್ರಸ್ಥಾನ ಪಡೆದುದಕ್ಕೆ ಪೂರಕವಾಗಿ ಜಾರಿಗೊಳಿಸಬೇಕಾದ ಕಾರ್ಯಕ್ರಮಗಳ ಬಗ್ಗೆ ಸುದ್ದಿಗಾರರ ಜೊತೆ ಶನಿವಾರ ಅವರು ಅಭಿಪ್ರಾಯ ಹಂಚಿಕೊಂಡರು.

‘ತನ್ನ ಆಸ್ತಿಯ ಮೌಲ್ಯಕ್ಕೆ ತಕ್ಕಂತೆ ಪ್ರತಿ ಆಸ್ತಿ ಮಾಲೀಕನೂ ನಿರಾಯಾಸವಾಗಿ ತೆರಿಗೆ ಪಾವತಿ ಮಾಡುವಂತಿರಬೇಕು. ಹಾಗೆ ಮಾಡಿದರೆ, ಗಣನೀಯ ಪ್ರಮಾಣದಲ್ಲಿ ತೆರಿಗೆ ಸಂಗ್ರಹ ಆಗುತ್ತದೆ. ಅಭಿವೃದ್ಧಿಗೆ ಸಂಪನ್ಮೂಲಗಳ ಕೊರತೆಯೂ ಆಗುವುದಿಲ್ಲ. ಆರ್ಥಿಕವಾಗಿ ಬೆಂಗಳೂರು ನಗರದ ಆಡಳಿತ ಸ್ವಾವಲಂಬನೆ ಸಾಧಿಸಲಿದೆ’ ಎಂದರು.

‘ಬೆಂಗಳೂರು ಅಸಾಧಾರಣ ನಗರ. ಇಲ್ಲಿ ಎಲ್ಲವೂ ವ್ಯವಸ್ಥಿತವಾಗಿರಬೇಕು. ಜಗತ್ತಿನಲ್ಲಿ ಹೂಡಿಕೆಗೆ ಆಕರ್ಷಣೀಯ ತಾಣವಿದು. ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನದಲ್ಲಿ ಅಮೆರಿಕದ ಸಿಲಿಕಾನ್ ವ್ಯಾಲಿಯನ್ನು ಮೀರಿಸುವಂತೆ ನಗರ ಬೆಳೆಯುತ್ತಿದೆ. ಸಂಶೋಧನೆ, ವಿಜ್ಞಾನ, ತಂತ್ರಜ್ಞಾನ, ಶಿಕ್ಷಣ, ವೈದ್ಯಕೀಯ, ವೈಮಾನಿಕ, ರಕ್ಷಣೆ, ಎಲೆಕ್ಟ್ರಾನಿಕ್ಸ್ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ದೇಶದ ಮುಂಚೂಣಿ ನಗರವಾಗಿ ಬೆಂಗಳೂರು ಹೊರಹೊಮ್ಮಿದೆ. ಈ ನಗರವನ್ನು ಇನ್ನಷ್ಟು ಎತ್ತರಕ್ಕೆ ಕೊಂಡೊಯ್ಯಬೇಕಿದೆ’ ಎಂದೂ ಹೇಳಿದರು.

‘ಸುಲಲಿತ ಜೀವನ ನಿರ್ವಹಣೆ ಸೂಚ್ಯಂಕದಲ್ಲಿ ಅಗ್ರಸ್ಥಾನ ಸಿಕ್ಕಿದೆ ಎಂದು ಮೈಮರೆಯುವ ಬದಲು ನಗರವನ್ನು ಉತ್ತಮಪಡಿಸಲು ಇನ್ನಷ್ಟು ಶ್ರಮಿಸಬೇಕು. ನಗರಕ್ಕೆ ಸಂಬಂಧಿಸಿ ಸ್ಥಳೀಯ ಆಡಳಿತ, ಸರ್ಕಾರ, ಕೈಗಾರಿಕೋದ್ಯಮಿಗಳು, ತಜ್ಞರು, ಜನರು ಎಲ್ಲರೂ ಒಟ್ಟಾಗಿ ಕೆಲಸ ಮಾಡಬೇಕು. ನಗರ ಕಟ್ಟುವ ಕಾರ್ಯದಲ್ಲಿ ರಚನಾತ್ಮಕವಾಗಿ ಭಾಗಿಯಾಗಬೇಕು’ ಎಂದರು.

‘ರಸ್ತೆಗಳ ಇತಿಹಾಸ ರೂಪಿಸಬೇಕಿದೆ’

‘ಬೆಂಗಳೂರು ನಗರದ ರಸ್ತೆಗಳಿಗೆ ಸಂಬಂಧಿಸಿದ ದಾಖಲೆಗಳಲ್ಲಿ ಅವುಗಳ ಸಮಗ್ರ ವಿವರಗಳು ಲಭ್ಯವಿಲ್ಲ. ಈ ಕಾರಣಕ್ಕೆ ಬಿಬಿಎಂಪಿಗೆ ರಸ್ತೆಗಳನ್ನು ನಿರ್ವಹಿಸುವುದು ಕಷ್ಟವಾಗಿದೆ. ಹೀಗಾಗಿ ನಗರದ ಎಲ್ಲ ಗಾತ್ರದ ರಸ್ತೆಗಳ ಇತಿಹಾಸವನ್ನು ಯೋಜಿತವಾಗಿ ಸಿದ್ಧಪಡಿಸಿ ಅದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡುವುದು ಅತ್ಯಂತ ಜರೂರಿನ ಕೆಲಸ’ ಎಂದು ಅಶ್ವತ್ಥನಾರಾಯಣ ಪ್ರತಿಪಾದಿಸಿದರು.

‘ರಸ್ತೆ ಇತಿಹಾಸ ಸಿದ್ಧಪಡಿಸುವುದರಿಂದ ಅದರ ನಿರ್ಮಾಣಕ್ಕೆ ಸಂಬಂಧಿಸಿದ ಎಲ್ಲ ದಾಖಲೆಗಳು ವ್ಯವಸ್ಥಿತವಾಗಿ ಒಂದೆಡೆ ಸಂಗ್ರಹವಾಗುತ್ತವೆ. ರಸ್ತೆಯ ಅಗಲ-ಉದ್ದ, ಮ್ಯಾನ್‌ಹೋಲ್‌ಗಳ ವಿವರ, ಒಳಚರಂಡಿ, ಭೂಗರ್ಭದಲ್ಲಿನ ಯಾವುದೇ ರೀತಿಯ ಸಂಪರ್ಕ ಜಾಲ, ಮಳೆಗಾಲ ಬಂದಾಗ ಆ ರಸ್ತೆಯ ಸ್ಥಿತಿಗತಿ ಇತ್ಯಾದಿ ವಿವರಗಳನ್ನು ಅದರ ಜೊತೆ ದಾಖಲು ಮಾಡಬೇಕು. ಹಾಗೆ ಮಾಡುವುದರಿಂದ ಎಂಜಿನಿಯರುಗಳಿಗೆ ರಸ್ತೆಗಳನ್ನು ನಿರ್ವಹಿಸುವುದು ಸುಲಭವಾಗುತ್ತದೆ ಹಾಗೂ ಒಮ್ಮೆ ಅಭಿವೃದ್ಧಿಪಡಿಸಿದರೆ ಅದು ಶಾಶ್ವತವಾಗಿರುವಂತೆ ಆಗಿಬಿಡುತ್ತದೆ’ ಎಂದು ಅವರು ವಿವರಿಸಿದರು.

‘ಯಡಿಯೂರಪ್ಪ, ಈಶ್ವರಪ್ಪ, ರಾಘವೇಂದ್ರ ದಾಖಲೆ ಬಿಡುಗಡೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆಡಳಿತ ಪಕ್ಷದವರು ವಿರೋಧ ಪಕ್ಷದವರಿಗೆ ಕಾಟ ಕೊಡಬಾರದು. ಯಡಿಯೂರಪ್ಪ, ಈಶ್ವರಪ್ಪ, ರಾಘವೇಂದ್ರ ಎಲ್ಲಿಂದ ಎಲ್ಲಿಗೆ ಬಂದಿದ್ದರು ಎನ್ನುವುದು ನನಗೆ ಗೊತ್ತಿದೆ. ಇನ್ನೊಂದು ತಿಂಗಳ ಒಳಗೆ ಎಲ್ಲರ ದಾಖಲೆಗಳನ್ನು ಬಿಡುಗಡೆ ಮಾಡುತ್ತೇನೆ’ ಎಂದು ಭದ್ರಾವತಿಯ ಕಾಂಗ್ರೆಸ್ ಶಾಸಕ ಬಿ.ಕೆ. ಸಂಗಮೇಶ್ವರ ಹೇಳಿದರು.

ಮಗನ ಬಂಧನದ ಬೆನ್ನಲ್ಲೇ ವಿಧಾನಸೌಧದಲ್ಲಿ ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, ‘ನಾನು ದಾಖಲೆಗಳನ್ನು ಹಿಡಿದುಕೊಂಡು ಬ್ಲ್ಯಾಕ್‌ಮೇಲ್ ಮಾಡುತ್ತಿಲ್ಲ. ಆ ಜನರೇ ಬೇರೆ. ನಾನೇ ಬೇರೆ. ಬಿಜೆಪಿಯವರಿಂದಾಗಿ ನಮಗೂ ಮರ್ಯಾದೆ ಇಲ್ಲದಾಗಿದೆ. ಜನರ ಸೇವೆ ಮಾಡಿ ಎಂದರೆ ಮಜಾ ಮಾಡುತ್ತಾರೆ’ ಎಂದು ಹರಿಹಾಯ್ದರು.

‘ಬಿಜೆಪಿಯವರು ಅಧಿಕಾರ ವ್ಯಾಮೋಹದಿಂದ ಸುಳ್ಳು ಕೇಸು ಹಾಕಿ ದೌರ್ಜನ್ಯ ಮಾಡುತ್ತಿದ್ದಾರೆ. ಬಿಜೆಪಿಗೆ ಭದ್ರಾವತಿಯಲ್ಲಿ ನೆಲೆಯೇ ಇಲ್ಲ. ಬಿಜೆಪಿ ಬೀಜ ಬಿತ್ತಬೇಕು ಎಂದು ಗಲಾಟೆ ಮಾಡಿಸುತ್ತಿದ್ದಾರೆ. ಆದರೆ, ಅಲ್ಲಿನ ಜನ ಬಿಜೆಪಿಯನ್ನು ಒಪ್ಪುವುದಿಲ್ಲ. ಸೌಹಾರ್ದ, ಪ್ರೀತಿಯಿಂದ ಭದ್ರಾವತಿ ಜನ ಬದುಕುತ್ತಿದ್ದಾರೆ. ಆದರೆ, ಯಡಿಯೂರಪ್ಪ, ರಾಘವೇಂದ್ರ, ಈಶ್ವರಪ್ಪ ಸಣ್ಣತನದ ರಾಜಕಾರಣ ಮಾಡುತ್ತಿದ್ದಾರೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ನನ್ನ ವಿರುದ್ಧ ದಾಖಲಾದ ಕ್ರಿಮಿನಲ್ ಮೊಕದ್ದಮೆ ಬಗ್ಗೆ ಅಧಿವೇಶನದಲ್ಲಿ ಗಮನಸೆಳೆಯಲು ಮುಂದಾದೆ. ಸಭಾಧ್ಯಕ್ಷರು ಮನ್ನಣೆ ಕೊಡಲಿಲ್ಲ. ಅಂಗಿ ಬಿಚ್ಚಿದಾಗಲಾದರೂ ಮನ್ನಣೆ ಕೊಡುತ್ತಾರೆ ಎಂದುಕೊಂಡೆ. ಸಭಾಧ್ಯಕ್ಷರು ನಡೆದುಕೊಂಡಿದ್ದು ಯಾವ ಪ್ರಜಾಪ್ರಭುತ್ವ’ ಎಂದು ಪ್ರಶ್ನಿಸಿದರು.

‘ಮಂಗಳವಾರದಿಂದ ನಮ್ಮ ಜಿಲ್ಲೆಯ ಎಸ್‌ಪಿ ಕಚೇರಿಗೆ ಮುತ್ತಿಗೆ ಹಾಕುತ್ತೇವೆ. ಮುಂದಿನ ಶನಿವಾರ ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಮಲ್ಲಿಕಾರ್ಜುನ ಖರ್ಗೆ ಕೂಡ ಅಲ್ಲಿಗೆ ಬಂದು ಪ್ರತಿಭಟನೆಯಲ್ಲಿ ಭಾಗವಹಿಸಲಿದ್ದಾರೆ’ ಎಂದರು.

ಸಂಗಮೇಶ್ವರ ಜೊತೆ ಇದ್ದ ಲಿಂಗಾಯತ ಗಾಣಿಗ ಸ್ವಾಮೀಜಿ ಯೋಗಿ ಕಲ್ಲಿನಾಥ ಕೂಡಾ ಇದ್ದರು.

‘ಕೇಸ್ ವಾಪಸ್ ಪಡೆಯದಿದ್ದರೆ ಪ್ರತಿಭಟನೆ’

‘ಭದ್ರಾವತಿ ಕ್ಷೇತ್ರದ ಎಲ್ಲ ಸಮುದಾಯಗಳನ್ನು ಗಣನೆಗೆ ತೆಗೆದುಕೊಂಡು ಸಂಗಮೇಶ್ವರ ಕೆಲಸ ಮಾಡುತ್ತಿದ್ದಾರೆ. 2023ರ ಚುನಾವಣೆಗೆ ಭದ್ರಾವತಿಯಲ್ಲಿ ಬಿಜೆಪಿಗೆ ಅಭ್ಯರ್ಥಿಯೇ ಇಲ್ಲ. ಹೀಗಾಗಿ, ಗಾಣಿಗ ಸಮುದಾಯದವರನ್ನು ತುಳಿಯುವುದಕ್ಕೆ ಬಿಜೆಪಿಯವರು ಇಂಥ ಕೆಲಸ ಮಾಡುತ್ತಿದ್ದಾರೆ. ಸಂಗಮೇಶ್ವರ ನಮ್ಮ ಸಮಾಜದ ಶಾಸಕರು. ಅವರ ಮೇಲೆ ಹಾಕಿರುವ ಕೇಸ್ ವಾಪಸ್ ಪಡೆಯಬೇಕು. ಇಲ್ಲದಿದ್ದರೆ, ರಾಜ್ಯದಾದ್ಯಂತ ಗಾಣಿಗ ಸಮುದಾಯದಿಂದ ಪ್ರತಿಭಟನೆ ಮಾಡಬೇಕಾಗುತ್ತದೆ’ ಎಂದು ಯೋಗಿ ಕಲ್ಲಿನಾಥ ಸ್ವಾಮೀಜಿ ಎಚ್ಚರಿಕೆ ನೀಡಿದರು.

ಶಾಲಾ ವಾಹನ ಮಾಲೀಕರು, ಚಾಲಕರ ಪ್ರತಿಭಟನೆ

ಬೆಂಗಳೂರು: ‘2020ರ ಮಾರ್ಚ್‌ನಿಂದ 2021ರ ಮಾರ್ಚ್‌ವರೆಗಿನ ತೆರಿಗೆ ಮನ್ನಾ ಮಾಡಬೇಕು’ ಎಂಬುದೂ ಸೇರಿದಂತೆ ಹಲವು ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಖಾಸಗಿ ಶಾಲಾ ವಾಹನಗಳ ಮಾಲೀಕರು ಹಾಗೂ ಚಾಲಕರು ನಗರದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು.

ಆನಂದರಾವ್ ವೃತ್ತದಲ್ಲಿರುವ ಗಾಂಧಿ ಪ್ರತಿಮೆ ಎದುರು ಸೇರಿದ್ದ ಪ್ರತಿಭಟನಕಾರರು, ಘೋಷಣಾ ಫಲಕಗಳನ್ನು ಪ್ರದರ್ಶಿಸಿದರು. ಕರ್ನಾಟಕ ಖಾಸಗಿ ಶಾಲಾ ವಾಹನ ಚಾಲಕರ ಒಕ್ಕೂಟದಿಂದ ಈ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು.

ಐಎಎಸ್ ಅಧಿಕಾರಿಗಳ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ. ಜಿ. ಕಲ್ಪನಾ ಅವರಿಗೆ ಕಾರ್ಮಿಕ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹೊಣೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

ಕರ್ನಾಟಕ ಸಾಬೂನು ಮತ್ತು ಮಾರ್ಜಕ ಕಂಪನಿಯ ಆಡಳಿತ ವ್ಯವಸ್ಥಾಪಕರಾದ ಐಎಫ್‌ಎಸ್ ಅಧಿಕಾರಿ ಹರಿಕುಮಾರ್ ಝಾ ಅವರನ್ನು ಹೆಚ್ಚುವರಿ ಪಿಸಿಸಿಎಫ್ ಹಾಗೂ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಮುಖ್ಯ ಮೌಲ್ಯಮಾಪನ ಅಧಿಕಾರಿಯಾಗಿ ವರ್ಗಾವಣೆ ಮಾಡಲಾಗಿದೆ.

ಕರ್ನಾಟಕ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಕಾರ್ಯದರ್ಶಿ ಮಹೇಶ್ ಬಿ. ಶಿರೂರ್ ಅವರನ್ನು ಕರ್ನಾಟಕ ಸಾಬೂನು ಮತ್ತು ಮಾರ್ಜಕ ಕಂಪನಿಯ ಆಡಳಿತ ವ್ಯವಸ್ಥಾಪಕರಾಗಿ ನೇಮಿಸಲಾಗಿದೆ.

ಕಾರ್ಮಿಕ ಇಲಾಖೆಯ ಆಯುಕ್ತ ಅಕ್ರಂ ಪಾಷಾ ಅವರನ್ನು ಕರ್ನಾಟಕ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಕಾರ್ಯದರ್ಶಿಯಾಗಿ ವರ್ಗಾವಣೆ ಮಾಡಲಾಗಿದೆ. ಅವರಿಗೆ ಕಾರ್ಮಿಕ ಆಯುಕ್ತ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.



ಮಲ್ಲೇಶ್ವರ ಸರ್ಕಾರಿ ಶಾಲೆಯಲ್ಲಿ 'ಷಿ– ಕೋಡ್' ಕಾರ್ಯಕ್ರಮಕ್ಕೆ ಚಾಲನೆ

'ಪ್ರತಿ ಶಾಲೆಯಲ್ಲೂ ಎಟಿಎಲ್ ಸ್ಥಾಪನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಕ್ಕಳಲ್ಲಿ ಆವಿಷ್ಕಾರ ಮತ್ತು ವೈಜ್ಞಾನಿಕ ಮನೋಭಾವ ಮೂಡಿಸಲು ಪ್ರತಿ ಶಾಲೆಯಲ್ಲೂ ಅಟಲ್ ಟಿಂಕರಿಂಗ್ ಲ್ಯಾಬ್ (ಎಟಿಎಲ್) ಸ್ಥಾಪನೆ ಮಾಡಲಾಗುವುದು' ಎಂದು ಉಪಮುಖ್ಯಮಂತ್ರಿ ಸಿ.ಎನ್.ಅಶ್ವತ್ಥನಾರಾಯಣ ಹೇಳಿದರು.

ಮಲ್ಲೇಶ್ವರದ ಬಾಲಕರ ಸರ್ಕಾರಿ ಪ್ರೌಢಶಾಲೆಯ ಅಟಲ್ ಟಿಂಕರಿಂಗ್ ಲ್ಯಾಬ್'ನಲ್ಲಿ ಬಾಲಕಿಯರಿಗೆ ಕಂಪ್ಯೂಟರ್ ಕೋಡಿಂಗ್ ಕಲಿಸುವ 'ಷಿ-ಕೋಡ್' ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಶನಿವಾರ ಮಾತನಾಡಿದರು.

'ಮಕ್ಕಳಲ್ಲಿ ಕಲಿಕೆಯ ಗುಣಮಟ್ಟ ಹೆಚ್ಚಿಸುವಲ್ಲಿ ಎಟಿಎಲ್ ಮಹತ್ವದ ಪಾತ್ರ ವಹಿಸುತ್ತದೆ. ಕೆಲ ಶಾಲೆಗಳಲ್ಲಿ ಸ್ಥಳಾಭಾವ ಇದ್ದರೆ ವಿಶಾಲ ಜಾಗವಿರುವ ಶಾಲೆಗಳಲ್ಲಿ ಎಟಿಎಲ್ ಆರಂಭಿಸಿ ಕ್ಲಸ್ಟರ್ ಮಾದರಿಯಲ್ಲಿ ಕಾರ್ಯಾಚರಿಸುವಂತೆ ನೋಡಿಕೊಳ್ಳಲಾಗುವುದು' ಎಂದು ಅವರು ಹೇಳಿದರು.

'ಬೆಂಗಳೂರು ಜಗತ್ತಿನ ಅಗ್ರ ಹತ್ತು ನಗರಗಳಲ್ಲಿ ಸ್ಥಾನ ಪಡೆದಿದೆ. ಅದಕ್ಕೆ ಪೂರಕವಾಗಿ ನಮ್ಮ ಶಿಕ್ಷಣ ವ್ಯವಸ್ಥೆಯೂ ಬದಲಾಗಬೇಕು. ಆರಂಭಿಕ ಹಂತದಿಂದಲೇ ಶಿಕ್ಷಣದ ಗುಣಮಟ್ಟವನ್ನು ಕಾಯ್ದುಕೊಳ್ಳಬೇಕು. ಬಾಲ್ಯದಲ್ಲಿ ಬಹು ವಿಷಯಗಳನ್ನು, ಬಹಭಾಷೆಗಳನ್ನು ಕಲಿಯುವ ಶಕ್ತಿ ಮಕ್ಕಳಿಗೆ ಹೆಚ್ಚು ಇರುತ್ತದೆ' ಎಂದರು.

'ಕಿರಿಯ ಮತ್ತು ಪ್ರಾಥಮಿಕ ಹಂತದ ಶಿಕ್ಷಣದಿಂದಲೇ ಸುಧಾರಣೆಗಳನ್ನು ಜಾರಿಗೆ ತರಲಾಗುತ್ತಿದ್ದು, ರಾಷ್ಟ್ರೀಯ ಶಿಕ್ಷಣ ನೀತಿಯ ಮೂಲಕ ನಮ್ಮ ರಾಜ್ಯದ ಶೈಕ್ಷಣಿಕ ಸ್ವರೂಪವನ್ನು ಆಮೂಲಾಗ್ರವಾಗಿ ಬದಲಾಯಿಸಲಾಗುತ್ತದೆ. ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿಪಡಿಸಲು ಖಾಸಗಿ ಸಂಸ್ಥೆಗಳೂ ನೆರವಾಗಬೇಕು' ಎಂದು ಅವರು ಕೋರಿದರು.

ಸಹಶಿಕ್ಷಣ: 'ಮಲ್ಲೇಶ್ವರದ ಬಾಲಕರ ಸರ್ಕಾರಿ ಪ್ರೌಢ ಶಾಲೆಯಲ್ಲಿ ಸಹ-ಶಿಕ್ಷಣ ಪದ್ಧತಿ ಅಳವಡಿಸಿಕೊಳ್ಳಲಾಗಿದೆ. ಈ ಪ್ರೌಢಶಾಲೆಯಲ್ಲಿನ್ನು ಬಾಲಕಿಯರ ಕಲಿಕೆಗೂ ಅವಕಾಶ ಕಲ್ಪಿಸಲಾಗುತ್ತದೆ. ಇಲ್ಲಿ ಬಾಲಕಿಯರ ದಾಖಲಾತಿ ಆರಂಭವಾಗಿದೆ' ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಉಮಾದೇವಿ ತಿಳಿಸಿದರು.

ಏನಿದು 'ಷಿ–ಕೋಡ್'?

'ಹೆಣ್ಣು ಮಕ್ಕಳ ಸರ್ವಾಂಗೀಣ ಬೆಳವಣಿಗೆಗೆ ಅಗತ್ಯವಿರುವ ಜ್ಞಾನವನ್ನು 'ಷಿ-ಕೋಡ್' ಕಾರ್ಯಕ್ರಮದ ಮೂಲಕ ಒದಗಿಸಲಾಗುತ್ತದೆ. ಅವರು ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳುವುದಕ್ಕೆ ಹಾಗೂ ಆವಿಷ್ಕಾರಗಳ ಬಗ್ಗೆ ಆಸಕ್ತಿ ಹೊಂದುವುದಕ್ಕೆ ನೆರವು ಒದಗಿಸಲಾಗುತ್ತದೆ. ಅವರಲ್ಲಿರುವ ಪ್ರತಿಭೆ ಗುರುತಿಸಿ ಪ್ರೋತ್ಸಾಹಿಸಲಾಗುತ್ತದೆ.

ಮಲ್ಲೇಶ್ವರದ ಸರ್ಕಾರಿ ಶಾಲೆ ಅಟಲ್ ಟಿಂಕರಿಂಗ್ ಲ್ಯಾಬ್‌ನಲ್ಲಿ ವಿದ್ಯಾರ್ಥಿಗಳ ಜೊತೆ ಅಶ್ವತ್ಥನಾರಾಯಣ ಅವರು ಚರ್ಚಿಸಿದರು. ಕ್ಷೇತ್ರ ಶಿಕ್ಷಣಾಧಿಕಾರಿ ಉಮಾದೇವಿ ಇದ್ದಾರೆ

ಅವರಲ್ಲಿ ಉತ್ಪನ್ನ ಆಧಾರಿತ ಉದ್ಯಮಶೀಲತೆ ಬೆಳೆಸುವುದು ಇದರ ಮುಖ್ಯ ಉದ್ದೇಶ' ಎಂದು ಅಟಲ್ ಟಿಂಕರಿಂಗ್ ಲ್ಯಾಬ್‌ನ ಉಸ್ತುವಾರಿ ವಹಿಸಿಕೊಂಡಿರುವ ಶಿಕ್ಷಕಿ ಮೈತ್ರಾ 'ಪ್ರಜಾವಾಣಿ'ಗೆ ತಿಳಿಸಿದರು.

'ಶಾಲೆಯ ಅಟಲ್ ಟಿಂಕರಿಂಗ್ ಲ್ಯಾಬ್‌ನಲ್ಲಿ ವಿದ್ಯಾರ್ಥಿಗಳು ಆಟ-ಪಾಠದ ಜೊತೆಯಲ್ಲಿ ವಿಜ್ಞಾನ ಕಲಿಯಲು, ಹೊಸ ಕೌಶಲಗಳನ್ನು ಕಲಿಯಲು ವಿವಿಧ ಸೌಕರ್ಯಗಳಿವೆ. ವಿದ್ಯಾರ್ಥಿಗಳು ಹೊಸ ಆಲೋಚನೆಗಳನ್ನು ಆವಿಷ್ಕಾರಗಳನ್ನು ಕಾರ್ಯರೂಪಕ್ಕೆ ಇಳಿಸಲು ಇದು ನೆರವಾಗುತ್ತದೆ. ಈ ಲ್ಯಾಬ್‌ನಲ್ಲಿ ಪಠ್ಯಕ್ರಮಕ್ಕೆ ಸಂಬಂಧಿಸಿದ ಪ್ರಯೋಗಗಳಲ್ಲದೇ ವಿದ್ಯಾರ್ಥಿಗಳಿಗೆ ರೊಬೊಟಿಕ್ಸ್, ಎಲೆಕ್ಟ್ರಾನಿಕ್ಸ್, ತ್ರೀ–ಡಿ ಪ್ರಿಂಟಿಂಗ್, ಯಂತ್ರೋಪಕರಣ ವಿನ್ಯಾಸ, ವೈಮಾಂತರಿಕ್ಷ ಕ್ಷೇತ್ರಗಳಿಗೆ ಸಂಬಂಧಿಸಿದ ತಿಳಿವಳಿಕೆಯನ್ನು ನೀಡುತ್ತೇವೆ. ನಮ್ಮ ಶಾಲೆಯ ವಿದ್ಯಾರ್ಥಿಗಳೂ ರಾಷ್ಟ್ರ ಮಟ್ಟದ ಅನೇಕ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನಗಳನ್ನೂ ಗೆದ್ದಿದ್ದಾರೆ. ಟಿಂಕರಿಂಗ್ ಮ್ಯಾರಥಾನ್‌ನಲ್ಲೂ ನಮ್ಮ ಶಾಲೆ ಅಗ್ರ 100ರಲ್ಲಿ ಸ್ಥಾನ ಪಡೆದಿತ್ತು' ಎಂದು ಹೇಳಿದರು.

ಷಿ–ಕೋಡ್ ಕಾರ್ಯಕ್ರಮ ಅನುಷ್ಠಾನಕ್ಕೆ ಡೆಲ್ ಟೆಕ್ನಾಲಜೀಸ್ ನೆರವು ನೀಡಿದೆ.

ಬೆಂಗಳೂರಿನಿಂದ ಹುಬ್ಬಳ್ಳಿಗೆ ವಿಶೇಷ ರೈಲು

ಹುಬ್ಬಳ್ಳಿ: ಇದೇ ತಿಂಗಳ 10ರಿಂದ ಹುಬ್ಬಳ್ಳಿ- ಬೆಂಗಳೂರು ಹಾಗೂ 11ರಿಂದ ಬೆಂಗಳೂರು–ಹೊಸಪೇಟೆಗೆ ಪ್ರತಿನಿತ್ಯ ಸಾಮಾನ್ಯ ದರದಲ್ಲಿ ವಿಶೇಷ ಎಕ್ಸ್‌ಪ್ರೆಸ್ ರೈಲು ಸಂಚಾರವನ್ನು ನೈರುತ್ಯ ರೈಲ್ವೆ ಆರಂಭಿಸಲಿದೆ. ಮುಂದಿನ ಆದೇಶದವರೆಗೆ ಈ ರೈಲುಗಳ ಸಂಚಾರ ಮುಂದುವರಿಯಲಿವೆ.

ಮಾ.10ರಂದು ಸಂಜೆ 6 ಗಂಟೆಗೆ ಹುಬ್ಬಳ್ಳಿಯಿಂದ ಹೊರಡುವ ರೈಲು ಮರುದಿನ ಬೆಳಿಗ್ಗೆ 4ಕ್ಕೆ ಬೆಂಗಳೂರು ತಲುಪಲಿದೆ. ಮಾ.12ರಂದು ಬೆಂಗಳೂರಿನಿಂದ ರಾತ್ರಿ 11.55ಕ್ಕೆ ಹೊರಡುವ ರೈಲು ಹುಬ್ಬಳ್ಳಿಗೆ ಮರುದಿನ ಬೆಳಿಗ್ಗೆ 10 ಗಂಟೆಗೆ ತಲುಪಿದೆ. ನಂತರ ಪ್ರತಿದಿನ ಇದೇ ಸಮಯಕ್ಕೆ ರೈಲು ಸಂಚರಿಸಲಿವೆ.

ಮಾ.11ರಂದು ಬೆಳಿಗ್ಗೆ 5 ಗಂಟೆಗೆ ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ನಿಲ್ದಾಣದಿಂದ ಹೊರಡುವ ರೈಲು ಮಧ್ಯಾಹ್ನ 3.45ಕ್ಕೆ ಹೊಸಪೇಟೆಗೆ ತಲುಪಲಿದೆ. ಮಾ.12ರಂದು ಮಧ್ಯಾಹ್ನ 12.10ಕ್ಕೆ ಹೊಸಪೇಟೆಯಿಂದ ಹೊರಡುವ ರೈಲು ಬೆಂಗಳೂರಿಗೆ ರಾತ್ರಿ 10.45ಕ್ಕೆ ತಲುಪಲಿದೆ. ನಂತರ ಪ್ರತಿದಿನ ರೈಲು ಸಂಚರಿಸಲಿವೆ ಎಂದು ಪ್ರಕಟಣೆ ತಿಳಿಸಿದೆ.

'ಔಷಧೀಯ ಸಸ್ಯ ಎಲ್ಲರಿಗೂ ಸಿಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು:'ಜೀವ ವೈವಿಧ್ಯದ ಉಪಯೋಗ ಜನಸಾಮಾನ್ಯರನ್ನೂ ತಲುಪಬೇಕು. ಆಯುರ್ವೇದದ ಔಷಧೀಯ ಗುಣವುಳ್ಳ ಸಸ್ಯಗಳು ಎಲ್ಲ ಭಾಗದ ಜನರಿಗೆ ಸಿಗಬೇಕು. ಇದಕ್ಕಾಗಿ ಜೀವ ವೈವಿಧ್ಯ ಮಂಡಳಿ ರೂಪಿಸುವ ಯೋಜನೆಗಳಿಗೆ ಸರ್ಕಾರದ ಸಹಕಾರ ಇರಲಿದೆ' ಎಂದು ಪರಿಸರ ಸಚಿವ ಸಿ.ಪಿ. ಯೋಗೇಶ್ವರ್ ತಿಳಿಸಿದರು.

ಕರ್ನಾಟಕ ಜೀವ ವೈವಿಧ್ಯ ಮಂಡಳಿಯು ಶನಿವಾರ ಆಯೋಜಿಸಿದ್ದ 'ವಿಶೇಷ ಮಾದರಿ ಜೀವ ವೈವಿಧ್ಯ ಯೋಜನೆ'ಗೆ ಚಾಲನೆ ನೀಡಿದರು. ಬಳಿಕ ನಡೆದ 'ಜೈವಿಕ ಸಂಪನ್ಮೂಲಗಳ ಸುಸ್ಥಿರ ಬಳಕೆ ಮತ್ತು ಲಾಭ ಹಂಚಿಕೆ' ಕಾರ್ಯಾಗಾರದಲ್ಲಿ ಮಾತನಾಡಿದ ಅವರು, 'ಸಂಸ್ಥೆಗಳು ಪ್ರಕೃತಿ ಸಂಪತ್ತನ್ನು ಸಮರ್ಪಕವಾಗಿ ಬಳಸಿಕೊಂಡು ತಯಾರಿಸುವ ಉತ್ಪನ್ನಗಳು ಜನರನ್ನು ತಲುಪಬೇಕು. ಇದಕ್ಕಾಗಿ ಪರಿಸರ ಮತ್ತು ಅರಣ್ಯ ಇಲಾಖೆ ಸೇರಿದಂತೆ ಇತರ ಇಲಾಖೆಗಳು ಒಟ್ಟಾಗಿ ಕಾರ್ಯನಿರ್ವಹಿಸಬೇಕು' ಎಂದರು.

ಕರ್ನಾಟಕ ಜೀವವೈವಿಧ್ಯ ಮಂಡಳಿ ಅಧ್ಯಕ್ಷ ಅನಂತ ಹೆಗಡೆ ಅಶೀಸರ, 'ಜೀವ ವೈವಿಧ್ಯ ಮಂಡಳಿಯು ಅರಣ್ಯ ಸಂಪತ್ತನ್ನು ಉಳಿಸಲು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಪರಿಸರ, ಅರಣ್ಯ ಇಲಾಖೆಗಳಂತೆ

ಕಾರ್ಯಕ್ರಮವನ್ನು ಸಸಿಗೆ ನೀರೆರೆಯುವ ಮೂಲಕ ಉದ್ಘಾಟಿಸಲಾಯಿತು. (ಎಡದಿಂದ) ತಾರಾ ಅನೂರಾಧ, ಅನಂತ ಹೆಗಡೆ ಅಶೀಸರ, ಸಚಿವ ಸಿ.ಪಿ. ಯೋಗೇಶ್ವರ್, ಮಂಡಳಿಯ ಸದಸ್ಯ ಕಾರ್ಯದರ್ಶಿ ಪುನೀತ್ ಕುಮಾರ್, ವಾಮನ ಎನ್.ಆಚಾರ್ಯ, ಬ್ರಿಜೇಶ್ ಕುಮಾರ್ ಇದ್ದಾರೆ –ಪ್ರಜಾವಾಣಿ ಚಿತ್ರ

ಮಂಡಳಿಗೆ ಪ್ರತ್ಯೇಕ ಅಧಿಕಾರಿಗಳನ್ನು ನೇಮಿಸಬೇಕು' ಎಂದು ಮನವಿ ಮಾಡಿದರು.

'ಮಂಡಳಿಯಲ್ಲಿ ಸಂಗ್ರಹವಾಗಿರುವ ಸುಮಾರು ₹5 ಕೋಟಿ ಅನುದಾನವನ್ನು ತಾಲ್ಲೂಕು ಹಂತದಲ್ಲಿ ಜೀವ ವೈವಿಧ್ಯ ಅಭಿವೃದ್ಧಿಪಡಿಸಲು ವಿನಿಯೋಗಿಸಲಾಗುತ್ತಿದೆ. ಜೀವ ವೈವಿಧ್ಯ ಮಂಡಳಿಯಿಂದ ರಾಜ್ಯದ ಅಪರೂಪದ ಜೀವ ವೈವಿಧ್ಯ ತಾಣಗಳನ್ನು ಗುರುತಿಸುವ ಪ್ರಯತ್ನ ನಡೆಯುತ್ತಿದ್ದು, ಸರ್ಕಾರ ಇದಕ್ಕೆ ಪ್ರೋತ್ಸಾಹಿಸಬೇಕು' ಎಂದರು.

ಪರಿಸರ ಕಾರ್ಯಕರ್ತ ಡಾ.ವಾಮನ ಆಚಾರ್ಯ,'ಜೀವ ವೈವಿಧ್ಯವನ್ನು ಅಭಿವೃದ್ಧಿಪಡಿಸುವ ಕೆಲಸ ಆಗಬೇಕು. ಕೆಲವು ಪ್ರದೇಶಗಳಿಗೆ ಮಾತ್ರ ಸೀಮಿತವಾಗಿರುವ ನೈಸರ್ಗಿಕ ಸಂಪತ್ತನ್ನು ನಿರ್ದಿಷ್ಟ ಸ್ಥಳದಲ್ಲಿ ಮರುಸೃಷ್ಟಿಸಿ ಎಲ್ಲರಿಗೂ ತಲುಪಿಸಬೇಕು' ಎಂದು ಹೇಳಿದರು.

ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷೆ ತಾರಾ ಅನೂರಾಧ, 'ದಟ್ಟ ಅರಣ್ಯಗಳು ಮತ್ತೆ ಮರುಕಳಿಸಬೇಕು. ಅದಕ್ಕಾಗಿ ಜೀವ ವೈವಿಧ್ಯ ಮಂಡಳಿ, ಅರಣ್ಯ ಇಲಾಖೆಯೊಡನೆ ಎಲ್ಲರೂ ಸಹಕರಿಸಬೇಕು' ಎಂದರು.

ಕಾರ್ಯಕ್ರಮದಲ್ಲಿ ತೀರ್ಥಹಳ್ಳಿ, ಯಲ್ಲಾಪುರ, ಸಾಗರ, ಸೊರಬ, ಬಳ್ಳಾರಿ, ಹೊಸನಗರ, ಶಿರಸಿ ಮತ್ತು ಸಿದ್ಧಾಪುರದ ತಾಲ್ಲೂಕು ಪಂಚಾಯಿತಿಗಳಲ್ಲಿನ ಜೀವ ವೈವಿಧ್ಯ ನಿರ್ವಹಣಾ ಸಮಿತಿಯ ಪ್ರತಿನಿಧಿಗಳಿಗೆ ಅನುದಾನದ ಚೆಕ್ ವಿತರಿಸಲಾಯಿತು.

'ಎಫ್‌ಕೆಸಿಸಿಐ ಮಂಥನ್: ಪ್ರತಿಭಾನ್ವಿತರಿಗೆ ಸೂಕ್ತ ವೇದಿಕೆ ಕಲ್ಪಿಸುವ ಸದಾಶಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಈಗಿನ ಪೀಳಿಗೆಯ ಯುವಕರು ಸಾಕಷ್ಟು ಬುದ್ಧಿವಂತರಾಗಿದ್ದಾರೆ. ಹೊಸ ಹೊಸ ಆವಿಷ್ಕಾರಗಳು, ಸಂಶೋಧನೆಗಳನ್ನು ಕೈಗೊಂಡು ಬೆರಗು ಮೂಡಿಸುತ್ತಿದ್ದಾರೆ. ಅಂತಹ ಪ್ರತಿಭಾನ್ವಿತರಿಗೆ ಸೂಕ್ತ ವೇದಿಕೆ ಕಲ್ಪಿಸಿ ಅವರಿಗೆ ಸರಿಯಾದ ಮಾರ್ಗ ತೋರುವುದು 'ಮಂಥನ್' ಕಾರ್ಯಕ್ರಮದ ಉದ್ದೇಶ' ಎಂದು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ (ಎಫ್‌ಕೆಸಿಸಿಐ) ಅಧ್ಯಕ್ಷ ಪೆರಿಕಲ್ ಎಂ.ಸುಂದರ್ ತಿಳಿಸಿದರು.

'ಎಫ್‌ಕೆಸಿಸಿಐ ಮಂಥನ್-2021' ಕಾರ್ಯಕ್ರಮದಲ್ಲಿ ಶನಿವಾರ ಮಾತನಾಡಿದ ಅವರು, 'ಈಗಿನ ಶಿಕ್ಷಣ ವ್ಯವಸ್ಥೆಯು ಕೇವಲ ಪಠ್ಯಕ್ರಮವನ್ನು ಆಧರಿಸಿದೆ. ಕೌಶಲ ಆಧರಿತ ಶಿಕ್ಷಣಕ್ಕೆ ಯಾರೂ ಒತ್ತು ನೀಡುತ್ತಿಲ್ಲ. ತಮ್ಮ ಮಕ್ಕಳು ಪರೀಕ್ಷೆಯಲ್ಲಿ ಗರಿಷ್ಠ ಅಂಕ ಗಳಿಸಿದರೆ ಸಾಕು ಎಂಬ ಧೋರಣೆ ಪೋಷಕರಲ್ಲಿ ಗಾಢವಾಗಿ ಬೇರೂರಿದೆ. ಹೀಗಾಗಿ ಸ್ವಂತ ಉದ್ದಿಮೆ ಸ್ಥಾಪಿಸಿ ಸಮಾಜಕ್ಕೆ ವಿಶೇಷ ಕೊಡುಗೆ ನೀಡಬೇಕೆಂಬ ಹಂಬಲ ಹೊತ್ತ ಅನೇಕರು ನಿರಾಶರಾಗಿದ್ದಾರೆ. ಸಾಧನೆಯ ಹಂಬಲ ಹೊತ್ತಿರುವ ಯುವಕರನ್ನು ಗುರುತಿಸಿ ಅವರ ಕನಸನ್ನು ಪೋಷಿಸುವ ಸಲುವಾಗಿ 2009ರಲ್ಲಿ ನಾವು ಈ ಕಾರ್ಯಕ್ರಮ ಹಮ್ಮಿಕೊಂಡಿದ್ದೆವು. ಅದು ಯಶಸ್ವಿಯಾಗಿ ಮುಂದುವರಿಯುತ್ತಿದೆ' ಎಂದು ಅವರು ಹೇಳಿದರು.

'ಇದುವರೆಗೂ ಒಟ್ಟು 1 ಸಾವಿರಕ್ಕೂ ಅಧಿಕ ತಂಡಗಳು ತಮ್ಮ ಯೋಜನೆಯನ್ನು ನಮ್ಮ ಮುಂದೆ ತೆರೆದಿಟ್ಟಿವೆ. ಉತ್ತಮ ಯೋಜನೆ ರೂಪಿಸಿದವರಿಗೆ ನಾವು ಪ್ರತಿವರ್ಷವೂ ₹ 3 ಲಕ್ಷ ಬಹುಮಾನ ನೀಡುತ್ತಿದ್ದೆವು. ಈ ಬಾರಿ ಇದನ್ನು ₹6 ಲಕ್ಷಕ್ಕೆ ಏರಿಕೆ ಮಾಡಿದ್ದೇವೆ' ಎಂದು ನುಡಿದರು.

ಜಾನಪದ ಪರಿಷತ್ ರಾಜ್ಯ ಪ್ರಶಸ್ತಿಗೆ ಮಾರಕ್ಕ ಆಯ್ಕೆ

ಮೊಳಕಾಲ್ಮುರು: ತಾಲ್ಲೂಕಿನ ಚಿಕ್ಕೋಬನಹಳ್ಳಿಯ ತತ್ವಪದ ಕಲಾವಿದೆ ಮಾರಕ್ಕ ಓಬಯ್ಯ ಅವರು ಈ ಬಾರಿಯ ಕರ್ನಾಟಕ ಜಾನಪದ ಪರಿಷತ್ ನೀಡುವ ರಾಜ್ಯಮಟ್ಟದ ಸಾಧಕ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಜಿಲ್ಲಾ ಪಂಚಾಯಿತಿ ಸದಸ್ಯೆಯಾಗಿಯೂ ಸೇವೆ ಸಲ್ಲಿಸಿರುವ ಮಾರಕ್ಕ ಅವರು 45ಕ್ಕೂ ಹೆಚ್ಚು ವರ್ಷಗಳಿಂದ ಜನಪದ ಗೀತೆಗಳ ಗಾಯನ, ತತ್ವಪದ ಗಾಯನ, ಭಜನೆ ಹಾಡುಗಾರಿಕೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ.

ತೇಜೋವಧೆ ತಡೆಯಲು ಕೋರ್ಟ್ ಮೊರೆ: ಬೈರತಿ ಬಸವರಾಜ

ಡಾಂಬರೀಕರಣ ಕಾಮಗಾರಿಗೆ ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ಶನಿವಾರ ಚಾಲನೆ ನೀಡಿದರು. ಪಾಲಿಕೆ ಮಾಜಿ ಸದಸ್ಯ ಸುರೇಶ್ ಇದ್ದರು

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: 'ಸಚಿವರಾಗಿ ಒಳ್ಳೆಯ ಅಭಿವೃದ್ಧಿ ಕೆಲಸಗಳನ್ನು ಮಾಡುತ್ತಿದ್ದೇನೆ. ವಿರೋಧಿಗಳು ತೇಜೋವಧೆ ಮಾಡಬಹುದು ಎನ್ನುವ ಕಾರಣಕ್ಕೆ ಮಾನಹಾನಿ ಸುದ್ದಿ ಪ್ರಕಟಿಸದಂತೆ ಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿದೆ' ಎಂದು ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ಹೇಳಿದರು.

ಕೆ.ಆರ್.ಪುರದ ಎ.ನಾರಾಯಣ ಪುರ ವಾರ್ಡ್‌ನಲ್ಲಿ ನ್ಯೂ ಲೈಟ್ ಹೋಟೆಲ್‌ನಿಂದ ಎಚ್‌ಎಎಲ್ ತನಕ ಸುಮಾರು 8 ಕಿಮೀ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆ ಡಾಂಬರೀಕರಣ ಕಾಮಗಾರಿಗೆ ಚಾಲನೆ ನೀಡಿ ಅವರು ಮಾತನಾಡಿದರು.

'ವೇಗವಾಗಿ ಬೆಳೆಯುತ್ತಿರುವ ಯುಗದಲ್ಲಿ ತಂತ್ರಜ್ಞಾನ ಬಳಸಿ ಪಿತೂರಿ ನಡೆಸಿ ಹೆಸರು ಕೆಡಿಸುವ ಯತ್ನಗಳು ನಡೆಯುತ್ತಿವೆ. ಗ್ರಾಫಿಕ್ಸ್ ಬಳಸಿ ತೇಜೊವಧೆ ಮಾಡಬಹುದು. ಸಚಿವರಾಗಿ ಉತ್ತಮ ಕೆಲಸಗಳನ್ನು ಮಾಡುತ್ತಿರುವುದರಿಂದ ವಿರೋಧಿಗಳು ಬಹಳಷ್ಟು ಜನ ಇದ್ದಾರೆ. ಈ ವೇಗವನ್ನು ತಡೆಯಲು ಪ್ರಯತ್ನ ನಡೆಯುತ್ತಿದೆ' ಎಂದರು.

'ಕ್ಷೇತ್ರದಲ್ಲೂ ಉತ್ತಮ ಕೆಲಸಗಳನ್ನು ಮಾಡುತ್ತಿದ್ದೇವೆ. ನಮ್ಮನ್ನು ತಡೆಯಲು ವಿರೋಧಿಗಳು ಕಾಯುತ್ತಿದ್ದಾರೆ' ಎಂದು ಅವರು ಹೇಳಿದರು.

ಹಿರಿಯ ಉಪನಿರ್ದೇಶಕರವರ ಕಛೇರಿ,
ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ, ಚಿಕ್ಕಬಳ್ಳಾಪುರ
ಸಂ: ಹಿಉನಿ/ಸ್ಥಲೆಪವ/ಡಿಇಒ/ಹೊ.ಗು/ಚಿಪು/ಟೆಂಡರ್/1/2020–21
ದಿನಾಂಕ: 04.03.2021

ಅಲ್ಪಾವಧಿ ಟೆಂಡರ್ ಪ್ರಕಟಣೆ

ವಿಷಯ: ಹಿರಿಯ ಉಪ ನಿರ್ದೇಶಕರ ಕಛೇರಿ, ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ, ಚಿಕ್ಕಬಳ್ಳಾಪುರ ಈ ಕಛೇರಿಗೆ ಅವಶ್ಯವಿರುವ 02 ಬೆರಳಚ್ಚುಗಾರರ/ಡಿಇಓ ರವರ ಸೇವೆಯನ್ನು ಹೊರ ಸಂಪನ್ಮೂಲದಿಂದ ಪಡೆಯಲು ಅರ್ಹ ಆಸಕ್ತ ಏಜೆನ್ಸಿ/ಹೊರಗುತ್ತಿಗೆ ಸಂಸ್ಥೆಗಳಿಂದ ಮುಚ್ಚಿದ ದ್ವಿ ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ವಿವರ ಈ ಕೆಳಕಂಡಂತಿದೆ.

ಉಲ್ಲೇಖ : ಮಾನ್ಯ ಪ್ರಧಾನ ನಿರ್ದೇಶಕರವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ : ರಾಲೆಪ/2/ಬಿಯುಡಿ/01/ಡಾಎಂಆ/ಹೊರಗು/2021–22/3351 ದಿ: 24.02.2021.

(1) ವಿವರ: **ಡಿ.ಇ.ಓ–2.** ಟೆಂಡರ್ ಮೊತ್ತ: **ರೂ.4,70,748/-.** ಇ.ಎಂ.ಡಿ ಮೊತ್ತ: **ರೂ.11,769/-. ಟೆಂಡರ್ ವೇಳಾಪಟ್ಟಿ:** (1) ಟೆಂಡರ್ ಪ್ರಾರಂಭದ ದಿನಾಂಕ: **08.03.2021, ಬೆಳಿಗ್ಗೆ 10.30 ಗಂಟೆ.** (2) ಟೆಂಡರ್ ಫಾರಂ ಕಛೇರಿಯಲ್ಲಿ ಪಡೆಯಲು ಕೊನೆಯ ದಿನಾಂಕ: **17.03.2021 ಸಂಜೆ 5.30 ಗಂಟೆ.** (3) ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: **22.03.2021 ಸಂಜೆ 5.30 ಗಂಟೆ.** (4) ಟೆಂಡರ್ ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ: **23.03.2021 ಬೆಳಿಗ್ಗೆ 11.00 ಗಂಟೆ.** (5) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ: **24.03.2021 ಬೆಳಿಗ್ಗೆ 11.00 ಗಂಟೆ.** ಟೆಂಡರ್ ಸಲ್ಲಿಸಲು ಇಚ್ಛೆಯುಳ್ಳ ಏಜೆನ್ಸಿ/ಹೊರಗುತ್ತಿಗೆ ಸಂಸ್ಥೆಯ ಮಾಲೀಕರು '**ಹಿರಿಯ ಉಪನಿರ್ದೇಶಕರು, ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ, ಚಿಕ್ಕಬಳ್ಳಾಪುರ**' ಕಛೇರಿಯಲ್ಲಿ ಟೆಡರ್ ಅರ್ಜಿ ಶುಲ್ಕ ಪಾವತಿಸಿ, ಟೆಂಡರ್ ಅರ್ಜಿ ಫಾರಂಗಳನ್ನು ಪಡೆದು ಭರ್ತಿ ಮಾಡಿದ ಟೆಂಡರ್ ದಸ್ತಾವೇಜುಗಳನ್ನು ಇ.ಎಂ.ಡಿ. ಮೊತ್ತದೊಂದಿಗೆ ನಿಗದಿತ ದಿನಾಂಕ ಹಾಗೂ ಸಮಯದೊಳಗೆ ಕಛೇರಿಗೆ ಸಲ್ಲಿಸತಕ್ಕದ್ದು ಅವಧಿ ಮೀರಿದ ಹಾಗೂ ಇ.ಎಂ.ಡಿ. ಪಾವತಿಸದ ಟೆಂಡರನ್ನು ತಿರಸ್ಕರಿಸಲಾಗುವುದು.

ಸಹಿ/- ಹಿರಿಯ ಉಪನಿರ್ದೇಶಕರು,
ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ, ಚಿಕ್ಕಬಳ್ಳಾಪುರ.
ವಾ.ಸಾ.ಸಂ.ಇ./ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ 357/ಎಂಸಿಎ/2020–21

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಪತ್ತೆಯಾಗದ ಸಂತ್ರಸ್ತೆ: ಮುಂದುವರಿದ ಶೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಮೇಶ ಜಾರಕಿಹೊಳಿ ಅವರಿಗೆ ಸಂಬಂಧಪಟ್ಟಿದ್ದು ಎನ್ನಲಾದ ಸಿ.ಡಿ ಪ್ರಕರಣದ ಸಂತ್ರಸ್ತೆ ಇದುವರೆಗೂ ಪತ್ತೆಯಾಗಿಲ್ಲ. ಅವರ ಹೇಳಿಕೆ ಸಿಗುವವರೆಗೂ ಎಫ್‌ಐಆರ್ ದಾಖಲಿಸಲು ಅವಕಾಶವಿಲ್ಲವೆಂದು ಪೊಲೀಸರು ಪ್ರತಿಪಾದಿಸಿದ್ದಾರೆ.

ನಾಗರಿಕ ಹಕ್ಕು ಹೋರಾಟ ಸಮಿತಿ ಅಧ್ಯಕ್ಷ ದಿನೇಶ್ ಕಲ್ಲಹಳ್ಳಿ ನೀಡಿರುವ ದೂರು ಆಧರಿಸಿ ತನಿಖೆ ಆರಂಭಿಸಿರುವ ಕಬ್ಬನ್ ಪಾರ್ಕ ಠಾಣೆ ಪೊಲೀಸರು, ವಿಶೇಷ ತಂಡಗಳನ್ನು ರಚಿಸಿ ಸಂತ್ರಸ್ತೆಗಾಗಿ ಹುಡುಕಾಟ ಆರಂಭಿಸಿದ್ದಾರೆ.

'ಆರ್.ಟಿ.ನಗರದಲ್ಲಿರುವ ಪೇಯಿಂಗ್ ಗೆಸ್ಟ್ ಕಟ್ಟಡವೊಂದರಲ್ಲಿ ಯುವತಿ ವಾಸವಿದ್ದಳು' ಎಂಬ ಮಾಹಿತಿ ಆಧರಿಸಿ ಪೊಲೀಸರು, ಪೇಯಿಂಗ್ ಗೆಸ್ಟ್ ಕಟ್ಟಡಗಳಿಗೆ ಹೋಗಿ ಮಾಲೀಕರನ್ನು ಹಾಗೂ ವಾಸಿಗಳನ್ನು ವಿಚಾರಣೆ ನಡೆಸುತ್ತಿದ್ದಾರೆ.

ಬಳ್ಳಾರಿ ರಸ್ತೆಯಲ್ಲಿರುವ ಹೆಬ್ಬಾಳ, ಆರ್.ಟಿ.ನಗರ ಹಾಗೂ ಸುತ್ತಮುತ್ತಲ ಸ್ಥಳಗಳಲ್ಲಿರುವ ಹಲವು ಕಟ್ಟಡಗಳಲ್ಲಿ ಈಗಾಗಲೇ ಹುಡುಕಾಟ ನಡೆಸಲಾಗಿದ್ದು, ಸಂತ್ರಸ್ತೆ ಮಾತ್ರ ಪತ್ತೆಯಾಗಿಲ್ಲ. ಸಂತ್ರಸ್ತೆ ಪೇಯಿಂಗ್ ಗೆಸ್ಟ್ ಕಟ್ಟಡದಲ್ಲಿ ವಾಸವಿರಲಿಲ್ಲ. ಬದಲಿಗೆ, ಆರ್.ಟಿ.ನಗರದ ನಿವಾಸಿಯೊಬ್ಬರ ಬಹುಮಹಡಿ ಕಟ್ಟಡದಲ್ಲಿದ್ದ ಕೊಠಡಿಯಲ್ಲಿ ನೆಲೆಸಿದ್ದರೆಂಬ ಸಂಗತಿ ತನಿಖೆಯಿಂದ ಗೊತ್ತಾಗಿದೆ.

'ದಿನೇಶ್ ದೂರು ನೀಡುವುದಕ್ಕೂ ಮುನ್ನಾದಿನವೇ ಯುವತಿ, ಕೊಠಡಿ ತೊರೆದಿದ್ದಾರೆ. ನಗರ ಹಾಗೂ ರಾಜ್ಯವನ್ನೇ ಬಿಟ್ಟು ಹೋಗಿರುವ ಸಾಧ್ಯತೆ ಇದೆ. ಅವರ ಕುಟುಂಬದವರನ್ನು ಸಂಪರ್ಕಿಸಲು ಪ್ರಯತ್ನಿಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸಂತ್ರಸ್ತೆ ಅಥವಾ ಅವರ ಜೊತೆ ಸಂಪರ್ಕದಲ್ಲಿರುವ ಕುಟುಂಬದವರ ಹೇಳಿಕೆ ಸಿಗಬೇಕಿದೆ. ಬಳಿಕವೇ ಎಫ್‌ಐಆರ್ ದಾಖಲಾತಿ ಪ್ರಕ್ರಿಯೆ ಆರಂಭಿಸಲಾಗುವುದು' ಎಂದೂ ಮೂಲಗಳು ತಿಳಿಸಿವೆ.

ದಿನೇಶ್, ರಾಜಶೇಖರ್ ವಿರುದ್ಧ ದೂರು: 'ತಮ್ಮ ಬಳಿ ಹಲವರ ಸಿ.ಡಿ. ಇರುವುದಾಗಿ ಹೇಳುತ್ತಿರುವ ದಿನೇಶ್ ಕಲ್ಲಹಳ್ಳಿ ಹಾಗೂ ರಾಜಶೇಖರ್ ಮುಲಾಲಿ, ಮಹಿಳೆಯರ ಗೌರವಕ್ಕೆ ಧಕ್ಕೆ ತರುತ್ತಿದ್ದಾರೆ. ಅವರಿಬ್ಬರನ್ನು ಬಂಧಿಸಿ ಕಾನೂನು ಕ್ರಮ ಕೈಗೊಳ್ಳಿ' ಎಂದು ಮಾನವ ಹಕ್ಕುಗಳ ಸೇವಾ ಸಮಿತಿಯ ಮಂಡ್ಯ ಜಿಲ್ಲಾ ಘಟಕದ ಅಧ್ಯಕ್ಷೆ ಕೆ.ಎಚ್. ಇಂದಿರಾ, ಕಬ್ಬನ್ ಪಾರ್ಕ್ ಠಾಣೆಗೆ ದೂರು ನೀಡಿದ್ದಾರೆ.

ದೂರು ಸ್ವೀಕರಿಸಿರುವ ಪೊಲೀಸರು, ಪರಿಶೀಲನೆ ನಡೆಸಿ ಕ್ರಮ ಕೈಗೊಳ್ಳುವುದಾಗಿ ಹೇಳಿದ್ದಾರೆ.

'ವಿಡಿಯೊ ನಕಲಿ, ತನಿಖೆಯಾಗಲಿ'

ಪ್ರಜಾವಾಣಿ ವಾರ್ತೆ

ಯಾದಗಿರಿ: 'ರಮೇಶ ಜಾರಕಿಹೊಳಿ ಸಿಡಿ ಪ್ರಕರಣದಲ್ಲಿ ವಿಡಿಯೊ ಕಟ್ ಅಂಡ್ ಪೇಸ್ಟ್ ಮಾಡಿದ್ದು ಗೊತ್ತಾಗುತ್ತದೆ. ಆ ಯುವತಿಗೆ ಎಲ್ಲಾ ಭಾಷೆ ಕಲಿಸಿದ್ದಾರೆ. ಸೂಕ್ಷ್ಮವಾಗಿ ಗಮನಿಸಿದರೆ ಐದಾರು ಭಾಷೆ ಮಿಕ್ಸಿಂಗ್ ಮಾಡಿ ಮಾತನಾಡಿದ್ದು ಇದೆ. ಇದರ ಹಿಂದೆ ದೊಡ್ಡ ಷಡ್ಯಂತ್ರ ಅಡಗಿದ್ದು, ತನಿಖೆಯಾಗಬೇಕು' ಎಂದು ಸುರಪುರ ಶಾಸಕ ರಾಜೂಗೌಡ ಶನಿವಾರ ಆಗ್ರಹಿಸಿದರು.

'ಯುವತಿ ಸಂತ್ರಸ್ತೆಯೇ ಆಗಿದ್ದರೆ ಇಷ್ಟೊತ್ತಿಗೆ ಹೊರಗೆ ಬರುತ್ತಿದ್ದರು. ಆದರೆ, ಬಂದಿಲ್ಲ. ಇದು ಪೂರ್ವನಿಯೋಜಿತ ಕೃತ್ಯ. ವಿಡಿಯೊ ಕಾಲ್‌ನಲ್ಲಿ ಯಾರೂ ಅಷ್ಟು ಸಲುಗೆಯಿಂದ ಮಾತನಾಡುವುದಿಲ್ಲ. ವಿಡಿಯೊ ಇವೆ ಎಂದು ಬೆದರಿಸುವವರು ಹೆಚ್ಚಾಗಿದ್ದಾರೆ. ದಿನೇಶ್ ಕಲ್ಲಹಳ್ಳಿ ಹಿಂದೆ ಬೇರೆಯದ್ದೇ ಶಕ್ತಿಗಳಿವೆ. ಎಲ್ಲವೂ ಬಯಲಿಗೆ ಬರಬೇಕು' ಎಂದು ಆಗ್ರಹಿಸಿದರು.

ಆರು ಸಚಿವರ ಅರ್ಜಿ: ಸುದ್ದಿ ಪ್ರಕಟಣೆಗೆ ತಡೆಯಾಜ್ಞೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರು ಸಚಿವರ ವಿರುದ್ಧ ಯಾವುದೇ ರೀತಿಯಲ್ಲಿ ಮಾನಹಾನಿಕರ ಸುದ್ದಿಗಳನ್ನು ಪ್ರಕಟಿಸದಂತೆ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ ಶನಿವಾರ ತಾತ್ಕಾಲಿಕ ತಡೆಯಾಜ್ಞೆ ನೀಡಿದೆ.

ಕ್ರೀಡೆ ಮತ್ತು ಯುವಜನ ಸಬಲೀಕರಣ ಸಚಿವ ಕೆ.ಸಿ. ನಾರಾಯಣಗೌಡ, ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ್, ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ್, ಆರೋಗ್ಯ ಸಚಿವ ಡಾ.ಕೆ. ಸುಧಾಕರ್, ಕೃಷಿ ಸಚಿವ ಬಿ.ಸಿ. ಪಾಟೀಲ ಮತ್ತು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಅವರು ಶುಕ್ರವಾರ ಅರ್ಜಿ ಸಲ್ಲಿಸಿದ್ದರು. 67 ಸುದ್ದಿ ಸಂಸ್ಥೆಗಳು ಮತ್ತು ಸಾಮಾಜಿಕ ಕಾರ್ಯಕರ್ತ ರಾಜಶೇಖರ ಮುಲಾಲಿ ಅವರನ್ನು ಪ್ರತಿವಾದಿಯನ್ನಾಗಿ ಮಾಡಿದ್ದರು.

ಅದೇ ವೇಳೆ ಮಧ್ಯಂತರ ಅರ್ಜಿಯನ್ನೂ(ಐ.ಎ) ಸಲ್ಲಿಸಿ ತಡೆಯಾಜ್ಞೆ ಕೋರಿದ್ದರು. ಹೀಗಾಗಿ, ಈ ಅರ್ಜಿಯ ವಿಚಾರಣೆಯನ್ನು ನ್ಯಾಯಾಲಯ ಶನಿವಾರ ನಡೆಸಿತು. ಇದೇ ವೇಳೆ ಸುದ್ದಿ ವಾಹಿನಿಯೊಂದು ಶನಿವಾರ ಕೇವಿಯಟ್ ಸಲ್ಲಿಸಿ ವಿಚಾರಣೆ ನಡೆಸದೇ ತಡೆಯಾಜ್ಞೆ ನೀಡಬಾರದು ಎಂದು ಕೋರಿತ್ತು. ಅದನ್ನು ಪರಿಗಣಿಸದ ನ್ಯಾಯಾಲಯ, ತಾತ್ಕಾಲಿಕ ತಡೆಯಾಜ್ಞೆ ನೀಡಿದೆ.

ಮಾರ್ಚ್ 31ಕ್ಕೆ ವಿಚಾರಣೆಯನ್ನು ಮುಂದೂಡಲಾಗಿದ್ದು, ಅಲ್ಲಿಯವರೆಗೆ ತಡೆಯಾಜ್ಞೆ ಅಸ್ತಿತ್ವದಲ್ಲಿರುತ್ತದೆ.

ಕೋರ್ಟ್ ಮೆಟ್ಟಿಲೇರಿದ್ದು ಏಕೆ: ಸಿದ್ದರಾಮಯ್ಯ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಸಿದ್ದರಾಮಯ್ಯ

ಬೆಂಗಳೂರು: 'ಕೋರ್ಟ್ ಮೆಟ್ಟಿಲು ಹತ್ತುತ್ತಿದ್ದಾರೆ ಎಂದರೆ ಅವರಿಗೆ ತಮ್ಮ ವಿರುದ್ಧ ಸಿ.ಡಿ ಇದೆ ಎಂಬುದು ಗೊತ್ತಿರಬೇಕಲ್ಲ' ಎಂದು ವಿಧಾನ ಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

ಆರು ಸಚಿವರು ಕೋರ್ಟ್ ಮೊರೆ ಹೋಗಿರುವ ಬಗ್ಗೆ ಖಾರವಾಗಿ ಪ್ರತಿಕ್ರಿಯಿಸಿದ ಅವರು, 'ಮೈತ್ರಿ ಸರ್ಕಾರವನ್ನು ಬೀಳಿಸಿ ಹೋದವರ ಮೇಲೆ ಮತ್ತು ಪಕ್ಷದ್ರೋಹ ಮಾಡಿದವರ ಮೇಲೆ ಅನುಕಂಪ ಬರಲು ಸಾಧ್ಯವಾ?' ಎಂದು ಹೇಳಿದರು.

'ಜನರು ಹೇಸಿಗೆ ಪಡುವಂಥ ಸ್ಥಿತಿಗೆ ರಾಜಕಾರಣ ಬಂದಿದೆ. ಯಾರೋ ಮಾಡುವ ತಪ್ಪಿಗೆ ಎಲ್ಲ ರಾಜಕಾರಣಿಗಳನ್ನು ಅನುಮಾನದಿಂದ ನೋಡುವಂತಾಗಿದೆ. ರಾಜಕಾರಣಿಗಳೆಂದರೆ ಹೀಗೆಯೇ ಎಂದು ನೋಡುವ ಪರಿಸ್ಥಿತಿ ನಿರ್ಮಾಣವಾಗಿದೆ' ಎಂದು ವಿಷಾದ ವ್ಯಕ್ತಪಡಿಸಿದರು.

> **ಇದೇನು ಸಿ.ಡಿ ಸರ್ಕಾರನಾ ಅಥವಾ ಸಿ.ಡಿಗಳನ್ನು ಇಟ್ಟುಕೊಂಡು ಇವರು ಸರ್ಕಾರ ನಡೆಸುತ್ತಿದ್ದಾರಾ. ಸಿ.ಡಿ ಪ್ರಕರಣದ ಬಗ್ಗೆ ಹೈಕೋರ್ಟ್ ನ್ಯಾಯಮೂರ್ತಿಗಳಿಂದ ತನಿಖೆ ನಡೆಸಬೇಕು**
> **ಸಂಕೇತ್ ಏಣಗಿ,** ಕೆಪಿಸಿಸಿ ವಕ್ತಾರ

ವಸತಿ ಇಲಾಖೆ

ಕರ್ನಾಟಕ ಗೃಹ ಮಂಡಳಿ
ಸಮುದಾಯ ನಿರ್ಮಾಣದತ್ತ

ನಿಮ್ಮ ಸ್ವಂತ ಮನೆಯ ಕನಸು ನನಸಾಗಿಸುವ
ಸುಸಮಯವಿದು
"ಸೂರ್ಯ ಎಲಿಗೆನ್ಸ್" ನಲ್ಲಿ
ಕೈಗೆಟುಕುವ ಬೆಲೆಯಲ್ಲಿ ಮನೆ ನಿಮ್ಮದಾಗಿಸಿಕೊಳ್ಳಿ

2 ಬಿಹೆಚ್‌ಕೆ, 3 ಬಿಹೆಚ್‌ಕೆ ಫ್ಲಾಟ್‌ಗಳು ವಾಸಿಸಲು ಸಿದ್ಧವಾಗಿವೆ

"ಪ್ರಧಾನಮಂತ್ರಿ ಆವಾಸ್ ಯೋಜನೆ (PMAY) ಯಡಿ ಎಲ್ಲಾ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಸಬ್ಸಿಡಿ ದರದಲ್ಲಿ ಸಾಲ ಸೌಲಭ್ಯದ ಅವಕಾಶ"

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 20-04-2021

ಸಮುಚ್ಚಯದ ನೈಜ ಚಿತ್ರ

G+7 Floors

ವಸತಿ ಸಮುಚ್ಚಯದಲ್ಲಿ ಒದಗಿಸಲಾಗಿರುವ ನಾಗರೀಕ ಸೌಲಭ್ಯಗಳು

- ಕ್ಲಬ್ ಹೌಸ್, ಪಾರ್ಟಿ ಹಾಲ್, ಫುಡ್ ಕೋರ್ಟ್, ಜಿಮ್, ಲೈಬ್ರರಿ
- ಒಳಾಂಗಣ ಕ್ರೀಡಾಂಗಣ / ಬ್ಯಾಡ್‌ಮಿಂಟನ್ / ಬಾಸ್ಕೆಟ್ ಬಾಲ್ ಕೋರ್ಟ್ / ಸಂದರ್ಶಕರ ಕಾರ್ ಪಾರ್ಕಿಂಗ್
- ಈಜು ಕೊಳ
- ಕಾರ್ ಪಾರ್ಕಿಂಗ್
- ಮಕ್ಕಳ ಆಟದ ಮೈದಾನ
- BWSSB ಕಾವೇರಿ ನೀರಿನ ಸೌಲಭ್ಯ
- ಉದ್ಯಾನವನ
- ಮಳೆ ನೀರು ಕೊಯ್ಲು ಅಳವಡಿಕೆ

ಕರ್ನಾಟಕ ಗೃಹ ಮಂಡಳಿಯು ಬೆಂಗಳೂರು ನಗರದ ಚಂದಾಪುರ–ಆನೇಕಲ್ ಮುಖ್ಯರಸ್ತೆಗೆ ಹೊಂದಿಕೊಂಡಿರುವ ಗಿಡಮರಗಳ ಹಸಿರು ಹೊದಿಕೆಯ ಸ್ವಚ್ಛ ಪರಿಸರ ಹಾಗೂ ಆಹ್ಲಾದಕರ ವಾತಾವರಣದ ಸುಂದರತಾಣ ಸೂರ್ಯನಗರ 1ನೇ ಹಂತದ ಬಡಾವಣೆಯ ಕಾಂಪೊನೆಂಟ್ "ಬಿ"ನಲ್ಲಿ ಎಲ್ಲಾ ಆಧುನಿಕ ಮೂಲ ಸೌಲಭ್ಯಗಳನ್ನೊಳಗೊಂಡ 'ಸೂರ್ಯ ಎಲಿಗೆನ್ಸ್' ವಸತಿ ಸಮುಚ್ಚಯ ನಿರ್ಮಿಸಿದೆ. ಈ ಸಮುಚ್ಚಯದಲ್ಲಿ 2 ಬಿಹೆಚ್‌ಕೆ, 3 ಬಿಹೆಚ್‌ಕೆ ಫ್ಲಾಟ್‌ಗಳ ಹಂಚಿಕೆಗಾಗಿ ಸಾರ್ವಜನಿಕರಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ಸಾರ್ವಜನಿಕರು ಆರಂಭಿಕ ಠೇವಣಿ ಮೊತ್ತವನ್ನು e-Payment ಮೂಲಕ ಪಾವತಿಸಿ, ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ.



ಶ್ರೀ ಬಿ.ಎಸ್. ಯಡಿಯೂರಪ್ಪ
ಸನ್ಮಾನ್ಯ ಮುಖ್ಯಮಂತ್ರಿಗಳು

ಫ್ಲಾಟ್‌ಗಳು / ನೊಂದಣಿ ಶುಲ್ಕ / ಆರಂಭಿಕ ಠೇವಣಿ ವಿವರ

ಸ್ಥಳ	ವರ್ಗ	ಲಭ್ಯವಿರುವ ಫ್ಲಾಟ್‌ಗಳು	ಫ್ಲಾಟ್ ವಿಸ್ತೀರ್ಣ (ಅಂದಾಜು)	ನೋಂದಣಿ ಶುಲ್ಕ (ರೂಗಳಲ್ಲಿ)	ಆರಂಭಿಕ ಠೇವಣಿ (ರೂಗಳಲ್ಲಿ)	ಪ್ರತಿ ಫ್ಲಾಟ್‌ನ ಬೆಲೆ (ಪ್ರತಿ ಚ.ಮೀ.ಗೆ ರೂ.ಗಳಲ್ಲಿ) ಕಾರ್ ಪಾರ್ಕಿಂಗ್ ಒಳಗೊಂಡಿದೆ
'ಸೂರ್ಯ ಎಲಿಗೆನ್ಸ್' ಚಂದಾಪುರ–ಆನೇಕಲ್ ಮುಖ್ಯ ರಸ್ತೆ, ಸೂರ್ಯನಗರ 1ನೇ ಹಂತ, ಬೆಂಗಳೂರು	2 BHK	173	75.75–77.70 ಚ.ಮೀ. (815.30–836.30 ಚ.ಅಡಿ)	1000/–	1,50,000/–	ನೆಲಮಹಡಿಯಿಂದ 4ನೇ ಮಹಡಿವರೆಗೆ ರೂ.35,521/– (ರೂ.3,300/– ಚ.ಅಡಿ)
	3 BHK	168	107.30–117.90 ಚ.ಮೀ. (1155.00–1269.00 ಚ.ಅಡಿ)	1500/–	2,00,000/–	5ನೇ ಮಹಡಿ ರೂ.35,790/– (ರೂ.3,325/– ಚ.ಅಡಿ)
						6ನೇ ಮಹಡಿ ರೂ.36,059/– (ರೂ.3,350/– ಚ.ಅಡಿ)
						7ನೇ ಮಹಡಿ ರೂ.36,329/– (ರೂ.3,375/– ಚ.ಅಡಿ)

ಅರ್ಜಿ ಸಲ್ಲಿಸುವ ವಿಧಾನ

ಅರ್ಜಿ ಮತ್ತು ಆರಂಭಿಕ ಠೇವಣಿ ಹಣ e-payment ವಿವರಗಳಿಗಾಗಿ ಹಾಗೂ ಹಂಚಿಕೆ ನಿಯಮ ಮತ್ತು ಷರತ್ತುಗಳಿಗೆ ವೆಬ್‌ಸೈಟ್: https://www.khb.karnataka.gov.in ಸಂಪರ್ಕಿಸುವುದು.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

ಸಹಾಯಕ ಕಾರ್ಯಪಾಲಕ ಅಭಿಯಂತರರವರ ಕಛೇರಿ,
ಸೂರ್ಯನಗರ 1 & 2ನೇ ಹಂತ,
ಆನೇಕಲ್ ಮುಖ್ಯರಸ್ತೆ, ಚಂದಾಪುರ
ದೂರವಾಣಿ ಸಂಖ್ಯೆ: 080-29600401/402.
ಮೊಬೈಲ್ ಸಂಖ್ಯೆ: 8722925429 / 7892908417 / 9448579426 / 9886647084
ಅಥವಾ
ಉಪಪ್ರಧಾನ ವ್ಯವಸ್ಥಾಪಕರು (ಗ್ರಾ.ಸೇ) ಮತ್ತು ಕಂದಾಯ ಅಧಿಕಾರಿಗಳು ಹಂಚಿಕೆ ಶಾಖಾ ಕಛೇರಿ
ದೂರವಾಣಿ ಸಂಖ್ಯೆ: 080-22273511
Extn.335/307 ಅಥವಾ ಮಂಡಳಿ ಅಂತರ್ಜಾಲ
https://www.khb.karnataka.gov.in

ಮಾನ್ಯ ವಸತಿ ಸಚಿವರಾದ ಶ್ರೀ ವಿ. ಸೋಮಣ್ಣ ರವರು ಹಾಗೂ ಕರ್ನಾಟಕ ಗೃಹ ಮಂಡಳಿ ಮಾನ್ಯ ಅಧ್ಯಕ್ಷರಾದ ಶ್ರೀ ಆರಗ ಜ್ಞಾನೇಂದ್ರ ಅವರು ಯೋಜನೆ ಕುರಿತು ಅಧಿಕಾರಿಗಳೊಂದಿಗೆ ಸಮಾಲೋಚಿಸುತ್ತಿರುವುದು.

ಮನೋಜ್ ಕುಮಾರ್ ಮೀನಾ, ಭಾ.ಆ.ಸೇ.
ಕಾರ್ಯದರ್ಶಿಗಳು, ವಸತಿ ಇಲಾಖೆ, ಕರ್ನಾಟಕ ಸರ್ಕಾರ

ಡಿ.ಎಸ್. ರಮೇಶ, ಭಾ.ಆ.ಸೇ.
ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ

DIPR/KHB-07/20-21

ಸಾರ್ವಜನಿಕ ಆಸ್ತಿ-ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.
- ಇದು ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಗೃಹ ಮಂಡಳಿ
3ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009.
ದೂರವಾಣಿ: 22273511 ವೆಬ್‌ಸೈಟ್ : www.khb.kar.nic.in / khbcustomerinfo.com

ವಸತಿ ಕ್ರಾಂತಿಯ ಹರಿಕಾರ

‘ಪ್ರಜಾವಾಣಿ’ ಮತ್ತು ‘ಡೆಕ್ಕನ್ ಹೆರಾಲ್ಡ್’ ಆಯೋಜಿಸಿದ್ದ ಮಹಿಳಾ ದಿನ ಕಾರ್ಯಕ್ರಮದಲ್ಲಿ ವೈದ್ಯರ ಅಭಿಪ್ರಾಯ

‘35 ವರ್ಷದೊಳಗೆ ಮಕ್ಕಳನ್ನು ಹೊಂದುವುದು ಸೂಕ್ತ’

ಪ್ರಜಾವಾಣಿ ವಾರ್ತೆ

ಕಾರ್ಯಕ್ರಮದಲ್ಲಿ (ಎಡದಿಂದ) ಮಣಿಪಾಲ್ ಆಸ್ಪತ್ರೆಯ ವೈದ್ಯೆ ಡಾ.ಕ್ಷಿತಿಜಾ, ಖಾಸಗಿ ಕಂಪನಿ ಉದ್ಯೋಗಿ ದೀಪ್ತಿ ವಿಜಯನ್, ಕ್ರೈಸ್ಟ್ ಕಾಲೇಜಿನ ವಿದ್ಯಾರ್ಥಿನಿ ಸಂಧ್ಯಾ ರಾವ್, ಡಾ.ಗಾಯತ್ರಿ ಕಾರ್ತಿಕ್, ನಟಿ ಮಾಳವಿಕಾ ಅವಿನಾಶ್, ಡಾ.ಮೀನಾ ಮುತ್ತಯ್ಯ, ಡಾ.ಹೇಮಾನಂದಿನಿ ಜಯರಾಮನ್ ಹಾಗೂ ಡಾ.ಆರತಿ ರಾಮರಾವ್ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

ಬೆಂಗಳೂರು: ‘25ರಿಂದ 35ವರ್ಷದೊಳಗೆ ಮಕ್ಕಳನ್ನು ಹೊಂದುವುದು ಸೂಕ್ತ. 35 ದಾಟಿದ ಮೇಲೆ ಮಹಿಳೆಯರಲ್ಲಿ ಫಲವತ್ತತೆಯ ಪ್ರಮಾಣ ಕುಸಿಯುತ್ತಾ ಹೋಗುತ್ತದೆ. ಆಗ ಗರ್ಭ ಧರಿಸಿದರೂ ಸಣ್ಣ ಪುಟ್ಟ ತೊಂದರೆಗಳು ಎದುರಾಗುವ ಸಾಧ್ಯತೆ ಇರುತ್ತದೆ’ ಎಂದು ಮಣಿಪಾಲ ಆಸ್ಪತ್ರೆಯ ಸ್ತ್ರೀರೋಗ ತಜ್ಞೆ ಡಾ.ಮೀನಾ ಮುತ್ತಯ್ಯ ಅಭಿಪ್ರಾಯಪಟ್ಟರು.

ಅಂತರರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ‘ಪ್ರಜಾವಾಣಿ’ ಮತ್ತು ‘ಡೆಕ್ಕನ್ ಹೆರಾಲ್ಡ್’, ಮಣಿಪಾಲ ಆಸ್ಪತ್ರೆಯ ಸಹಯೋಗದಲ್ಲಿ ಆಯೋಜಿಸಿದ್ದ ‘ಬಲಿಷ್ಠ ಮಹಿಳೆ-ಬಲಿಷ್ಠ ಪ್ರಪಂಚ’ ಕಾರ್ಯಕ್ರಮದಲ್ಲಿ ಮಹಿಳೆಯರ ಆರೋಗ್ಯ ಸಮಸ್ಯೆಗಳ ಕುರಿತ ವೈದ್ಯಕೀಯ ಚರ್ಚೆಯಲ್ಲಿ ಅವರು ಮಾತನಾಡಿದರು.

ಐಟಿ ಉದ್ಯೋಗಿ ಇಂಥಾ ಕೇಳಿದ ಪ್ರಶ್ನೆಗೆ ಉತ್ತರಿಸಿದ ಮೀನಾ ಮುತ್ತಯ್ಯ, ‘35ರ ನಂತರ ಅನೇಕರಲ್ಲಿ ಸಕ್ಕರೆ ಕಾಯಿಲೆ ಹಾಗೂ ಇತರ ರೋಗಗಳು ಕಾಣಿಸಿಕೊಳ್ಳುತ್ತವೆ. ಇಂತಹ ಸಮಯದಲ್ಲಿ ಗರ್ಭಧರಿಸಿದರೆ ಜನಿಸುವ ಮಗುವಿನ ಮೇಲೆ ಪ್ರತಿಕೂಲ ಪರಿಣಾಮ ಬೀರಬಹುದು. ಹೀಗಾಗಿ 35 ಮೀರುವುದರೊಳಗೆ ಮಕ್ಕಳನ್ನು ಪಡೆದು ಬಳಿಕ ಉದ್ಯೋಗದತ್ತ ಗಮನ ಹರಿಸುವುದು ಉತ್ತಮ’ ಎಂದು ಸಲಹೆ ನೀಡಿದರು.

ಡಾ.ಗಾಯತ್ರಿ ಕಾರ್ತಿಕ್ ‘ಫೈಬ್ರಾಯ್ಡ್ ರೋಗವು ಯಾರನ್ನು ಬೇಕಾದರೂ ಬಾಧಿಸಬಹುದು. ಈ ಕಾಯಿಲೆ ಇರುವವರು ಮುಟ್ಟಿನ ಅವಧಿಯಲ್ಲಿ ವಿಪರೀತ ನೋವು ಅನುಭವಿಸುತ್ತಾರೆ. ಅತಿಯಾದ ರಕ್ತಸ್ರಾವವೂ ಆಗುತ್ತದೆ. ಇದು ಬಂಜೆತನಕ್ಕೂ ಎಡೆಮಾಡಿಕೊಡಬಹುದು. ನಿಯಮಿತ ಪರೀಕ್ಷೆ ಮೂಲಕ ಈ ಕಾಯಿಲೆಯನ್ನು ಮೊದಲಲ್ಲೇ ಪತ್ತೆಮಾಡಿ ಚಿಕಿತ್ಸೆ ನೀಡಬಹುದು. ಅಲ್ಟ್ರಾಸೌಂಡ್, ಪ್ಯಾಪ್‌ಸ್ಮಿಯರ್ ಪರೀಕ್ಷೆಗಳಿಗೆ ಒಳಪಡುವ ಮೂಲಕ ಗರ್ಭಕೋಶದ ಕಾಯಿಲೆಗೂ ಕಡಿವಾಣ ಹಾಕಬಹುದು’ ಎಂದರು.

ಫೈಬ್ರಾಯ್ಡ್ ರೋಗದಿಂದ ಗುಣಮುಖರಾಗಿರುವ ದೀಪ್ತಿ ಅವರು ತಮ್ಮ ಅನುಭವ ಹಂಚಿಕೊಂಡರು. ‘ನನಗೆ ಫೈಬ್ರಾಯ್ಡ್ ಇರುವುದು ಪರೀಕ್ಷೆಯಿಂದ ಖಾತರಿಯಾಗಿತ್ತು. ಇದರಿಂದ ಪಾರಾಗಲು ಶಸ್ತ್ರಚಿಕಿತ್ಸೆಯೊಂದೇ ಮಾರ್ಗ ಎಂದು ವೈದ್ಯರು ಹೇಳಿದರು. ಹೀಗಾಗಿ ಡಾ.ಗಾಯತ್ರಿ ಅವರನ್ನು ಭೇಟಿಯಾದೆ. ಅವರ ಸಲಹೆಯಂತೆ ‘ರೋಬೋಟಿಕ್’ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡೆ. ಈಗ ನೃತ್ಯ, ಕೆಲಸ, ಯೋಗ ಹೀಗೆ ಎಲ್ಲಾ ಚಟುವಟಿಕೆಗಳಲ್ಲೂ ಮೊದಲಿನಂತೆಯೇ ತೊಡಗಿಕೊಂಡಿದ್ದೇನೆ’ ಎಂದರು.

‘ಈಗಿನ ಮಕ್ಕಳು ಬೇಗನೆ ಋತುಮತಿಗಳಾಗುತ್ತಾರೆ. ಹದಿಹರೆಯದವರಲ್ಲಿ ಸೌಂದರ್ಯ ಪ್ರಜ್ಞೆ ಹೆಚ್ಚು. ಅಂಗ ಸೌಷ್ಟವ ಕಾಪಾಡಿಕೊಳ್ಳುವ ಉದ್ದೇಶದಿಂದ ಕೆಲವರು ವಿಪರೀತ ವ್ಯಾಯಾಮ ಮಾಡುತ್ತಾರೆ. ಇದರಿಂದ ಅಡ್ಡಪರಿಣಾಮಗಳಾಗುವ ಸಾಧ್ಯತೆ ಇದೆ. ಈಗಿನ ಮಕ್ಕಳು ಬೊಜ್ಜುತನಕ್ಕೂ ಮುಳುಗಿ ಹೋಗುತ್ತಿದ್ದಾರೆ. ಇದರಿಂದ ಆರೋಗ್ಯದ ಮೇಲೂ ವ್ಯತಿರಿಕ್ತ ಪರಿಣಾಮ ಬೀರಲಿದೆ. ತಾಯಂದಿರು ಅವರಿಗೆ ಆರೋಗ್ಯಕರ ಜೀವನಶೈಲಿ ರೂಢಿಸಿಕೊಳ್ಳುವಂತೆ ಪ್ರೇರೇಪಿಸಬೇಕು’ ಎಂದು ಡಾ.ಹೇಮಾನಂದಿನಿ ಜಯರಾಮನ್ ತಿಳಿಸಿದರು.

‘ದಪ್ಪ ಆಗಿಬಿಡುತ್ತೇನೆ ಎಂಬ ಭಯದಿಂದ ಕೆಲವರು ಸರಿಯಾಗಿ ಊಟ ಮಾಡುವುದಿಲ್ಲ. ಇದು ಸರಿಯಲ್ಲ. ನಮ್ಮ ದೇಹಕ್ಕೆ ನಿತ್ಯವೂ ಅಗತ್ಯ ಪ್ರಮಾಣದ ಪೋಷಕಾಂಶಗಳು ಬೇಕಿರುತ್ತದೆ. ಆಹಾರದ ಮೂಲಕ ಅದನ್ನು ಪಡೆದುಕೊಳ್ಳಬೇಕು’ ಎಂದು ಸಲಹೆ ನೀಡಿದರು.

ಮಣಿಪಾಲ ಆಸ್ಪತ್ರೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ದಿಲೀಪ್ ಜೋಶ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

‘ಇನ್ನೂ ವರದಕ್ಷಿಣೆ ಸಾವು ನಿಂತಿಲ್ಲ’

‘ದೇಶಕ್ಕೆ ಸ್ವಾತಂತ್ರ್ಯ ಬಂದು 70 ವರ್ಷಗಳು ಕಳೆದಿವೆ. ಹೀಗಿದ್ದರೂ ಮಹಿಳೆಯರ ಮೇಲಿನ ದೌರ್ಜನ್ಯ ನಿಂತಿಲ್ಲ. ವರದಕ್ಷಿಣೆ ಸಾವು ಕಡಿಮೆಯಾಗಿಲ್ಲ. ಅತ್ಯಾಚಾರ ನಿಂತಿಲ್ಲ. ಇದು ನೋವಿನ ಸಂಗತಿ’ ಎಂದು ಮಣಿಪಾಲ ಆಸ್ಪತ್ರೆಯ ಮುಖ್ಯಸ್ಥ ಡಾ.ಸುದರ್ಶನ್ ಬಲ್ಲಾಳ್ ಬೇಸರ ವ್ಯಕ್ತಪಡಿಸಿದರು.

‘ಮಹಿಳೆಯರು ಕೆಲ ಕ್ಷೇತ್ರಗಳಲ್ಲಿ ಪುರುಷರನ್ನೂ ಹಿಂದಿಕ್ಕಿದ್ದಾರೆ. ರಾಜಕೀಯ. ವೈದ್ಯಕೀಯ, ಸೇನೆ, ಪೊಲೀಸ್ ಹೀಗೆ ವಿವಿಧ ರಂಗಗಳಲ್ಲಿ ಛಾಪು ಮೂಡಿಸಿದ್ದಾರೆ. ಎಲ್ಲರ ಹೆಸರಿನ ಕೊನೆಗೆ ಅಪ್ಪನ ಉಪನಾಮ ಇರುವುದನ್ನು ಗಮನಿಸಿದ್ದೇವೆ. ಆದರೆ ನಮ್ಮ ಮನೆಯವರು ತಂದೆಯ ಬದಲು ತಾಯಿಯ ಕುಟುಂಬದ ಉಪನಾಮ ಸೇರಿಸಿಕೊಂಡಿದ್ದೇವೆ. ಇದು ಮಹಿಳೆಗೆ ನಾವು ನೀಡುತ್ತಿರುವ ಗೌರವ’ ಎಂದರು.

‘ಒಂದೇ ದಿನಕ್ಕೆ ಸೀಮಿತವಾಗದಿರಲಿ’

‘ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯು ಮಾರ್ಚ್ 8ಕ್ಕೆ ಸೀಮಿತಗೊಳ್ಳಬಾರದು. ಅದನ್ನು ವರ್ಷಪೂರ್ತಿ ಆಚರಿಸಬೇಕು’ ಎಂದು ನಟಿ ಮಾಳವಿಕಾ ಅವಿನಾಶ್ ಹೇಳಿದರು.

‘ಆರೋಗ್ಯದ ಬಗ್ಗೆ ಎಲ್ಲರೂ ಕಾಳಜಿ ವಹಿಸಬೇಕು. ಈ ವಿಚಾರದಲ್ಲಿ ನಿರ್ಲಕ್ಷ್ಯ ಬೇಡ. ಅನೇಕರು ತಮ್ಮ ಸಮಸ್ಯೆಗಳನ್ನು ಇನ್ನೊಬ್ಬರೊಂದಿಗೆ ಹಂಚಿಕೊಳ್ಳಲು ಹಿಂಜರಿಯುತ್ತಾರೆ. ಹಾಗೆ ಮಾಡುವುದರಿಂದ ಅಪಾಯವನ್ನು ಮೈಮೇಲೆ ಎಳೆದುಕೊಂಡಂತಾಗುತ್ತದೆ. ಅದಕ್ಕೆ ಯಾರೂ ಆಸ್ಪದ ನೀಡಬಾರದು. ತಾವು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಮುಕ್ತವಾಗಿ ಮಾತನಾಡುವ ಗುಣ ಮೈಗೂಡಿಸಿಕೊಳ್ಳಬೇಕು’ ಎಂದು ನುಡಿದರು.

ಸುದ್ದಿ 2 ನಿಮಿಷ

ಮಹಿಳಾ ವಾದ್ಯ ನಾದ ವೈಭವ ನಾಳೆ

ಬೆಂಗಳೂರು: ವಿಶ್ವ ಮಹಿಳಾ ದಿನದ ಅಂಗವಾಗಿ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯು ಇದೇ 8ರಂದು (ಸೋಮವಾರ) ಬೆಳಿಗ್ಗೆ 9.30ಕ್ಕೆ ರವೀಂದ್ರ ಕಲಾಕ್ಷೇತ್ರದಲ್ಲಿ ಮಹಿಳಾ ವಾದ್ಯ ನಾದ ವೈಭವ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಇಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಕಾಡೆಮಿ ಅಧ್ಯಕ್ಷ ಆನೂರು ಅನಂತ ಕೃಷ್ಣ ಶರ್ಮ, ‘ನಾಡಿನ ಪ್ರಸಿದ್ಧ ಮಹಿಳಾ ವಾದ್ಯಗಾರರು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಸಚಿವ ಅರವಿಂದ ಲಿಂಬಾವಳಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷರಾದ ಮಂಜಮ್ಮ ಜೋಗತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕ ಎಸ್. ರಂಗಪ್ಪ, ಕಲಾವಿದೆ ವಿದುಷಿ ಡಾ. ಅನಸೂಯಾ ಕುಲಕರ್ಣಿ ಹಾಗೂ ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷೆ ತೇಜಸ್ವಿನಿ ಅನಂತಕುಮಾರ್ ಭಾಗವಹಿಸಲಿದ್ದಾರೆ. ನಾಡಿನ ವಿವಿಧ ಭಾಗದಿಂದ ಮಹಿಳಾ ಕಲಾವಿದರು ಬರಲಿದ್ದಾರೆ’ ಎಂದು ತಿಳಿಸಿದರು.

‘ಇದೇ ಮೊದಲ ಬಾರಿಗೆ ಸಂಗೀತ ವಾದ್ಯಗಳ ವಿವಿಧ ಪ್ರಕಾರಗಳಲ್ಲಿ ಸಾಧನೆ ಮಾಡಿದ ಮಹಿಳಾ ಕಲಾವಿದರನ್ನು ಒಂದೆಡೆ ಸೇರಿಸಲಾಗುತ್ತಿದೆ. ಖ್ಯಾತ ಮಹಿಳಾ ಕಲಾವಿದರು ವೀಣೆ, ಸಂತೂರ್, ನಾಗಸ್ವರ, ಪಿಟೀಲು, ಜಲತರಂಗ, ತಾಳ, ಸಿತಾರ್, ರುದ್ರವೀಣಾ ಹಾಗೂ ಮಂಗಳವಾದ್ಯಗಳನ್ನು ಪ್ರಸ್ತುತಪಡಿಸಲಿದ್ದಾರೆ. ರಾತ್ರಿ 9 ಗಂಟೆಯವರೆಗೂ ವಿವಿಧ ಕಾರ್ಯಕ್ರಮಗಳು ನಡೆಯಲಿವೆ’ ಎಂದರು.

‘ಈ ವರ್ಷ ಭೀಮಸೇನ ಜೋಶಿ ಮತ್ತು ಬಸವರಾಜ ರಾಜಗುರು ಅವರ ಜನ್ಮಶತಮಾನೋತ್ಸವವನ್ನು ಆಚರಿಸಲು ಚಿಂತನೆ ನಡೆಸಲಾಗಿದೆ. ಈ ಸಂಬಂಧ ಅನುದಾನ ನೀಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ದ್ದೇವೆ’ ಎಂದು ತಿಳಿಸಿದರು.

ಅಕಾಡೆಮಿಯ ರಿಜಿಸ್ಟ್ರಾರ್ ಬನಶಂಕರಿ ವಿ. ಅಂಗಡಿ, ಸದಸ್ಯರಾದ ಡಾ. ಪದ್ಮಿನಿ ಓಕ್, ಕಿಕ್ಕೇರಿ ಕೃಷ್ಣಮೂರ್ತಿ, ರಮ್ಯಾ ಸೂರಜ್ ಇದ್ದರು.

‘111 ಸಾಧಕರಿಗೆ ಸನ್ಮಾನ’

ಬೆಂಗಳೂರು: ‘ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ 111 ಮಹಿಳೆಯರನ್ನು ಅಂತರರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ 111 ನಿಮಿಷಗಳಲ್ಲಿ ಸನ್ಮಾನಿಸಲು ನಿರ್ಧರಿಸಿದ್ದೇವೆ. ಇದು ವಿಶ್ವ ದಾಖಲೆಯಾಗಲಿದೆ’ ಎಂದು ಕೆ.ಸಿ. ರೆಡ್ಡಿ ಸರೋಜಮ್ಮ ಫೌಂಡೇಷನ್‌ನ ವಸಂತ ಕವಿತಾ ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ‘ಲೀಡ್ ಫೌಂಡೇಷನ್ ಹಾಗೂ ವಿವಿಧ ಸಂಘ– ಸಂಸ್ಥೆಗಳ ಸಹಯೋಗದಲ್ಲಿ ನಾವು ಈ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ಮಾರ್ಚ್ 8ರಂದು ಪುರಭವನದಲ್ಲಿ ಸಮಾರಂಭ ನಡೆಯಲಿದೆ. ವಿಶ್ವದ ವಿವಿಧ ಭಾಗಗಳಿಂದ ಒಟ್ಟು 600ಕ್ಕೂ ಅಧಿಕ ಸಾಧಕರನ್ನು ನಾಮನಿರ್ದೇಶನ ಮಾಡಲಾಗಿತ್ತು. ಈ ಪೈಕಿ ಆಯ್ಕೆ ಸಮಿತಿಯು 111 ಮಂದಿಯ ಹೆಸರನ್ನು ಅಂತಿಮಗೊಳಿಸಿದೆ. ಇವರು ರಾಜಕೀಯ, ಸಿನಿಮಾ, ಮಾಧ್ಯಮ, ಶಿಕ್ಷಣ ಮೊದಲಾದ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರು’ ಎಂದರು.

‘ಕರ್ನಾಟಕದಿಂದ 45 ಮಂದಿಯನ್ನು ಆಯ್ಕೆ ಮಾಡಲಾಗಿದೆ. ಪ್ರಶಸ್ತಿಗೆ ಆಯ್ಕೆಯಾಗಿರುವವರ ಪೈಕಿ ಹಲವರು ಈಗಾಗಲೇ ನಗರಕ್ಕೆ ಬಂದಿದ್ದಾರೆ’ ಎಂದು ತಿಳಿಸಿದರು.

ಬಲವಂತದ ಮತಾಂತರವಲ್ಲ: ಪೊಲೀಸ್ ವರದಿ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಹೊಸದುರ್ಗ ತಾಲ್ಲೂಕು ವ್ಯಾಪ್ತಿಯಲ್ಲಿ ಕ್ರಿಶ್ಚಿಯನ್ ಧರ್ಮಕ್ಕೆ ಬಲವಂತದ ಮತಾಂತರ ನಡೆದಿರುವುದಕ್ಕೆ ದಾಖಲೆಗಳು ಲಭ್ಯವಾಗಿಲ್ಲ. ಕೆಲವರು ಸ್ವಯಂಪ್ರೇರಿತವಾಗಿ ಕ್ರೈಸ್ತ ಧರ್ಮ ಪಾಲನೆ ಮಾಡುತ್ತಿದ್ದಾರೆ ಎಂಬುದು ಪೊಲೀಸರ ತನಿಖಾ ವರದಿಯಿಂದ ಬೆಳಕಿಗೆ ಬಂದಿದೆ.

ಶಾಸಕ ಗೂಳಿಹಟ್ಟಿ ಡಿ. ಶೇಖರ್ ಅವರ ತಾಯಿ ಪುಟ್ಟಮ್ಮ ಸೇರಿ ಹೊಸದುರ್ಗ ತಾಲ್ಲೂಕಿನ ಹಲವರು ಕ್ರೈಸ್ತ ಧರ್ಮಕ್ಕೆ ಮತಾಂತರ ಆಗಿದ್ದಾರೆ ಎಂಬ ದೂರು ಕೇಳಿಬಂದ ಕಾರಣ ಮೂರು ತಿಂಗಳ ಹಿಂದೆ ಪೊಲೀಸರು ತನಿಖೆ ನಡೆಸಿದ್ದರು.

‘ಮತಾಂತರಕ್ಕೆ ಸಂಬಂಧಿಸಿದ ಆರೋಪ ಕೇಳಿಬಂದಿದ್ದರಿಂದ ಸ್ವಯಂ ಪ್ರೇರಿತವಾಗಿ ತನಿಖೆ ನಡೆಸಲಾಗಿತ್ತು. ಶಾಸಕ ಗೂಳಿಹಟ್ಟಿ ಶೇಖರ್ ತಾಯಿ ಪುಟ್ಟಮ್ಮ ಅವರ ಹೇಳಿಕೆಯನ್ನು ಪಡೆಯಲಾಗಿದೆ. ಹಲವು ವರ್ಷಗಳಿಂದ ಸ್ವಯಂಪ್ರೇರಿತವಾಗಿ ಚರ್ಚ್‌ಗೆ ಹೋಗುತ್ತಿರುವುದಾಗಿ ಸ್ಪಷ್ಟನೆ ನೀಡಿದ್ದಾರೆ. ಬಲವಂತದ ಮತಾಂತರ ಕಂಡುಬಂದರೆ ಕಾನೂನು ಕ್ರಮ ಕೈಗೊಳ್ಳುತ್ತೇವೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿ. ರಾಧಿಕಾ ಮಾಹಿತಿ ನೀಡಿದ್ದಾರೆ.

ಸಿಪಿಐ ನೇತೃತ್ವದ ತನಿಖಾ ತಂಡ ಮತಾಂತರಕ್ಕೆ ಸಂಬಂಧಿಸಿದ ಮಾಹಿತಿ ಕಲೆಹಾಕಿದೆ.

ಮತಾಂತರಗೊಂಡಿಲ್ಲ: ಫಾದರ್ ಸ್ಪಷ್ಟನೆ

ಹೊಸದುರ್ಗ: ಶಾಸಕ ಗೂಳಿಹಟ್ಟಿ ಡಿ.ಶೇಖರ್ ಅವರ ತಾಯಿ ಪುಟ್ಟಮ್ಮ (ಪುಟ್ಟಜ್ಜಿ) ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡಿಲ್ಲ ಎಂದು ಪಟ್ಟಣದ ಹಿರಿಯೂರು ರಸ್ತೆ ಚರ್ಚ್ ಫಾದರ್ ಜಾರ್ಜ್ ಸ್ಟೀವನ್ ಡಿಸೋಜ ತಿಳಿಸಿದ್ದಾರೆ.

‘ಚರ್ಚ್‌ಗೆ ಬಂದು ಪ್ರಾರ್ಥನೆ ಸಲ್ಲಿಸಿದ ಮಾತ್ರಕ್ಕೆ ಮತಾಂತರ ಆಗುವುದಿಲ್ಲ. ಅವರು 7 ವರ್ಷಗಳಿಂದ ಚರ್ಚ್‌ಗೆ ಬರುತ್ತಿದ್ದು, ಪ್ರಾರ್ಥನೆಯಲ್ಲಿ ಭಾಗವಹಿಸುತ್ತಿದ್ದಾರೆ. ಮಾನಸಿಕ ನೆಮ್ಮದಿಗೆ ಜನರು ದೇವಸ್ಥಾನ, ಮಸೀದಿಗೆ ಹೋಗುವಂತೆ ಅವರು ಚರ್ಚ್‌ಗೆ ಬರುತ್ತಿದ್ದಾರೆ’ ಎಂದು ತಿಳಿಸಿದ್ದಾರೆ.

ಬೆಮೆಲ್ ಖಾಸಗೀಕರಣ ವಿರೋಧಿಸಿ ಸರದಿ ನಿರಶನ

ಖಾಸಗೀಕರಣ ಕೈಬಿಡಲು ಒತ್ತಾಯ

ಪ್ರಜಾವಾಣಿ ವಾರ್ತೆ

ಕೆಜಿಎಫ್ ಬೆಮೆಲ್ ನಗರದಲ್ಲಿ ಶನಿವಾರ ಕನ್ನಡ ಪರ ಸಂಘಟನೆಗಳು ಬೆಮೆಲ್ ಖಾಸಗೀಕರಣ ವಿರೋಧಿಸಿ ಪ್ರತಿಭಟನೆ ನಡೆಸಿದವು

ಕೆಜಿಎಫ್: ಲಾಭದಾಯಕವಾಗಿ ನಡೆಯುತ್ತಿರುವ ಬೆಮೆಲ್ ಕಾರ್ಖಾನೆಯನ್ನು ಖಾಸಗೀಕರಣ ಮಾಡುವ ಹುನ್ನಾರವನ್ನು ಕೈಬಿಡಬೇಕೆಂದು ಕಾರ್ಮಿಕ ಮುಖಂಡ ಅಶೋಕ ಲೋಣಿ ಒತ್ತಾಯಿಸಿದರು.

ಬೆಮೆಲ್ ನಗರದಲ್ಲಿ ಬೆಮೆಲ್ ಕಾರ್ಮಿಕರು ಖಾಸಗೀಕರಣ ವಿರೋಧಿಸಿ ನಡೆಸುತ್ತಿರುವ ಸರದಿ ನಿರಶನ ಕಾರ್ಯಕ್ರಮದಲ್ಲಿ ಕನ್ನಡ ಪರ ಸಂಘಟನೆಗಳು ಶನಿವಾರ ಬೆಂಬಲ ವ್ಯಕ್ತಪಡಿಸಿದ ಸಂದರ್ಭದಲ್ಲಿ ಮಾತನಾಡಿದರು.

ಬೆಮೆಲ್ ಸಂಸ್ಥೆ ನಾಡಿನ ಹೆಮ್ಮೆಯ ಸಂಸ್ಥೆಯಾಗಿದೆ. ಇದನ್ನು ಉಳಿಸಿಕೊಳ್ಳುವುದು ರಾಜ್ಯದ ಎಲ್ಲ ಕನ್ನಡಿಗರ ಜವಾಬ್ದಾರಿ. ಅದನ್ನು ಉಳಿಸಿಕೊಳ್ಳುವ ಕೆಲಸವನ್ನು ಕನ್ನಡ ಸಂಘಟನೆಗಳು ಮಾಡಬೇಕು ಎಂದು ಹೇಳಿದರು.

ಈಗಾಗಲೇ ಬಿಜಿಎಂಎಲ್ ಮುಚ್ಚಿ ಉದ್ಯೋಗ ಕಡಿಮೆಯಾಗಿದೆ. ಸಾವಿರಾರು ಕುಟುಂಬಗಳು ಬೀದಿಪಾಲಾಗಿದ್ದಾರೆ. ಕೇಂದ್ರ ಸರ್ಕಾರದ ನೀತಿಯಿಂದಾಗಿ ಬೆಮೆಲ್ ಕೂಡ ಖಾಸಗೀಕರಣವಾದರೆ, ಉದ್ಯೋಗ ಕಡಿಮೆಯಾಗಿ, ಕನ್ನಡಿಗರಿಗೆ ಉದ್ಯೋಗಾವಕಾಶ ಕಡಿಮೆಯಾಗುತ್ತದೆ. ಬೆಮೆಲ್ ಕಾರ್ಮಿಕ ಸಂಘ ಹಮ್ಮಿಕೊಳ್ಳುವ ಹೋರಾಟಕ್ಕೆ ಕನ್ನಡ ಪರ ಸಂಘಟನೆಗಳು ಬೆಂಬಲ ನೀಡಬೇಕು ಎಂದು ಒತ್ತಾಯಿಸಿದರು.

ಕರ್ನಾಟಕ ಸಿಂಹ ಘರ್ಜನೆ ಮುಖಂಡ ಪ್ರಸನ್ನ ಕುಮಾರಸ್ವಾಮಿ ಮಾತನಾಡಿ, ಖಾಸಗೀಕರಣದ ವಿರುದ್ಧ ತೀವ್ರ ಸ್ವರೂಪದ ಹೋರಾಟ ನಡೆಸಬೇಕು. ಕೇಂದ್ರ ಸರ್ಕಾರಕ್ಕೆ ಕೂಗು ಮುಟ್ಟುವ ರೀತಿಯಲ್ಲಿ ಹೋರಾಟ ಮಾಡಬೇಕು. ಪ್ರಧಾನ ಮಂತ್ರಿಗೆ ಚಳವಳಿಯ ಬಿಸಿ ಮುಟ್ಟುವ ರೀತಿಯಲ್ಲಿ ಹೋರಾಟ ರೂಪಿಸಬೇಕು ಎಂದು ಹೇಳಿದರು.

ಮುಖಂಡರಾದ ಬಾ.ಹಾ. ಶೇಖರಪ್ಪ, ಅ.ಕೃ.ಸೋಮಶೇಖರ್, ವೀರ ವೆಂಕಟಪ್ಪ, ದೇಶಪಾಂಡೆ, ಮಂಜುನಾಥ್, ಉಡಿಗೆರೆ ಚಲಪತಿ, ವಿರೂಪಾಕ್ಷಪ್ಪ ಕುಲಕರ್ಣಿ, ಶಿವಾನಂದಕೃಷ್ಣನ್, ರಮೇಶ್ ಗೌಡ, ಮದಿರಪ್ಪ, ಬಿ.ಜೆ.ಗೋಣಿ, ಲಕ್ಷ್ಮಣಕುಮಾರ್, ಮಂಜುನಾಥ್ ನಾಯಕ್, ಎಂ.ಜಿ. ಮೋಹನಕುಮಾರ್, ಶಿವಕುಮಾರ್, ಎಂ.ಎಸ್.ರಾಮಪ್ರಸಾದ್, ವೆಂಕೋಬ ರಾವ್ ಪಡತಾರೆ, ಬಿ.ಎಸ್. ಪರಮೇಶ್ವರ, ಸಂಜೀವ್ ಕುಮಾರ್ ಮೇಟಿ, ದಾಸೇಗೌಡ, ಗುರುನಾಥ್ ಜಾದವ್, ಶ್ರೀನಿವಾಸಮೂರ್ತಿ, ಶಶಿಧರ್, ಬೆಮೆಲ್ ಕಾರ್ಮಿಕ ಸಂಘದ ಅಧ್ಯಕ್ಷ ಆಂಜನೇಯರೆಡ್ಡಿ ಇದ್ದರು.

ಮಗು ಮಾರಾಟ ಪ್ರಕರಣ: ಆರು ಆರೋಪಿಗಳು ವಶಕ್ಕೆ

ಪ್ರಜಾವಾಣಿ ವಾರ್ತೆ

ಧಾರವಾಡ: ನಾಲ್ಕು ತಿಂಗಳ ಹಿಂದೆ ಗಂಡು ಮಗು ಮಾರಾಟಕ್ಕೆ ಸಹಕರಿಸಿದ್ದ ಆರೋಪದ ಮೇಲೆ ನಾಲ್ಕು ಜನ ಮಧ್ಯವರ್ತಿಗಳು ಹಾಗೂ ಮಗು ಖರೀದಿಸಿದ ದಂಪತಿಯನ್ನು ವಿದ್ಯಾಗಿರಿ ಪೊಲೀಸರು ಶನಿವಾರ ವಶಕ್ಕೆ ಪಡೆದಿದ್ದಾರೆ.

ಮಗು ಮಾರಾಟಕ್ಕೆ ಸಹಕರಿಸಿದ ಭಾರತಿ ಮಂಜುನಾಥ ವಾಲ್ಮೀಕಿ, ರಮೇಶ ಮಂಜುನಾಥ ವಾಲ್ಮೀಕಿ, ರವಿ ಭೀಮಸೇನ ಹೆಗಡೆ ಹಾಗೂ ವಿನಾಯಕ ಅರ್ಜುನ ಮಾದರ ಅವರನ್ನು ವಶಕ್ಕೆ ಪಡೆದಿದ್ದಾರೆ. ಮಗು ಖರೀದಿಸಿದ ಆರೋಪದ ಮೇಲೆ ವಿಜಯ ಬಸಪ್ಪ ನೆಗಳೂರ ಮತ್ತು ಚಿತ್ರಾ ವಿಜಯ ನೆಗಳೂರ ಅವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಸಾಲ ತೀರಿಸಲು ಮಾರಾಟ: ಮಗುವಿನ ಪಾಲಕರು ಬಡ್ಡಿ ವ್ಯವಹಾರ ಮಾಡುತ್ತಿದ್ದ ವ್ಯಕ್ತಿಯಿಂದ ₹ 50 ಸಾವಿರ ಸಾಲ ಮಾಡಿದ್ದರು. ಅದು ಬಡ್ಡಿ ಸೇರಿ ₹ 1.50 ಲಕ್ಷದಷ್ಟಾಗಿತ್ತು. ಸಾಲ ಮರುಪಾವತಿ ಮಾಡಲು ಹಣ ಇಲ್ಲದ್ದರಿಂದ ಪಾಲಕರು, ತಮ್ಮ ಒಂದು ತಿಂಗಳ 10 ದಿನದ ಮಗುವನ್ನು ಆರೋಪಿಗಳ ಸಹಾಯದಿಂದ ₹ 2.50 ಲಕ್ಷಕ್ಕೆ ಮಾರಾಟ ಮಾಡಿದ್ದರು. ನಂತರ ಆ ಹಣವನ್ನು ನೀಡಿ, ಸಾಲ ತೀರಿಸಿದ್ದರು.

ಮಗುವಿನ ಬಗ್ಗೆ ಮಮತೆ ಉಂಟಾಗಿ ಪಾಲಕರು, ತಮ್ಮ ಮಗುವನ್ನು ಮರಳಿ ಕೊಡಿಸುವಂತೆ ವಿದ್ಯಾಗಿರಿ ಪೊಲೀಸ್ ಠಾಣೆಗೆ ಮೊರೆ ಇಟ್ಟರು. ಪೊಲೀಸ್ ಉಪಆಯುಕ್ತ ರಾಮರಾಜನ್, ಆರ್.ಬಿ. ಬಸರಗಿ ಮತ್ತು ಎಸಿಪಿ ಜಿ. ಅನುಷಾ ಮಾರ್ಗದರ್ಶನದಲ್ಲಿ ತನಿಖೆ ಕೈಗೊಂಡ ವಿದ್ಯಾಗಿರಿ ಠಾಣೆ ಪೊಲೀಸರು ಆರೋಪಿಗಳನ್ನು ಪತ್ತೆ ಹಚ್ಚಿ ಮಗುವನ್ನು ರಕ್ಷಣೆ ಮಾಡಿದರು. ಸದ್ಯ ಮಗುವನ್ನು ಮಕ್ಕಳ ಕಲ್ಯಾಣ ಸಮಿತಿಗೆ ಒಪ್ಪಿಸಿದ್ದು, ಸಂಪೂರ್ಣ ತನಿಖೆ ನಂತರ ಪಾಲಕರಿಗೆ ಹಸ್ತಾಂತರಿಸಲಾಗುವುದು ಎಂದರು.

ಬಿಜೆಪಿ ಟಿಕೆಟ್‌ಗೆ ಬೇಡಿಕೆ ಇಟ್ಟಿದ್ದೇನೆ: ಮುತಾಲಿಕ್

ಬಾಗಲಕೋಟೆ: ‘ಬೆಳಗಾವಿ ಲೋಕಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸುವ ಆಕಾಂಕ್ಷೆ ಹೊಂದಿದ್ದೇನೆ. ಟಿಕೆಟ್‌ಗಾಗಿ ಪಕ್ಷದ ವರಿಷ್ಠರಿಗೆ ಮನವಿ ಮಾಡಿದ್ದೇನೆ. ಅದಕ್ಕೆ ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ’ ಎಂದು ಶ್ರೀರಾಮಸೇನೆ ಸಂಸ್ಥಾಪಕ ಪ್ರಮೋದ ಮುತಾಲಿಕ್ ಹೇಳಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಲೋಕಸಭೆಗೆ ಇನ್ನೂ 3 ವರ್ಷ ಅವಧಿ ಇದೆ. ಟಿಕೆಟ್ ಸಿಕ್ಕರೆ ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದು ಕ್ಷೇತ್ರದ ಅಭಿವೃದ್ಧಿ ಹಾಗೂ ಹಿಂದುತ್ವದ ಕೆಲಸ ಮಾಡಲಿದ್ದೇನೆ. ನನಗೆ ಈಗಾಗಲೇ 66 ವರ್ಷ ವಯಸ್ಸು. ಹೀಗಾಗಿ ಇದು ನನ್ನ ಕೊನೆಯ ಚುನಾವಣೆಯ ಸ್ಪರ್ಧೆಯಾಗಲಿದೆ’ ಎಂದರು.

ಮನೆ ಮಾರಾಟ ಮಾಡಿದ ನಟ ದ್ವಾರಕೀಶ್?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖ್ಯಾತ ನಟ,ನಿರ್ಮಾಪಕ ದ್ವಾರಕೀಶ್ ಅವರು ಎಚ್.ಎಸ್. ಆರ್ ಲೇಔಟ್‌ನಲ್ಲಿರುವ ತಮ್ಮ ಮನೆಯನ್ನು ಮಾರಾಟ ಮಾಡಿದ್ದು, ಇದನ್ನು ನಿರ್ದೇಶಕ ರಿಷಬ್ ಶೆಟ್ಟಿ ಅವರು ಖರೀದಿಸಿದ್ದಾರೆ ಎನ್ನಲಾಗಿದೆ.

ಮನೆಯನ್ನು ₹10.5 ಕೋಟಿಗೆ ಮಾರಾಟ ಮಾಡಿದ್ದಾರೆ ಎನ್ನುವ ಮಾಹಿತಿ ಹರಿದಾಡುತ್ತಿದೆ. ‘ದ್ವಾರಕೀಶ್ ಚಿತ್ರ’ದ ನಿರ್ಮಾಣದಲ್ಲಿ ಬಂದಿದ್ದ ‘ಆಯುಷ್ಮಾನ್ ಭವ’ ಚಿತ್ರವು ಯಶಸ್ಸು ಕಂಡಿರಲಿಲ್ಲ. ನಂತರದಲ್ಲಿ ಹಣಕಾಸು ವ್ಯವಹಾರ ಸಂಬಂಧ ವಿತರಕ ಜಯಣ್ಣ ಅವರೊಂದಿಗೆ ವಾಗ್ವಾದವೂ ನಡೆದಿತ್ತು. ಈ ಸಂದರ್ಭದಲ್ಲಿ ‘ಸಿನಿಮಾ ಹಂಚಿಕೆದಾರ ಜಯಣ್ಣ ಅವಾಚ್ಯ ಶಬ್ದಗಳಿಂದ ನಿಂದಿಸಿ ಜೀವ ಬೆದರಿಕೆಯೊಡ್ಡಿದ್ದಾರೆ’ ಎಂದು ಆರೋಪಿಸಿ ದ್ವಾರಕೀಶ್ ಎಚ್‌ಎಸ್‌ಆರ್ ಲೇಔಟ್ ಠಾಣೆಗೆ ದೂರು ನೀಡಿದ್ದರು. ಇದು ಸಾಕಷ್ಟು ಚರ್ಚೆಗೆ ಗ್ರಾಸವಾಗಿತ್ತು.

ದ್ವಾರಕೀಶ್

‘ದ್ವಾರಕೀಶ್ ಅವರ ಪುತ್ರ ಯೋಗಿ ಅವರಿಗೆ ಚಿತ್ರದ ನಿರ್ಮಾಣದ ವೇಳೆ ಹಣಕಾಸು ಸಮಸ್ಯೆ ಎದುರಾದಾಗ ಸ್ನೇಹಿತರಿಂದ ₹ 2 ಕೋಟಿ ಸಾಲ ಕೊಡಿಸಿದ್ದೇನೆ. ಯೋಗಿ ಅವರು ನನ್ನ ಸ್ನೇಹಿತರಿಗೆ ಇಂದಿಗೂ ಅಸಲು ಮತ್ತು ಬಡ್ಡಿ ನೀಡಿಲ್ಲ. ಸಾಲ ತೀರಿಸಲು ಮನೆ ಮಾರುತ್ತೇನೆ ಎಂದು ಯೋಗಿ ಹೇಳಿದರು. ಬೇರೆಡೆ ಹಣ ಹೊಂದಿಸಿ ಸಾಲ ತೀರಿಸುವಂತೆ ಸಲಹೆ ನೀಡಿದ್ದೆ. ಹಣಕಾಸು ವಿವಾದಕ್ಕೆ ಸಂಬಂಧಿಸಿದಂತೆ ನನ್ನ ಹೆಸರನ್ನು ಅನಗತ್ಯವಾಗಿ ಸೇರಿಸುವುದು ಸರಿಯಲ್ಲ’ ಎಂದು ನಿರ್ಮಾಪಕ ಕೆ. ಮಂಜು ಕೂಡಾ ಈ ಹಿಂದೆ ಹೇಳಿದ್ದರು.

ಎದುರಾಗಿರುವ ಆರ್ಥಿಕ ಸಂಕಷ್ಟದಿಂದ ಹೊರಬರಲೆಂದೇ ದ್ವಾರಕೀಶ್ ಮನೆ ಮಾರಿದ್ದಾರೆ ಎನ್ನಲಾಗಿದೆ. ಆದರೆ, ಈ ಕುರಿತು ಪ್ರತಿಕ್ರಿಯೆ ನೀಡಲು ದ್ವಾರಕೀಶ್ ನಿರಾಕರಿಸಿದ್ದಾರೆ.

ನಗರದಲ್ಲಿ ಇಂದು

ಕೆಎಸ್‌ಆರ್‌ಪಿ ವತಿಯಿಂದ ಮಹಿಳಾ ಸೈಕಲ್ ಜಾಥಾ: ಚಾಲನೆ–ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ, ಆಯೋಜನೆ–ಪೊಲೀಸ್ ಇಲಾಖೆ, ಸ್ಥಳ–ವಿಧಾನಸೌಧ ಮುಂಭಾಗ, ಬೆಳಿಗ್ಗೆ 7.15

ಶ್ರೀಪಡ್ರೆ ಅವರ ‘ರೈತರ ಆದಾಯ ವರ್ಧನೆಗೆ ಮೌಲ್ಯವರ್ಧನೆ’ ಹಾಗೂ ಆನಂದತೀರ್ಥ ಪ್ಯಾಟಿ ಅವರ ‘ಥಾಯ್ಲೆಂಡ್ ಕೃಷಿ ಪ್ರವಾಸ’ ಪುಸ್ತಕಗಳ ಬಿಡುಗಡೆ: ಅತಿಥಿಗಳು–ಚಿತ್ರ ನಿರ್ದೇಶಕ ಕೇಸರಿ ಹರವೂ, ಹಾಸನದ ಕೃಷಿ ಕಾಲೇಜಿನ ಡೀನ್ ಎನ್.ದೇವಕುಮಾರ್, ಹಿರಿಯ ಪತ್ರಕರ್ತ ಗಾಣಧಾಳು ಶ್ರೀಕಂಠ, ಆಯೋಜನೆ–ಕೃಷಿ ಮಾಧ್ಯಮ ಕೇಂದ್ರ, ಬಹುರೂಪಿ ಬುಕ್ ಹಬ್, ಭೂಮಿ ಬುಕ್ಸ್, ಸ್ಥಳ–ಬಹುರೂಪಿ ಬುಕ್ ಹಬ್, ಸಂಜಯನಗರ, ಬೆಳಿಗ್ಗೆ 10

ತೆರೆಮರೆಯ ಸಾಧಕರಿಗೆ ‘ಪ್ರಣಾಮ್’: ಅತಿಥಿಗಳು–ಮೇಘನಾ ಗಿರೀಶ್ ಕುಮಾರ್, ರಜನಿ ಗೋಪಾಲಕೃಷ್ಣ, ಚಕ್ರವರ್ತಿ ಸೂಲಿಬೆಲೆ, ಆಯೋಜನೆ–ಸೋದರಿ ನಿವೇದಿತಾ ಪ್ರತಿಷ್ಠಾನ, ಸ್ಥಳ–ಬಾಪು ವಿದ್ಯಾ ಸಂಸ್ಥೆ, ಯಶವಂತಪುರ, ಬೆಳಿಗ್ಗೆ 10

ಚಂದ್ರಶೇಖರ ಕಂಬಾರ ಅವರ ‘ಎಂದೆಂದಿಗೂ ಶಿವಾಪುರ’ ಕವನ ಸಂಕಲನ ಬಿಡುಗಡೆ: ಎಚ್.ಎಸ್. ರಾಘವೇಂದ್ರರಾವ್, ಸಂವಾದ–ಎಸ್.ಆರ್.ವಿಜಯಶಂಕರ್, ಎಚ್‌ಎಸ್‌ಆರ್, ಆಯೋಜನೆ–ಅಂಕಿತ ಪುಸ್ತಕ, ಬುಕ್ ಬ್ರಹ್ಮ, ಬೆಳಿಗ್ಗೆ 11 (ಆನ್‌ಲೈನ್)

ಮಹಿಳಾ ದಿನದ ಅಂಗವಾಗಿ ಸಾಧಕರಿಗೆ ಪುರಸ್ಕಾರ ಹಾಗೂ ಮಹಿಳಾ ಸಂಕೇತಾ ಲಾಂಛನ ಬಿಡುಗಡೆ: ಅಧ್ಯಕ್ಷತೆ–ಸಮಗ್ರಾಭಿವೃದ್ಧಿ ಸಂಸ್ಥಾಪಕ ಅಧ್ಯಕ್ಷೆ ಸ್ನೇಹಾ ರಾಕೇಶ್, ಆಯೋಜನೆ–ಆಕರ್ ಮ್ಯಾಕ್ಸ್, ಸಮಗ್ರಾಭಿವೃದ್ಧಿ, ಸ್ಥಳ–ಬೆಂಗಳೂರು ಪ್ರೆಸ್ ಕ್ಲಬ್ ಸಭಾಂಗಣ, ಬೆಳಿಗ್ಗೆ 11

‘ಖಾಂಡವ ದಹನ’ ಯಕ್ಷಗಾನ ಪ್ರದರ್ಶನ: ಹಿಮ್ಮೇಳ–ಸುಬ್ರಾಯ ಹೆಬ್ಬಾರ್, ರಾಜೇಶ್ ಆಚಾರ್, ಆದಿತ್ಯ ಕಾಶ್ಯನ್, ಮುಮ್ಮೇಳ–ವಾಸುದೇವ ಹೆಗ್ಗಡೆ, ಅಂಬರೀಷ್ ಭಟ್, ಪ್ರಶಾಂತ್ ವರ್ಧನ್, ನಿಹಾರಿಕಾ, ಆಯೋಜನೆ–ಕನ್ನಡ ಕರಾವಳಿ ವೇದಿಕೆ, ಸ್ಥಳ–ನಗರ ಕೇಂದ್ರ ಗ್ರಂಥಾಲಯ, ಆರ್.ಪಿ.ಸಿ. ಬಡಾವಣೆ, ವಿಜಯನಗರ, ಸಂಜೆ 4.30

ಅಂತರರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ‘ಸ್ತ್ರೀ ಮೌಲ್ಯ ಮಣಿಗಳು’ ವಿಚಾರ ಸಂಕಿರಣ ಹಾಗೂ ಲಯನ್ಸ್ ಮಹಿಳಾ ಸಾಧನ ಪ್ರಶಸ್ತಿ ಪ್ರದಾನ: ಉದ್ಘಾಟನೆ–ಜಿಲ್ಲಾ ಗವರ್ನರ್ ಎಂ.ಬಿ. ದೀಪಕ್ ಸುಮನ್, ಪುರಸ್ಕೃತರು–ಆಶಾ ಬೆನಕಪ್ಪ, ಗೀತಾ ನಟರಾಜ್, ಪೂರ್ವಿಶಾ ಎಸ್.ರಾಮ್, ಪುಟ್ಟೀರಮ್ಮ, ಗೀತಾ ಸಿಂಗ್, ತ್ರಿವೇಣಿ ಚಿಂದೋಡಿ, ಅತಿಥಿ–ಐಪಿಎಸ್ ಅಧಿಕಾರಿ ಇಶಾ ಪಂತ್, ವಂಶೀಧರ್ ಬಾಬು, ಆಯೋಜನೆ–ಲಯನ್ಸ್ ಕ್ಲಬ್ ಇಂಟರ್‌ನ್ಯಾಷನಲ್ 317 ಎಫ್ ಜಿಲ್ಲೆ, ಸ್ಥಳ–ಕೊಂಡಜ್ಜಿ ಬಸಪ್ಪ ಸಭಾಂಗಣ, ಅರಮನೆ ರಸ್ತೆ, ಬೆಳಿಗ್ಗೆ 9.30

ಇಶಾ ಪಂತ್

ಅಂತರರಾಷ್ಟ್ರೀಯ ಮಹಿಳಾ ದಿನ: ಉದ್ಘಾಟನೆ–ಪಾಲಿಕೆ ಆಡಳಿತಾಧಿಕಾರಿ ಗೌರವ್ ಗುಪ್ತ, ಆಯುಕ್ತ ಮಂಜುನಾಥ್ ಪ್ರಸಾದ್, ಆಯೋಜನೆ–ಸ್ವಚ್ಛ ಸರ್ವೇಕ್ಷಣ ಹಾಗೂ ಪಾಲಿಕೆ, ಸ್ಥಳ–ಒರಾಯನ್ ಮಾಲ್, ಯಶವಂತಪುರ, ಮಧ್ಯಾಹ್ನ 3

ಆಲಾಪ್ ಸಂಗೀತ ಸಭಾ: ಸಂಗೀತಾ ಕಾಖಂಡಕಿ, ಮೊಹ್ಸಿನ್ ಖಾನ್ ಹಾಗೂ ಅನಿರುದ್ಧ ಐತಾಳ್ ಅವರಿಂದ ಸಂಗೀತ ಕಾರ್ಯಕ್ರಮ, ಸ್ಥಳ–ಸುಚಿತ್ರ ಸಿನಿಮಾ ಮತ್ತು ಸಾಂಸ್ಕೃತಿಕ ಅಕಾಡೆಮಿ, ಬನಶಂಕರಿ ಎರಡನೇ ಹಂತ, ಸಂಜೆ 4

‘ಒಂದು ದೇಶ ಒಂದು ಚುನಾವಣೆ’ ಕುರಿತು ಚರ್ಚೆ: ವಿಚಾರ ಮಂಡನೆ–ಸಂಸದ ತೇಜಸ್ವಿ ಸೂರ್ಯ, ಆರ್. ಜಗನ್ನಾಥನ್, ಅಶೋಕ ಹಾರನಹಳ್ಳಿ, ಆಯೋಜನೆ–ರಾಜ್ಯ ಬಿಜೆಪಿ ವೃತ್ತಿಪರರ ಪ್ರಕೋಷ್ಠ, ಸ್ಥಳ–ಕೃಷ್ಣದೇವರಾಯ ಕಲಾಮಂದಿರ, ಮಲ್ಲೇಶ್ವರ, ಸಂಜೆ 4

ರಸಸಂಜೆ: ವಿ.ರಶ್ಮಿ ಕಾರ್ತಿಕ್, ಅನುರಾಧಾ ವಿಕ್ರಾಂತ್ ಅವರಿಂದ ಏಕವ್ಯಕ್ತಿ ಭರತನಾಟ್ಯ ಪ್ರದರ್ಶನ, ಅತಿಥಿಗಳು–ಶಾಸಕ ಎಲ್.ಎ.ರವಿ ಸುಬ್ರಹ್ಮಣ್ಯ, ಆಯೋಜನೆ–ವೆಂಕಟೇಶ ನಾಟ್ಯ ಮಂದಿರ, ಸ್ಥಳ–ಎಡಿಎ ರಂಗಮಂದಿರ, ಸಂಜೆ 6

‘ಮೆಗಾ ಡೈಮೆನ್ಷನ್ ಬೆಂಗಳೂರು’ ಚಿತ್ರಕಲಾ ಪ್ರದರ್ಶನ: ಅತಿಥಿಗಳು–ಸುಬ್ರಮಣಿಯನ್ ಗೋಪಾಲ ಸ್ವಾಮಿ, ರಾಮನಾಥನ್ ನಾರಾಯಣ್, ಆಯೋಜನೆ–ಎಂ.ಈಶ್ವರಯ್ಯ ಆರ್ಟ್ ಗ್ಯಾಲರಿ, ಸ್ಥಳ–ವೆಂಕಟಪ್ಪ ಆರ್ಟ್ ಗ್ಯಾಲರಿ, ಕಸ್ತೂರಬಾ ರಸ್ತೆ, ಸಂಜೆ 4

ಮುಂಬೈ ರೇಸ್

‘ಬಾರ್ನ್ ಕ್ವೀನ್’ ಗೆಲ್ಲುವ ನಿರೀಕ್ಷೆ

ವಿಲ್ಲೂ ಪೂನಾವಾಲ ಇಂಡಿಯನ್ ಓಕ್ಸ್ ಭಾನುವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ‘ಬಾರ್ನ್ ಕ್ವೀನ್’ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಹತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ವಿಲಿಯಮ್ ವ್ಯಾಲೇಸ್ 1, ಥಿಯೊಡೋರ 7, ಐರಾ 5
2ನೇ ರೇಸ್: ಫಿನಿಕ್ಸ್ ಸ್ಪಿರಿಟ್ 10, ಸ್ಟಿಕ್ ಟು ದಿ ಪ್ಲಾನ್ 8, ನಾರ್ದರನ್ ಸಿಂಗರ್ 4
3ನೇ ರೇಸ್: ಸ್ಟಾರ್ಮ್ ಬ್ರೇಕರ್ 4, ಗೋಲ್ಡನ್ ಕ್ವೆಸ್ 2, ಹಿಡನ್ ಗೋಲ್ಡ್ 1
4ನೇ ರೇಸ್: ಸಾಕ್ರಟೀಸ್ 2, ಕ್ಯಾಬೊ ಡ ರೊಕ 5, ಮಾರಿಸಿಕಿ 3
5ನೇ ರೇಸ್: ಬೀಮರ್ 3, ಗೋಶ್ವಾಕ್ 1, ಒವ್ ಸಾವೇಜ್ 2
6ನೇ ರೇಸ್: ಲಗಾರ್ಡೆ 3, ನಿಸುಸ್ 5, ಪ್ರೈಸ್‌ಲೆಸ್ ಗೋಲ್ಡ್ 8
7ನೇ ರೇಸ್: ವಿಷನರಿ 11, ಅಲ್ವಾಯಿಜ್ 3, ಅಲೆಕ್ಸಾಂಡರ್ 2
8ನೇ ರೇಸ್: ಬಾರ್ನ್ ಕ್ವೀನ್ 4, ಫಾರೆಸ್ಟ್ ಫ್ಲೇಮ್ 6, ಇಮ್ಮೋರ್ಟಾಲಿಟಿ 7
9ನೇ ರೇಸ್: ಲಿಯೋಪಾರ್ಡ್ ರಾಕ್ 1, ಕಾಸ್ಟ ರಿಕ 11, ಮಾರ್ಕೆಟ್ ಕಿಂಗ್ 2
10ನೇ ರೇಸ್: ಟೈಟಾನಿಯಮ್ 2, ಪೆಪ್ಪೋಲಿ 1, ಅರೇಬಿಯನ್ ಸ್ಟಾರ್ಮ್ 7

ಉತ್ತಮ ಬೆಟ್: ಸಾಕ್ರೆಟಸ್

1ನೇ ಜಾಕ್‌ಪಾಟ್	2ನೇ ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
3,4,5,6,7	6,7,8,9,10	2,3,4	4,5,6	8,9,10

ಚಿತ್ರಾವಳಿ

ಅಗಸ್ತ್ಯ ಪ್ರತಿಷ್ಠಾನ ಹಾಗೂ ಡಚ್ ಬ್ಯಾಂಕ್ ಸಹಯೋಗದಲ್ಲಿ ನಡೆದ ‘ಯಂಗ್ ಇನ್‌ಸ್ಟ್ರಕ್ಟರ್ ಲೀಡರ್’ ಕಾರ್ಯಕ್ರಮದಡಿ ಯಲಹಂಕ ಸರ್ಕಾರಿ ಶಾಲೆಯ 6ನೇ ತರಗತಿ ವಿದ್ಯಾರ್ಥಿಗಳಿಗೆ ಹೋಮ್ ಲ್ಯಾಬ್ ಎಜುಕೇಶನ್ ಕಿಟ್‌ಗಳನ್ನು ಶನಿವಾರ ವಿತರಿಸಲಾಯಿತು. ಅಗಸ್ತ್ಯ ಪ್ರತಿಷ್ಠಾನದ ಪ್ರಾಂತೀಯ ಅಧಿಕಾರಿ ನವೀನ ಕುಮಾರ್, ಶಾಲೆಯ ಮುಖ್ಯೋಪಾಧ್ಯಾಯ ಕರಿತಿಮ್ಮಯ್ಯ, ಶಿಕ್ಷಕರಾದ ರಾಮಾಂಜನೇಯ, ಬಿ.ಮಹೇಶ್ ಇದ್ದಾರೆ.

ವಿವಿಧ್ ಆರ್ಟ್ಸ್ ಎಂಟರ್‌ಟೈನ್‌ಮೆಂಟ್, ದಿ ಪಯೋನೀರ್ ಆರ್ಟ್ಸ್ ಎಜುಕೇಷನ್ ಸೊಸೈಟಿಯು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಸಹಯೋಗದಲ್ಲಿ ಚೌಡಯ್ಯ ಸ್ಮಾರಕ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ ‘ಉತ್ತರ್ ದಕ್ಷಿಣ್’ ಸಂಗೀತ ಜುಗಲ್‌ಬಂದಿ ಸರಣಿಯಲ್ಲಿ ಮ್ಯಾಂಡೋಲಿನ್ ವಾದಕ ಯು.ರಾಜೇಶ್ ಹಾಗೂ ಕೊಳಲು ವಾದಕ ಪಂಡಿತ್ ರೋನು ಮುಜುಂದಾರ್ ಅವರ ಜುಗಲ್‌ಬಂದಿ ನಡೆಯಿತು –ಪ್ರಜಾವಾಣಿ ಚಿತ್ರ

ಅಂತರರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಬಿಜೆಪಿ ಘಟಕದಿಂದ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ (ಕುಳಿತವರು ಎಡದಿಂದ) ಮಾಳವಿಕಾ, ಜಯಶ್ರೀ ಪ್ರಶಾಂತ್, ಮಂಗಮ್ಮ, ವೈ.ಕೆ.ಸಂಧ್ಯಾ ಶರ್ಮ ಅವರನ್ನು ಸನ್ಮಾನಿಸಲಾಯಿತು. ಶಾಸಕ ಉದಯ್ ಬಿ.ಗರುಡಾಚಾರ್, ಸಂಸದ ತೇಜಸ್ವಿ ಸೂರ್ಯ, ವಿಜಯಲಕ್ಷ್ಮೀ, ಮೇದಿನಿ ಗರುಡಾಚಾರ್, ವಿ.ಮಂಜುನಾಥ್ ಇದ್ದಾರೆ –ಪ್ರಜಾವಾಣಿ ಚಿತ್ರ

ರಾಜ್ಯದಲ್ಲಿ ವಕೀಲರ ಮೇಲೆ ಹಲ್ಲೆ ಪ್ರಕರಣಗಳನ್ನು ನಿಯಂತ್ರಿಸಲು ‘ಕರ್ನಾಟಕ ವಕೀಲರ ರಕ್ಷಣಾ ಕಾಯ್ದೆ–2019’ ಅನ್ನು ಜಾರಿಗೆ ತರುವಂತೆ ಆಗ್ರಹಿಸಿ ರಾಜ್ಯ ವಕೀಲರ ಪರಿಷತ್ತಿನ ಪದಾಧಿಕಾರಿಗಳು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಮಂಗಳವಾರ ಮನವಿ ಸಲ್ಲಿಸಿದರು. ಪರಿಷತ್ತಿನ ಅಧ್ಯಕ್ಷ ಎಲ್.ಶ್ರೀನಿವಾಸ ಬಾಬು, ಸದಸ್ಯ ಆರ್.ರಾಜಣ್ಣ ಹಾಗೂ ಪದಾಧಿಕಾರಿಗಳು ಇದ್ದರು.

ಕೋವಿಡ್ ಲಸಿಕೆ ಅಭಿಯಾನ ದೇಶದ ಇತಿಹಾಸದಲ್ಲಿಯೇ ದೊಡ್ಡ ಮೈಲುಗಲ್ಲಾಗಲಿದೆ: ವಿಜ್ಞಾನಿಗಳ ಪ್ರತಿಪಾದನೆ

ಕೋವಿಡ್: ಸಕ್ರಿಯ ಪ್ರಕರಣ ಸಂಖ್ಯೆ ಏರಿಕೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಪ್ರತಿನಿತ್ಯ 500ಕ್ಕೂ ಅಧಿಕ ಪ್ರಕರಣ
- ದಿನಕ್ಕೆ 82 ಸಾವಿರ ಮಂದಿ ಪರೀಕ್ಷೆ
- ಚಿಕಿತ್ಸೆ ಪಡೆಯುತ್ತಿರುವ ಸೋಂಕಿತರು 6,594
- ಬೆಂಗಳೂರು, ಹಾಸನ, ತುಮಕೂರಿನಲ್ಲಿ ಸಾವು

ಬೆಂಗಳೂರು: ರಾಜ್ಯದಲ್ಲಿ ಕಳೆದ ಒಂದು ವಾರದಿಂದ ಪ್ರತಿನಿತ್ಯ 500ಕ್ಕೂ ಅಧಿಕ ಪ್ರಕರಣಗಳು ವರದಿಯಾಗುತ್ತಿರುವ ಪರಿಣಾಮ ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತೆ ಏರುಗತಿ ಪಡೆದಿದೆ. ಸದ್ಯ 6,594 ಸೋಂಕಿತರು ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಶನಿವಾರ 580 ಪ್ರಕರಣಗಳು ದೃಢಪಟ್ಟಿವೆ. ಈ ತಿಂಗಳು ಆರು ದಿನಗಳ ಅವಧಿಯಲ್ಲಿ 3,142 ಮಂದಿ ಕೋವಿಡ್ ಪೀಡಿತರಾಗಿರುವುದು ಖಚಿತಪಟ್ಟಿದೆ. ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 9.53 ಲಕ್ಷ ದಾಟಿದೆ. ಸೋಂಕಿತರಲ್ಲಿ ಬೆಂಗಳೂರಿನಲ್ಲಿ ಮೂವರು ಹಾಗೂ ಹಾಸನ, ತುಮಕೂರಿನಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಸಾವಿಗೀಡಾದವರ ಒಟ್ಟು ಸಂಖ್ಯೆ 12,359ಕ್ಕೆ ತಲುಪಿದೆ. ಕೋವಿಡ್ ಪೀಡಿತರಲ್ಲಿ 355 ಮಂದಿ ಗುಣಮುಖರಾಗಿದ್ದು, ಚೇತರಿಸಿಕೊಂಡವರ ಸಂಖ್ಯೆ 9.35 ಲಕ್ಷ ದಾಟಿದೆ.

ಕೋವಿಡ್ ಪರೀಕ್ಷೆಗಳ ಸಂಖ್ಯೆ ಮತ್ತಷ್ಟು ಹೆಚ್ಚಳವಾಗಿದ್ದು, ಒಂದು ದಿನದ ಅವಧಿಯಲ್ಲಿ 82 ಸಾವಿರ ಪರೀಕ್ಷೆ ನಡೆಸಲಾಗಿದೆ. ಈವರೆಗೆ 1.92 ಕೋಟಿ ಮಂದಿ ಪರೀಕ್ಷೆ ಮಾಡಿಸಿಕೊಂಡಿದ್ದಾರೆ. ಬೆಂಗಳೂರಿನಲ್ಲಿ 367 ಮಂದಿ ಕೋವಿಡ್ ಪೀಡಿತರಾಗಿದ್ದು, ಸೋಂಕಿತರ ಸಂಖ್ಯೆ 4.07 ಲಕ್ಷ ದಾಟಿದೆ. ದಕ್ಷಿಣ ಕನ್ನಡದಲ್ಲಿ 27, ಬೀದರ್‌ನಲ್ಲಿ 20, ಕಲಬುರ್ಗಿಯಲ್ಲಿ 18, ಉತ್ತರ ಕನ್ನಡದಲ್ಲಿ 16, ಉಡುಪಿಯಲ್ಲಿ 14, ತುಮಕೂರಿನಲ್ಲಿ 13 ಪ್ರಕರಣಗಳು ಹೊಸದಾಗಿ ದೃಢಪಟ್ಟಿವೆ.

28 ಸಾವಿರ ಮಂದಿಗೆ ಲಸಿಕೆ: ರಾಜ್ಯದಲ್ಲಿ ಶನಿವಾರ 28,725 ಮಂದಿ ಕೋವಿಡ್ ಲಸಿಕೆ ಪಡೆದುಕೊಂಡಿದ್ದಾರೆ. ಇದರಲ್ಲಿ 16,263 ಮಂದಿ 60 ವರ್ಷ ಮೇಲ್ಪಟ್ಟವರಾಗಿದ್ದಾರೆ. ಆರೋಗ್ಯ ಕಾರ್ಯಕರ್ತರಲ್ಲಿ 6,874 ಮಂದಿ ಎರಡನೇ ಡೋಸ್ ಲಸಿಕೆ ಹಾಕಿಸಿಕೊಂಡಿದ್ದಾರೆ. ಈವರೆಗೆ ಎರಡು ಡೋಸ್ ಪೂರ್ಣಗೊಳಿಸಿದ ಆರೋಗ್ಯ ಕಾರ್ಯಕರ್ತರ ಸಂಖ್ಯೆ 2,33,238ಕ್ಕೆ ತಲುಪಿದೆ.

ನಿಗದಿಪಡಿಸಲಾದ ಫಲಾನುಭವಿಗಳಲ್ಲಿ 4,61,157 ಮಂದಿ ಆರೋಗ್ಯ ಕಾರ್ಯಕರ್ತರು, 2,33,238 ಮಂದಿ ಮುಂಚೂಣಿ ಯೋಧರು, 67,810 ಮಂದಿ 60 ವರ್ಷ ಮೇಲ್ಪಟ್ಟವರು ಹಾಗೂ ವಿವಿಧ ಕಾಯಿಲೆಗಳನ್ನು ಎದುರಿಸುತ್ತಿರುವ 10,722 ಮಂದಿ ಮೊದಲ ಡೋಸ್ ಲಸಿಕೆ ಪಡೆದುಕೊಂಡಿದ್ದಾರೆ.

ಕೇಂದ್ರ ಸಚಿವ ಡಿ.ವಿ. ಸದಾನಂದಗೌಡ ಅವರು ಮಲ್ಲೇಶ್ವರದ ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಶನಿವಾರ ಕೋವಿಡ್ ಲಸಿಕೆ ಪಡೆದರು –ಪ್ರಜಾವಾಣಿ ಚಿತ್ರ

ಇಸ್ರೊ ಅಧ್ಯಕ್ಷ ಕೆ. ಶಿವನ್ ಅವರು ಕೋವಿಡ್ ಲಸಿಕೆ ಪಡೆದುಕೊಂಡರು.

ವಾರದ ಎಲ್ಲ ದಿನ ಲಸಿಕೆ ವಿತರಣೆ

ಹೆಚ್ಚಿನ ಸಂಖ್ಯೆಯಲ್ಲಿ ಲಸಿಕೆ ವಿತರಿಸುವ ಸಂಬಂಧ ಸೋಮವಾರದಿಂದ ರಾಜ್ಯದ ಎಲ್ಲ ತಾಲ್ಲೂಕು ಆಸ್ಪತ್ರೆಗಳು, ಜಿಲ್ಲಾ ಆಸ್ಪತ್ರೆಗಳು, ಸರ್ಕಾರಿ ಹಾಗೂ ಖಾಸಗಿ ವೈದ್ಯಕೀಯ ಕಾಲೇಜುಗಳು ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ವಾರದ ಎಲ್ಲ ದಿನಗಳು ಲಸಿಕೆ ವಿತರಣೆ ನಡೆಯಲಿದೆ.

ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಸೋಮವಾರ, ಬುಧವಾರ, ಶುಕ್ರವಾರ ಮತ್ತು ಶನಿವಾರ ಲಸಿಕೆ ವಿತರಿಸಲಾಗುತ್ತದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಮಾ.8ರಂದು ಮಹಿಳಾ ದಿನಾಚರಣೆಯ ಪ್ರಯುಕ್ತ ಬೆಂಗಳೂರಿನ ಸಿ.ವಿ. ರಾಮನ್ ಆಸ್ಪತ್ರೆ ಹಾಗೂ ಎಲ್ಲ ಜಿಲ್ಲಾ ಆಸ್ಪತ್ರೆಗಳಲ್ಲಿ ಒಂದೊಂದು ಪಿಂಕ್ ಬೂತ್‌ಗಳನ್ನು ನಿರ್ಮಿಸಲಾಗುತ್ತದೆ.

ಅಲ್ಲಿ ಮಹಿಳಾ ಸಿಬ್ಬಂದಿಗಳು ಕಾರ್ಯನಿರ್ವಹಿಸಲಿದ್ದು, ಮಹಿಳಾ ಫಲಾನುಭವಿಗಳಿಗೆ ಮಾತ್ರ ಲಸಿಕೆ ನೀಡಲಾಗುತ್ತದೆ ಎಂದು ಪ್ರಕಟಣೆಯಲ್ಲಿ ಹೇಳಲಾಗಿದೆ.

ಲಸಿಕೆ ಪಡೆದ ವಿಜ್ಞಾನಿಗಳು

ಬೆಂಗಳೂರು: ಕೆ. ಶಿವನ್, ಎ.ಎಸ್. ಕಿರಣ್ ಕುಮಾರ್, ಕೆ. ರಾಧಾಕೃಷ್ಣನ್, ಉಮಾಮಹೇಶ್ವರನ್ ಆರ್. ಸೇರಿದಂತೆ ಹಲವು ವಿಜ್ಞಾನಿಗಳು ನಗರದ ಆಸ್ಟರ್ ಸಿಎಂಐ ಆಸ್ಪತ್ರೆಯಲ್ಲಿ ಕೋವಿಡ್ ಲಸಿಕೆಯನ್ನು ಶನಿವಾರ ಪಡೆದುಕೊಂಡರು.

'ವಿಶ್ವದಲ್ಲಿಯೇ ಅತೀ ದೊಡ್ಡ ಲಸಿಕೆ ವಿತರಣೆ ಅಭಿಯಾನವು ನಮ್ಮ ದೇಶದಲ್ಲಿ ನಡೆಯುತ್ತಿದೆ. ಕೋವಿಡ್ ಬರದಂತೆ ತಡೆಯಲು ಈ ಲಸಿಕೆ ಸಹಕಾರಿ. ಅತ್ಯಂತ ಸುರಕ್ಷಿತ ಎನ್ನುವುದು ಕೂಡ ಪ್ರಮಾಣೀಕೃತವಾಗಿದೆ. ಹಾಗಾಗಿ, ಎಲ್ಲರೂ ಲಸಿಕೆ ಪಡೆದುಕೊಳ್ಳಬೇಕು. ಲಸಿಕೆ ಪಡೆದ ಬಳಿಕ ನನಗೆ ಯಾವುದೇ ರೀತಿಯ ಅಡ್ಡ ಪರಿಣಾಮಗಳು ಕಾಣಿಸಿಕೊಂಡಿಲ್ಲ' ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಅಧ್ಯಕ್ಷ ಕೆ. ಶಿವನ್ ತಿಳಿಸಿದರು.

ಇಸ್ರೊ ಮಾಜಿ ಅಧ್ಯಕ್ಷ ಡಾ.ಕೆ. ರಾಧಾಕೃಷ್ಣನ್, 'ಕೋವಿಡ್‌ನಂತಹ ಸಾಂಕ್ರಾಮಿಕ ಕಾಯಿಲೆ ಎದುರಿಸಲು ಸಾಮೂಹಿಕ ಪ್ರಯತ್ನ ಅಗತ್ಯ' ಎಂದರು.

ವಿಜ್ಞಾನಿ ಡಾ. ಉಮಾಮಹೇಶ್ವರನ್ ಆರ್., 'ಕೋವಿಡ್ ಪ್ರಕರಣಗಳ ಸಂಖ್ಯೆ ತಗ್ಗಿಸಲು ಎಲ್ಲರೂ ಲಸಿಕೆ ಪಡೆದುಕೊಳ್ಳಬೇಕು. ಈ ಅಭಿಯಾನವು ಭಾರತದ ಇತಿಹಾಸದಲ್ಲಿಯೇ ಒಂದು ಮೈಲುಗಲ್ಲು ಆಗಲಿದೆ' ಎಂದರು.

ಗಡಿಭಾಗದಲ್ಲಿ ನಡೆಯುತ್ತಿದೆ ಕಾಟಾಚಾರದ ತಪಾಸಣೆ!

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಮಹಾರಾಷ್ಟ್ರದ ಗಡಿಗೆ ಹೊಂದಿಕೊಂಡಿರುವ ಬೆಳಗಾವಿ, ವಿಜಯಪುರ ಜಿಲ್ಲೆಗಳ ಚೆಕ್‌ಪೋಸ್ಟ್‌ನಲ್ಲಿ ಕೋವಿಡ್–19 ತಪಾಸಣೆ ಕಾರ್ಯ ಕಾಟಾಚಾರಕ್ಕೆ ಎನ್ನುವಂತೆ ನಡೆಯುತ್ತಿರುವುದು ಕಂಡುಬಂದಿದೆ.

ಆ ರಾಜ್ಯದಲ್ಲಿ ಇತ್ತೀಚೆಗೆ ಕೋವಿಡ್ 19 ಪ್ರಕರಣಗಳು ಮತ್ತೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಬೆಳಗಾವಿ ಜಿಲ್ಲೆಯ ಕೊಗನೊಳ್ಳಿ, ಕಾಗವಾಡ, ಅಥಣಿ, ಸದಲಗಾ, ವಿಜಯಪುರ ಜಿಲ್ಲೆಯ ಧೂಳಖೇಡ ಮತ್ತು ಶಿರಡೋಣ ಚೆಕ್ ಪೋಸ್ಟ್ ತೆರೆಯಲಾಗಿದೆ. ಇಲ್ಲೆಲ್ಲ ಕಡೆ ಕಟ್ಟುನಿಟ್ಟಾಗಿ ತಪಾಸಣೆ ಕೈಗೊಳ್ಳುತ್ತಿಲ್ಲ.

ಚೆಕ್‌ಪೋಸ್ಟ್‌ಗಳಲ್ಲಿ ಥರ್ಮಲ್ ಸ್ಕ್ರೀನಿಂಗ್‌ನ ವ್ಯವಸ್ಥೆ ಮಾಡಲಾಗಿದೆ. ಅಲ್ಲಿ, ಆ ರಾಜ್ಯದ ನೋಂದಣಿಯ ಕಾರುಗಳಲ್ಲಿ ಬರುವವರಿಂದ ಮಾತ್ರ 72 ಗಂಟೆಗಳ ಒಳಗಾಗಿ ಪಡೆದ 'ನೆಗೆಟಿವ್ ಆರ್‌ಟಿಪಿಸಿಆರ್ ಕೋವಿಡ್ ತಪಾಸಣಾ ಪ್ರಮಾಣಪತ್ರ' ಹೊಂದಿರುವುದನ್ನು ಪರಿಶೀಲಿಸಲಾಗುತ್ತಿದೆ. ದ್ವಿಚಕ್ರವಾಹನಗಳು, ಲಾರಿಗಳು, ಬಸ್‌ಗಳು ಮೊದಲಾದ ವಾಹನಗಳಲ್ಲಿ ಬರುವವರಿಂದ 'ಆ' ಪ್ರಮಾಣಪತ್ರವನ್ನೂ ಕೇಳುತ್ತಿಲ್ಲ ಮತ್ತು ಪ್ರವೇಶಕ್ಕೆ ನಿರ್ಬಂಧವನ್ನೂ ವಿಧಿಸಲಾಗುತ್ತಿಲ್ಲ.

'ತಪಾಸಣೆ ಕಾರ್ಯ ಕಟ್ಟುನಿಟ್ಟಾಗಿ ನಡೆಯುತ್ತಿಲ್ಲ. ಅಲ್ಲಿಂದ ಕಣ್ತಪ್ಪಿಸಿ ಬರುವವರ ಸಂಖ್ಯೆಯೂ ಕಡಿಮೆ ಏನಿಲ್ಲ' ಎನ್ನುತ್ತಾರೆ ಗಡಿಯಲ್ಲಿರುವ ಸ್ಥಳೀಯರು.

'ಕೋವಿಡ್ ನೆಗೆಟಿವ್ ವರದಿ ಕಡ್ಡಾಯದ ಬಗ್ಗೆ ಅಲ್ಲಿಂದ ಬರುವ ಪ್ರಯಾಣಿಕರಿಗೆ ತಿಳಿಸುತ್ತಿದ್ದೇವೆ. ಆದ್ಯಾಗ್ಯೂ ಬಂದವರಿಗೆ (ಟೆಸ್ಟ್ ಕಾಯ್ದಿರಿಸದೆ) ಪರೀಕ್ಷೆ ಮಾಡಿಸಿಕೊಳ್ಳುವಂತೆ ಸೂಚಿಸಲಾಗುತ್ತಿದೆ. ಫಾಲೋಅಪ್ ಮಾಡುವುದು ಪೊಲೀಸರ ಕೆಲಸವಾಗಿದೆ. ಗಡಿಯಲ್ಲಿ ಚೆಕ್‌ಪೋಸ್ಟ್‌ಗಳು ಚಾಲ್ತಿಯಲ್ಲಿವೆ. ಯಾರನ್ನೂ ವಾಪಸ್ ಕಳುಹಿಸುತ್ತಿಲ್ಲ. ಪರೀಕ್ಷೆಗೆ ಒಳಗಾಗುವಂತೆ ಸೂಚಿಸಿ, ನಿಗಾ ವಹಿಸಲಾಗುತ್ತಿದೆ. ಜಿಲ್ಲೆಯಲ್ಲಿ ನಿತ್ಯ ಸರಾಸರಿ 2ಸಾವಿರ ಮಂದಿಯನ್ನು ಪರೀಕ್ಷೆಗೆ ಒಳಪಡಿಸಲಾಗುತ್ತಿದೆ' ಎಂದು ಬೆಳಗಾವಿ ಡಿಎಚ್‌ಒ ಡಾ.ಎಸ್.ವಿ. ಮುನ್ಯಾಳ ತಿಳಿಸಿದರು.

ನಿಪ್ಪಾಣಿ ತಾಲ್ಲೂಕಿನ ಕೊಗನೋಳಿ ಚೆಕ್‌ಪೋಸ್ಟ್‌ನಲ್ಲಿ ಮಹಾರಾಷ್ಟ್ರದ ಕಾರುಗಳಲ್ಲಿ ಬರುವವರಿಂದ ಪೊಲೀಸರು ಮಾಹಿತಿ ಪಡೆಯುತ್ತಿರುವುದು

ನಗರದ ಕೋವಿಡ್ ಪ್ರಕರಣಗಳ ಅಂಕಿ–ಅಂಶ

4,07,636 ಒಟ್ಟು ಸೋಂಕಿತರು

3,98,365 ಗುಣಮುಖರಾದವರು

4,774 ಸಕ್ರಿಯ ಪ್ರಕರಣ

4,496 ಸಾವು

ಶನಿವಾರದ ಏರಿಕೆ

367 ದೃಢಪಟ್ಟ ಪ್ರಕರಣ

182 ಗುಣಮುಖ

3 ಸಾವು

‘ಅರಿವಿಲ್ಲದೇ ಮಾತನಾಡುವ ರಾಜಕಾರಣಿ ರಾಹುಲ್’

ಪ್ರಜಾವಾಣಿ ವಾರ್ತೆ

ಸುರೇಶ್ ಕುಮಾರ್

ಸುಬ್ರಹ್ಮಣ್ಯ: ‘ತಾನು ಏನು ಮಾತನಾಡುತ್ತಿದ್ದೇನೆ ಎನ್ನುವ ಅರಿವಿಲ್ಲದೇ ಮಾತನಾಡುವ ದೇಶದ ಏಕೈಕ ರಾಜಕಾರಣಿ ರಾಹುಲ್ ಗಾಂಧಿ’ ಎಂದು ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಟೀಕಿಸಿದರು.

ಕುಕ್ಕೆ ಸುಬ್ರಹ್ಮಣ್ಯಕ್ಕೆ ಶನಿವಾರ ಭೇಟಿ ನೀಡಿದ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ‘ಆರ್‌ಎಸ್‌ಎಸ್ ನೇತೃತ್ವದ ಶಾಲೆಗಳು ಪಾಕಿಸ್ತಾನದ ಮದರಸಾಗಳಿಗೆ ಸಮ ಎಂಬ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿಕೆ ಗಂಭೀರವಾಗಿ ಪರಿಗಣಿಸಬೇಕಿಲ್ಲ. ಆರ್‌ಎಸ್‌ಎಸ್ ಅರಿಯಲು ಅದರ ಒಳಗನ್ನು ತಿಳಿಯಬೇಕು’ ಎಂದರು.

‘ಆರ್ಥಿಕ ಹೊರೆ ತಗ್ಗಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ‘ಒಂದು ದೇಶ ಒಂದು ಚುನಾವಣೆ’ ಅನುಷ್ಠಾನಕ್ಕೆ ಮುಂದಾಗಿದೆ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಇದರಲ್ಲೂ ಆರ್‌ಎಸ್‌ಎಸ್ ಕೈವಾಡ ಹುಡುಕುತ್ತಿದ್ದಾರೆ’ ಎಂದು ಟೀಕಿಸಿದರು.

ಮರಳಿ ಕಾಲೇಜಿಗೆ: ಲಾಕ್‌ಡೌನ್ ಸಂದರ್ಭದಲ್ಲಿ ಕಾಲೇಜು ಇಲ್ಲದ್ದರಿಂದ ಪ್ರಥಮ, ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಸಂಖ್ಯೆ ಕುಸಿತವಾಗಿದೆ. ಕೆಲವರು ಕೆಲಸಕ್ಕೆ ಸೇರಿದರೆ, ಇನ್ನು ಕೆಲವರು ವಿವಾಹವಾಗಿ ಶಿಕ್ಷಣ ಅರ್ಧಕ್ಕೆ ಮೊಟಕುಗೊಳಿಸಿದ್ದಾರೆ. ಇವರನ್ನು ಮತ್ತೆ ಕಾಲೇಜಿಗೆ ತರುವ ಪ್ರಯತ್ನ ನಡೆಯುತ್ತಿದೆ. 1ರಿಂದ 6ನೇ ತರಗತಿಗೆ ಶಾಲೆ ಪ್ರಾರಂಭಿಸಲು ಶಿಕ್ಷಣ ಇಲಾಖೆ ತಜ್ಞರ ಸಲಹೆ ಪಡೆದು ನಿರ್ಧರಿಸಲಾಗುವುದು ಎಂದು ತಿಳಿಸಿದರು.

ಸೋಂಕು ತಡೆಗೆ ಬಿಬಿಎಂಪಿ ಕಟ್ಟೆಚ್ಚರ: ಆಯುಕ್ತ ಎನ್. ಮಂಜುನಾಥ ಪ್ರಸಾದ್

ಹೊರ ವಲಯಗಳಲ್ಲೇ ಹೆಚ್ಚು ಕೋವಿಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೋವಿಡ್ ಪ್ರಕರಣಗಳು ಮತ್ತೆ ಹೆಚ್ಚುತ್ತಿರುವುದು ಬಿಬಿಎಂಪಿಗೆ ತಲೆನೋವು ತಂದಿದೆ. ಸೋಂಕು ಹರಡುವಿಕೆ ತಡೆಯಲು ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಕುರಿತು ಚರ್ಚಿಸಲು ಬಿಬಿಎಂಪಿ ಆಯುಕ್ತ ಎನ್.ಮಂಜುನಾಥ ಪ್ರಸಾದ್ ಶನಿವಾರ ತುರ್ತು ಸಭೆ ನಡೆಸಿದರು.

ನಗರದ ಕೆ.ಆರ್. ಪುರ ವಿಧಾನಸಭೆ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಬಿ. ನಾರಾಯಣಪುರ ಸರ್ಕಾರಿ ಪ್ರೌಢ ಶಾಲೆಯಲ್ಲಿ 7 ವಿದ್ಯಾರ್ಥಿಗಳು ಹಾಗೂ ಇಬ್ಬರು ಶಿಕ್ಷಕರು ಕೋವಿಡ್ ಪೀಡಿತರಾಗಿದ್ದರಿಂದ ಈ ಶಾಲೆಯನ್ನು ಏಳು ದಿನ ಸೀಲ್ ಡೌನ್ ಮಾಡಲಾಗಿದೆ. ವಸಂತಪುರ ವಾರ್ಡ್‌ನ ಚಿಕ್ಕಲ್ಲಸಂದ್ರದಲ್ಲಿ ನಾಲ್ವರು ಕೋವಿಡ್ ಹೊಂದಿರುವುದು ಶುಕ್ರವಾರ ಪತ್ತೆಯಾಗಿತ್ತು. ಕೋವಿಡ್ ಲಸಿಕೆ ನೀಡುತ್ತಿರುವುದರ ನಡುವೆಯ ಮತ್ತೆ ಕೋವಿಡ್ ನಿಯಂತ್ರಣದ ಬಗ್ಗೆಯೂ ನಿಗಾ ಇಡಬೇಕಾದ ಅನಿವಾರ್ಯ ಸ್ಥಿತಿಯನ್ನು ಬಿಬಿಎಂಪಿ ಅಧಿಕಾರಿಗಳು ಎದುರಿಸುತ್ತಿದ್ದಾರೆ.

ಮಂಜುನಾಥ ಪ್ರಸಾದ್

ಪರಿಸ್ಥಿತಿ ಕೈಮೀರದಂತೆ ತಡೆಯುವ ಸಲುವಾಗಿ ಏನೆಲ್ಲ ಕ್ರಮ ಕೈಗೊಳ್ಳಬೇಕು ಎಂಬ ಬಗ್ಗೆ ಮಂಜುನಾಥ ಪ್ರಸಾದ್ ಅವರು ಪಾಲಿಕೆಯ ಎಲ್ಲಾ ಜಂಟಿ ಆಯುಕ್ತರು, ಆರೋಗ್ಯಾಧಿಕಾರಿಗಳು ಮತ್ತು ವೈದ್ಯಾಧಿಕಾರಿಗಳ ಜತೆ ಆನ್‌ಲೈನ್ ಸಭೆಯಲ್ಲಿ ಚರ್ಚಿಸಿದರು.

‘ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್ ಪ್ರಕರಣಗಳು ಕ್ರಮೇಣ ಹೆಚ್ಚಳವಾಗುತ್ತಿದ್ದು, ಪ್ರಮುಖವಾಗಿ ಹೊರ ವಲಯಗಳಲ್ಲಿ ಹೆಚ್ಚು ಪ್ರಕರಣಗಳು ಕಂಡುಬರುತ್ತಿವೆ. ಸೋಂಕು ಉಲ್ಬಣವಾಗದಂತೆ ತ್ವರಿತಗತಿಯಲ್ಲಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು’ ಎಂದು ಸೂಚಿಸಿದರು.

‘ನಗರದಲ್ಲಿ ಶುಕ್ರವಾರ 38 ಸಾವಿರ ಜನರ ಕೋವಿಡ್ ಪರೀಕ್ಷೆ ಮಾಡಲಾಗಿದೆ. ಯಾವ ಭಾಗದಲ್ಲಿ ಹೆಚ್ಚು ಪ್ರಕರಣಗಳು ಕಂಡು ಬರುತ್ತವೆಯೋ ಅಲ್ಲಿ ಹೆಚ್ಚು ಪರೀಕ್ಷೆಗಳನ್ನು ಮಾಡಬೇಕು. ಆ ಮೂಲಕ ಕೋವಿಡ್ ಹರಡುವುದನ್ನು ತಡೆಯಬೇಕು’ ಎಂದರು.

ಸೋಂಕು ಹರಡುವಿಕೆಯನ್ನು ಪರಿಣಾಮಕಾರಿಯಾಗಿ ತಡೆಯಬೇಕಾದರೆ ಹೆಚ್ಚು ಪರೀಕ್ಷೆಗಳನ್ನು ಮಾಡಬೇಕು. ಸೋಂಕಿತರ ನೇರ ಹಾಗೂ ಪರೋಕ್ಷ ಸಂಪರ್ಕಕ್ಕೆ ಬಂದವರನ್ನು ಪತ್ತೆ ಕಾರ್ಯವನ್ನು ಸರಿಯಾಗಿ ಮಾಡಬೇಕು. ಅದಕ್ಕಾಗಿ ಪಾಲಿಕೆಯ ಕಂದಾಯ, ಎಂಜಿನಿಯರ್ ಹಾಗೂ ಇತರ ವಿಭಾಗಗಳ ಅಧಿಕಾರಿಗಳನ್ನು ಬಳಸಿಕೊಳ್ಳಬೇಕು ಎಂದು ಸೂಚನೆ ನೀಡಿದರು.

ಕೋವಿಡ್ ಸೋಂಕು ಪತ್ತೆಯಾದ ಬಳಿಕ ಅಲ್ಲಿ ಪಾಲಿಕೆಯ ಕಣ್ಗಾವಲು ತಂಡ ಸರಿಯಾಗಿ ಕೆಲಸ ಮಾಡಬೇಕು. ಜನಸಂದಣಿ ಪ್ರದೇಶಗಳಲ್ಲಿ ಕಡ್ಡಾಯವಾಗಿ ಕೋವಿಡ್ ನಿಯಮ ಪಾಲನೆ ಆಗುವಂತೆ ನೋಡಿಕೊಳ್ಳಬೇಕು. ಎಲ್ಲಾ ವಲಯಗಳಲ್ಲಿಯೂ ಕಳೆದೆರಡು ತಿಂಗಳ ಕೋವಿಡ್ ವರದಿ ಪರಿಶೀಲಿಸಿ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಬೇಕು ಎಂದು ಸಲಹೆ ನೀಡಿದರು.

ಡ್ರಗ್ಸ್ ಪ್ರಕರಣ: ಮಸ್ತಾನ್ ರಕ್ತ, ಮೂತ್ರ ಪರೀಕ್ಷೆ

ಬೆಂಗಳೂರು: ಡ್ರಗ್ಸ್ ಪ್ರಕರಣದಲ್ಲಿ ಭಾಗಿಯಾಗಿದ್ದ ಆರೋಪದಡಿ ವಶಕ್ಕೆ ಪಡೆಯಲಾಗಿದ್ದ ಬಿಗ್‌ಬಾಸ್ ರಿಯಾಲಿಟಿ ಶೋ ಸ್ಪರ್ಧಿ ಮಸ್ತಾನ್ ಚಂದ್ರ ಅವರನ್ನು ರಕ್ತ ಹಾಗೂ ಮೂತ್ರ ಪರೀಕ್ಷೆಗೆ ಒಳಪಡಿಸಲಾಗಿದೆ.

ಡ್ರಗ್ಸ್ ಮಾರಾಟ ಆರೋಪದಡಿ ನೈಜೀರಿಯಾ ಪ್ರಜೆಗಳನ್ನು ಬಂಧಿಸಿದ್ದ ಪೂರ್ವ ವಿಭಾಗದ ಪೊಲೀಸರು, ₹ 4 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದರು. ಆರೋಪಿಗಳು ನೀಡಿದ್ದ ಮಾಹಿತಿ ಆಧರಿಸಿ ಮಸ್ತಾನ್ ಮನೆ ಮೇಲೆ ಶುಕ್ರವಾರ ದಾಳಿ ಮಾಡಿದ್ದರು.

ಮಸ್ತಾನ್ ಅವರನ್ನು ವಶಕ್ಕೆ ಪಡೆದು ಠಾಣೆಗೆ ಕರೆತಂದು ವಿಚಾರಣೆ ನಡೆಸಿದ್ದರು. ಶನಿವಾರ ಅವರನ್ನು ಆಸ್ಪತ್ರೆಗೆ ಕರೆದೊಯ್ದಿದ್ದ ಪೊಲೀಸರು, ವೈದ್ಯರ ಮೂಲಕ ರಕ್ತ ಹಾಗೂ ಮೂತ್ರ ಸಂಗ್ರಹಿಸಿದರು.

‘ಮಸ್ತಾನ್ ಅವರು ಡ್ರಗ್ಸ್ ಸೇವನೆ ಮಾಡುತ್ತಿದ್ದ ಮಾಹಿತಿ ಇದೆ. ವೈದ್ಯಕೀಯ ಪರೀಕ್ಷೆ ನಡೆಸಿ ಅವರನ್ನು ಠಾಣೆಯಿಂದ ಕಳುಹಿಸಲಾಗಿದೆ. ಪುನಃ ವಿಚಾರಣೆಗೆ ಬರುವಂತೆ ಹೇಳಲಾಗಿದೆ. ವೈದ್ಯಕೀಯ ಪರೀಕ್ಷೆ ವರದಿ ಬಂದ ನಂತರ ಮುಂದಿ ಕ್ರಮ ಕೈಗೊಳ್ಳಲಾಗುವುದು’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಮಂತ್ರಾಲಯ: 14 ರಿಂದ ಗುರು ವೈಭವೋತ್ಸವ



ಪ್ರಜಾವಾಣಿ ವಾರ್ತೆ

ರಾಯಚೂರು: ಮಂತ್ರಾಲಯದಲ್ಲಿ ಶ್ರೀಗುರು ರಾಘವೇಂದ್ರ ಸ್ವಾಮೀಜಿ ಅವರ 426ನೇ ವರ್ಧಂತಿ ಉತ್ಸವ ಹಾಗೂ 400ನೇ ಪಟ್ಟಾಭಿಷೇಕ ಮಹೋತ್ಸವ ನಿಮಿತ್ತ ಮಾರ್ಚ್ 14 ರಿಂದ 20ರವರೆಗೆ ‘ಗುರು ವೈಭವೋತ್ಸವ’ ಕಾರ್ಯಕ್ರಮ ನಡೆಯಲಿದೆ.

ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥರ ನೇತೃತ್ವದಲ್ಲಿ ಒಂದು ವಾರ ‘ಸಪ್ತರಾತ್ರೋತ್ಸವ’ ಹೆಸರಿನಲ್ಲಿ ವಿಶೇಷ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮ ಜರುಗಲಿವೆ. ಮಂತ್ರಾಲಯ ಪ್ರವೇಶ ದ್ವಾರದ ಬಳಿ ಸ್ಥಾಪಿಸಿರುವ 32 ಅಡಿ ಎತ್ತರದ ಶಿಲಾ ಆಂಜನೇಯ ಮೂರ್ತಿ ಉದ್ಘಾಟನೆ 14 ರಂದು ನೆರವೇರಲಿದೆ.

15ರಂದು ಪಟ್ಟಾಭಿಷೇಕ ಹಾಗೂ 20ರಂದು ವರ್ಧಂತಿ ಉತ್ಸವ ನಡೆಯಲಿದ್ದು, ಚೆನ್ನೈನ 450 ಕಲಾವಿದರು ಏಕಕಾಲದಲ್ಲಿ ವಾದ್ಯಗಳನ್ನು ನುಡಿಸುತ್ತಾ ರಾಯರಿಗೆ ‘ನಾದಹಾರ ಸೇವೆ’ ಸಮರ್ಪಿಸಲಿದ್ದಾರೆ.

ಆಳ್ವಗೆ ವಿಶ್ವಪ್ರತಿಭಾ ಪುರಸ್ಕಾರ

ಮೋಹನ್ ಆಳ್ವ

ಉಡುಪಿ: ಸಂಸ್ಕೃತಿ ವಿಶ್ವ ಪ್ರತಿಷ್ಠಾನದಿಂದ ಕೊಡಮಾಡುವ ‘ವಿಶ್ವಪ್ರತಿಭಾ ಪುರಸ್ಕಾರ’ ಪ್ರಶಸ್ತಿಯನ್ನು ಮೂಡಬಿದಿರೆಯ ಆಳ್ವಾಸ್ ಪ್ರತಿಷ್ಠಾನದ ಮುಖ್ಯಸ್ಥ ಡಾ.ಮೋಹನ್ ಆಳ್ವ ಅವರಿಗೆ ನೀಡಲಾಗುವುದು ಎಂದು ಸಂಸ್ಥೆಯ ಉಪಾಧ್ಯಕ್ಷ ಮರವಂತೆ ನಾಗರಾಜ್ ಹೆಬ್ಬಾರ್ ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕನ್ನಡ ನಾಡು, ನುಡಿ ಹಾಗೂ ಸಂಸ್ಕೃತಿಗೆ ನೀಡಿದ ಕೊಡುಗೆಯನ್ನು ಪರಿಗಣಿಸಿ ಮೋಹನ್ ಆಳ್ವ ಅವರನ್ನ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಪ್ರಶಸ್ತಿಯು ₹ 1 ಲಕ್ಷ ನಗದು ಹಾಗೂ ಫಲಕ ಒಳಗೊಂಡಿರಲಿದೆ. ಏ. 3 ಹಾಗೂ 4 ರಂದು ಉಡುಪಿಯಲ್ಲಿ ನಡೆಯುವ ಪ್ರತಿಷ್ಠಾನದ ಉತ್ಸವದಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ ಎಂದರು.

ಸಂಸ್ಕೃತಿ ವಿಶ್ವ ಪ್ರತಿಷ್ಠಾನದ ಸಂಸ್ಥೆಯ ಸ್ಥಾಪಕರು ಹಾಗೂ ಗೌರವಾಧ್ಯಕ್ಷರಾದ ವಿಶ್ವನಾಥ್ ಶೆಣೈ ಅವರು ಪತ್ನಿಯ ಹೆಸರಿನಲ್ಲಿ ‘ವಿಶ್ವಪ್ರಭಾ ಪುರಸ್ಕಾರ’ ನೀಡುತ್ತಿದ್ದಾರೆ ಎಂದರು.

ಬೈಕ್‌ಗೆ ಗುದ್ದಿದ ಆಡಿ ಕಾರು; ವ್ಯವಸ್ಥಾಪಕ ಪೊಲೀಸ್ ವಶಕ್ಕೆ

ಬೆಂಗಳೂರು: ಕಾವೇರಿ ಚಿತ್ರಮಂದಿರ ಜಂಕ್ಷನ್ ಕೆಳಸೇತುವೆಯಲ್ಲಿ ಆಡಿ ಕಾರು ಬೈಕ್‌ಗೆ ಗುದ್ದಿದ್ದು, ಸವಾರ ಶಿವಕುಮಾರ್ (34) ಗಾಯಗೊಂಡಿದ್ದಾರೆ. ಅಪಘಾತಕ್ಕೆ ಕಾರಣ ಎನ್ನಲಾದ ಕಾರು ಮಾಲೀಕ ಅಕ್ಷಯ್ ಅವರನ್ನು ಹೈಗ್ರೌಂಡ್ಸ್ ಸಂಚಾರ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

‘ಶುಕ್ರವಾರ ತಡರಾತ್ರಿ ಈ ಅಪಘಾತ ಸಂಭವಿಸಿದೆ. ಗಾಯಾಳು ಶಿವಕುಮಾರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಸಾಫ್ಟ್‌ವೇರ್ ಕಂಪನಿಯೊಂದರ ವ್ಯವಸ್ಥಾಪಕರಾಗಿರುವ ದೆಹಲಿಯ ಅಕ್ಷಯ್ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

‘ಸ್ನೇಹಿತ ಆದಿತ್ಯ ಅರೋರಾ ಎಂಬುವವರಿಗೆ ಸೇರಿದ್ದ ಕಾರು ಚಲಾಯಿಸಿಕೊಂಡು ಅಕ್ಷಯ್ ಹೊರಟಿದ್ದರು. ಕೆಳಸೇತುವೆಯಲ್ಲಿ ಬೈಕ್‌ಗೆ ಗುದ್ದಿಸಿದ್ದರು. ಬೈಕ್ ಜಖಂಗೊಂಡಿತ್ತು. ಗಾಯಗೊಂಡ ಶಿವಕುಮಾರ್ ಸ್ಥಳದಲ್ಲೇ ಬಿದ್ದು ನರಳಾಡುತ್ತಿದ್ದರು. ಸ್ಥಳೀಯರೇ ಅವರನ್ನು ಆಸ್ಪತ್ರೆಗೆ ಸೇರಿಸಿದ್ದರು. ಅಕ್ಷಯ್ ಮದ್ಯ ಕುಡಿದು ಚಾಲನೆ ಮಾಡಿರುವ ಸಾಧ್ಯತೆ ಇದೆ. ವೈದ್ಯಕೀಯ ಪರೀಕ್ಷೆ ಮಾಡಿಸಲಾಗಿದ್ದು, ವರದಿ ಇನ್ನಷ್ಟೇ ಬರಬೇಕಿದೆ’ ಎಂದೂ ಪೊಲೀಸರು ತಿಳಿಸಿದರು.

ಎಂಇಎಸ್ ಮೋರ್ಚಾ: ಕೈಬಿಡಲು ಡಿಸಿ ಮನವಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಇಲ್ಲಿನ ಮಹಾನಗರ ಪಾಲಿಕೆ ಎದುರು ಕನ್ನಡ ಪರ ಹೋರಾಟಗಾರರು ಸ್ಥಾಪಿಸಿರುವ ಕನ್ನಡ ಧ್ವಜ ತೆರವುಗೊಳಿಸಬೇಕು ಇಲ್ಲವೇ ಪಾಲಿಕೆ ಮುಂದೆ ಭಗವಾ ಧ್ವಜ ಹಾರಿಸಲು ಅನುಮತಿ ನೀಡಬೇಕು’ ಎಂದು ಆಗ್ರಹಿಸಿ ಮಾರ್ಚ್ 8ರಂದು ನಗರದಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ (ಮೋರ್ಚಾ) ನಡೆಸಲು ಮಹಾರಾಷ್ಟ್ರ ಏಕೀಕರಣ ಸಮಿತಿಯವರು (ಎಂಇಎಸ್) ನಿರ್ಧರಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಶನಿವಾರ ತಮ್ಮನ್ನು ಭೇಟಿಯಾದ ಮುಖಂಡರೊಂದಿಗೆ ಜಿಲ್ಲಾಧಿಕಾರಿ ಎಂ.ಜಿ. ಹಿರೇಮಠ ಚರ್ಚಿಸಿದರು. ಸಭೆಯಲ್ಲಿ ಭಾಗವಹಿಸಲು ಮಾಧ್ಯಮ ಪ್ರತಿನಿಧಿಗಳಿಗೆ ಅವಕಾಶ ಇರಲಿಲ್ಲ.

‘ಪಾಲಿಕೆ ಎದುರಿನ ಧ್ವಜ ತೆರವುಗೊಳಿಸಬೇಕು ಎಂದು ಒತ್ತಾಯಿಸಿ ಮರಾಠಾ ಸಮಾಜ ಹಾಗೂ ಎಂಇಎಸ್ ಮುಖಂಡರು ನನ್ನನ್ನು ಭೇಟಿಯಾಗಿದ್ದರು. ಉದ್ದೇಶಿತ ಮೋರ್ಚಾ ಕೈಬಿಡುವಂತೆ ಅವರಲ್ಲಿ ಮನವಿ ಮಾಡಿದ್ದೇನೆ. ಎಲ್ಲ ಕನ್ನಡಪರ ಸಂಘಟನೆಗಳ ಮುಖಂಡರೊಂದಿಗೂ ಮಾತುಕತೆ ನಡೆಸಿ ಈ ವಿಷಯವನ್ನು ಸೌಹಾರ್ದಯುತವಾಗಿ ಬಗೆಹರಿಸಲು ಎಲ್ಲ ರೀತಿಯಲ್ಲೂ ಪ್ರಯತ್ನಿಸಲಾಗುವುದು ಎಂದು ಅವರಿಗೆ ತಿಳಿಸಿದ್ದೇನೆ’ ಎಂದು ಜಿಲ್ಲಾಧಿಕಾರಿ ಪ್ರಕಟಣೆ ನೀಡಿದ್ದಾರೆ.

ವಿಜಯ ದೇವಣೆ ಹಾಗೂ ಸಂಗಡಿಗರಿಗೆ ನಿಷೇಧ

ಈ ನಡುವೆ, ಮಹಾರಾಷ್ಟ್ರದ ಶಿವಸೇನಾ ಮುಖಂಡ ವಿಜಯ ದೇವಣೆ ಹಾಗೂ ಸಂಗಡಿಗರಿಗೆ ಮಾರ್ಚ್ 7ರ ಬೆಳಿಗ್ಗೆ 6ರಿಂದ ಮಾರ್ಚ್ 9ರ ಬೆಳಿಗ್ಗೆ 6ರವರೆಗೆ ಜಿಲ್ಲೆಯ ಗಡಿಯೊಳಗೆ ಪ್ರವೇಶಿಸದಂತೆ ನಿರ್ಬಂಧ ವಿಧಿಸಿ ಜಿಲ್ಲಾಧಿಕಾರಿ ಎಂ.ಜಿ. ಹಿರೇಮಠ ಶನಿವಾರ ಆದೇಶ ಹೊರಡಿಸಿದ್ದಾರೆ.

‘ಎಂಇಎಸ್‌ನಿಂದ ಮಾರ್ಚ್ 8ರಂದು ನಡೆಸಲಿರುವ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ಅವರು ಬಂದು ಪ್ರಚೋದನಕಾರಿ ಭಾಷಣದಿಂದ ಭಾಷಾ ಸಂಘರ್ಷಕ್ಕೆ ಎಡೆ ಮಾಡಿಕೊಡುವ ಸಾಧ್ಯತೆ ಇದೆ. ಇದರ ವಿರುದ್ಧ ಕನ್ನಡಪರ ಸಂಘಟನೆಗಳು ಪ್ರತಿಭಟನೆ ನಡೆಸುವುದರಿಂದ ಜಿಲ್ಲೆಯಲ್ಲಿ ಅಹಿತಕರ ವಾತಾವರಣ ನಿರ್ಮಾಣವಾಗಲಿದೆ. ಸಾರ್ವಜನಿಕ ಆಸ್ತಿಪಾಸ್ತಿಗೆ ಹೆಚ್ಚಿನ ಪ್ರಮಾಣದಲ್ಲಿ ಹಾನಿಯಾಗುವ ಹಾಗೂ ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆ ಬರುವ ಸಾಧ್ಯತೆಗಳು ಇರುತ್ತವೆ. ಹೀಗಾಗಿ, ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿದೆ’ ಎಂದು ತಿಳಿಸಿದ್ದಾರೆ.

ಹನಿಟ್ರ್ಯಾಪ್: ತಾಯಿ, ಮಗ ಬಂಧನ

ಪ್ರಜಾವಾಣಿ ವಾರ್ತೆ

ಗೀತಾ

ವಿಷ್ಣು

ವಿಜಯನಗರ (ಹೊಸಪೇಟೆ): ಹನಿಟ್ರ್ಯಾಪ್ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂದ ದೂರಿನ ಹಿನ್ನೆಲೆಯಲ್ಲಿ ಶನಿವಾರ ಬಡಾವಣೆ ಠಾಣೆಯ ಪೊಲೀಸರು ನಗರ ಎಂ.ಜೆ. ನಗರದ ಗೀತಾ (38) ಮತ್ತು ಅವರ ಮಗ ವಿಷ್ಣು (19) ಎಂಬುವರನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಎಂ.ಜೆ.ನಗರ 6ನೇ ಕ್ರಾಸ್ ಬಳಿ ಸಾನ್ವಿ ಸ್ಟೀಲ್ಸ್ ಮಳಿಗೆ ಹೊಂದಿದ್ದ ಆಂಧ್ರ ಮೂಲದ ಉದ್ಯಮಿ ವಿ.ಸುಬ್ಬಾರೆಡ್ಡಿ ಅವರನ್ನು ಪರಿಚಯ ಮಾಡಿಕೊಂಡ ಅದೇ ರಸ್ತೆಯ ಗೀತಾ ಮತ್ತು ಅವರ ಮಗ ವಿಷ್ಣು, ಒಂದು ದಿನ ಮನೆಗೆ ಕರೆದು ಪಾನೀಯದಲ್ಲಿ ಮತ್ತು ಬರುವ ಪುಡಿಯನ್ನು ಬೆರಸಿ ಪ್ರಜ್ಞೆ ತಪ್ಪಿಸಿ ಫೋಟೋಗಳನ್ನು ತೆಗೆದಿದ್ದಾರೆ.

ನಂತರ ಸುಬ್ಬಾರೆಡ್ಡಿಗೆ ಫೋನ್ ಮಾಡಿ ನಗ್ನ ಫೋಟೋಗಳನ್ನು ಬಯಲು ಮಾಡುವ ಬೆದರಿಕೆ ಒಡ್ಡಿದ್ದರು ಎನ್ನಲಾಗಿದೆ.

ಅಲ್ಲದೆ ಅಕ್ರಮವಾಗಿ ಮನೆಗೆ ನುಗ್ಗಿ ₹ 15ಲಕ್ಷ ನಗದು ಹಾಗೂ ಬಂಗಾರದ ಒಡವೆಗಳನ್ನು ಕದ್ದಿದ್ದಾರೆಂದು ಉದ್ಯಮಿ ಸುಬ್ಬಾರೆಡ್ಡಿ ದೂರು ನೀಡಿದ್ದಾರೆ. ದೂರು ದಾಖಲಿಸಿಕೊಂಡ ಪೊಲೀಸರು ಆರೋಪಿಗಳನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಬಂಧನ ವೇಳೆ ಮನೆಯಲ್ಲಿ 2.75 ಕೆ.ಜಿ ಗಾಂಜಾ ಕೂಡ ಸಿಕ್ಕಿದ್ದು, ಅದನ್ನು ವಶಕ್ಕೆ ಪಡೆದಿದ್ದಾರೆ.

ಐಟಿ ದಾಳಿ: ಮೌನ ಮುರಿದ ತಾಪ್ಸಿ ಪನ್ನು



ತಾಪ್ಸಿ ಪನ್ನು

ಮುಂಬೈ (ಪಿಟಿಐ): ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳ ದಾಳಿ ಬಳಿಕ, ಬಾಲಿವುಡ್ ನಟಿ ತಾಪ್ಸಿ ಪನ್ನು, ಶನಿವಾರ ಮೊದಲ ಬಾರಿ ಮೌನ ಮುರಿದಿದ್ದಾರೆ. ಟ್ವಿಟರ್‌ನಲ್ಲಿ ಮೂರು ಪೋಸ್ಟ್‌ಗಳ ಮೂಲಕ ತೀಕ್ಷ್ಣ ಮತ್ತು ವ್ಯಂಗ್ಯವಾಗಿ ಪ್ರತಿಕ್ರಿಯೆ ನೀಡಿದ್ದು, ತಮ್ಮ ವಿರುದ್ಧ ಅಧಿಕಾರಿಗಳು ಮಾಡಿರುವ ಆರೋಪಗಳನ್ನು ನಿರಾಕರಿಸಿದ್ದಾರೆ.

ಅನುರಾಗ್ ಕಶ್ಯಪ್ ನಿರ್ದೇಶನದ ‘ದೊಬಾರ’ ಚಿತ್ರೀಕರಣದಲ್ಲೂ ಅವರು ಶನಿವಾರ ಮತ್ತೆ ತೊಡಗಿಸಿಕೊಂಡಿದ್ದಾರೆ.

ತಾಪ್ಸಿ ಮೊದಲ ಟ್ವೀಟ್‌ನಲ್ಲಿ ಹೇಳಿರುವುದು ಹೀಗೆ– ‘ಮೂರು ಮುಖ್ಯ ವಿಷಯಗಳಿಗಾಗಿ ಮೂರು ದಿನಗಳ ಕಾಲ ತೀವ್ರ ತಪಾಸಣೆ ನಡೆದಿದೆ. ಮೊದಲನೆಯದು ನಾನು ಪ್ಯಾರಿಸ್‌ನಲ್ಲಿ ಹೊಂದಿದ್ದೇನೆಂದು ಹೇಳಲಾಗುತ್ತಿರುವ ಬಂಗಲೆಯ ಕೀಲಿಗಳು. ಏಕೆಂದರೆ ಬೇಸಿಗೆ ರಜೆಗಳು ಹತ್ತಿರದಲ್ಲೇ ಇವೆ.’

‘ಎರಡನೆಯದು ನನ್ನನ್ನು ಸಿಲುಕಿಸಿ, ದಾಳಿ ಮಾಡಿಸಲು ₹ 5 ಕೋಟಿಗೆ ಸಂಬಂಧಿಸಿದ ರಶೀದಿ. ಈ ಹಣ ನನ್ನದಲ್ಲವೆಂದು ಈ ಮೊದಲೇ ನಿರಾಕರಿಸಿದ್ದೇನೆ’ ಎನ್ನುವ ಅರ್ಥದಲ್ಲಿ ಎರಡನೇ ಟ್ವೀಟ್ ಮಾಡಿದ್ದಾರೆ.

ನಿಧನ ವಾರ್ತೆ

ಕುದುಮಲ್ಲಿಗೆ ಪುಟ್ಟಸ್ವಾಮಿಗೌಡ

ತೀರ್ಥಹಳ್ಳಿ: ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರ ಪತ್ನಿ ಪ್ರೇಮಾ ಕೃಷ್ಣ ಅವರ ಕಿರಿಯ ಸಹೋದರ ಕುಡುಮಲ್ಲಿಗೆ ಪುಟ್ಟಸ್ವಾಮಿಗೌಡ (77) ಶುಕ್ರವಾರ ರಾತ್ರಿ ಬೆಂಗಳೂರಿನ ತಮ್ಮ ಪುತ್ರನ ಮನೆಯಲ್ಲಿ ನಿಧನರಾದರು.

ಅವರಿಗೆ ಪತ್ನಿ, ಪುತ್ರ, ಪುತ್ರಿ ಇದ್ದಾರೆ.

ಅಂತ್ಯಕ್ರಿಯೆ ಶನಿವಾರ ಕುಡುಮಲ್ಲಿಗೆಯಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಕಲಿ ಚಿನ್ನ ಮಾರುತ್ತಿದ್ದ ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕಲಿ ಚಿನ್ನವನ್ನೇ ಅಸಲಿ ಚಿನ್ನವೆಂದು ಹೇಳಿ ನಂಬಿಸಿ ಮಾರಾಟ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

‘ಮಂಡ್ಯ ಜಿಲ್ಲೆಯ ಕೆಆರ್‌ಎಸ್ ಸಂತೆಮಳಾದ ಅರ್ಜುನ್ (31) ಹಾಗೂ ರಾಹುಲ್ (21) ಬಂಧಿತರು. ಅವರ ಬಳಿ ಇದ್ದ 1,298 ಗ್ರಾಂ ನಕಲಿ ಚಿನ್ನವನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಎಸ್.ಜೆ.ಪಾರ್ಕ್ ಠಾಣೆ ವ್ಯಾಪ್ತಿಯಲ್ಲಿರುವ ವಸತಿಗೃಹವೊಂದರ ಎದುರು ಫೆ. 5ರಂದು ಆರೋಪಿಗಳು ನಿಂತುಕೊಂಡಿದ್ದರು. ತಮ್ಮ ಬಳಿ ಇದ್ದ ಚಿನ್ನವನ್ನು ಅಭಿಷೇಕ್ ಎಂಬುವವರಿಗೆ ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಿ ಆರೋಪಿಗಳನ್ನು ಸೆರೆಹಿಡಿಯಲಾಯಿತು’ ಎಂದೂ ತಿಳಿಸಿದರು.

‘ತಮ್ಮ ಜಮೀನಿನಲ್ಲಿ ಅಪಾರ ಪ್ರಮಾಣದ ಚಿನ್ನ ಸಿಕ್ಕಿದ್ದು, ಅದನ್ನು ಮಾರುಕಟ್ಟೆಗಿಂತ ಕಡಿಮೆ ಬೆಲೆಗೆ ಮಾರಾಟ ಮಾಡುವುದಾಗಿ ಆರೋಪಿಗಳು ಹೇಳಿದ್ದರು. ಅದನ್ನು ನಂಬಿದ್ದ ಕೆಲ ಸಾರ್ವಜನಿಕರು, ಆರೋಪಿಗಳ ಜೊತೆ ಮಾತುಕತೆ ನಡೆಸಿ ಚಿನ್ನ ಖರೀದಿಸಲು ಮುಂದಾಗಿದ್ದರು. ಗ್ರಾಹಕರಿಗೆ ಚಿನ್ನ ಕೊಡಲು ಬಂದಾಗ ಆರೋಪಿಗಳು ಸಿಕ್ಕಿಬಿದ್ದರು’ ಎಂದೂ ಪೊಲೀಸರು ಹೇಳಿದರು.

‘ಜಪ್ತಿ ಮಾಡಿದ ಚಿನ್ನ ಪರಿಶೀಲಿಸಿದಾಗ ನಕಲಿ ಎಂಬುದು ತಿಳಿಯಿತು. ಅಕ್ರಮವಾಗಿ ಹಣ ಸಂಪಾದಿಸುವ ಉದ್ದೇಶದಿಂದ ನಕಲಿ ಚಿನ್ನ ಮಾರಾಟ ಮಾಡಲು ಬಂದಿರುವುದಾಗಿ ಆರೋಪಿಗಳು ತಪ್ಪೊಪ್ಪಿಕೊಂಡಿದ್ದಾರೆ’ ಎಂದೂ ತಿಳಿಸಿದರು.

ಬಂಧಿತ ಆರೋಪಿಗಳು ಹಾಗೂ ಜಪ್ತಿ ಮಾಡಲಾದ ಚಿನ್ನ

ಬಿ.ಟೆಕ್ ಪದವೀಧರ ಆತ್ಮಹತ್ಯೆ

ಬೆಂಗಳೂರು: ರೈಲಿಗೆ ತಲೆಕೊಟ್ಟು ಬಿ.ಟೆಕ್ ಪದವೀಧರ ಸುನೀಲ್ ಕುಮಾರ್ (25) ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

‘ಅರವಂತಿಕೆ ಪಾಳ್ಯ ನಿವಾಸಿ ಸುನೀಲ್ ಕುಮಾರ್, ಇತ್ತೀಚೆಗಷ್ಟೇ ಬಿ.ಟೆಕ್ ಪದವಿ ಮುಗಿಸಿದ್ದರು. ಎಂ.ಟೆಕ್ ಪದವಿಗೆ ಪ್ರವೇಶ ಪಡೆಯಲು ತಯಾರಿ ನಡೆಸುತ್ತಿದ್ದರು’ ಎಂದು ರೈಲ್ವೆ ಪೊಲೀಸ್ ಮೂಲಗಳು ಹೇಳಿವೆ.

’ಕೊರೊನಾ ಸೋಂಕಿತರಾಗಿದ್ದ ಅವರು ಚಿಕಿತ್ಸೆ ಪಡೆದು ಗುಣಮುಖರಾಗಿದ್ದರು. ಮಾನಸಿಕವಾಗಿ ನೊಂದಿದ್ದರು. ವಾಯುವಿಹಾರಕ್ಕೆ ಹೋಗುವುದಾಗಿ ಹೇಳಿ ಶುಕ್ರವಾರ ಸಂಜೆ ಮನೆಯಿಂದ ಹೊರಬಂದಿದ್ದರು. ಮನೆಯ ಸಮೀಪದಲ್ಲಿರುವ ಹಳಿ ಬಳಿ ಹೋಗಿ ರೈಲಿಗೆ ತಲೆಕೊಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾರೆ’ ಎಂದೂ ಪೊಲೀಸರು ತಿಳಿಸಿದ್ದಾರೆ.

ಅತ್ಯಾಚಾರ ಪ್ರಕರಣವೊಂದರ ವಿಚಾರಣೆಯ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಎಸ್.ಎ.ಬೊಬಡೆ ಅವರು, ‘ಸಂತ್ರಸ್ತೆಯನ್ನು ಆರೋಪಿ ಮದುವೆಯಾಗಲು ಸಿದ್ಧನಿದ್ದಾನೆಯೇ’ ಎಂದು ಕೇಳಿದ್ದನ್ನು ವಿರೋಧಿಸಿ ಅಖಿಲ ಭಾರತ ಪ್ರಗತಿಪರ ಮಹಿಳಾ ಸಂಘದ ಸದಸ್ಯರು ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು

ಪ್ರಜಾವಾಣಿ ಚಿತ್ರ

ಸಂಪೂರ್ಣವಾಗಿ ಪರಾವಲಂಬಿಯಾದ ಹೈನುಗಾರಿಕೆ; ಸಂಕಷ್ಟದಲ್ಲಿ ರೈತರು

ಅತ್ತ ಗೋಮಾಳವಿಲ್ಲ, ಇತ್ತ ಸ್ವಂತ ಭೂಮಿಯೂ ಇಲ್ಲ

• ಬಸವರಾಜ ಹವಾಲ್ದಾರ

ಹುಬ್ಬಳ್ಳಿ: 'ಅತ್ತ ಗೋಮಾಳವಿಲ್ಲ, ಇತ್ತ ಸ್ವಂತ ಭೂಮಿಯೂ ಇಲ್ಲ. ಕುಟುಂಬ ನಿರ್ವಹಣೆಗೆ ನೆರವಾಗುತ್ತಿದ್ದ ದನಗಳಿಗೆ ನೀಡುವ ಮೇವು, ಹಿಂಡಿ ಸೇರಿದಂತೆ ಎಲ್ಲವನ್ನೂ ಖರೀದಿಸಬೇಕಿದೆ. ವೆಚ್ಚ ಹೆಚ್ಚಾಗಿರುವುದರಿಂದ ಕೃಷಿಯಂತೆ ಹೈನುಗಾರಿಕೆಯಲ್ಲಿಯೂ ಕೈಸುಟ್ಟುಕೊಳ್ಳುವಂತಾಗಿದೆ'

– ಹೀಗೆಂದವರು ಹುಬ್ಬಳ್ಳಿ ತಾಲ್ಲೂಕಿನ ಸುಳ್ಳ ಗ್ರಾಮದ ರೈತ ಬಸವಲಿಂಗಪ್ಪ. 'ಗೋಮಾಳಗಳಿದ್ದಾಗ ಬೆಳಿಗ್ಗೆಯಿಂದ ಸಂಜೆಯವರೆಗೆ ದನಗಳು ಅಲ್ಲಿಯೇ ಮೇಯುತ್ತಿದ್ದವು. ಸ್ವಂತ ಜಮೀನಿನಲ್ಲಿ ಬೆಳೆದ ಬೆಳೆಯೂ ಮೇವಾಗುತ್ತಿತ್ತು. ಈಗ ಅವೆರಡೂ ಇಲ್ಲವಾಗಿವೆ. ಅಲ್ಪ–ಸ್ವಲ್ಪ ಭೂಮಿ ಇದ್ದವರೂ ವಾಣಿಜ್ಯ ಬೆಳೆಗಳತ್ತ ವಾಲಿದ್ದಾರೆ. ಹೈನುಗಾರಿಕೆ ಸಂಪೂರ್ಣ ಪರಾವಲಂಬಿಯಾಗಿದೆ. ಒಕ್ಕೂಟದವರೂ ಹಾಲಿಗೆ ಉತ್ತಮ ಬೆಲೆ ನೀಡದಿರುವ ಕಾರಣ ಲಾಭಕ್ಕಿಂತ ನಷ್ಟವೇ ಹೆಚ್ಚಾಗಿದೆ' ಎಂದು ಸಂಕಷ್ಟ ಬಿಚ್ಚಿಟ್ಟರು.

ಗೋಮಾಳಗಳ ಜಾಗ ಈಗ ದಾಖಲೆಯಲ್ಲಿ ಮಾತ್ರ ಉಳಿದಿದೆ. ಕುಟುಂಬಗಳ ವಿಭಜನೆಯಿಂದಾಗಿ ಕೃಷಿ ಭೂಮಿ ಇಲ್ಲವಾಗಿದೆ. ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಕಾಯ್ದೆ ಅವರ ಸಂಕಷ್ಟಗಳನ್ನು ಮತ್ತಷ್ಟು ಹೆಚ್ಚಿಸಿದೆ.

ಗೋಮಾಳದ ಜಾಗ ಬಹುತೇಕ ಕಡೆ ಮನೆ, ದೇವಸ್ಥಾನ, ಸ್ಮಶಾನ, ಕಲ್ಲು ಗಣಿಗಾರಿಕೆ, ರೆಸಾರ್ಟ್ ನಿರ್ಮಾಣ, ಉಳುಮೆ ಸೇರಿದಂತೆ ಹಲವು ಕಾರಣಗಳಿಗೆ ಒತ್ತುವರಿಯಾಗಿದೆ. ಒತ್ತುವರಿ ಮಾಡಿದ ಬಹುತೇಕರು ಆರ್ಥಿಕವಾಗಿ ಬಲಾಢ್ಯರಾಗಿದ್ದಾರೆ. ಅವರ ನೆರವಿಗೆ ಪರೋಕ್ಷವಾಗಿ ಜನಪ್ರತಿಧಿಗಳು ನಿಂತಿದ್ದಾರೆ.

ಮೇವು, ಹಿಂಡಿ ಇತ್ಯಾದಿಗಳನ್ನು ರೈತರು ಕೊಂಡುಕೊಳ್ಳಬೇಕಾದ ಸ್ಥಿತಿ ತಲುಪಿರುವುದರಿಂದ ಹೈನುಗಾರಿಕೆ ವೆಚ್ಚದ ಪ್ರಮಾಣ ಹೆಚ್ಚಾಗಿದೆ. ಆದಾಯ ಕುಸಿದಿದೆ. ಇದರಿಂದಾಗಿ ಜಾನುವಾರುಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ.

ಗಂಡು ಕರುಗಳನ್ನು ಮೂರ್ನಾಲ್ಕು ತಿಂಗಳು ಸಾಕಿ, ಕಸಾಯಿಖಾನೆಯವರಿಗೆ ಮಾರಾಟ ಮಾಡಿದರೆ ಒಂದಷ್ಟು ಹಣ ಸಿಗುತ್ತದೆ ಎಂದು ರೈತರು ಸಾಕುತ್ತಿದ್ದರು. ಈಗ ಮಾರಾಟ ಮಾಡುವುದನ್ನು ನಿಷೇಧಿಸಿರುವುದರಿಂದ ಮಂಡ್ಯ, ಚಿಕ್ಕಮಗಳೂರು ಮುಂತಾದ ಜಿಲ್ಲೆಗಳಲ್ಲಿ ಕರುಗಳನ್ನು ಗೋಶಾಲೆಗಳ ಮುಂದೆ, ಕಾಡುಗಳಲ್ಲಿ ಬಿಟ್ಟು ಹೋಗುತ್ತಿದ್ದಾರೆ. ಪೌಷ್ಟಿಕ ಆಹಾರದ ಕೊರತೆಯಿಂದ ಕರುಗಳು ಸಾವನ್ನಪ್ಪುತ್ತಿವೆ.

ಗೋಶಾಲೆಗಳ ಮೇಲೆ ಒತ್ತಡ:

ಕಾಯ್ದೆ ಜಾರಿ ನಂತರ ಮಂಡ್ಯ ಜಿಲ್ಲೆಯ ಬ್ಯಾಡರಹಳ್ಳಿಯಲ್ಲಿರುವ ಚೈತ್ರಾ ಗೋಶಾಲೆಗೆ 240 ಗಂಡು ಕರುಗಳನ್ನು ತಂದು ಬಿಡಲಾಗಿದೆ. ನಿತ್ಯ ಹತ್ತಾರು ಕರುಗಳನ್ನು ತಂದು ಬಿಡಲಾಗುತ್ತಿದೆ. ಅದರಲ್ಲಿ ಕೆಲವು ಸಾವನ್ನಪ್ಪಿವೆ ಎನ್ನುತ್ತಾರೆ ಗೋ ಸಂರಕ್ಷಕ ಶಿವಕುಮಾರ್.

ಗಂಡು ಕರು ಹಾಗೂ ಬರಡು ದನಗಳನ್ನು ಬಿಡುವವರ ಸಂಖ್ಯೆ ಹೆಚ್ಚುತ್ತಿರುವುದರಿಂದ ಮುಂದಿನ ದಿನಗಳಲ್ಲಿ ಗೋಶಾಲೆಗಳ ಮೇಲಿನ ಒತ್ತಡ ಹೆಚ್ಚಾಗಲಿದೆ. ನಗರಗಳಿಗೆ ತಂದು ಬಿಟ್ಟು ಹೋಗುತ್ತಿರುವುದರಿಂದ ನಗರಗಳಲ್ಲಿ ಬಿಡಾಡಿ ದನಗಳ ಸಂಖ್ಯೆಯೂ ಹೆಚ್ಚಾಗಲಿದೆ.

ಹುಬ್ಬಳ್ಳಿಯ ಗೋಶಾಲೆಯೊಂದರ ದೃಶ್ಯ ಪ್ರಜಾವಾಣಿ ಚಿತ್ರ/ತಾಜುದ್ದೀನ್ ಆಜಾದ್

ಮೇಯಿಸಲು ಗೋಮಾಳವಿಲ್ಲ, ಮಾರಾಟ ಮಾಡಬೇಕೆಂದರೆ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಕಾಯ್ದೆ ಅಡ್ಡಿಯಾಗಿದೆ. ಭಾವನಾತ್ಮಕವಾಗಿ ಯೋಚಿಸುವ ಬದಲು ರೈತರ ಸಂಕಷ್ಟದ ಸ್ಥಿತಿ ಅರಿಯಬೇಕು. ರೈತರು ಉಳಿದರೆ, ಜಾನುವಾರು ಉಳಿಯುತ್ತವೆ. ರೈತರೇ ಉಳಿಯದಿದ್ದರೆ, ಜಾನುವಾರು ಸಾಕುವವರು ಯಾರು?

ಬಾಬಾಗೌಡ ಪಾಟೀಲ, ರೈತ ಮುಖಂಡ

ಒತ್ತುವರಿಯಾಗಿರುವ ಗೋಮಾಳಗಳನ್ನು ಸಂರಕ್ಷಿಸಿ. ಪ್ರತಿ ಗ್ರಾಮದಲ್ಲಿಯೂ ಗೋಶಾಲೆಗಳನ್ನು ತೆರೆದ ನಂತರ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಕಾಯ್ದೆ ಜಾರಿಗೆ ತರಬೇಕಿತ್ತು. ಬೇಸಾಯ ಇತ್ತೀಚಿನ ದಿನಗಳಲ್ಲಿ ಲಾಭದಾಯಕವಾಗಿಲ್ಲ. ಉಪಕಸುಬಾಗಿದ್ದ ಹೈನುಗಾರಿಕೆಯೂ ಸಂಕಷ್ಟಕ್ಕೆ ಸಿಲುಕಿದೆ. ಹೀಗಾದರೆ, ರೈತರು ಬದುಕುವುದು ಹೇಗೆ?

ಶಂಭುನಹಳ್ಳಿ ಸುರೇಶ, ರೈತ, ಮಂಡ್ಯ

ಹೀಗಿದೆ ಹಾಲಿನ ಲೆಕ್ಕಾಚಾರ

ಒಂದು ಹಸುವಿಗೆ 25 ಕೆಜಿ ಹಸಿ ಮೇವು, 5 ಕೆಜಿ ಒಣಮೇವು, ಹಸು ಹಾಲು ನೀಡುವ ಪ್ರಮಾಣದ ಆಧಾರದ ಮೇಲೆ ಹಿಂಡಿ (ಎರಡು ಲೀಟರ್ ಹಾಲು ನೀಡಿದರೆ, 1 ಕೆಜಿಯಷ್ಟು ಹಿಂಡಿ) ನೀಡಬೇಕು. ಪ್ರತಿ ಕೆಜಿ ಹಸಿಮೇವಿಗೆ 75 ಪೈಸೆ, ಪ್ರತಿ ಕೆಜಿ ಒಣ ಮೇವಿಗೆ ₹ 15 ರಿಂದ 20, ಪ್ರತಿ ಕೆಜಿ ಹಿಂಡಿಗೆ ₹40 ವೆಚ್ಚ ಮಾಡಬೇಕು.

ಹಸು 10 ಲೀಟರ್ ಹಾಲು ನೀಡಿದರೆ ₹293 ಖರ್ಚಾಗುತ್ತದೆ. ಕೆಎಂಎಫ್‌ಗೆ 8.5 ಎಸ್‌ಎನ್‌ಎಫ್ (ಸಾಲಿಡ್ ನಾಟ್ ಫ್ಯಾಟ್) ಹೊಂದಿರುವ ಪ್ರತಿ ಲೀಟರ್ ಹಾಲಿಗೆ ಬೆಂಗಳೂರಿನಲ್ಲಿ ₹ 26 ದರ ಫ್ಯಾಟ್ 3.5 ಕನಿಷ್ಠ ಇರಬೇಕು. ಫ್ಯಾಟ್ 4 ರಷ್ಟಿರುವುದರಿಂದ ₹28 ಸಿಗುತ್ತಿದೆ. ಸರ್ಕಾರ ಪ್ರತಿ ಲೀಟರ್‌ಗೆ ನೀಡುವ ₹5 ಪ್ರೋತ್ಸಾಹ ಧನ ಸೇರಿ ಪ್ರತಿ ಲೀಟರ್‌ಗೆ ₹ 33 ಸಿಗುತ್ತದೆ. 10 ಲೀಟರ್‌ಗೆ ₹330 ದೊರೆಯುತ್ತಿದೆ.

10 ಲೀಟರ್ ಹಾಲು ನೀಡಿದರೆ ಹಸುವಿನಿಂದ ರೈತರಿಗೆ ಕೇವಲ ₹ 37 ಉಳಿಯುತ್ತದೆ. ಹಸು 6 ಲೀಟರ್ ಹಾಲು ನೀಡಿದರೆ ಖರ್ಚು ₹193 ಆದರೆ, ಆದಾಯ 165 ಆಗುತ್ತದೆ. ಆಗ ನಷ್ಟ ಎದುರಿಸಬೇಕಾಗುತ್ತದೆ. ಬೆಳಿಗ್ಗೆಯಿಂದ ಸಂಜೆಯವರೆಗೂ ಹಸುವಿನ ಆರೈಕೆಯಲ್ಲಿ ತೊಡಗುವ ರೈತ ದಂಪತಿಗಳ ಕೂಲಿಯ ಲೆಕ್ಕ ಸೇರಿಲ್ಲ.

ಜಾನುವಾರಗಳ ಜೀವಿತಾವಧಿ ಲೆಕ್ಕಾಚಾರ

ಹಸುಗಳು ಸರಾಸರಿ 16 ವರ್ಷ ಬದುಕುತ್ತವೆ. 18ನೇ ತಿಂಗಳಿಗೆ ಪ್ರೌಢಾವಸ್ಥೆಗೆ ಬರುತ್ತದೆ. ಪ್ರತಿ ವರ್ಷಕ್ಕೊಂದರಂತೆ ಕರು ಹಾಕಿದರೆ, 9 ಕರುಗಳನ್ನು ಹಾಕಬಹುದು. ಮೊದಲ ಐದು ಕರುಗಳವರೆಗೆ ಹಸುವಿನ ಹಾಲಿನ ಪ್ರಮಾಣ ಹೆಚ್ಚುತ್ತಾ ಹೋಗುತ್ತದೆ. ನಂತರದಲ್ಲಿ ಇಳಿಕೆ ಪ್ರಮಾಣದಲ್ಲಿರುತ್ತದೆ. ಹಾಲು ಕರೆಯುವುದನ್ನು ನಿಲ್ಲಿಸಿದ ನಂತರವೂ ರೈತರು ಹಸು ಸಾಕಿದರೆ, ಪ್ರತಿ ತಿಂಗಳಿಗೆ ₹4 ಸಾವಿರವರೆಗೆ ವೆಚ್ಚವಾಗುತ್ತದೆ. ಗಂಡು ಕರುವಾದರೆ, ಕೆಲವೊಂದು ಮಾತ್ರ ಉಳುಮೆಗೆ ಬಳಕೆಯಾಗುತ್ತವೆ. ಸಣ್ಣ ರೈತರ ಸಂಖ್ಯೆ ಹೆಚ್ಚಿರುವುದರಿಂದ ಜಾನುವಾರು ಬೇಕಿಲ್ಲ. ಅನೇಕ ಮಂದಿ ಭೂಮಿಯನ್ನೇ ಹೊಂದಿಲ್ಲ.

ಕೆಚ್ಚಲುಬಾವು, ಕಾಲುಬಾಯಿ ಜ್ವರ, ಗಂಟಲಬೇನೆ ಜ್ವರ ಸೇರಿದಂತೆ ಹಲವು ರೋಗಗಳು ಜಾನುವಾರುಗಳನ್ನು ಕಾಡುತ್ತವೆ. ಕೆಚ್ಚಲುಬಾವಿಗೆ ಸರಿಯಾದ ಸಮಯದಲ್ಲಿ ಚಿಕಿತ್ಸೆ ಕೊಡಿಸದಿದ್ದರೆ ಬರಡಾಗುತ್ತವೆ. ರೋಗಗಳು ಬಂದಾಗ ಹಾಲಿನ ಉತ್ಪಾದನೆಯೂ ತಿಂಗಳುಗಟ್ಟಲೇ ಕಡಿಮೆಯಾಗುತ್ತದೆ.

ರಾಜ್ಯದಲ್ಲಿರುವ ಗೋಮಾಳ ಜಮೀನು

ಜಿಲ್ಲೆ	ಅಂದಾಜು ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)
ಉಡುಪಿ	2,352
ಉತ್ತರ ಕನ್ನಡ	97
ಕೊಡಗು	1,922
ಕೊಪ್ಪಳ	82
ಕೋಲಾರ	1,78,109
ಗದಗ	720
ಕಲಬುರ್ಗಿ	10,308
ಚಾಮರಾಜನಗರ	41,272
ಚಿಕ್ಕಬಳ್ಳಾಪುರ	1,62,878
ಚಿಕ್ಕಮಗಳೂರು	2,12,116
ಚಿತ್ರದುರ್ಗ	86,856
ತುಮಕೂರು	2,10,893
ದಕ್ಷಿಣಕನ್ನಡ	3,120
ದಾವಣಗೆರೆ	27,606
ಧಾರವಾಡ	559
ಬಳ್ಳಾರಿ	12,347
ಬಾಗಲಕೋಟೆ	5,335
ವಿಜಯಪುರ	936
ಬೀದರ್	585
ಬೆಂಗಳೂರು ಗ್ರಾಮಾಂತರ	58,693
ಬೆಂಗಳೂರು ನಗರ	36,138
ಬೆಳಗಾವಿ	14,586
ಮಂಡ್ಯ	98,677
ಮೈಸೂರು	1,34,425
ಯಾದಗಿರಿ	3,187
ರಾಮನಗರ	92,561
ರಾಯಚೂರು	6,592
ಶಿವಮೊಗ್ಗ	2,26,012
ಹಾವೇರಿ	1,328
ಹಾಸನ	1,29,259
ಒಟ್ಟು	17,59,621

ಯಾವ ಜಿಲ್ಲೆಯಲ್ಲಿ ಎಷ್ಟು ಗೋಶಾಲೆಗಳಿವೆ (ಎಲ್ಲ ಖಾಸಗಿ, ಸ್ವಯಂಸೇವಾ ಸಂಘಗಳು)

ಜಿಲ್ಲೆ	ಸಂಖ್ಯೆ
ರಾಮನಗರ	2
ಉಡುಪಿ	3
ಧಾರವಾಡ	5
ಯಾದಗಿರಿ	1
ರಾಯಚೂರು	9
ಶಿವಮೊಗ್ಗ	10
ಮಂಡ್ಯ	5
ಬಾಗಲಕೋಟೆ	6
ಹಾವೇರಿ	4
ಉತ್ತರಕನ್ನಡ	5
ಬೆಂಗಳೂರು ಗ್ರಾಮಾಂತರ	6
ಚಿಕ್ಕಮಗಳೂರು	5
ಮೈಸೂರು	3
ಬೀದರ್	9
ದಕ್ಷಿಣ ಕನ್ನಡ	15
ಚಾಮರಾಜನಗರ	1
ತುಮಕೂರು	4
ಗದಗ	1
ಬಳ್ಳಾರಿ	3
ಚಿತ್ರದುರ್ಗ	9
ವಿಜಯಪುರ	3
ಹಾಸನ	3
ದಾವಣಗೆರೆ	14
ಮಡಿಕೇರಿ	2
ಕೊಪ್ಪಳ	4
ಬೆಂಗಳೂರು ನಗರ	23
ಬೆಳಗಾವಿ	11
ಕಲಬುರ್ಗಿ	15
ಕೋಲಾರ	3
ಚಿಕ್ಕಬಳ್ಳಾಪುರ	0
ಒಟ್ಟು	188

ರಾಜ್ಯದಲ್ಲಿ ಜಾನುವಾರು ಗಣತಿ

ವರ್ಷ	ದನ	ಎಮ್ಮೆ	ಕುರಿ	ಆಡು	ಹಂದಿ
2007	1,05,07,325	43,29,076	95,65,696	61,57,134	2,79,763
2012	95,16,484	34,70,505	95,83,761	47,96,147	3,04,798
2019	84,69,004	29,84,260	1,10,50,728	61,69,392	3,23,836

ಪಶು ಸಂಗೋಪನೆ ಇಲಾಖೆಯ ಸಿಬ್ಬಂದಿ ಅಂಕಿಅಂಶ

ಮಂಜೂರಾದ ಹುದ್ದೆ	18,560
ಕಾರ್ಯನಿರ್ವಹಣೆ	9,891

ರಾಜ್ಯದಲ್ಲಿರುವ ಗೋಶಾಲೆಗಳು

ಸರ್ಕಾರಿ	0
ಖಾಸಗಿ (ಸೇವಾಟ್ರಸ್ಟ್, ಮಠ)	188

ರಾಜ್ಯದಲ್ಲಿರುವ ಪಶುವೈದ್ಯಕೀಯ ಸಂಸ್ಥೆಗಳು

ಪಾಲಿ ಕ್ಲಿನಿಕ್	30
ಪಶು ಆಸ್ಪತ್ರೆ	665
ಪಶು ಚಿಕಿತ್ಸಾಲಯ	2,135
ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ	1,206
ಸಂಚಾರಿ ಪಶು ಚಿಕಿತ್ಸಾಲಯ	176
ಒಟ್ಟು	4212*

(* 1206 ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳಲ್ಲಿ ಪಶುವೈದ್ಯ ಹುದ್ದೆ ಇಲ್ಲ)

ಗೋವುಗಳ ನಿರ್ವಹಣೆಗೆ ಸಾಲುತ್ತಿಲ್ಲ ಅನುದಾನ

• ಚಂದ್ರಹಾಸ ಹಿರೇಮಳಲಿ/ ನಾಗರಾಜ್ ಜಿ.ಬಿ.

ಶಿವಮೊಗ್ಗ/ಚಿತ್ರದುರ್ಗ: ರಾಜ್ಯದಲ್ಲಿ 188 ಖಾಸಗಿ ಗೋಶಾಲೆಗಳಿವೆ. ಇವುಗಳಲ್ಲಿ 50 ಸಾವಿರಕ್ಕೂ ಹೆಚ್ಚು ರಾಸುಗಳಿಗೆ ಆಶ್ರಯ ಕಲ್ಪಿಸಲಾಗಿದೆ. 78 ಗೋಶಾಲೆಗಳಿಗೆ ಸರ್ಕಾರ ಅನುದಾನ ನೀಡುತ್ತಿದೆ. ಉಳಿದವು ಸಮುದಾಯ, ದಾನಿಗಳ ನೆರವಿನಲ್ಲಿ ನಡೆಯುತ್ತಿವೆ. ಪ್ರಸ್ತುತ ಪ್ರತಿ ತಾಲ್ಲೂಕಿನಲ್ಲಿ ಎರಡು ಸರ್ಕಾರಿ ಗೋಶಾಲೆ ಸ್ಥಾಪಿಸಲು ಸಿದ್ಧತೆ ನಡೆದಿದೆ.

ಗೋಶಾಲೆಗೆ ಸರ್ಕಾರ ನೀಡುತ್ತಿರುವ ಅನುದಾನ 'ಆನೆ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ'ಯಂತಾಗಿದೆ. ಮೇವು, ನೀರು ಹಾಗೂ ವೈದ್ಯಕೀಯ ಸೌಲಭ್ಯಕ್ಕೆ ದಾನಿಗಳ ನೆರವು ಪಡೆಯುವುದು ಅನಿವಾರ್ಯವಾಗಿದೆ. ಗೋಶಾಲೆಯ ಜಾನುವಾರು ಒಂದಕ್ಕೆ ನಿತ್ಯ ₹ 17.50 ಅನುದಾನ ನಿಗದಿ ಮಾಡ ಲಾಗಿದೆ. ಅನುದಾನದ ಮಾನದಂಡ ದಶಕದಿಂದ ಬದಲಾಗಿಲ್ಲ. ಬೆಲೆ ಏರಿಕೆಯ ಈ ದಿನಗಳಲ್ಲಿ ಅನುದಾನ ಸಾಕಾಗುತ್ತಿಲ್ಲ. ಇದರಿಂದ ಹಲವು ಗೋಶಾಲೆಗಳ ನಿರ್ವಹಣೆಗೆ ಟ್ರಸ್ಟಿಗಳು ಪರದಾಡುತ್ತಿದ್ದಾರೆ.

ಒಂದು ಜಾನುವಾರಿಗೆ ನಿತ್ಯ ಸರಾಸರಿ ಐದು ಕೆ.ಜಿ. ಮೇವಿನ ಅಗತ್ಯವಿದೆ. ಮಾರುಕಟ್ಟೆ ಬೆಲೆಯಲ್ಲಿ ಮೇವು ಖರೀದಿಸಿ ಗೋಶಾಲೆಗೆ ತರುವಷ್ಟರಲ್ಲಿ ಪ್ರತಿ ಕೆ.ಜಿ. ಮೇವಿಗೆ ₹4 ತಗುಲುತ್ತಿದೆ. ನೀರು, ವೈದ್ಯಕೀಯ ವೆಚ್ಚ ಸೇರಿ ಇತರ ಸೌಲಭ್ಯಕ್ಕೆ ಪರ್ಯಾಯ ಮಾರ್ಗದಲ್ಲಿ ಹಣ ಹೊಂದಿಸಬೇಕಾಗುತ್ತದೆ. ಬೇಸಿಗೆಯಲ್ಲಿ ಮೇವಿಗೆ ಕೊರತೆ ಉಂಟಾದರೆ ಸಮಸ್ಯೆ ಬಿಗಡಾಯಿಸುತ್ತದೆ.

'ಗೋಶಾಲೆಯ ರಾಸುಗಳಿಗೆ ರಾಗಿ, ಭತ್ತದ ಹುಲ್ಲು, ಮೆಕ್ಕೆಜೋಳ, ಬಿಳಿಜೋಳದ ಸೊಪ್ಪೆ ಅಗತ್ಯವಿದೆ. ಶೇಂಗಾ, ಹತ್ತಿ ಹಿಂಡಿ, ಬೂಸಾ ಕೂಡ ನೀಡುತ್ತೇವೆ. ಒಂದು ಕೆ.ಜಿ. ಶೇಂಗಾ ಹಿಂಡಿ ಬೆಲೆ ₹40 ಆಗಿದೆ. ಸರ್ಕಾರ ನೀಡುವ ಅನುದಾನ ಮೇವಿಗೂ ಸಾಲುತ್ತಿಲ್ಲ' ಎನ್ನುತ್ತಾರೆ ಚಳ್ಳಕೆರೆ ತಾಲ್ಲೂಕಿನ ಬೊಮ್ಮದೇವರಹಟ್ಟಿಯ ಮುತ್ತೈಗಳ ಸ್ವಾಮಿ ಗೋಶಾಲೆಯ ಮುಖ್ಯಸ್ಥ ಡಿ.ಸಿ.ಪ್ರಹ್ಲಾದ್ ಅವರು.

ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಕಾಯ್ದೆ ಅನುಷ್ಠಾನಗೊಂಡ ಬಳಿಕ ಖಾಸಗಿ ಗೋಶಾಲೆಗಳಿಗೆ ಬರುವ ಜಾನುವಾರುಗಳ ಸಂಖ್ಯೆಯಲ್ಲಿ ಸ್ವಲ್ಪ ಹೆಚ್ಚಳವಾಗಿದೆ. 'ನಮ್ಮ ಗೋಶಾಲೆಯಲ್ಲಿ 360 ಜಾನುವಾರುಗಳಿವೆ. ಹೊಸ ಕಾನೂನು ಜಾರಿಗೆ ಬಂದ ನಂತರ ಐದಾರು ರಾಸುಗಳು ಹೆಚ್ಚುವರಿಯಾಗಿ ಸೇರಿವೆ. ಮೂಲಸೌಲಭ್ಯಕ್ಕೆ ಅನುಗುಣವಾಗಿ ರಾಸುಗಳಿಗೆ ಆಶ್ರಯ ಕಲ್ಪಿಸಲಾಗುತ್ತಿದೆ. ಅದಕ್ಕಿಂತ ಹೆಚ್ಚಾದರೆ ನಿರ್ವಹಣೆ ಕಷ್ಟ' ಎನ್ನುತ್ತಾರೆ 16 ವರ್ಷಗಳ ಹಿಂದೆ ಆರಂಭವಾದ ಶಿವಮೊಗ್ಗದ ಮಹಾವೀರ ಗೋಶಾಲೆಯ ಮುಖ್ಯಸ್ಥ ಹೀರಾಚಂದ್ ಜೈನ್.

ಸರ್ಕಾರಿ ಗೋಶಾಲೆಗೆ ಸಿದ್ಧತೆ: ಸರ್ಕಾರಿ ಗೋಶಾಲೆ ನಿರ್ಮಾಣಕ್ಕೆ ಎಲ್ಲೆಡೆ ಸಿದ್ಧತೆಗಳು ನಡೆಯುತ್ತಿವೆ. ಪ್ರತಿ ತಾಲ್ಲೂಕಿನಲ್ಲಿ ಎರಡು ಗೋಶಾಲೆ ಸ್ಥಾಪಿಸಲು ಸ್ಥಳ ಗುರುತಿಸುವಂತೆ ಸರ್ಕಾರ ಸೂಚಿಸಿದೆ. ಕಂದಾಯ ಭೂಮಿ, ಗೋಮಾಳ, ಖರಾಬು ಜಮೀನು ಗುರುತಿಸುವ ಪ್ರಕ್ರಿಯೆ ಆರಂಭವಾಗಿದೆ. ಸರ್ಕಾರಿ ಗೋಶಾಲೆಯ ರೂಪುರೇಷೆ ಇನ್ನಷ್ಟೇ ಸಿದ್ಧವಾಗಬೇಕಿದೆ. ಸರ್ಕಾರದ ಅನುದಾನ ಪಡೆಯದೆ, ಕೇವಲ ಸಮುದಾಯ, ದಾನಿಗಳ ನೆರವು ಪಡೆದು ನಡೆಸುತ್ತಿರುವ ಗೋಶಾಲೆಗಳಿಗೆ ಸ್ಥಳೀಯ ಶಾಸಕರು, ಸಂಸದರು ಮತ್ತಿತರ ಜನಪ್ರತಿನಿಧಿಗಳು ಕೆಲವು ಬಾರಿ ಅನುದಾನ ನೀಡಿದ್ದಾರೆ. ಹೀಗೆ ವರ್ಷಕ್ಕೆ ಬರುವ 3– 4 ಲಕ್ಷ ರೂಪಾಯಿ ಅನುದಾನ ಯಾವುದಕ್ಕೂ ಸಾಲದು ಎನ್ನುವುದು ನಿರ್ವಾಹಕರ ಅಳಲು.

ರಾಗಿ, ಭತ್ತದ ಹುಲ್ಲಿನ ಬೆಲೆ ಏರಿಕೆಯಾಗಿದೆ. ಸಾರಿಗೆ ವೆಚ್ಚವೂ ಅಧಿಕವಾಗುತ್ತಿದೆ. ಪ್ರತಿ ರಾಸುವಿನ ನಿರ್ವಹಣೆಗೆ ನೀಡುವ ಅನುದಾನ ಹೆಚ್ಚಿಸುವಂತೆ ಬೇಡಿಕೆ ಇಟ್ಟಿದ್ದೇವೆ.

ಡಿ.ಸಿ.ಪ್ರಹ್ಲಾದ್. ಮುಖ್ಯಸ್ಥ, ಮುತ್ತೈಗಳ ಸ್ವಾಮಿ ಗೋಶಾಲೆ

300ಕ್ಕೂ ಹೆಚ್ಚು ಜಾನುವಾರು ಸಾಕಲು ವರ್ಷಕ್ಕೆ ₹ 50 ಲಕ್ಷಕ್ಕೂ ಹೆಚ್ಚು ಖರ್ಚು ಬರುತ್ತದೆ. ದಿಢೀರ್ ಸಂಖ್ಯೆ ಹೆಚ್ಚಾದಾಗ ನಿರ್ವಹಣೆ ಸವಾಲಿನ ಕೆಲಸ. ಅದಕ್ಕೆ ತಕ್ಕಂತೆ ಸರ್ಕಾರವೂ ನೆರವಾಗಬೇಕು.

ಹೀರಾಚಂದ್ ಜೈನ್, ಮುಖ್ಯಸ್ಥ, ಮಹಾವೀರ ಗೋಶಾಲೆ

ಗೋಮಾಳವೆಂಬ ಗೋಜಲು

ಒಂದನೇ ಪುಟದಿಂದ

ಆದರೆ, ಅಕ್ರಮವಾಗಿ ಸಾಗುವಳಿ ಚೀಟಿ ಮಾಡಿಸಿಕೊಂಡು ಈ ಜಮೀನನ್ನು ರಾಜಕಾರಣಿಗಳಿಂದ ಹಿಡಿದು, ಕಂದಾಯ ಇಲಾಖೆಯ ನೌಕರರವರೆಗೆ ಎಲ್ಲರೂ ಸ್ವಂತಕ್ಕೆ ಬಳಸಿಕೊಂಡಿರುವ ಉದಾಹರಣೆಗಳಿವೆ. ಇವುಗಳ ಈಗಿನ ಮೌಲ್ಯ ನೂರಾರು ಕೋಟಿ ರೂಪಾಯಿ.

ತೆರವಿಗೆ ಇಲ್ಲ ಇಚ್ಛಾಶಕ್ತಿ: ಮಂಡ್ಯ ಸೇರಿದಂತೆ ಕೆಲವು ಜಿಲ್ಲೆಗಳಲ್ಲಿ ಗೋಮಾಳಗಳಲ್ಲಿ ಅಕ್ರಮವಾಗಿ ಕಲ್ಲು ಗಣಿಗಾರಿಕೆ ನಡೆಯುತ್ತಿದೆ. ಹಲವೆಡೆ ಶಾಲೆಗಳಿಗೆ ಜಾಗ ನೀಡಲಾಗಿದೆ. ಸ್ಮಶಾನಗಳಾಗಿಯೂ ಬಳಕೆಯಾಗುತ್ತಿವೆ. ಚಿಕ್ಕಮಗಳೂರು, ಕೊಡಗು ಭಾಗದಲ್ಲಿ ಒತ್ತುವರಿಯಾದ ಎಕರೆಗಟ್ಟಲೆ ಜಾಗದಲ್ಲಿ ಅನುಕೂಲಸ್ಥರು ಕಾಫಿ, ಟೀ ಎಸ್ಟೇಟ್ ಮಾಡಿಕೊಂಡಿದ್ದಾರೆ. ಅತಿಕ್ರಮಣಕ್ಕೆ ಸಂಬಂಧಿಸಿದ ಹಲವು ದೂರುಗಳು ಕಂದಾಯ ಇಲಾಖೆಯ ಕಚೇರಿಗಳಲ್ಲಿ ದೂಳು ತಿನ್ನುತ್ತಿವೆ. ಕೆಲವು ಪ್ರಕರಣಗಳು ನ್ಯಾಯಾಲಯಗಳಲ್ಲಿವೆ. ತೆರವು ಮಾಡುವಂತೆ ಕೋರ್ಟ್ ಆದೇಶ ನೀಡಿದರೂ ಕಾರ್ಯಾಚರಣೆಗೆ ಸ್ಥಳೀಯಾಡಳಿತಗಳು ಮುಂದಾಗುತ್ತಿಲ್ಲ ಎಂಬ ಆರೋಪಗಳಿವೆ.

ರಾಜ್ಯ ಸರ್ಕಾರ ಕರ್ನಾಟಕ ಭೂ ಕಂದಾಯ ಕಾಯ್ದೆ 1964ಕ್ಕೆ ತಿದ್ದುಪಡಿ ತಂದು 192ಎ ಅನ್ವಯ ಒತ್ತುವರಿದಾರರನ್ನು ತೆರವುಗೊಳಿಸಲು ಅವಕಾಶ ಕಲ್ಪಿಸಿದೆ.

ಸರ್ಕಾರಿ ಭೂಮಿ ಒತ್ತುವರಿ ತಡೆಗಟ್ಟಲು ಎ.ಟಿ. ರಾಮಸ್ವಾಮಿ, ಬಾಲಸುಬ್ರಹ್ಮಣ್ಯ ನೇತೃತ್ವದ ಸಮಿತಿಗಳ ವರದಿಗಳ ಅನ್ವಯ ಕೋರ್ಟ್ ಆದೇಶದಂತೆ ಸರ್ಕಾರಿ ಭೂಸಂರಕ್ಷಣೆ ಮತ್ತು ಒತ್ತುವರಿ ಜಮೀನು ತೆರವುಗೊಳಿಸಲು 2013ರಲ್ಲಿಯೇ ಅಂದಿನ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಲ್ಲ ಜಿಲ್ಲಾಧಿಕಾರಿಗಳಿಗೆ ಸೂಚಿಸಿದ್ದರು. ಆದರೆ, ಆ ಆದೇಶ ಸಮರ್ಪಕವಾಗಿ ಅನುಷ್ಠಾನಗೊಂಡಿಲ್ಲ.

ಅಕ್ರಮ– ಸಕ್ರಮ: '1978ಕ್ಕೆ ಮುಂಚಿನ ಗೋಮಾಳ ಜಮೀನು ಸಾಗುವಳಿ ಪ್ರಕರಣಗಳು ಸಕ್ರಮವಾಗಿವೆ. ಆದರೆ, 1989ಕ್ಕೆ ಮುಂಚಿನ ಪ್ರಕರಣಗಳಲ್ಲಿ ನಮೂನೆ 50ರ ಅಡಿ ಹಾಗೂ 1999ಕ್ಕೆ ಮೊದಲಿನ ನಮೂನೆ 53 ಅಡಿ ಪ್ರಕರಣಗಳಲ್ಲಿ ಅರ್ಜಿಗಳು ವಿಲೇವಾರಿಯಾಗಿಲ್ಲವೆಂದು 2017ರಲ್ಲಿ ರಾಜ್ಯ ಸರ್ಕಾರ ಗೋಮಾಳ ಜಮೀನು ಸಾಗುವಳಿಯನ್ನೂ ಸಕ್ರಮ ಮಾಡುವ ನಿರ್ಣಯ ತೆಗೆದುಕೊಂಡಿತ್ತು. ಸಂಪುಟದ ತೀರ್ಮಾನ ಆಧರಿಸಿ ಭೂಮಂಜೂರಾತಿ ಕಂದಾಯ ನಿಯಮಾವಳಿಯಲ್ಲಿ ತಿದ್ದುಪಡಿ ಮಾಡಿ ಬಾಕಿ ಅರ್ಜಿಗಳನ್ನು ವಿಲೇವಾರಿ ಮಾಡಲಾಗುತ್ತದೆ.

ಕಡತದಲ್ಲಷ್ಟೆ ಆದೇಶ!

'ಕರ್ನಾಟಕ ಭೂ ಕಂದಾಯ ನಿಯಮಾವಳಿಗಳು 1966 ನಿಯಮ 97 (1) ರ ಪ್ರಕಾರ ಪ್ರತಿಯೊಂದು ಗ್ರಾಮದಲ್ಲಿ ಪ್ರತಿ 100 ಜಾನುವಾರುಗಳಿಗೆ 12 ಹೆಕ್ಟೇರ್ ಗೋಮಾಳ, ಗಾಯರಾಣ, ಹುಲ್ಲು ಬನ್ನಿ ಜಮೀನನ್ನು ಕಾಯ್ದಿರಿಸಬೇಕು. ಅದಕ್ಕಿಂತ ಹೆಚ್ಚಿನ ಭೂಮಿ ಲಭ್ಯ ಇದ್ದರೆ ಮಾತ್ರ ಕರ್ನಾಟಕ ಭೂ ಕಂದಾಯ ಕಾಯ್ದೆ 94ಎ, ಬಿ ಮತ್ತು ಸಿ ಪ್ರಕಾರ ಅನಧಿಕೃತವಾಗಿ ಸಾಗುವಳಿ ಮಾಡುವವರಿಗೆ ಸಕ್ರಮಗೊಳಿಸಲು ಅವಕಾಶವಿದೆ ಎಂದು 2006 ನ. 18ರಂದು ಹೈಕೋರ್ಟ್ ಆದೇಶ ನೀಡಿದೆ. ಈ ಆದೇಶದ ಮೇರೆಗೆ 2007ರಲ್ಲಿ ಆದೇಶ ಹೊರಡಿಸಿದ್ದ ಸರ್ಕಾರ, 1966 ನಿಯಮ 97 (1)ರ ಪ್ರಕಾರ ಗೋಮಾಳ ಇದೆಯೇ ಎಂದು ಜಿಲ್ಲಾಧಿಕಾರಿಗಳು ಪರಿಶೀಲಿಸಬೇಕು. ಹೆಚ್ಚಿದ್ದರೆ ಮಾತ್ರ ಆ ಜಾಗದಲ್ಲಿ ಅಕ್ರಮವಾಗಿ ಸಾಗುವಳಿ ಮಾಡುವವರು ಸಕ್ರಮಗೊಳಿಸಲು ಅರ್ಜಿ ಸಲ್ಲಿಸಬಹುದು. ಅದಕ್ಕಿಂತ ಕಡಿಮೆ ಇದ್ದರೆ ಸಕ್ರಮಕ್ಕೆ ಅವಕಾಶ ಇಲ್ಲ. ಖಾಸಗಿ ಸಂಸ್ಥೆಗೆ, ವ್ಯಕ್ತಿಗೆ ಅಥವಾ ಗಣಿಗಾರಿಕೆಗೆ ಮಂಜೂರು ಮಾಡಬಾರದು ಎಂದು ಕಂದಾಯ ಇಲಾಖೆಯ ಆದೇಶದಲ್ಲಿದೆ.

ಗುಂಡಣ್ಣ

25 ವರ್ಷಗಳ ಹಿಂದೆ

ಗುರುವಾರ, 7-3-1996

• **ಸಂಸತ್ತಿನಲ್ಲಿ ಕೋಲಾಹಲ ಕಲಾಪ ಮುಂದೂಡಿಕೆ**

ನವದೆಹಲಿ, ಮಾರ್ಚ್ 6 (ಪಿಟಿಐ, ಯುಎನ್‌ಐ)– ಹವಾಲ ಪ್ರಕರಣದಲ್ಲಿ ಸಿಬಿಐಗೆ ಸುಪ್ರೀಂ ಕೋರ್ಟ್ ನೀಡಿದ ಆದೇಶ ಪ್ರಧಾನಿ ಪಿ.ವಿ. ನರಸಿಂಹರಾವ್ ವಿರುದ್ಧದ 'ಖಂಡನೆ'ಯಾಗಿದ್ದು, ಈ ಹಿನ್ನೆಲೆಯಲ್ಲಿ ಅವರು ರಾಜೀನಾಮೆ ಕೊಡಬೇಕು ಎಂದು ಪ್ರತಿಪಕ್ಷಗಳು ಇಂದು ಸಂಸತ್ತಿನಲ್ಲಿ ಬಿಗಿಪಟ್ಟು ಹಿಡಿದಿದ್ದರಿಂದ ತೀವ್ರ ಕೋಲಾಹಲ ಉಂಟಾಗಿ ಅಧಿಕೃತ ಕಲಾಪ ನಡೆಯದೆ ಉಭಯ ಸದನಗಳನ್ನು ನಾಳೆಗೆ ಮುಂದೂಡಲಾಯಿತು.

ಲೋಕಸಭೆಯನ್ನು ಭಾರಿ ಗದ್ದಲದಿಂದಾಗಿ ಎರಡು ಸಲ ಮುಂದೂಡಿ ಕೊನೆಗೆ ನಾಳೆಗೆ ಮುಂದೂಡಲಾಯಿತು.

50 ವರ್ಷಗಳ ಹಿಂದೆ

ಭಾನುವಾರ, 7-3-1971

• **ರಾಜ್ಯದ 14 ಕ್ಷೇತ್ರಗಳಲ್ಲಿ ಇಂದು ಮತದಾನ**

ಬೆಂಗಳೂರು, ಮಾರ್ಚ್ 6– 75 ಲಕ್ಷ ಮಂದಿ ಮತದಾರರಿರುವ 14 ಲೋಕಸಭಾ ಕ್ಷೇತ್ರಗಳಲ್ಲಿ ನಾಳೆ ಮತದಾನ ಮುಗಿಯುವುದರೊಂದಿಗೆ, ಮೈಸೂರು ರಾಜ್ಯದಲ್ಲಿ ಮಧ್ಯಂತರ ಚುನಾವಣೆ ಚಟುವಟಿಕೆಗಳು ಮುಕ್ತಾಯಗೊಳ್ಳಲಿವೆ.

ಕೇಂದ್ರ ಸಚಿವರಾದ ಕೆಂಗಲ್ ಹನುಮಂತಯ್ಯ (ಬೆಂಗಳೂರು), ಡಾ.ವಿ.ಕೆ.ಆರ್.ವಿ.ರಾವ್ (ಬಳ್ಳಾರಿ) ಮತ್ತು ಡಾ.ಸರೋಜಿನಿ ಮಹಿಷಿ (ಧಾರಾವಾಡ ಉತ್ತರ) ಅವರ ಕ್ಷೇತ್ರಗಳಲ್ಲಿ ನಾಳೆ ಮತದಾನ ನಡೆಯುವುದು.

ಒಟ್ಟು 27 ಲೋಕಸಭಾ ಕ್ಷೇತ್ರಗಳ ಪೈಕಿ 13 ಕ್ಷೇತ್ರಗಳಲ್ಲಿ ಮತದಾನ ಮಾರ್ಚ್ 4ರಂದು ನಡೆಯಿತು.

ದಿನ ಭವಿಷ್ಯ

ಭಾನುವಾರ, 7 ಮಾರ್ಚ್ 2021

ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಮಾಘ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಪೂರ್ವಭಾದ್ರ ನವಮೀ ಗಂ. 31-51 (ರಾ. 7-23) ಭಾನುವಾರ ನಿತ್ಯ ನಕ್ಷತ ಮೂಲ ಗಂ. 41-59 (ರಾ. 11-26) ಸಿದ್ಧಿ ನಾಮ ಯೋಗ ಗಂ. 29-27 ತೈತಲ ಕರಣ ಗಂ. 4-24 ಉಪರಿ ಗರಜ ಕರಣ ಗಂ. 27-27 ವಿಷ. ಗಂ. 38-10 ಅಮೃತ ಗಂ. 27-6: ರಾಹುಕಾಲ: ಮ. ಗಂ. 4-30ರಿಂದ 6-00 ಗುಳಿಕ ಮ. ಕಾಲ ಗಂ 3-00ರಿಂದ 4-30 ಯಮಗಂಡ ಕಾಲ ಮ. ಗಂ 12-00 ರಿಂದ 1-30 ಸೂರ್ಯೋದಯ: 6-36 ಸೂರ್ಯಾಸ್ತ: 6-26 ಅದೃಷ್ಟ ಸಂಖ್ಯೆ 1, 4, 9

ಮೇಷ: ಸ್ನೇಹಿತರು ಮತ್ತು ಬಂಧುಗಳೊಂದಿಗಿನ ಸಂಬಂಧಗಳು ಗಟ್ಟಿಗೊಳ್ಳುವ ಸಾಧ್ಯತೆ ಕಂಡುಬರುತ್ತಿದೆ. ಮನೆಯ ಜವಾಬ್ದಾರಿ ನಿರ್ವಹಿಸುವಲ್ಲಿ ನಿರ್ಲಕ್ಷ್ಯ ಸಲ್ಲದು. ಮನೆಯವರ ಮನ ಮೆಚ್ಚಿಸಲು ಅನ್ಯ ಮಾರ್ಗ ಸರಿಯಾಗಲಾರದು.

ವೃಷಭ: ಮುಂದಾಲೋಚನೆಯಿಂದ ಮುಂಬರುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲಿದ್ದೀರಿ. ಸಮಾಜ ಕಲ್ಯಾಣ ಕಾರ್ಯಕ್ಕಾಗಿ ನಿಮ್ಮ ಸಲಹೆ ಸಹಕಾರ ನೀಡಬೇಕಾದ ಅನಿವಾರ್ಯತೆ ಉಂಟಾಗಬಹುದು. ಆದಾಯದಲ್ಲಿ ಹೆಚ್ಚಳ.

ಮಿಥುನ: ಅಲಂಕಾರಿಕ ವಸ್ತುಗಳನ್ನು ಖರೀದಿಸಲಿದ್ದೀರಿ. ಸರಳ ವಿವಾಹದ ನಿಶ್ಚಯದಿಂದಾಗಿ ಮನೆಯಲ್ಲಿ ಸಂತಸ ಮೂಡಿಸಲಿದ್ದೀರಿ. ಮಹಿಳೆಯರಿಗೆ ಸಂಗಾತಿಯಿಂದ ವಿಶೇಷ ಉಡುಗೊರೆ ದೊರೆಯಲಿದೆ.

ಕರ್ಕಾಟಕ: ಪ್ರಸಿದ್ಧ ಸಂಸ್ಥೆಯೊಂದಕ್ಕೆ ಸಲಹೆಗಾರರಾಗಿ ಸೇವೆ ಸಲ್ಲಿಸುವ ಅವಕಾಶ ನಿಮ್ಮದಾಗಲಿದೆ. ಗುಪ್ತ ಆಸ್ತಿ ಖರೀದಿಯ ಸಾಧ್ಯತೆ ಕಂಡುಬರುತ್ತಿದೆ. ತುರ್ತು ವಿಷಯಗಳ ಬಗ್ಗೆ ಗಮನ ಹರಿಸುವಿರಿ.

ಸಿಂಹ: ಕೆಲಸ ಕಾರ್ಯಗಳಲ್ಲಿ ಪೂರ್ಣ ನಿಮ್ಮನ್ನು ತೊಡಗಿಸಿಕೊಳ್ಳಲಿದ್ದೀರಿ. ನಿಮ್ಮ ಜವಾಬ್ದಾರಿಗಳನ್ನು ಬೇರೆಯವರಿಗೆ ವರ್ಗಾಯಿಸುವುದರಿಂದ ನೆಮ್ಮದಿಯನ್ನು ಅನುಭವಿಸಲಿದ್ದೀರಿ.

ಕನ್ಯಾ: ವೃತ್ತಿ ಜೀವನದಲ್ಲಿ ಬದಲಾವಣೆ ಸಾಧ್ಯತೆ ಕಂಡುಬರುತ್ತಿದೆ. ಆದಾಯದಲ್ಲಿ ಹೆಚ್ಚಳದ ನಿರೀಕ್ಷೆ ಇದೆ. ಶಿಕ್ಷಣ ಕ್ಷೇತ್ರದಲ್ಲಿರುವವರ ಸೇವೆ ಗಮನಿಸಿ ಸಾಮಾಜಿಕ ಗೌರವ ಪ್ರಾಪ್ತ. ಸಂಗಾತಿಯ ಮಾತಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡುವುದು ಉಚಿತ.

ತುಲಾ: ಅನಗತ್ಯ ಮಾತುಕತೆ, ಚರ್ಚೆಗಳಲ್ಲಿ ಭಾಗವಹಿಸದಿರುವುದೇ ಉತ್ತಮ. ವಕೀಲ ವೃತ್ತಿಯಲ್ಲಿರುವವರಿಗೆ ಬಿಡುವಿನ ದಿನವಾಗಲಿದೆ. ಪ್ರಯಾಣ ಪ್ರವಾಸಗಳಿಗೆ ಶುಭದಿನವಾಗಲಿದೆ. ಚಿನ್ನಾಭರಣ ವ್ಯಾಪಾರಿಗಳಿಗೆ ವಿಶೇಷ ಲಾಭ.

ವೃಶ್ಚಿಕ: ಬಂಧುವೊಬ್ಬರ ಮನೆಯಲ್ಲಿ ಸಂಜೆಯವರೆಗೂ ವಿಶೇಷ ಸಮಾರಂಭಗಳಲ್ಲಿ ಭಾಗಿಯಾಗಿ ಭೋಜನಕೂಟದಲ್ಲಿ ಭಾಗವಹಿಸುವ ಸಾಧ್ಯತೆ ಕಂಡುಬರುತ್ತಿದೆ. ಮನೆಯವರ ವಿಷಯದಲ್ಲಿ ಉದಾಸೀನ ಸಲ್ಲದು.

ಧನು: ನಿಮ್ಮ ರಾಜಕೀಯ ವಿಷಯದಲ್ಲಿ ಬದಲಾವಣೆಯೊಂದನ್ನು ಕಾಣಲಿದ್ದೀರಿ. ನಿಮ್ಮ ಪ್ರಭಾವದಿಂದಾಗಿ ನೆರೆ ಹೊರೆಯವರ ಸಮಸ್ಯೆಗಳನ್ನು ಪರಿಹಾರ ಮಾಡಲಿದ್ದೀರಿ. ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ ದೊರೆಯುವ ಸಾಧ್ಯತೆ.

ಮಕರ: ವಿದ್ಯಾರ್ಥಿಗಳು ಉನ್ನತ ವ್ಯಾಸಂಗಕ್ಕಾಗಿ ಶ್ರಮವಹಿಸಿ ಮಾಡಿದ ಸಾಧನೆಯ ಸಂತಸವನ್ನು ಮನೆಯವರೊಂದಿಗೆ ಹಂಚಿಕೊಳ್ಳಲಿದ್ದೀರಿ. ಸರ್ಕಾರಿ ನೌಕರರಿಗೆ ಸ್ಥಾನ ಪಲ್ಲಟ ಇಲ್ಲವೇ ಪದೋನ್ನತಿಯಿಂದಾಗಿ ಉತ್ತಮ ಆದಾಯ.

ಕುಂಭ: ಆಭರಣ ತಯಾರಿಕೆ, ಗೃಹಾಲಂಕಾರ ಸಾಮಗ್ರಿ ಮುಂತಾದ ಕರಕುಶಲ ವೃತ್ತಿಗಳಲ್ಲಿ ತೊಡಗಿದವರಿಗೆ ಹೆಚ್ಚಿನ ವರಮಾನ ದೊರಕಲಿದೆ. ನಿರ್ಮಾಣ ಕೆಲಸಗಳು ಚುರುಕು ಪಡೆದುಕೊಳ್ಳುತ್ತವೆ. ಸಂಸಾರದಲ್ಲಿ ನೆಮ್ಮದಿ.

ಮೀನ: ನೌಕರಸ್ಥರಿಗೆ ವಿಶೇಷ ಸ್ಥಾನಮಾನ ದೊರಕಲಿದೆ. ಪದೋನ್ನತಿಯಿಂದಾಗಿ ಆರ್ಥಿಕ ಸುಧಾರಣೆ ಕಾಣಲಿದ್ದೀರಿ. ಚಿನ್ನಾಭರಣ ಖರೀದಿ ಸಾಧ್ಯತೆ. ಮನೆಗೆ ಹೊಸ ಸದಸ್ಯರ ಸೇರ್ಪಡೆಯ ಸಂಭ್ರಮ ಸಾಧ್ಯತೆ.

ನಿಮ್ಮ ಜನ್ಮದಿನ 7-ಮಾರ್ಚ್ **ದಿನವು ಅತ್ಯಂತ ಶುಭಕರವಾಗಿದ್ದು, ಹೊಸ ಆಸ್ತಿಗಳನ್ನು ಖರೀದಿಸಲಿದ್ದೀರಿ. ಹೊಸ ಯೋಜನೆಗಳನ್ನು ಪ್ರಾರಂಭಿಸುವ ವಿಚಾರದಲ್ಲಿ ಎಚ್ಚರಿಕೆಯ ನಡೆಯ ಅಗತ್ಯ ಕಂಡುಬರುವುದು. ವರ್ಷಪೂರ್ತಿ ಸಂತೋಷ ಮನೆಮಾಡಲಿದೆ. ಕುಟುಂಬ ಸದಸ್ಯರೊಂದಿಗೆ ಸಮಾಲೋಚಿಸಿ ಹೊಸ ನಿವೇಶನ ವಾ ಆಸ್ತಿ ಖರೀದಿ ಸಾಧ್ಯತೆ.**

ಪದಬಂಧ 4529

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಮಂಗಳ ಕಾರ್ಯವಾದ ನಂತರದ ಜಳಕ (6)
4.ರೋಗವು ಗುಣವಾಗುವ ಸ್ಥಿತಿ (4)
5.ಜಗಳಕ್ಕೆ ಸನ್ನದ್ಧನಾದವ ತೋರಿದ ಅಧಿಕಾರ ಪತ್ರ (3)
7.ನೀರ ಮೇಲಣ ಗುಳ್ಳೆ (3)
10.ರೀತಿಯೊಡನೆ ಬರುವ ಸಂಪ್ರದಾಯ (3)
11.ಜಗಳಕ್ಕೊಂದು ಪರ್ಯಾಯ ಪದ (3)
13.ರುಚಿಕಟ್ಟಾದ ಅಡುಗೆಯನ್ನು ಹೀಗನ್ನಿ (4)
15.ಚರ್ಚಿಸುವ ಸ್ಥಳವಿದು (6)

ಮೇಲಿಂದ ಕೆಳಕ್ಕೆ
1.ಅಗಸೆ ಬಾಗಿಲ ಬಳಿಯಿರುವ ಮಡಿವಾಳ (3)
2.ನಡುಗುವುದನ್ನು ನೋಡಿದ್ದಕ್ಕೇ ಈ ಮಂದಹಾಸ! (2)
3.ಉಗುರಿನಿಂದಾದ ಪೆಟ್ಟು (4)
6.ಈತ ಕೆಟ್ಟ ನಡತೆಯವನು (4)
7.ಕೋಟೆಯ ಮೇಲಿನ ಕೊತ್ತಳ (3)
8.ಸೇನಾಧಿಪತಿ ಇಲ್ಲಿದ್ದಾನೆ (4)
9.ತೆಳ್ಳಗಿನ ಸೊಂಟವಿದು (4)
12.ಹರನಿಗೆ ಸಲ್ಲಿಸಿದ ಮುಡಿಪು (3)
14. ಕವಿತೆ ಬರೆಯುವವನು (2)



4528ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಿಕಟಕವಿ 4.ಪಾಷಾಂಡಿ 5.ದುರಂತ 6.ಕಮಲ 8.ವನ 9.ಜಾಗ 10.ಒನಕೆ 14.ಲಫಂಗ 15.ಉಬ್ಬಸ 16.ಮರುಕಳಿಸು

ಮೇಲಿಂದ ಕೆಳಕ್ಕೆ:
1.ವಿಮರ್ಶೆ 2.ಟಕ್ಕುತನ 3.ವಿದುರ 4.ಪಾತಕ 7.ಮಲಮಗ 8.ವರ್ಧಮಾನ 9.ಜಾಗತಿಕ 11.ಕೆಲಸ 12.ನಿಗಮ 13.ಮುನಿಸು

ಸುಡೊಕು 4915

9		1			7		3	
			2			1		5
5		2		1	8			7
2		5					7	
				5	3	8		9
	9		8				5	
4		3			2			
	5			4		7		2
7		9	6		5		1	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4914 ಸುಡೊಕು

8	9	5	6	7	2	4	1	3
7	3	1	9	5	4	6	8	2
6	2	4	3	1	8	7	5	9
5	8	3	7	6	9	1	2	4
1	7	6	2	4	5	3	9	8
2	4	9	8	3	1	5	6	7
9	5	7	1	8	3	2	4	6
4	6	2	5	9	7	8	3	1
3	1	8	4	2	6	9	7	5

ನುಡಿನಮನ

ಎನ್‌.ಎಸ್‌.ಎಲ್‌. ಎಂಬ ಶರೀಫ್ ಭಟ್ಟರು

● ಬಿ.ಆರ್.ಲಕ್ಷ್ಮಣರಾವ್

ತಮ್ಮ 84ನೇ ವಯಸ್ಸಿನಲ್ಲಿ ದಿವಂಗತರಾದ ಡಾ.ಎನ್.ಎಸ್.ಲಕ್ಷ್ಮೀನಾರಾಯಣಭಟ್ಟರು ಕನ್ನಡದ ಒಬ್ಬ ಪ್ರಮುಖ ಕವಿಯಾಗಿ, ವಿಮರ್ಶಕರಾಗಿ, ಕಾವ್ಯಾನುವಾದಕರಾಗಿ ಕನ್ನಡ ಸಾರಸ್ವತಲೋಕಕ್ಕೆ ಪರಿಚಿತರು. ಅನೇಕ ಪ್ರತಿಷ್ಠಿತ ಪ್ರಶಸ್ತಿ, ಪುರಸ್ಕಾರಗಳಿಗೆ ಭಾಜನರು. ತಮ್ಮ ಸ್ವಂತ ಕವಿತೆಗಳಿಂದ ಹಾಗೂ ಶೇಕ್ಸ್‌ಪಿಯರನ ಸಾನೆಟ್ಟುಗಳ, ಯೇಟ್ಸ್ ಮತ್ತು ಎಲಿಯಟ್ಟರ ಕವಿತೆಗಳ ತಮ್ಮ ಸೊಗಸಾದ ಅನುವಾದಗಳಿಂದ ಅವರು ಕನ್ನಡ ಕಾವ್ಯಲೋಕದಲ್ಲಿ ಎತ್ತರದ ಸ್ಥಾನ ಪಡೆದಿದ್ದಾರೆ. ಆದರೆ ಜನಸಾಮಾನ್ಯರಿಗೆ ಅವರು ಚಿರಪರಿಚಿತರೂ ಮತ್ತು ಪ್ರಿಯರೂ ಆಗಿರುವುದು ಅವರ ಸುಮಧುರ ಭಾವಗೀತೆಗಳಿಂದ ಮತ್ತು ಮಕ್ಕಳಗೀತೆಗಳಿಂದ (ಶಿಶುಸಾಹಿತ್ಯಕ್ಕಾಗಿ ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಲಭಿಸಿದೆ).

ಇಂದು ರೇಡಿಯೊ, ಟಿವಿ, ಧ್ವನಿಸಾಂದ್ರಿಕೆಗಳು ಮತ್ತು ಅಂತರ್ಜಾಲದಲ್ಲಿ ಅತ್ಯಂತ ಪ್ರಚಲಿತವಾಗಿರುವುದು ಹೆಚ್ಚಾಗಿ ಅವರ ಭಾವಗೀತೆಗಳೇ ಎಂದರೆ ತಪ್ಪಲ್ಲ. 'ನವ್ಯ'ದ ಸಂದರ್ಭದಲ್ಲಿ 'ಕ್ಯಾಸೆಟ್ ಕವಿ' ಎಂಬ ಮೂದಲಿಕೆಗೆ ಕುಗ್ಗದೆ, ಅಗ್ಗದ ಚಿತ್ರಗೀತೆಗಳಿಗೆ ಪರ್ಯಾಯವಾಗಿ ಕಾವ್ಯಗುಣವುಳ್ಳ ಭಾವಗೀತೆಗಳನ್ನು ಕನ್ನಡದ ಕೇಳುಗರಿಗೆ ಒದಗಿಸಿದ ಕೆಚ್ಚೆದೆಯ ಕವಿ ಅವರು. ನಿಸಾರ್ ಅಹಮದ್ ಅವರು ತಮ್ಮ 'ನಿತ್ಯೋತ್ಸವ'ದ ಮೂಲಕ ಭಾವಗೀತೆಗಳಿಗೆ ನೀಡಿದ ಹೊಸ ಆಯಾಮವನ್ನು ವಿಶ್ವದಾದ್ಯಂತ ವಿಸ್ತರಿಸಿದ ಕೀರ್ತಿ ಎನ್ನೆಸ್ಸೆಲ್ ಅವರದ್ದು. ಹೀಗಾಗಿ ಅವರಿಗೊಂದು ಸಾಂಸ್ಕೃತಿಕ ಮಹತ್ವ ತಾನಾಗಿ ಪ್ರಾಪ್ತವಾಗಿದೆ.

ಇನ್ನೊಂದು ಕಾರಣಕ್ಕೂ ಭಟ್ಟರು ಸ್ಮರಣೀಯರು. ಅದು, ಉತ್ತರ ಕರ್ನಾಟಕಕ್ಕಷ್ಟೇ ಪರಿಚಿತವಾಗಿದ್ದ ಸಂತ ಶಿಶುನಾಳ ಶರೀಫ್ ಸಾಹೇಬರ ಅನುಭಾವಗೀತೆಗಳನ್ನು ಸಂಗ್ರಹಿಸಿ, ಸಂಪಾದಿಸಿ, ಪರಿಷ್ಕರಿಸಿ, ಪುಸ್ತಕರೂಪದಲ್ಲಿ ಪ್ರಕಟಿಸಿ, ಅವುಗಳನ್ನು ಇಡೀ ನಾಡಿಗೆ ತಲುಪಿಸಿದ್ದು. ಹಾಗೆಯೇ, ಅನಂತಸ್ವಾಮಿ, ಅಶ್ವತ್ಥ್, ಶಿವಮೊಗ್ಗ ಸುಬ್ಬಣ್ಣ ಮುಂತಾದ ಖ್ಯಾತ ಗಾಯಕರಿಂದ ಅವುಗಳನ್ನು ಹಾಡಿಸಿ, ಕನ್ನಡಿಗರೆಲ್ಲರ ನಾಲಿಗೆಯ ಮೇಲೂ ಅವು ನಲಿಯುವಂತೆ ಮಾಡಿದ್ದು. ತಾವು ಹೋದಲ್ಲೆಲ್ಲ ಶರೀಫರ ಬಗ್ಗೆ ಮಾತಾಡಿ, 'ಶರೀಫ್ ಭಟ್ಟ' ಎಂಬ ಬಿರುದನ್ನು ಗಳಿಸಿದ್ದು.

ಭಟ್ಟರ ಮತ್ತೊಂದು ಅಭಿನಂದನೀಯ ಸಾಧನೆ ಹೀಗಿದೆ: ಅವರು ನಾಲ್ಕು ಬಾರಿ ಅಮೆರಿಕದ ಪ್ರವಾಸ ಮಾಡಿದ್ದಾರೆ. ಅಲ್ಲಿನ ಹಲವಾರು ಕನ್ನಡ ಸಂಘಗಳಲ್ಲಿ ಕನ್ನಡದ ಶ್ರೀಮಂತ ಸಾಹಿತ್ಯ ಪರಂಪರೆಯ ಬಗ್ಗೆ 98 ಉಪನ್ಯಾಸಗಳನ್ನು ನೀಡಿ ಜನಪ್ರಿಯರಾಗಿದ್ದಾರೆ. ಅಮೆರಿಕನ್ನಡಿಗರ ಒತ್ತಾಯದ ಮೇರೆಗೆ, ಕನ್ನಡದ ಅಭಿಜಾತ ಸಾಹಿತ್ಯ ಚರಿತ್ರೆಯ ಬಗ್ಗೆ, ಸರಳವಾಗಿ, ಸಂಕ್ಷಿಪ್ತವಾಗಿ, ಆದರೆ ಸಾರವತ್ತಾಗಿ ತಾವೇ ಮಾತಾಡಿ, ಅದನ್ನು ಧ್ವನಿಸಾಂದ್ರಿಕೆಗಳಲ್ಲಿ ಮುದ್ರಿಸಿ, ಅಂಥ ಐನೂರಕ್ಕೂ ಹೆಚ್ಚು ಪ್ರತಿಗಳನ್ನು ಅಮೆರಿಕದಾದ್ಯಂತ ಹಂಚಿದ್ದಾರೆ. ಕನ್ನಡದ 'ಸೀಮೋಲ್ಲಂಘನ'ಕ್ಕೆ ಹೀಗೆ ತಮ್ಮ ಕೊಡುಗೆ ಸಲ್ಲಿಸಿ ಅವರು ಕೃತಕೃತ್ಯರಾಗಿದ್ದಾರೆ.

ಎನ್ನೆಸ್ಸೆಲ್ ತುಂಬ ಒಳ್ಳೆಯ ಉಪನ್ಯಾಸಕರೆಂದು ತಮ್ಮ ಸೇವಾವಧಿಯುದ್ದಕ್ಕೂ ವಿದ್ಯಾರ್ಥಿಗಳಿಗೆ ಬಹು ಪ್ರಿಯರಾಗಿದ್ದವರು. ಕಾವ್ಯವಿರಲಿ, ಶಾಸ್ತ್ರವಿರಲಿ, ಸಂಶೋಧನೆಯಿರಲಿ ಅವರ ಬೋಧನೆ ಅರೆಕ್ಷಣವೂ ಬೋರಾಗದಂತೆ, ಸತ್ವಪೂರ್ಣವಾಗಿ, ಸ್ವಾರಸ್ಯಕರವಾಗಿ ಇರುತ್ತಿತ್ತೆಂದು ಅವರ ವಿದ್ಯಾರ್ಥಿಗಳೆಲ್ಲರೂ ಜ್ಞಾಪಿಸಿಕೊಳ್ಳುತ್ತಾರೆ. ಹಾಗೆಯೇ ಎನ್ನೆಸ್ಸೆಲ್ ತುಂಬ ಜನಪ್ರಿಯ ಭಾಷಣಕಾರರೂ ಆಗಿದ್ದರು. ಯಾವುದೇ ವಿಷಯವಿರಲಿ, ಕೇಳುಗರು ತನ್ಮಯರಾಗುವಂತೆ ಮಾತಾಡಿ ಮೋಡಿ ಮಾಡಬಲ್ಲ ಕಲೆ ಅವರಿಗೆ ಸಿದ್ಧಿಸಿತ್ತು.

ವೈಯಕ್ತಿಕವಾಗಿ ಎನ್ನೆಸ್ಸೆಲ್ ಅವರು ನನಗೆ ಅತ್ಯಂತ ಆಪ್ತರಾಗಿದ್ದವರು. ಸುಮಾರು ಐವತ್ತು ವರ್ಷಗಳಷ್ಟು ನಿಡುಗಾಲದ ಒಡನಾಟ ನಮ್ಮದು. ತಮ್ಮ ಉತ್ತೇಜನ ಮತ್ತು ವಿಮರ್ಶೆಯೊಂದಿಗೆ ನನ್ನನ್ನು ಕವಿಯಾಗಿ ಅಕ್ಕರೆಯಿಂದ ಬೆಳೆಸಿದವರು ಅವರು. ಜೊತೆಗೆ ನನಗೊಬ್ಬ ಅನುರೂಪಳಾದ ಜೀವನ ಸಂಗಾತಿಯನ್ನು ಹುಡುಕಿಕೊಟ್ಟವರೂ ಅವರೇ. ಹೀಗಾಗಿ ನಾನು ಮತ್ತು ನನ್ನ ಮಡದಿ ಗಿರಿಜ, ಎನ್ನೆಸ್ಸೆಲ್ ಅವರನ್ನು ಸದಾ ಕಾಲ ಕೃತಜ್ಞತೆಯೊಂದಿಗೆ ನೆನೆಯುತ್ತಿರುತ್ತೇವೆ.

ಎನ್ನೆಸ್ಸೆಲ್ ಬಾಲ್ಯದಲ್ಲೇ ತಮ್ಮ ತಂದೆಯನ್ನು ಕಳೆದುಕೊಂಡು, ತಾಯಿಯ ಆರೈಕೆಯಲ್ಲಿ, ಕಡು ಬಡತನದಲ್ಲಿ ನೊಂದು ಬೆಂದು ಬೆಳೆದವರು. ಮೈಸೂರಿನಲ್ಲಿ ವಾರಾನ್ನ ಮಾಡಿಕೊಂಡು ಎಂ.ಎ. ಪದವಿ ಗಳಿಸಿದವರು. ಯಾವುದೇ ವಶೀಲಿಬಾಜಿಗಳಿಲ್ಲದೆ ಕೇವಲ ತಮ್ಮ ಪ್ರತಿಭೆ, ಸಂಕಲ್ಪ ಮತ್ತು ಪರಿಶ್ರಮದ ಮೂಲಕ ಕವಿಯಾಗಿ, ವಿಮರ್ಶಕರಾಗಿ, ಕಾವ್ಯಾನುವಾದಕರಾಗಿ ಎತ್ತರದ ಸಾಧನೆ ಮಾಡಿ ಮಾನ್ಯರಾದವರು. ಈ ಸಾಧನೆಯ ಹಾದಿಯಲ್ಲಿ ಅವರು ಅನೇಕ ಎಡರು ತೊಡರುಗಳನ್ನೂ, ಕಷ್ಟ ನಷ್ಟಗಳನ್ನೂ ಹಾದು ಬಂದಿದ್ದಾರೆ. ಆದರೆ ಅವರ ಸಹನೆ ಮತ್ತು ಧೃತಿ ಅವರನ್ನು ಗೆಲ್ಲಿಸಿ ನಿಲ್ಲಿಸಿವೆ. ಈ ಬಗ್ಗೆ, ನನಗೆ ತುಂಬ ಪ್ರಿಯವಾದ, ಅವರ ಭಾವಗೀತೆ ಹೀಗಿದೆ:

ಯಾರು ಏನೇ ಜರಿಯಲಿ
ಯಾವ ಹೆಸರೇ ಕರೆಯಲಿ
ತಾಳಿನಿಲ್ಲು, ಜೀವವೇ,
ಸಹನೆ ಗೆಲ್ಲಲಿ
ಆಡಲೆಂದೇ ಕೆಲವರು
ಕಾಡಲೆಂದೇ ಕೆಲವರು
ತಾಳಿರುವರು ಬಾಳನು
ನೋಯಲೆಂದೇ ಕೆಲವರು
ಕಿಡಿಮಾತನು ಕಾರಿ
ಹಿಡಿಧೂಳನು ತೂರಿ
ಕದ ಬಡಿದರೂ ಕಂಗೆಡದಿರು
ಜೀವದ ಧೃತಿ ತೀರಿ
ತಾಳಿದವರೇ ಗೆಲುವರು
ಆಳಗಳಿಗೆ ಇಳಿವರು
ನೋವು ಕಡೆದ ಮೆಟ್ಟಿಲೇರಿ
ಶಿಖರಗಳಲಿ ಹೊಳೆವರು

ಹೀಗೆ ಶಿಖರದಲ್ಲಿ ಹೊಳೆಯುತ್ತ, ನಮಗೆ ಮಾದರಿಯಾಗಿರುವ 'ಹಿರಿಯಣ್ಣ' ಎನ್ನೆಸ್ಸೆಲ್ ಅವರಿಗೆ ಕನ್ನಡ ಸಾರಸ್ವತಲೋಕದ ಪರವಾಗಿ ನನ್ನ ಪ್ರೀತಿಯ ನುಡಿನಮನಗಳು.

ಕವಿ ಲಕ್ಷ್ಮೀನಾರಾಯಣ ಭಟ್ಟ ನಿಧನ


ಲಕ್ಷ್ಮೀನಾರಾಯಣ ಭಟ್ಟ

ಬೆಂಗಳೂರು: ಕನ್ನಡದ ಜನಪ್ರಿಯ ಕವಿಗಳಲ್ಲಿ ಒಬ್ಬರಾದ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ (84) ಅವರು ಶನಿವಾರ ಮುಂಜಾನೆ ನಿಧನರಾದರು. ಅವರಿಗೆ ಪತ್ನಿ, ಓರ್ವ ಪುತ್ರ ಮತ್ತು ಪುತ್ರಿ ಇದ್ದಾರೆ.

ಬನಶಂಕರಿಯಲ್ಲಿರುವ ಅವರ ನಿವಾಸದಲ್ಲಿ ಬೆಳಿಗ್ಗೆ 9 ಗಂಟೆಯಿಂದ 10 ಗಂಟೆಯವರೆಗೆ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಬನಶಂಕರಿಯ ಚಿತಾಗಾರದಲ್ಲಿ ಅಂತ್ಯಸಂಸ್ಕಾರ ನಡೆಯಿತು.

ಅವರು ಕೆಲ ದಿನಗಳಿಂದ ಅವರು ವಯೋಸಹಜ ಅನಾರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದರು. ಅವರ ಮಗ ಅಮೆರಿಕದಲ್ಲಿದ್ದಾರೆ. ಕೋವಿಡ್ ಕಾರಣದಿಂದ ಅಂತರರಾಷ್ಟ್ರೀಯ ಪ್ರಯಾಣಕ್ಕೆ ನಿರ್ಬಂಧವಿರುವ ಕಾರಣ ಅವರಿಗೆ ಬರಲು ಆಗಲಿಲ್ಲ. ಹೀಗಾಗಿ, ಅವರ ಅಳಿಯ, ಸ್ಮಾರ್ತ ಬ್ರಾಹ್ಮಣ ಸಂಪ್ರದಾಯದಂತೆ ಧಾರ್ಮಿಕ ವಿಧಿ ನೆರವೇರಿಸಿದರು.

'ಭತ್ತದ ಮಹದೇವಪ್ಪ' ಬಳುವಳಿಯ ಹೆಗ್ಗಳಿಕೆ

● ಎ.ಎಸ್.ಕುಮಾರಸ್ವಾಮಿ

ಎಂ.ಮಹದೇವಪ್ಪ ಅವರನ್ನು ಕೃಷಿ ತಜ್ಞ, ವಿಜ್ಞಾನಿ ಎನ್ನುವ ಬದಲಿಗೆ 'ಭತ್ತದ ಮಾಹಿತಿಯ ಕಣಜ' ಎಂದು ಕರೆಯುವುದೇ ಸೂಕ್ತ. ಭತ್ತದ ಕೃಷಿಗೆ ನೀಡಿದ್ದ ಕೊಡುಗೆಗಳೇ ಅವರಿಗೆ 'ಭತ್ತದ ಮಹದೇವಪ್ಪ' ಎಂಬ ಹೆಸರು ತಂದುಕೊಟ್ಟಿತ್ತು.

ಮಂಡ್ಯದ ವಿ.ಸಿ.ಫಾರ್ಮ್‌ನಲ್ಲಿ ಭತ್ತದ ತಳಿ ವಿಜ್ಞಾನಿಯಾಗಿ ಮಹದೇವಪ್ಪ ಅವರು ಕಾರ್ಯನಿರ್ವಹಿಸುತ್ತಿದ್ದರು. ಅಲ್ಲಿ ಅವರ ಕಿರಿಯ ಸಹೋದ್ಯೋಗಿಯಾಗಿ ಆರಂಭಗೊಂಡ ಒಡನಾಟಕ್ಕೆ 40 ವರ್ಷ ತುಂಬಿದೆ. ಅವರ ಮಾರ್ಗದರ್ಶನ ಶೈಲಿ ನನ್ನನ್ನೂ ಸೇರಿದಂತೆ ಅನೇಕರಿಗೆ ಸ್ಫೂರ್ತಿ ನೀಡಿದೆ.

ಅದು, ಮಲೆನಾಡಿನಲ್ಲಿ ಭತ್ತಕ್ಕೆ ಬೆಂಕಿರೋಗದ ಬಾಧೆ ತೀವ್ರಗೊಂಡಿದ್ದ ಕಾಲ. ಹಲವಾರು ವರ್ಷಗಳಿಂದ ಇದ್ದ ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿದ್ದ ಮಹಾದೇವಪ್ಪ ಅವರು ಬೆಂಕಿರೋಗ ನಿರೋಧಕ ಶಕ್ತಿಯುಳ್ಳ 'ಇಂಟಾನ್' ಭತ್ತದ ತಳಿ ಅಭಿವೃದ್ಧಿಪಡಿಸಿದರು. ಹಲವು ವರ್ಷ ಭತ್ತದ ಬೆಳೆಗಾರರ ಆದ್ಯತೆಯಾಗಿ 'ಇಂಟಾನ್' ತಳಿ ಹೆಚ್ಚು ಪ್ರಸಿದ್ಧಿಯಾಗಿತ್ತು.

ಮಂಡ್ಯ ಜಿಲ್ಲೆಯಲ್ಲಿ ಭತ್ತದ ನಾಟಿ ತಡವಾಗುತ್ತಿತ್ತು. ಇದನ್ನು ಮನಗಂಡು ಅಲ್ಪಾವಧಿಯ ಭತ್ತದ ತಳಿಗಳಿಗಳ ಅಭಿವೃದ್ಧಿಗೆ ವಿಶೇಷ ಗಮನ ಹರಿಸಿದ್ದರು. ಇದರ ಪರಿಣಾಮವಾಗಿ ಹೊರಬಂದಿದ್ದು 'ಮಧು', 'ಮಂಗಳ' ಎಂಬ ಭತ್ತದ ತಳಿಗಳು.

ಉಪ್ಪಿನಾಂಶ ಇರುವ ಮಣ್ಣಿನಲ್ಲೂ ಭತ್ತದ ಯಶಸ್ವಿಯಾಗಿ ಬೆಳೆಯಬಹುದು ಎಂದು 'ಪ್ರಗತಿ' ತಳಿ, ಚಳಿಯನ್ನು ತಡೆಯುವ 'ಮುಕ್ತ' ಹೀಗೆ.. ಅವರು ಸಂಶೋಧಿಸಿದ ತಳಿಗಳೆಲ್ಲವೂ ವಿಶೇಷ ಮತ್ತು ವಿಭಿನ್ನವಾಗಿದ್ದವು.

ಕನ್ನಡದಲ್ಲೇ ಭತ್ತದ ಕೈಪಿಡಿ ಫಿಲಿಪ್ಪೈನ್ಸ್‌ನಲ್ಲಿರುವ ಅಂತರರಾಷ್ಟ್ರೀಯ ಭತ್ತ ಸಂಶೋಧನಾ ಸಂಸ್ಥೆಯಲ್ಲಿ ಮೂರು ವರ್ಷಗಳ ಕಾಲ ಸಂಶೋಧನೆ ಮುಗಿಸಿ ಮತ್ತೆ ಕರುನಾಡಿಗೆ ಬಂದಿದ್ದ ಅವರಿಗೆ, ಭತ್ತದ ಬೆಳೆಯುವ ಆಧುನಿಕ ವಿಧಾನ ಮತ್ತು ತಂತ್ರಜ್ಞಾನಗಳ ಮಾಹಿತಿ ಇಲ್ಲಿನ ರೈತರಿಗೆ ತಲುಪುತ್ತಿಲ್ಲ ಎಂದು ಅರಿತಿದ್ದರು.

ಇದಕ್ಕಾಗಿ ಭತ್ತದ ಬೆಳೆಗಾರರಿಗೆ ಕನ್ನಡದಲ್ಲಿ ಹಾಗೂ ವರ್ಣಚಿತ್ರಗಳ ಸಹಿತ ವಿವರಣೆ ನೀಡುವ 'ಭತ್ತದ ಕೈಪಿಡಿ' ಹೊರತಂದರು. ಅವರ ಈ ಕಾರ್ಯ ಬೆಳೆಗಾರರಿಗೆ ಭರಪೂರ ಮಾಹಿತಿಯನ್ನು ಸರಳವಾಗಿ ತಿಳಿಸಿತ್ತು.

ಬರವಣಿಗೆಯಲ್ಲೂ ಹಿಡಿತವಿದ್ದ ಅವರು 'ಕೃಷಿ ಗೀತೆಗಳು' ಎಂಬ ಪುಸ್ತಕವನ್ನೂ ಹೊರತಂದಿದ್ದಾರೆ.

ಧಾರವಾಡ ಕೃಷಿ ವಿವಿ ಕುಲಪತಿ: ಉನ್ನತ ಶಿಕ್ಷಣ ಪೂರೈಸಿದ ನಂತರ ಮೊದಲಿಗೆ ಮೈಸೂರಿನ ಸಿಎಫ್‌ಟಿಆರ್‌ಐನಲ್ಲಿ ಹಿರಿಯ ಸಂಶೋಧಕರಾಗಿ, ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದ ಬ್ರೀಡರ್ (ಜೋಳ ಅಭಿವೃದ್ಧಿ ತಜ್ಞ) ಆಗಿ, ಮಂಡ್ಯದ ವಿ.ಸಿ. ಫಾರ್ಮ್‌ನಲ್ಲಿ ಭತ್ತ ಸಸ್ಯ ವಿಜ್ಞಾನಿಯಾಗಿ ಸೇವೆ ಸಲ್ಲಿಸಿ, ಧಾರವಾಡ ಕೃಷಿ ವಿಶ್ವವಿದ್ಯಾಲಯದ ಉಪಕುಲಪತಿಯಾಗಿ ಎರಡು ಅವಧಿಗೆ ಕಾರ್ಯನಿರ್ವಹಿಸಿದರು.

ಇವರ ಸಾಧನೆಗಳನ್ನು ಅರಸಿ ಬಂದಿದ್ದು, ಪದ್ಮಶ್ರೀ, ಪದ್ಮಭೂಷಣ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಜೀವಮಾನ ಸಾಧನೆ ಪ್ರಶಸ್ತಿ, ಹೂಕರ್ ಪ್ರಶಸ್ತಿ, ಕರ್ನಾಟಕ ರಾಜೋತ್ಸವ ಪ್ರಶಸ್ತಿ, ಭಾರತ ರತ್ನ ಎಂ.ವಿಶ್ವೇಶ್ವರಯ್ಯ ಸ್ಮಾರಕ ಪ್ರಶಸ್ತಿ ಸೇರಿದಂತೆ ಪ್ರತಿಷ್ಠಿತ ಪುರಸ್ಕಾರಗಳ ಪಟ್ಟಿಯೇ ನೀಡಬಹುದು.

ಭಾರತದಲ್ಲಿ ಹೈಬ್ರೀಡ್ ಭತ್ತದ ಕ್ರಾಂತಿಗೆ ಮುನ್ನುಡಿ ಬರೆದಿದ್ದ ಎಂ.ಮಹಾದೇವಪ್ಪ ಅವರು ಭತ್ತದ ತಳಿಗಳಿಂದ ಇಂದಿಗೂ ಮನೆಮಾತು. ಕೃಷಿ ವಿಜ್ಞಾನಿಯಾಗಿ ವೃತ್ತಿ ಜೀವನ ಆರಂಭಿಸಿದ್ದ ಅವರು ತಮ್ಮ ಅಂತಿಮ ದಿನಗಳನ್ನು ಜೆಎಸ್‌ಎಸ್ ಮಹಾವಿದ್ಯಾಪೀಠದ ಗ್ರಾಮೀಣಾಭಿವೃದ್ಧಿ ವಿಭಾಗದ ನಿರ್ದೇಶಕರಾಗಿ ಪೂರ್ಣಗೊಳಿಸಿದರು.

ಸಮಾಜಕ್ಕೆ ಅವರಿಂದ ಏನು ಸಿಗಬಹುದಿತ್ತೋ ಅದನ್ನೂ ಮೀರಿದ ಪ್ರಯೋಜನವನ್ನು ಸಮಾಜ ಅವರಿಂದ ಪಡೆದಿದೆ. ಕೃಷಿ ವಿಜ್ಞಾನ ಸಂಶೋಧಕರಲ್ಲೇ ಉಳಿಯದೆ, ರೈತರನ್ನೂ ತಲುಪಬೇಕು ಎನ್ನುವ ಅವರ ಕಾಳಜಿಗೆ ಸರಿಸಾಟಿ ಇರಲಿಲ್ಲ. ಅದೆಷ್ಟೋ ಮಂದಿಗೆ ಕೃಷಿ ವಿಜ್ಞಾನದ ಬೆಳಕು ಚೆಲ್ಲಿದ ಕೀರ್ತಿ ಅವರಿಗೆ ಸಲ್ಲಬೇಕು.

(ಲೇಖಕರು ಶಿವಮೊಗ್ಗದ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದ ನಿವೃತ್ತ ಶೈಕ್ಷಣಿಕ ನಿರ್ದೇಶಕ)

ನಿರೂಪಣೆ: ಮನೋಹರ್ ಎಂ.

ಕೃಷಿ ವಿಜ್ಞಾನಿ ಪ್ರೊ.ಮಹದೇವಪ್ಪ ನಿಧನ

ಮೈಸೂರು: ಕೃಷಿ ವಿಜ್ಞಾನಿ, ಭತ್ತದ ತಳಿ ಸಂಶೋಧಕ ಪ್ರೊ.ಎಂ.ಮಹದೇವಪ್ಪ (83) ಶನಿವಾರ ಬೆಳಿಗ್ಗೆ ಇಲ್ಲಿನ ತಮ್ಮ ನಿವಾಸದಲ್ಲಿ ನಿಧನರಾದರು. ಅವರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ.


ಎಂ. ಮಹದೇವಪ್ಪ

ಕೆಲದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಭಾನುವಾರ ಮಧ್ಯಾಹ್ನ ಚಾಮರಾಜನಗರ ಜಿಲ್ಲೆಯ ಸ್ವಗ್ರಾಮ ಮಾದಾಪುರದಲ್ಲಿ ಅಂತ್ಯಕ್ರಿಯೆ ನಡೆಯಲಿದೆ.

ಪದ್ಮಶ್ರೀ ಹಾಗೂ ಪದ್ಮಭೂಷಣ ಪ್ರಶಸ್ತಿ ಪುರಸ್ಕೃತರಾಗಿದ್ದರು. ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ ಎರಡು ಅವಧಿಗೆ ಕುಲಪತಿಯಾಗಿ ಕಾರ್ಯನಿರ್ವಹಿಸಿದ್ದರು. ಭಾರತೀಯ ಕೃಷಿ ಸಂಶೋಧನಾ ಮಂಡಳಿಯ (ಐಸಿಎಆರ್) ಅಂಗಸಂಸ್ಥೆ ಕೃಷಿ ವಿಜ್ಞಾನಿಗಳ ನೇಮಕಾತಿ ಮಂಡಳಿ (ಎಎಸ್‌ಆರ್‌ಬಿ) ಚೇರ್‌ಮನ್ ಆಗಿ ಕೆಲಸ ಮಾಡಿದ್ದರು.

ರೈತರ ಬಗ್ಗೆ ಕಾಳಜಿ: ರೈತರ ಬಗ್ಗೆ ಅಪಾರವಾದ ಕಾಳಜಿ ಹೊಂದಿದ್ದ ಮಹದೇವಪ್ಪ, ನೀರಿನ ಕೊರತೆಯಲ್ಲೂ ಅತ್ಯುತ್ತಮವಾಗಿ ಭತ್ತ ಬೆಳೆಯುವ ಮಾರ್ಗೋಪಾಯ ಹಾಕಿಕೊಟ್ಟಿದ್ದಾರೆ.

ಮಧು, ಮಂಗಳಾ, ಪುಷ್ಪಾ, ಪ್ರಗತಿ, ಇಂಟಾನ್, ವಿಕ್ರಮ, ಜಿಎಂಕೆ-17, ಮುಕ್ತಿ, ಬಿಳಿಮುಕ್ತಿ ಹಾಗೂ ಹೈಬ್ರೀಡ್ ಭತ್ತದ ತಳಿಗಳ ಅಭಿವೃದ್ಧಿ ಪಡಿಸಿದ್ದರು. ಹೀಗಾಗಿ, ಇವರು 'ಭತ್ತದ ಮಹದೇವಪ್ಪ' ಎಂದೇ ಹೆಸರಾಗಿದ್ದರು. ಅಪಾಯಕಾರಿ ಪಾರ್ಥೇನಿಯಂ ಕಳೆ ಹತೋಟಿಗೆ ಪಣತೊಟ್ಟು, ಆ ದಿಕ್ಕಿನಲ್ಲಿ ಪ್ರಯತ್ನ ಮುಂದುವರಿಸಿದ್ದರು.

ಸಂಬಂಧಿಕರ ಸಂಪರ್ಕಕ್ಕೆ ಮೊ: 9900256310

'ಷಡ್ಯಂತ್ರ' ಭಯ: ಕೋರ್ಟ್‌ಗೆ ಮೊರೆ

ಒಂದನೇ ಪುಟದಿಂದ...

'ವೈಯಕ್ತಿಕ ತೇಜೋವಧೆಗೆ ಯತ್ನ ನಡೆಯುತ್ತಿದೆ. ಹೀಗಾಗಿ, ನ್ಯಾಯಾಲಯದ ಮೊರೆ ಹೋಗುವ ಅನಿವಾರ್ಯತೆ ಎದುರಾಯಿತು' ಎಂದು ತಮ್ಮ ನಡೆಯನ್ನು ಸಮರ್ಥಿಸಿಕೊಂಡಿದ್ದಾರೆ.

ಆದರೆ, ಕೇಂದ್ರ ಸಚಿವ ಸದಾನಂದ ಗೌಡ, 'ಅನವಶ್ಯಕವಾಗಿ ಕೋರ್ಟ್‌ಗೆ ಹೋಗಿ ವಿಚಾರವನ್ನು ಇನ್ನಷ್ಟು ಗೋಜಲು ಮಾಡುವುದು ಸರಿಯಲ್ಲ' ಎಂದು ಪರೋಕ್ಷವಾಗಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಖಳನಾಯಕರನ್ನಾಗಿ ಮಾಡುವ ಷಡ್ಯಂತ್ರ: 'ಜೀವಮಾನವಿಡೀ ಗಳಿಸಿರುವ ಒಳ್ಳೆಯ ಹೆಸರು, ಯಾರದೋ ಷಡ್ಯಂತ್ರದಿಂದ ಕ್ಷಣಮಾತ್ರದಲ್ಲಿ ನಶಿಸಿ ಹೋಗುವ ಸಾಧ್ಯತೆ ಇರುವುದರಿಂದ, ಮುನ್ನೆಚ್ಚರಿಕೆಯಿಂದ ಪ್ರಮಾಣೀಕರಿಸದ ಸುದ್ದಿಗಳನ್ನು ಪ್ರಸಾರ ಮಾಡದಂತೆ ತಡೆಯಾಜ್ಞೆ ಕೋರಿ ನ್ಯಾಯಾಲಯದ ಮೊರೆ ಹೋಗಿದ್ದೇವೆ' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಹೇಳಿದರು.

'ದಕ್ಷತೆಯಿಂದ ಕಾರ್ಯನಿರ್ವಹಿಸಿ ಜನಮನ್ನಣೆ ಗಳಿಸುತ್ತಿರುವ ಸಚಿವರ ವಿರುದ್ಧ ವ್ಯವಸ್ಥಿತ ಸಂಚು ರೂಪಿಸುತ್ತಿರುವ ಗುಮಾನಿ ಇದೆ. ನೈಜತೆ ಇದ್ದರೆ ಯಾವುದನ್ನೂ ನಿಷೇಧಿಸಲು ಸಾಧ್ಯವಿಲ್ಲ. ನಾನೂ ಸೇರಿದಂತೆ ಯಾರದೇ ಆಗಿರಲಿ, ತಪ್ಪು ಮಾಡಿದ್ದರೆ ಶಿಕ್ಷೆಯಾಗಲಿ. ಜನರ ಮುಂದೆ ಖಳನಾಯಕರನ್ನಾಗಿ ಮಾಡುವ ಷಡ್ಯಂತ್ರವಿದು' ಎಂದು ಟೀಕಿಸಿದರು.

'ಕನಕಪುರ, ಬೆಳಗಾವಿಯವರು ಕಾರಣ'

'ರಮೇಶ ಜಾರಕಿಹೊಳಿ ವಿರುದ್ಧ ವಿಡಿಯೊ ಪ್ರಕರಣದ ಹಿಂದೆ ಕನಕಪುರ ಮತ್ತು ಬೆಳಗಾವಿ ಕಡೆಯವರು ಇದ್ದಾರೆ' ಎಂದು ಪ್ರವಾಸೋದ್ಯಮ ಸಚಿವ ಸಿ.ಪಿ. ಯೋಗೇಶ್ವರ್ ಹೇಳಿದ್ದಾರೆ.

'ತೇಜೋವಧೆ ಮಾಡುವುದನ್ನು ತಡೆಯಲು ಬಲವಾದ ಕಾನೂನು ತರಬೇಕು. ಮುಖ್ಯಮಂತ್ರಿ ಹಾಗೂ ಕಾನೂನು ಸಚಿವರ ಜತೆ ಈ ಬಗ್ಗೆ ಚರ್ಚೆ ನಡಸಲಾಗಿದೆ. ಅಲ್ಲದೆ, ಮಾನಹಾನಿಕರ ವರದಿ ಪ್ರಕಟಿಸಬಾರದು ಎಂದು ತಡೆಕೋರಿ ಮತ್ತಷ್ಟು ಸಚಿವರು ನ್ಯಾಯಾಲಯದ ಮೊರೆ ಹೋಗಲಿದ್ದಾರೆ' ಎಂದೂ ತಿಳಿಸಿದರು.

'ರಮೇಶ ಜಾರಕಿಹೊಳಿ ಪ್ರಕರಣದಲ್ಲಿ ಮೊದಲ ದಿನ ಸಂತ್ರಸ್ತೆ ಎಂದು ಹೇಳಿದ್ದಾರೆ. ಆದರೆ, ಅವಳು ಇಲ್ಲಿಯವರೆಗೆ ಯಾಕೆ ಮುಂದೆ ಬಂದಿಲ್ಲ. ಆಕೆಯ ಕುಟುಂಬ ಕೂಡ ಮುಂದೆ ಬಂದಿಲ್ಲ. ಅವಳು ಯಾರು ಏನೂ ಎಂಬುದು ಗೊತ್ತಿಲ್ಲ. ಯಾಕೆ ಗುರಿ ಮಾಡ್ತಾ ಇದ್ದಾರೆ ಅನ್ನೋದು ಗೊತ್ತಿಲ್ಲ. ನಾವು ಯಾವುದೇ ತಪ್ಪು ಮಾಡಿಲ್ಲ; ಮಾಡುವುದೂ ಇಲ್ಲ' ಎಂದರು.

ತೇಜೋವಧೆ ಯತ್ನ: 'ಮೈತ್ರಿ ಸರ್ಕಾರ ಪತನಗೊಳಿಸಿ ಬಿಜೆಪಿ ಸರ್ಕಾರ ತಂದಿದ್ದೇವೆ ಎಂಬ ಸಿಟ್ಟು ಕೆಲವರಲ್ಲಿದೆ. ಹೀಗಾಗಿ ನಮ್ಮ ವಿರುದ್ಧ ತೇಜೋವಧೆ ಯತ್ನ ನಡೆಯುತ್ತಿದೆ' ಎಂದು ಹೇಳಿದ ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ , 'ಜಾರಕಿಹೊಳಿ ಸಿ.ಡಿ ಪ್ರಕರಣ ಸಿಬಿಐ ತನಿಖೆಗೆ ವಹಿಸಬೇಕು. ಈ ಬಗ್ಗೆ ಗೃಹ ಸಚಿವರ ಜೊತೆ ಮಾತನಾಡಿದ್ದೇನೆ' ಎಂದೂ ಒತ್ತಾಯಿಸಿದರು.

'ಇನ್ನುಳಿದವರೂ ಕೋರ್ಟ್‌ಗೆ ಅರ್ಜಿ ಸಲ್ಲಿಸಲಿದ್ದಾರೆ. ನಮ್ಮ ರಕ್ಷಣೆ ನಾವು ಮಾಡಿಕೊಳ್ಳುತ್ತೇವೆ. ಒಂದೆರಡು ದಿನಗಳಲ್ಲಿ ಯಾರ ಮೇಲೆ ಅನುಮಾನ ಎಂಬುದು ಗೊತ್ತಾಗಲಿದೆ. ಬಳಿಕ ಮುಖ್ಯಮಂತ್ರಿ ಹಾಗೂ ಅಧ್ಯಕ್ಷರಿಗೆ ಸಂಪೂರ್ಣ ಮಾಹಿತಿ ನೀಡುತ್ತೇವೆ' ಎಂದರು.

ಕೋರ್ಟ್ ಮೊರೆ ಹೋದ ಸಚಿವರು

- ಕೆ.ಸಿ.ನಾರಾಯಣ ಗೌಡ, ಯುವಜನ ಸಬಲೀಕರಣ, ಕ್ರೀಡೆ ಹಾಗೂ ಯೋಜನೆ, ಸಾಂಖ್ಯಿಕ ಸಚಿವ
- ಎಸ್.ಟಿ. ಸೋಮಶೇಖರ್, ಸಹಕಾರ ಸಚಿವ
- ಬೈರತಿ ಬಸವರಾಜ, ನಗರಾಭಿವೃದ್ಧಿ ಸಚಿವ
- ಡಾ.ಕೆ. ಸುಧಾಕರ್, ಆರೋಗ್ಯ ಸಚಿವ
- ಬಿ.ಸಿ. ಪಾಟೀಲ, ಕೃಷಿಸಚಿವ
- ಶಿವರಾಮ್ ಹೆಬ್ಬಾರ್, ಕಾರ್ಮಿಕ ಸಚಿವ

ಪ್ರಜಾವಾಣಿ facebook LIVE
FB.com/prajavani.net

ಅಂತರರಾಷ್ಟ್ರೀಯ ಖ್ಯಾತಿಯ ಗಾಯಕಿ
ಸ್ಮಿತಾ ಕಾರ್ತಿಕ್
ಅವರಿಂದ
ಮಹಿಳಾ ದಿನದ ವಿಶೇಷ
ಗಾಯನ ಗೋಷ್ಠಿ
ಸೋಮವಾರ, 08 ಮಾರ್ಚ್ 2021 ಸಂಜೆ 6ರಿಂದ

ಪ್ರಜಾವಾಣಿ ಸಂವಾದ
facebook LIVE
ಫೇಸ್‌ಬುಕ್‌ನಲ್ಲಿ ನೇರ ಪ್ರಸಾರ
ರಾಜ್ಯ ಬಜೆಟ್: ಯಾರಿಗೆ ಏನು ಸಿಕ್ಕಿತು?
ವಿಷಯ ಕುರಿತ ಸಂವಾದ
ಪಾಲ್ಗೊಳ್ಳುವವರು


ಪ್ರೊ. ಎಸ್.ಆರ್. ಕೇಶವ್
ಅರ್ಥಶಾಸ್ತ್ರ ಪ್ರಾಧ್ಯಾಪಕ, ಬೆಂಗಳೂರು ವಿಶ್ವವಿದ್ಯಾಲಯ


ಪ್ರೊ. ಕೃಷ್ಣ ರಾಜ್
ಅರ್ಥಶಾಸ್ತ್ರ ಪ್ರಾಧ್ಯಾಪಕ, ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಅಧ್ಯಯನ ಸಂಸ್ಥೆ, ಬೆಂಗಳೂರು

ನೀವೂ ಪಾಲ್ಗೊಳ್ಳಿ
ಸೋಮವಾರ 08.03.2021 ಮಧ್ಯಾಹ್ನ 3ರಿಂದ 3.45
fb.com/prajavani.net

ಬಜೆಟ್ ಮಂಡನೆ–ನೇರ ಪ್ರಸಾರ
ಮಧ್ಯಾಹ್ನ 12.05ರಿಂದ

ಹಣಕಾಸು ಸಚಿವರೂ ಆಗಿರುವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಮಾರ್ಚ್ 8ರಂದು 2021-22ನೇ ಸಾಲಿನ ಬಜೆಟ್ ಮಂಡಿಸಲಿದ್ದಾರೆ. prajavani.net ಗೆ ಭೇಟಿ ಕೊಡಿ

ಇಂದಿನ ಪಾಡ್‌ಕಾಸ್ಟ್ ವಿಶೇಷ
ವೈದ್ಯ ಮಿತ್ರ ಕಥಾ ಸಾಗರ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಬರೆಯದ ಕಥೆಗಳು
ಚಪ್ಪಲಿ ಬೈಗಳು ಇಲ್ಲಿ ಮೈಲಿಗೆ!
ನೋಡಿ...!
ಪತ್ರಕರ್ತರು ಕಂಡು ಕೇಳಿದ, ಆದರೆ ಬರೆಯದ ಕೌತುಕಗಳು ನಿಮ್ಮ Prajavani.net ನಲ್ಲಿ ವಿಶೇಷ ಸರಣಿ
ವಿಡಿಯೊ ನೋಡಲು QR ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ
(ಕರ್ನಾಟಕ ಸರ್ಕಾರದ ಸ್ವಯತ್ತತಾ ಸಂಸ್ಥೆ)
ಡಾ. ಎಂ. ಹೆಚ್. ಮರೀಗೌಡ ರಸ್ತೆ, ಬೆಂಗಳೂರು – 560 029.
ದೂರವಾಣಿ : 91-80-26560722 (Dir), 26094000, ಫ್ಯಾಕ್ಸ್: 91-80-26560723
No.KMIO/SME(1)Tender/Sutures/228/2020-21 dated: 06-03-2021
ಇ-ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ
ಈ ಕೆಳಗಿನ ವೈದ್ಯಕೀಯ ಸಲಕರಣೆಗಳ ಪೂರೈಕೆಗಾಗಿ ದ್ವಿ-ಲಕೋಟೆ ಪದ್ಧತಿಯಲ್ಲಿ ಆನ್‌ಲೈನ್ ಮುಖಾಂತರ ಟೆಂಡರುಗಳನ್ನು ಅಹ್ವಾನಿಸಲಾಗಿದೆ.

Sl. No.	Tender No. & Date	Name of the Item
1.	No.KMIO/SME(1)Tender/Sutures/228/2020-21 dated: 06-03-2021	Procurement of Sutures & Bandage Cloths to KMIO.,

ಆನ್‌ಲೈನ್ ಬಿಡ್ ದಾಖಲೆಗಳ ಲಭ್ಯತೆ ದಿನಾಂಕ 09-03-2021 ರಿಂದ 19-03-2021. ಬಿಡ್ ದಾಖಲೆಗಳನ್ನು ವೆಬ್‌ಸೈಟ್ https://eproc.karnataka.gov.in ನಿಂದ ನೋಡಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇ-ಪೋರ್ಟಲ್ ಶುಲ್ಕ ರೂ.500/- ನ್ನು ಪಾವತಿಸಿ ಬಿಡ್‌ನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಸಲ್ಲಿಸಬಹುದಾಗಿದೆ. ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ ಮತ್ತು ಸಮಯಃ 19-03-2021 ರಂದು ಮಧ್ಯಾಹ್ನ 3.00 ಗಂಟೆಯವರೆಗೆ. ಟೆಂಡರ್ ಸ್ವೀಕರಿಸುವ ಪ್ರಾಧಿಕಾರವು ಯಾವುದೇ ಕಾರಣ ನೀಡದೇ ಟೆಂಡರ್‌ನ್ನು ಸ್ವೀಕರಿಸುವ / ತಿರಸ್ಕರಿಸುವ ರದ್ದುಪಡಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ.
ಸಹಿ/-
ನಿರ್ದೇಶಕರು
DIPR/DDU/AAPL/RO.3042/2020-21
ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ
(www.kpwd.gov.in)
ಬೆಂಗಳೂರು ವಿಭಾಗ, 2ನೇ ಮಹಡಿ, ಲೋ.ಇ. ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು. 560001. ದೂರವಾಣಿ ಸಂಖ್ಯೆ: 080–22133370, ಫ್ಯಾಕ್ಸ್ ಸಂಖ್ಯೆ: 080–22133365,
Email ID: eepwdbngdn@yahoo.com, E-Portal : https://eproc.karnataka.gov.in
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 30/2020-21
ದಿನಾಂಕ: 05.03.2021
ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ. 2000 ರನ್ವಯ ಮತ್ತು ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಬೆಂಗಳೂರು ವಿಭಾಗ ವ್ಯಾಪ್ತಿಯಲ್ಲಿನ ನೆಲಮಂಗಲ ತಾಲ್ಲೂಕಿಗೆ ಸಂಬಂಧಿಸಿದಂತೆ 1 ಸಂಖ್ಯೆಯ ರೂ. 100.00 ಲಕ್ಷದ ಕಾಮಗಾರಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಕಾಮಗಾರಿಯ ವಿವರಗಳನ್ನು ಮೇಲ್ಕಂಡ ಕಛೇರಿಯ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗಧಿಪಡಿಸಲಾಗಿದೆ.
ಕಾಮಗಾರಿಗಳ ಇ.ಎಂ.ಡಿ ಮೊತ್ತವನ್ನು ಮತ್ತು ಟೆಂಡರ್ ಪ್ರೋಸಸಿಂಗ್ ಶುಲ್ಕವನ್ನು ಇ–ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.
1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೌಡ್ ಮಾಡಿಕೊಳ್ಳಲು ನಿಗಧಿಪಡಿಸಿರುವ ದಿನಾಂಕ: 06.03.2021 ರಿಂದ.
2) ಟೆಂಡರ್‌ಗಳನ್ನು ಆನ್‌ಲೈನ್ ನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯದಿಃ 13.03.2021 ಸಂಜೆ 4.00 ಗಂಟೆಯವರೆಗೆ.
3) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ತೆರೆಯುವ ದಿನಾಂಕ 15.03.2021 ಸಂಜೆ 4.30 ಗಂಟೆಗೆ ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ.
ಸಹಿ/–
ಕಾರ್ಯಪಾಲಕ ಅಭಿಯಂತರರು
ಲೋ.ಇ, ಬೆಂಗಳೂರು ವಿಭಾಗ, ಬೆಂಗಳೂರು.
DIPR/DDU/Zen/R.O: 3028/2020-21
ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ರೈಲು ಮೂಲಸೌಲಭ್ಯ ಅಭಿವೃದ್ಧಿ ಕಂಪನಿ (ಕರ್ನಾಟಕ) ನಿಯಮಿತ
K RIDE
(ಕರ್ನಾಟಕ ಸರ್ಕಾರ ಮತ್ತು ರೈಲ್ವೆ ಸಚಿವಾಲಯದ ಜಂಟಿ ಉದ್ಯಮ)
ನೋಂದಾಯಿತ ಕಚೇರಿ: 1ನೇ ಮಹಡಿ, ಸಂಪರ್ಕ ಸೌಧ, ಓರಿಯನ್ ಮಾಲ್ ಎದುರು, ಸರ್ವೆ ಸಂ. 8, (ಬಿಇಪಿ ಆವರಣ)
ಡಾ. ರಾಜಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು – 560010
ದೂ: +91 63648 90810, +91 63648 90811
CIN: U60100KA2000PLC028171 ಇ–ಮೇಲ್: md@kride.in
Tender Notice No. : KRIDE/DL/11/2021. Date: 07.03.2021.
ಟೆಂಡರ್ ಸೂಚನೆ
ಬೈಯಪ್ಪನಹಳ್ಳಿ – ಹೊಸೂರು ವಿಭಾಗದ ದ್ವಿಪಥೀಕರಣದ ಈ ಕೆಳಗಿನ ಕಾಮಗಾರಿಗಳನ್ನು ನಿರ್ವಹಿಸಲು ಅನುಭವಿ ಏಜೆನ್ಸಿಗಳಿಂದ ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ

ಕ್ರ. ಸಂ.	ಕಾಮಗಾರಿಯ ಹೆಸರು	ಮೊತ್ತ (ಕೋಟಿ ರೂ.ಗಳಲ್ಲಿ)
1	ಬೈಯಪ್ಪನಹಳ್ಳಿ – ಹೊಸೂರು ದ್ವಿಪಥೀಕರಣ ಯೋಜನೆ – "ನೈರುತ್ಯ ರೈಲ್ವೆಯ ಬೆಂಗಳೂರು ವಿಭಾಗದ ಬೆಳಂದೂರು ರೋಡ್ ರೈಲ್ವೆ ನಿಲ್ದಾಣದಲ್ಲಿ ಸ್ಟಾಫ್ ಕ್ವಾರ್ಟರ್ಸ್ ಟೈಪ್–II – 7 ಘಟಕಗಳು ಮತ್ತು ಟೈಪ್–III – 7 ಘಟಕಗಳ ಪ್ರಸ್ತಾವಿತ ನಿರ್ಮಾಣ ಹಾಗೂ ವಿದ್ಯುದ್ದೀಕರಣ ಕಾರ್ಯಗಳು ಸೇರಿದಂತೆ ಇತರ ಸಂಬಂಧಿತ ಕಾಮಗಾರಿಗಳು".	2.50
2	ಬೈಯಪ್ಪನಹಳ್ಳಿ – ಹೊಸೂರು ದ್ವಿಪಥೀಕರಣ ಯೋಜನೆ – "ನೈರುತ್ಯ ರೈಲ್ವೆಯ ಬೆಂಗಳೂರು ವಿಭಾಗದ ಹೊಸೂರು ರೈಲ್ವೆ ನಿಲ್ದಾಣದಲ್ಲಿ ಸ್ಟಾಫ್ ಕ್ವಾರ್ಟರ್ಸ್ ಟೈಪ್–II – 8 ಘಟಕಗಳು ಮತ್ತು ಟೈಪ್–III – 8 ಘಟಕಗಳ ಪ್ರಸ್ತಾವಿತ ನಿರ್ಮಾಣ ಹಾಗೂ ವಿದ್ಯುದ್ದೀಕರಣ ಕಾರ್ಯಗಳು ಸೇರಿದಂತೆ ಇತರ ಸಂಬಂಧಿತ ಕಾಮಗಾರಿಗಳು".	2.58

ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 05–04–2021.
ವಿವರಗಳಿಗಾಗಿ www.kride.in ಗೆ ಭೇಟಿ ನೀಡಿ 'Tenders' ಮೇಲೆ ಕ್ಲಿಕ್ ಮಾಡಿ
ಸಹಿ/–
ಜನರಲ್ ಮ್ಯಾನೇಜರ್/ಸಿವಿಲ್/ಪ್ರೊಜೆಕ್ಟ್ಸ್
ಕ–ರೈಡ್/ಬೆಂಗಳೂರು
DIPR/DDU/3029/SPAN/2020-21

ಕರ್ನಾಟಕ ಸರ್ಕಾರ – ಧಾರ್ಮಿಕ ದತ್ತಿ ಇಲಾಖೆ
ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನ, ನಂಜನಗೂಡು, ಮೈಸೂರು ಜಿಲ್ಲೆ
ದೂರವಾಣಿ ಸಂಖ್ಯೆ: 08221: 226245, 223320, 227245, Email: sstnanjangud@gmail.com
ಸಂಖ್ಯೆ: ಎಸ್‌ಎಸ್‌ಟಿ/ಡಿವಿಪಿ/ಇ–ಟೆಂಡರ್ ಪಾರ್ಕಿಂಗ್ /1/2020–21 ದಿನಾಂಕ: 01–03–2021
ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ
ನಂಜನಗೂಡು ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಲಾಯದ 2021 ನೇ ಸಾಲಿಗೆ ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯಕ್ಕೆ ಸೇರಿದ ಪ್ರದೇಶದಲ್ಲಿ ಭಕ್ತರು ನಿಲುಗಡೆ ಮಾಡುವ ವಾಹನಗಳ ಮೇಲೆ ಶುಲ್ಕವಸೂಲಿ ಮಾಡುವ ಹಕ್ಕನ್ನು ಪಡೆದುಕೊಳ್ಳಲು ಗುತ್ತಿಗೆ ಹಕ್ಕಿನ ಬಗ್ಗೆ, ಇ–ಪ್ರೊಕ್ಯೂರ್ ಮೆಂಟ್ ಇ–ಟೆಂಡರ್‌ಯಡಿಯಲ್ಲಿ ಅಲ್ಪಾವಧಿ ಮರು ಟೆಂಡರ್ ಕರೆಯಲಾಗಿದೆ, ಆಸಕ್ತರು ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ (http:eproc.karnataka.gov.in) ಮೂಲಕ ಸಲ್ಲಿಸಬಹುದಾಗಿದೆ ಟೆಂಡರ್ ದಾಖಲೆಗಳಲ್ಲಿ ತಿಳಿಸಿರುವಂತೆ (Technical Bid /Qualification Criteria) ದ ಮೂಲಕ ಎಲ್ಲಾ ಅಗತ್ಯ ದಾಖಲೆಗಳನ್ನು ಸಲ್ಲಿಸುವುದು ಹೆಚ್ಚಿನ ವಿವರಗಳಿಗೆ ಈ ಕಛೇರಿಯಿಂದ ಹಾಗೂ ದೂರವಾಣಿ ಮೂಲಕ ಮಾಹಿತಿ ಪಡೆಯಬಹುದಾಗಿದೆ ಮಾಹಿತಿಯು ಈ ಕೆಳಕಂಡಂತೆ ಇರುತ್ತದೆ.

ಕ್ರ.ಸಂ	ಟೆಂಡರ್‌ನ ವಿವರ	ಇ.ಎಂ.ಡಿ. ಮೊತ್ತ
01	2021ನೇ ಸಾಲಿಗೆ ನಂಜನಗೂಡು ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಲಾಯಕ್ಕೆ ಸೇರಿದ ಪ್ರದೇಶದಲ್ಲಿ ಭಕ್ತರು ನಿಲುಗಡೆ ಮಾಡುವ ವಾಹನಗಳ ಮೇಲೆ ಶುಲ್ಕವಸೂಲಿ ಮಾಡುವ ಹಕ್ಕನ್ನು ಪಡೆದುಕೊಳ್ಳಲು ಗುತ್ತಿಗೆ ಹಕ್ಕಿನ ಬಗ್ಗೆ.	100000=00

ಇ–ಪ್ರಕ್ಯೂರ್ ಮೆಂಟ್ ವ್ಯವಸ್ಥೆಯಡಿ ಇ–ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡತಿದೆ.

1.	ಇ–ಪೋರ್ಟಲ್ ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ	07–03–2021	ರ ನಂತರ
2.	ಇ–ಟೆಂಡರ್ ಸಲ್ಲಿಸುವ ಕೊನೆ ದಿನಾಂಕ ಮತ್ತು ಕಾಲ	22–03–2021	ಸಂಜೆ: 5.00 ಗಂಟೆಯವರಗೆ
3.	ಇ–ಟೆಂಡರ್ ನ್ನು ತೆರೆಯುವ ದಿನಾಂಕ ಮತ್ತು ಕಾಲ	23–03–2021	11.00 ಗಂಟೆ ನಂತರ

ಸಹಿ/– ಕಾರ್ಯನಿರ್ವಾಹಕ ಅಧಿಕಾರಿ
ಶ್ರೀ ಶ್ರೀಕಂಠೇಶ್ವರ ದೇವಸ್ಥಾನ ನಂಜನಗೂಡು

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ, ಕನೀನಿನಿ ಘಟಪ್ರಭಾ ವಿಭಾಗ ನಂ. 2, ಹಿಂಡಕಲ್ ಡ್ಯಾಂ ಕಚೇರಿ ದೂರವಾಣಿ ಸಂ: 08333–263242 / ಫ್ಯಾಕ್ಸ್ ಸಂ: 08333–263405 / ಇ–ಮೇಲ್ : eegrbc2@gmail.com
ಸಂ: ಕನೀನಿನಿ/ಜಿಆರ್‌ಬಿಸಿಸಿ–2/ಡಿಬಿ/ಟೆಂಡರ್/2020–21/3788 ದಿನಾಂಕ : 04–03–2021
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತ ಮಾತ್ರ)
ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜನೀಯರರು, ಕನೀನಿನಿ, ಜಿಆರ್‌ಬಿಸಿಸಿ ವಿಭಾಗ ನಂ. 2 ಹಿಡಕಲ್ ಡ್ಯಾಂ, ತಾ: ಹುಕ್ಕೇರಿ, ಜಿಲ್ಲೆ: ಬೆಳಗಾವಿ, ಕರ್ನಾಟಕ ಇವರು ಆಧಾರದ ಅಲ್ಪಾವಧಿ ಟೆಂಡರ್ ಆಧಾರದ ಮೇಲೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ನೊಂದಾಯಿತ ಅರ್ಹ ಹುತ್ತಿಗೆದಾರರಿಂದ ಈ ಕೆಳಗೆ ನಮೂದಿಸಿದ ಕಾಮಗಾರಿಗೆ ಕೆಟಿಪಿಪಿ ಕಾಯ್ದೆಯ ರೂಲ್ 28 ರನ್ವಯ Two Cover System (ದ್ವಿ–ಲಕೋಟೆ) ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಗುತ್ತಿಗೆದಾರರು ತಮ್ಮ ಟೆಂಡರ್‌ಗಳನ್ನು ಕೆಳಗೆ ತಿಳಿಸಿರುವ ದಿನಾಂಕದವರೆಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (www.eproc.karnataka.gov.in) ಮುಖಾಂತರ ಅರ್ಹ ಗುತ್ತಿಗೆದಾರರು ಟೆಂಡರ್‌ಗಳನ್ನು ಸಲ್ಲಿಸಬಹುದಾಗಿದೆ. ಕಾಮಗಾರಿಯ ವಿವರಗಳು ಕೆಳಗಿನಂತಿವೆ.
ಕಾಮಗಾರಿಗಳ ಸಂಖ್ಯೆ: 3, ಇ–ಪ್ರೊಕ್ಯೂರ್‌ಮೆಂಟ್ ಇಂಡೆಂಟ್ ಸಂಖ್ಯೆ: ದ್ವಿ–ಲಕೋಟೆ ಇಂಡೆಂಟ್ ನಂ: 30447/ Call-3, 30448/Call-3, 30449/Call-3 ಅಂದಾಜು ಪತ್ರಿಕೆಯಂತೆ ಟೆಂಡರ್‌ಗೆ ಇಡಲಾದ ಮೊತ್ತ ರೂ. Rs: 94.69 ರಿಂದ 67.48 ಲಕ್ಷಗಳಲ್ಲಿ ಟೆಂಡರ್ ಕುರಿತು ಪ್ರಶ್ನೆಗಳಿಗಾಗಿ / ಸ್ಪಷ್ಟೀಕರಣಗಳಿಗಾಗಿ ಕೊನೆಯ ದಿನಾಂಕ ಮತ್ತು ಸಮಯ : 06–03–2021 ರ 17:00 ಗಂಟೆಯವರೆಗೆ ಮುಖ್ಯ ಇಂಜಿನೀಯರರು, ಕನೀನಿನಿ, ನೀ(ಉ) ವಲಯ ಬೆಳಗಾವಿ ಕಚೇರಿಯಲ್ಲಿ ಪೂರ್ವ ಬಿಡ್ ಸಭೆ ದಿನಾಂಕ: 08–03–2021, 11:00 ಗಂಟೆಗೆ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ 12–03–2021 ರ 17:30 ಗಂಟೆಯವರೆಗೆ, ತಾಂತ್ರಿಕ ಬಿಡ್‌ನ್ನು (ಲಕೋಟೆ–1) ತೆರೆಯುವ ದಿನಾಂಕ: 15–03–2021 ರ 11:30 ಗಂಟೆಯ ನಂತರ, ತಾಂತ್ರಿಕ ಬಿಡ್‌ನಲ್ಲಿ (ಲಕೋಟೆ–1) ಪೂರ್ವಾಹತೆ ಹೊಂದಿದ ಅರ್ಹ ಗುತ್ತಿಗೆದಾರರ ಆರ್ಥಿಕ ಬಿಡ್‌ನ್ನು (ಲಕೋಟೆ–2) ತೆರೆಯುವ ದಿನಾಂಕ: ತಾಂತ್ರಿಕ ಬಿಡ್‌ಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದ ನಂತರ.
ಗುತ್ತಿಗೆದಾರರ ಅರ್ಹತೆ / ಟೆಂಡರಿನ ನಿಯಮಗಳು / ಟೆಂಡರ್ ಪ್ರೋಸೆಸ್ಸಿಂಗ್ ಇತ್ಯಾದಿ ವಿವರಗಳಿಗೆ http://www.eproc.karnataka.gov.in ಮೂಲಕ ಮೇಲೆ ತೋರಿಸಿದ ಅವಧಿಯಲ್ಲಿ ಮಾಹಿತಿ ಪೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರ್‌ನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.
ಸಹಿ/– (ಆರ್.ವ್ಹಿ. ಚಿತ್ತವಾಡಗಿ)
ಕಾರ್ಯನಿರ್ವಾಹಕ ಇಂಜನೀಯರರು,
ಕನೀನಿನಿ, ಜಿಆರ್‌ಬಿಸಿಸಿ, ವಿಭಾಗ ನಂ.2 ಹಿಡಕಲ್ ಡ್ಯಾಂ

ನಾಲ್ಕು ರಾಜ್ಯ, ಒಂದು ಕೇಂದ್ರಾಡಳಿತ ಪ್ರದೇಶದ ವಿಧಾನಸಭಾ ಚುನಾವಣೆ: ತಮಿಳುನಾಡಿನಲ್ಲಿ ಎಐಎಡಿಎಂಕೆ–ಬಿಜೆಪಿ ನಡುವೆ ಸೀಟು ಹಂಚಿಕೆ ಮಾತುಕತೆ ಅಂತಿಮ

ತಮಿಳುನಾಡು: 20 ಕ್ಷೇತ್ರಗಳಲ್ಲಿ ಬಿಜೆಪಿ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ಎಐಎಡಿಎಂಕೆ ಹಾಗೂ ಬಿಜೆಪಿ ಮೈತ್ರಿಕೂಟದ ನಡುವೆ ಕಳೆದೊಂದು ವಾರದಿಂದ ನಡೆಯುತ್ತಿದ್ದ ಸೀಟು ಹಂಚಿಕೆ ಒಪ್ಪಂದ ಶನಿವಾರ ಅಂತಿಮವಾಗಿದೆ. ಅದರಂತೆ 20 ಕ್ಷೇತ್ರಗಳಲ್ಲಿ ಬಿಜೆಪಿ ಸ್ಪರ್ಧಿಸಲಿದೆ.

ಎಐಎಡಿಎಂಕೆ ಸಂಚಾಲಕ ಒ. ಪನ್ನೀರಸೆಲ್ವಂ, ಜಂಟಿ ಸಂಚಾಲಕ ಎಡಪ್ಪಾಡಿ ಪಳನಿಸ್ವಾಮಿ, ಬಿಜೆಪಿ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಹಾಗೂ ತಮಿಳುನಾಡು ಬಿಜೆಪಿ ಘಟಕದ ಅಧ್ಯಕ್ಷ ಎಲ್. ಮುರುಗನ್ ಅವರ ಸಮ್ಮುಖದಲ್ಲಿ ಒಪ್ಪಂದ ಏರ್ಪಟ್ಟಿತು. ಯಾವ ಕ್ಷೇತ್ರಗಳನ್ನು ಹಂಚಿಕೆ ಮಾಡಲಾಗಿದೆ ಎಂಬುದನ್ನು ಮುಂದಿನ ದಿನಗಳಲ್ಲಿ ಪ್ರಕಟಿಸಲಾಗುತ್ತದೆ.

ಜೊತೆಗೆ, ಕನ್ಯಾಕುಮಾರಿ ಲೋಕಸಭಾ ಕ್ಷೇತ್ರವನ್ನೂ ಬಿಜೆಪಿಗೆ ಎಐಎಡಿಎಂಕೆ ಬಿಟ್ಟುಕೊಟ್ಟಿದೆ. 2019ರಲ್ಲಿ ಬಿಜೆಪಿ ಅಭ್ಯರ್ಥಿ ಪೊನ್ ರಾಧಾಕೃಷ್ಣನ್ ಅವರು ಇಲ್ಲಿ ಸೋತಿದ್ದರು. ಕಾಂಗ್ರೆಸ್ ಅಭ್ಯರ್ಥಿ ವಸಂತಕುಮಾರ್ ಅವರು ಕೋವಿಡ್‌ನಿಂದ ಮೃತಪಟ್ಟಿದ್ದರಿಂದ ಕ್ಷೇತ್ರ ತೆರವಾಗಿತ್ತು. ಈ ಬಾರಿಯೂ ಪೊನ್ ರಾಧಾಕೃಷ್ಣನ್ ಅವರನ್ನು ಕಣಕ್ಕಿಳಿಸಲು ಬಿಜೆಪಿ ನಿರ್ಧರಿಸಿದೆ.

ಮಮತಾ ವಿರುದ್ಧ ಸುವೇಂದು ಕಣಕ್ಕೆ

(ಕೋಲ್ಕತ್ತ ವರದಿ): ತೀವ್ರ ಜಿದ್ದಾಜಿದ್ದಿನಿಂದ ಕೂಡಿರುವ ಪಶ್ಚಿಮ ಬಂಗಾಳ ಚುನಾವಣೆಯಲ್ಲಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ವಿರುದ್ಧ ಸುವೇಂದು ಅಧಿಕಾರಿ ಅವರನ್ನು ಕಣಕ್ಕಿಳಿಸಲು ಬಿಜೆಪಿ ಶನಿವಾರ ನಿರ್ಧರಿಸಿದೆ

ಮೊದಲ ಎರಡು ಹಂತಗಳಿಗೆ ಅಭ್ಯರ್ಥಿಗಳ ಪಟ್ಟಿಯನ್ನು ಬಿಜೆಪಿ ಬಿಡುಗಡೆ ಮಾಡಿದ್ದು, ಟಿಎಂಸಿಯಿಂದ ಹೊರಬಂದಿರುವ ನಾಯಕ ಸುವೇಂದು ಅಧಿಕಾರಿ ಅವರನ್ನು ನಂದಿಗ್ರಾಮದಲ್ಲಿ ಮಮತಾ ವಿರುದ್ಧ ಸ್ಪರ್ಧೆಗೆ ಇಳಿಸಲಾಗಿದೆ.

2011ರಲ್ಲಿ ಟಿಎಂಸಿ ಪಕ್ಷವನ್ನು ಅಧಿಕಾರಕ್ಕೆ ತಂದಿದ್ದು ನಂದಿಗ್ರಾಮದಲ್ಲಿ ನಡೆದ ಭೂಸ್ವಾಧೀನ ಚಳವಳಿ. ಇದೇ ನಂದಿಗ್ರಾಮದಲ್ಲಿ ಟಿಎಂಸಿಗೆ ದೊಡ್ಡ ಪೆಟ್ಟು ನೀಡಲು ಸುವೇಂದು ಅವರನ್ನು ಬಿಜೆಪಿ ಅಖಾಡಕ್ಕೆ ಇಳಿಸಿದೆ.

ನರೇಂದ್ರ ಮೋದಿ ಅವರ ಚುನಾವಣಾ ರ‍್ಯಾಲಿ ನಡೆಯಲಿರುವ ಕೋಲ್ಕತ್ತದ ಬ್ರಿಗೇಡ್ ಪರೇಡ್ ಮೈದಾನದ ಮೇಲೆ ವಾಯುಪಡೆಯ ಹೆಲಿಕಾಪ್ಟರ್‌ಗಳು ಶನಿವಾರ ಭದ್ರತೆ ಪರಿಶೀಲನಾ ಹಾರಾಟ ನಡೆಸಿದವು –ಪಿಟಿಐ ಚಿತ್ರಗಳು

ಬಿಜೆಪಿ ಸೇರಿದ ದಿನೇಶ್ ತ್ರಿವೇದಿ

(ನವದೆಹಲಿ ವರದಿ): ತೃಣಮೂಲ ಕಾಂಗ್ರೆಸ್‌ನ ಮಾಜಿ ಸಂಸದ ಹಾಗೂ ಮಾಜಿ ರೈಲ್ವೆ ಸಚಿವ ದಿನೇಶ್ ತ್ರಿವೇದಿ ಅವರು ಶನಿವಾರ ಬಿಜೆಪಿ ಸೇರ್ಪಡೆಯಾದರು. ಬಳಿಕ ಮಾತನಾಡಿದ ಅವರು, 'ಇಂತಹ ಸುವರ್ಣ ಗಳಿಗೆಗಾಗಿ ಕಾಯುತ್ತಿದ್ದೆ' ಎಂದಿದ್ದಾರೆ.

'ಚುನಾವಣೆ ನಿಗದಿಯಾಗಿರುವ ಪಶ್ಚಿಮ ಬಂಗಾಳದಲ್ಲಿ ರಾಜಕೀಯ ಹಿಂಸಾಚಾರಕ್ಕೆ ತೃಣಮೂಲ ಕಾಂಗ್ರೆಸ್ ಹೊಣೆ' ಎಂದು ಆರೋಪಿಸಿ, ಅವರು ರಾಜ್ಯಸಭಾ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದರು. ತಾವು ರಾಜೀನಾಮೆ ನೀಡುತ್ತಿರುವ ವಿಚಾರವನ್ನು ಫೆ.12ರಂದು ಸದನದಲ್ಲೇ ಪ್ರಕಟಿಸಿದ್ದರು. 'ಹಿಂಸಾಚಾರದ ಘಟನೆ ನನ್ನ ಉಸಿರುಗಟ್ಟಿಸುತ್ತಿದೆ' ಎಂದು ಅವರು ವಿಷಾದ ವ್ಯಕ್ತಪಡಿಸಿದ್ದರು.

ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ, ಕೇಂದ್ರದ ಸಚಿವರಾದ ಪೀಯೂಷ್ ಗೋಯಲ್, ಧರ್ಮೇಂದ್ರ ಪ್ರಧಾನ್ ಸಮ್ಮುಖದಲ್ಲಿ ಅವರು ಶನಿವಾರ ಬಿಜೆಪಿ ಸೇರಿದರು.

ತೃಣಮೂಲ ಕಾಂಗ್ರೆಸ್ ಪಕ್ಷದ ಮೊದಲ ಪ್ರಧಾನ ಕಾರ್ಯದರ್ಶಿಗಳ ಪೈಕಿ, 70 ವರ್ಷದ ತ್ರಿವೇದಿ ಅವರೂ ಒಬ್ಬರಾಗಿದ್ದಾರೆ. 'ತ್ರಿವೇದಿ ಅವರು ತತ್ವನಿಷ್ಠ ವ್ಯಕ್ತಿ. ಅವರಂತಹ ಉತ್ತಮ ವ್ಯಕ್ತಿ ಅರ್ಹವಲ್ಲದ ಪಕ್ಷದಲ್ಲಿದ್ದರು. ಈಗ ಅರ್ಹ ಪಕ್ಷಕ್ಕೆ ಅರ್ಹ ವ್ಯಕ್ತಿ ಬಂದಿದ್ದಾರೆ. ತ್ರಿವೇದಿ ಅವರು ತಮ್ಮ ತತ್ವಗಳಿಗೆ ಬದ್ಧರಾಗಿದ್ದರೇ ಹೊರತು ಅವುಗಳ ಜೊತೆ ಎಂದೂ ಹೊಂದಾಣಿಕೆ ಮಾಡಿಕೊಳ್ಳಲಿಲ್ಲ' ಎಂದು ಅವರನ್ನು ಪಕ್ಷಕ್ಕೆ ಬರಮಾಡಿಕೊಂಡ ನಡ್ಡಾ ಹೇಳಿದರು.

'ಕೆಲವು ರಾಜಕೀಯ ಪಕ್ಷಗಳಿಗೆ ಕುಟುಂಬವೇ ಸರ್ವೋಚ್ಚ. ಆದರೆ, ಬಿಜೆಪಿಗೆ ಜನರೇ ಸರ್ವೋಚ್ಚರು. ಕೋವಿಡ್ ಪರಿಸ್ಥಿತಿಯನ್ನು ನಿಭಾಯಿಸಿದ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಬಗ್ಗೆ ವಿದೇಶಿಗರು ಸಹ ಮಾತನಾಡಿಕೊಳ್ಳುತ್ತಿದ್ದಾರೆ' ಎಂದು ದಿನೇಶ್ ತ್ರಿವೇದಿ ಅವರು ಮೋದಿ ಹಾಗೂ ಕೇಂದ್ರ ಸರ್ಕಾರವನ್ನು ಶ್ಲಾಘಿಸಿದರು.

ತ್ರಿವೇದಿ ಬಿಜೆಪಿ ಸೇರ್ಪಡೆಗೆ ಟಿಎಂಸಿ ಆಕ್ರೋಶ ವ್ಯಕ್ತಪಡಿಸಿದೆ. 'ಅವರು ಕೃತಜ್ಞರಲ್ಲ. ಚುನಾವಣೆಗೂ ಮುನ್ನ ಆಡಳಿತ ಪಕ್ಷದ ಬೆನ್ನಿಗೆ ಚೂರಿ ಹಾಕಿದ್ದಾರೆ' ಎಂದು ಹೇಳಿದೆ.

ಟಿಎಂಸಿ ಮಾಜಿ ಸಂಸದ ದಿನೇಶ್ ತ್ರಿವೇದಿ ಅವರು ಶನಿವಾರ ದೆಹಲಿಯಲ್ಲಿ ಬಿಜೆಪಿಗೆ ಸೇರ್ಪಡೆಗೊಂಡರು. ಬಿಜೆಪಿ ಅಧ್ಯಕ್ಷ ನಡ್ಡಾ ಅವರು ಸದಸ್ಯತ್ವ ಪತ್ರ ನೀಡಿದರು–

ತಮಿಳುನಾಡು ಗದ್ದುಗೆ ಯಾರಿಗೆ?

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಸೋನಾಲಿ ಗುಹಾ ಬಿಜೆಪಿಗೆ?: ನಾಲ್ಕು ಬಾರಿ ಟಿಎಂಸಿಯ ಶಾಸಕಿಯಾಗಿದ್ದ, ಈ ಹಿಂದೆ ಮಮತಾ ಬ್ಯಾನರ್ಜಿ ಅವರಿಗೆ ಹತ್ತಿರವಾಗಿದ್ದ ಸೋನಾಲಿ ಗುಹಾ ಅವರು ಬಿಜೆಪಿ ಸೇರ್ಪಡೆಯಾಗುವ ಸುಳಿವು ನೀಡಿದ್ದಾರೆ. ಚುನಾವಣೆಗೆ ಟಿಕೆಟ್ ನಿರಾಕರಿಸಿರುವ ಸುದ್ದಿ ಕೇಳಿ ಅವರು ಕಣ್ಣೀರಿಟ್ಟಿದ್ದರು.

ಪಕ್ಷ ತೊರೆದ ಟಿಎಂಸಿ ಶಾಸಕ: ಅಭ್ಯರ್ಥಿಗಳ ಪಟ್ಟಿಯಲ್ಲಿ ಸ್ಥಾನ ಸಿಗಲಿಲ್ಲ ಎಂಬ ಕಾರಣಕ್ಕೆ ಟಿಎಂಸಿ ಪಕ್ಷದ ಶಿಬ್‌ಪುರ ಶಾಸಕ ಜಿತು ಲಾಹಿರಿ ಅವರು ಶನಿವಾರ ಪಕ್ಷಕ್ಕೆ ರಾಜೀನಾಮೆ ನೀಡಿದ್ದಾರೆ. ಪಕ್ಷದ ನಿಷ್ಠಾವಂತ ಸೈನಿಕನಾಗಿದ್ದರೂ ತಮ್ಮನ್ನು ಕಡೆಗಣಿಸಲಾಗಿದೆ ಎಂದು ಅವರು ಅಳಲು ತೋಡಿಕೊಂಡಿದ್ದಾರೆ.

ಬಾಂಬ್ ದಾಳಿ: ಬಿಜೆಪಿ ಕಾರ್ಯಕರ್ತ ಸಾವು

ಆಡಳಿತಾರೂಢ ಟಿಎಂಸಿ ಕಾರ್ಯಕರ್ತರು ನಡೆಸಿದ್ದರು ಎಂದು ಆರೋಪಿಸಲಾಗಿರುವ ಬಾಂಬ್ ದಾಳಿಯಲ್ಲಿ ಒಬ್ಬ ಬಿಜೆಪಿ ಕಾರ್ಯಕರ್ತ ಮೃತಪಟ್ಟಿದ್ದು, ಆರು ಮಂದಿ ಗಾಯಗೊಂಡ ಘಟನೆ ದಕ್ಷಿಣ 24 ಪರಗಣ ಜಿಲ್ಲೆಯಲ್ಲಿ ನಡೆದಿದೆ.

ಗೊಸಾಬಾ ಎಂಬಲ್ಲಿ ಮದುವೆ ಕಾರ್ಯಕ್ರಮವೊಂದರಲ್ಲಿ ಭಾಗಿಯಾಗಿ ವಾಪಸಾಗುತ್ತಿದ್ದಾಗ ಸ್ಥಳೀಯ ಟಿಎಂಸಿ ಕಾರ್ಯಕರ್ತರು ದಾಳಿ ನಡೆಸಿದ್ದಾರೆ ಎಂದು ಗಾಯಾಳುಗಳ ಕುಟುಂಬದವರು ಆರೋಪಿಸಿದ್ದಾರೆ.

'ಮನೆಯಲ್ಲಿ ತಯಾರಾಗುತ್ತಿದ್ದ ಕಚ್ಚಾಬಾಂಬ್ ಆಕಸ್ಮಿಕವಾಗಿ ಸ್ಫೋಟಗೊಂಡಿದೆ. ಅದು ಬಿಜೆಪಿ ಕಾರ್ಯಕರ್ತರೊಬ್ಬರಿಗೆ ಸೇರಿದ ಮನೆ' ಎಂದು ಪೊಲೀಸರು ಹೇಳಿದ್ದಾರೆ. ಆದರೆ, ಗಾಯಾಳುಗಳ ಹೇಳಿಕೆಯನ್ನು ಪರಿಗಣಿಸಿ, ಅದನ್ನು ದಾಖಲಿಸಿಕೊಳ್ಳಲಾಗಿದೆ. ಮನೆಯಲ್ಲಿ ಬಾಂಬ್ ತಯಾರಾಗುತ್ತಿತ್ತು ಎಂಬುದು ಮೇಲ್ನೋಟಕ್ಕೆ ಕಂಡುಬಂದಿದೆ. ಈ ಬಗ್ಗೆ ತನಿಖೆ ಕೈಗೊಂಡಿದ್ದು ಸ್ಥಳೀಯರ ವಿಚಾರಣೆ ನಡೆಸುತ್ತಿದ್ದೇವೆ' ಎಂದು ಪೊಲೀಸರು ಹೇಳಿದ್ದಾರೆ.

'ಗೊಸಾಬಾದಲ್ಲಿ ಶುಕ್ರವಾರ ರಾತ್ರಿ ಬಿಜೆಪಿ– ಟಿಎಂಸಿ ಕಾರ್ಯಕರ್ತರು ಪರಸ್ಪರ ಘರ್ಷಣೆ ನಡೆಸಿ ಕಚ್ಚಾಬಾಂಬ್ ಎಸೆದಿದ್ದಾರೆ' ಎಂದು ಕೆಲವು ಸ್ಥಳೀಯರು ಹೇಳಿದ್ದಾರೆ. ಸ್ಥಳದಲ್ಲಿ ಪೊಲೀಸ್ ಪಡೆಗಳನ್ನು ನಿಯೋಜಿಸಲಾಗಿದ್ದು, ಬಾಂಬ್ ನಿಷ್ಕ್ರಿಯ ದಳ ರವಾನಿಸಲಾಗಿದೆ. ಗೊಸಾಬಾ ಮೀಸಲು ಕ್ಷೇತ್ರದಲ್ಲಿ ಏಪ್ರಿಲ್ 1ರಂದು ಮತದಾನ ನಿಗದಿಯಾಗಿದೆ.

ಅಸ್ಸಾಂ: ಕಾಂಗ್ರೆಸ್ ಮಹಾಮೈತ್ರಿಗೆ ಹಿನ್ನಡೆ

ಗುವಾಹಟಿ: ಆಡಳಿತಾರೂಢ ಬಿಜೆಪಿಯನ್ನು ಅಧಿಕಾರದಿಂದ ಕೆಳಗಿಳಿಸಲು ಮಹಾಮೈತ್ರಿಕೂಟ ಕಟ್ಟುವ ಕಾಂಗ್ರೆಸ್ ಯತ್ನಕ್ಕೆ ಹಿನ್ನಡೆ ಉಂಟಾಗಿದೆ. ಹೊಸದಾಗಿ ಹುಟ್ಟಿಕೊಂಡಿರುವ ಅಸ್ಸಾಂ ಜಾತೀಯ ಪರಿಷತ್ (ಎಜೆಪಿ) ಮತ್ತು ಅಖಿಲ್ ಗೊಗೊಯಿ ಅವರ ರಾಯ್‌ಜೊರ್ ದಳ ಪಕ್ಷಗಳು ತಮ್ಮ ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಿವೆ.

ಅಸ್ಸಾಂ ವಿದ್ಯಾರ್ಥಿ ಒಕ್ಕೂಟದ ಮಾಜಿ ಕಾರ್ಯದರ್ಶಿ ಲುರಿಂಜ್ಯೋತಿ ಗೊಗೊಯಿ ಅವರು ಎಜೆಪಿ ಕಟ್ಟಿದ್ದು, 18 ಅಭ್ಯರ್ಥಿಗಳ ಪಟ್ಟಿ ಪ್ರಕಟಿಸಿದ್ದಾರೆ. ಹಾಗೆಯೇ ಸಿಎಎ ವಿರೋಧಿ ಪ್ರತಿಭಟನೆ ವೇಳೆ ಹುಟ್ಟಿಕೊಂಡ ಅಖಿಲ್ ಗೊಗೊಯಿ ಅವರ ರಾಯ್‌ಜೊರ್ ದಳವು 17 ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. ಮೈತ್ರಿಕೂಟದಲ್ಲಿ ಸೇರುವ ಕಾಂಗ್ರೆಸ್ ಆಹ್ವಾನವನ್ನು ಈ ಎರಡೂ ಪಕ್ಷಗಳು ತಿರಸ್ಕರಿಸಿವೆ.

ಜೈಲಿನಿಂದಲೇ ಸ್ಪರ್ಧೆ: ಜೈಲಿನಲ್ಲಿರುವ ಸಾಮಾಜಿಕ ಕಾರ್ಯಕರ್ತ ಅಖಿಲ್ ಗೊಗೊಯಿ ಅವರು ಅಸ್ಸಾಂ ವಿಧಾನಸಭೆಯ ಸಿಬಸಾಗರ್ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ. ಬಿಜೆಪಿಯನ್ನು ಸೋಲಿಸುವುದು ತಮ್ಮ ಉದ್ದೇಶದ ಎಂದು ಪಕ್ಷದ ಮುಖಂಡರು ಹೇಳಿದ್ದಾರೆ. ಸಿಎಎ ವಿರುದ್ಧ ಪ್ರತಿಭಟನೆ ನಡೆಸಿದ ಗೊಗೊಯಿ ಅವರನ್ನು 2019ರಲ್ಲಿ ಜೈಲಿಗೆ ಕಳುಹಿಸಲಾಗಿತ್ತು.

ಇಂದು ಪ್ರಧಾನಿ ರ‍್ಯಾಲಿ: ಮಿಥುನ್ ಚಕ್ರವರ್ತಿ ಭಾಗಿ?

ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಕೋಲ್ಕತ್ತದ ಬ್ರಿಗೇಡ್ ಪರೇಡ್ ಮೈದಾನದಲ್ಲಿ ಚುನಾವಣಾ ಪ್ರಚಾರ ಸಭೆ ನಡೆಸಲಿದ್ದಾರೆ. ರಾಜ್ಯದಲ್ಲಿ ಬಿಜೆಪಿ ಆರಂಭಿಸಿದ್ದ 'ಪರಿವರ್ತನ ಯಾತ್ರೆ'ಯ ಅಂಗವಾಗಿ ಈ ರ‍್ಯಾಲಿ ನಡೆಯಲಿದೆ.

ಚುನಾವಣೆ ಘೋಷಣೆಯಾದ ಬಳಿಕ ಬಿಜೆಪಿ ನಡೆಸುತ್ತಿರುವ ಅತಿಮುಖ್ಯ ಕಾರ್ಯಕ್ರಮ ಇದಾಗಿದೆ. ಹೀಗಾಗಿ ಮೈದಾನದಲ್ಲಿ ದಾಖಲೆ ಸಂಖ್ಯೆಯಲ್ಲಿ ಜನರನ್ನು ಸೇರಿಸಿ, ಕಾರ್ಯಕ್ರಮವನ್ನು ಯಶಸ್ವಿಗೊಳಿಸುವುದು ಬಿಜೆಪಿ ಉದ್ದೇಶವಾಗಿದೆ. ಬಾಲಿವುಡ್ ನಟ ಮಿಥುನ್ ಚಕ್ರವರ್ತಿ ಅವರು ಕಾರ್ಯಕ್ರಮದಲ್ಲಿ ಭಾಗಿಯಾಗುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಮೋದಿ ಚಿತ್ರ: ಆಯೋಗ ಸೂಚನೆ

ನವದೆಹಲಿ: ಕೋವಿಡ್ ಲಸಿಕೆಯ ಪ್ರಮಾಣಪತ್ರದಿಂದ ಪ್ರಧಾನಿ ನರೇಂದ್ರ ಮೋದಿ ಅವರ ಚಿತ್ರವನ್ನು ತೆಗೆದುಹಾಕುವಂತೆ ಕೇಂದ್ರ ಆರೋಗ್ಯ ಸಚಿವಾಲಯಕ್ಕೆ ಚುನಾವಣಾ ಆಯೋಗ ಸೂಚನೆ ನೀಡಿದೆ.

ಪ್ರಮಾಣಪತ್ರದಲ್ಲಿ ಪ್ರಧಾನಿಯ ಚಿತ್ರ ಬಳಸುವುದಕ್ಕೆ ರಾಜಕೀಯ ಪಕ್ಷಗಳು ವಿರೋಧ ವ್ಯಕ್ತಪಡಿಸಿರುವ ಹಿನ್ನೆಲೆಯಲ್ಲಿ, ಆಯೋಗ ಈ ಕ್ರಮ ಕೈಗೊಂಡಿದೆ. ಐದು ವಿಧಾನಸಭೆಗಳಿಗೆ ಚುನಾವಣೆ ನಿಗದಿಯಾಗಿರುವ ಕಾರಣ ನೀತಿ ಸಂಹಿತೆ ಪಾಲಿಸುವಂತೆಸೂಚನೆ ನೀಡಿದೆ. 'ಮೋದಿ ಅವರ ಚಿತ್ರ ಪ್ರಕಟಿಸುವುದರಿಂದ ಪ್ರಧಾನಿಯು ಅಧಿಕಾರದ ದುರುಪಯೋಗ ಮಾಡಿದಂತಾಗುತ್ತದೆ' ಎಂದು ತೃಣಮೂಲ ಕಾಂಗ್ರೆಸ್ ದೂರು ನೀಡಿತ್ತು.

ಹೊಸ ಕಾರುಗಳಲ್ಲಿ ಎರಡು ಏರ್‌ಬ್ಯಾಗ್ ಕಡ್ಡಾಯ

ನವದೆಹಲಿ: ಪ್ರಯಾಣಿಕರ ಸುರಕ್ಷತಾ ದೃಷ್ಟಿಯಿಂದ ಹೊಸ ಕಾರುಗಳಲ್ಲಿ ಎರಡು ಏರ್‌ಬ್ಯಾಗ್ ಕಡ್ಡಾಯಗೊಳಿಸುವ ನಿರ್ಧಾರವನ್ನು ಕೇಂದ್ರ ಸರ್ಕಾರ ಪ್ರಕಟಿಸಿದೆ.

ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು ಹೊಸ ನಿಯಮವನ್ನು ಘೋಷಿಸಿದ್ದು, 'ಎಲ್ಲಾ ಹೊಸ ಕಾರುಗಳಲ್ಲಿ ಏಪ್ರಿಲ್ 1ರಿಂದ ಎರಡು ಫ್ರಂಟ್ ಏರ್‌ಬ್ಯಾಗ್‌ಗಳನ್ನು ಕಡ್ಡಾಯವಾಗಿ ಹೊಂದಿರಬೇಕು. ಜೊತೆಗೆ, ಅಸ್ತಿತ್ವದಲ್ಲಿರುವ ಕಾರುಗಳನ್ನು ಆಗಸ್ಟ್‌ನಿಂದ ಡ್ಯುಯಲ್ ಏರ್‌ಬ್ಯಾಗ್‌ಗಳೊಂದಿಗೆ ಮಾರಾಟ ಮಾಡಬೇಕಾಗುತ್ತದೆ' ಎಂದು ಹೇಳಿದೆ.

ಸುಪ್ರೀಂ ಕೋರ್ಟ್ ಸಮಿತಿಯ ಸಲಹೆಗಳನ್ನು ಆಧರಿಸಿ ಈ ನಿರ್ಧಾರವನ್ನು ಪ್ರಕಟಿಸಲಾಗಿದೆ ಎಂದು ಸಚಿವಾಲಯ ಅಧಿಸೂಚನೆಯಲ್ಲಿ ತಿಳಿಸಿದೆ.

ಬ್ಯೂರೊ ಆಫ್ ಇಂಡಿಯನ್ ಸ್ಟ್ಯಾಂಡರ್ಡ್ಸ್ (ಬಿಐಎಸ್) ಮಾರ್ಕ್ ಅಡಿಯಲ್ಲಿ ಏರ್‌ಬ್ಯಾಗ್ ಎಐಎಸ್ 145 ಗುಣಮಟ್ಟದ ಸಾಧನಗಳನ್ನು ಅಳವಡಿಸಿಕೊಳ್ಳಬೇಕು ಎಂದು ತಿಳಿಸಲಾಗಿದೆ.

ದೆಹಲಿ ಗಡಿಪ್ರದೇಶ ಹಾಗೂ ಹರಿಯಾಣದ ಹಲವೆಡೆ ರಸ್ತೆ ತಡೆ

ರೈತ ಪ್ರತಿಭಟನೆಗೆ ನೂರು ದಿನ

ನವದೆಹಲಿ (ಪಿಟಿಐ): ಕೇಂದ್ರದ ಮೂರು ಕೃಷಿಕಾಯ್ದೆಗಳನ್ನು ವಿರೋಧಿಸಿ ವಿವಿಧ ರಾಜ್ಯಗಳ ರೈತರು ದೆಹಲಿ ಗಡಿಭಾಗಗಳಲ್ಲಿ ಆರಂಭಿಸಿದ ಪ್ರತಿಭಟನೆಯು ಶನಿವಾರ ನೂರು ದಿನಗಳನ್ನು ಪೂರೈಸಿದೆ.

ದೆಹಲಿ ಗಡಿಪ್ರದೇಶ ಹಾಗೂ ಹರಿಯಾಣದ ಹಲವೆಡೆ ಬೆಳಿಗ್ಗೆ 11ರಿಂದ ಸಂಜೆ 4 ಗಂಟೆಯವರೆಗೆ ರಸ್ತೆ ತಡೆ ನಡೆಸುವ ಮೂಲಕ ಪ್ರತಿಭಟನೆಯ ನೂರನೇ ದಿನವನ್ನು ರೈತರು ಆಚರಿಸಿದರು. ವಿವಿಧ ರೈತ ಸಂಘಟನೆಗಳ ಒಕ್ಕೂಟವಾದ ಸಂಯುಕ್ತ ಕಿಸಾನ್ ಮೋರ್ಚಾ, ರಸ್ತೆತಡೆಗೆ ಕರೆ ನೀಡಿತ್ತು.

ಮಹಿಳೆಯರು ಸೇರಿದಂತೆ ನೂರಾರು ರೈತರು ಕಪ್ಪು ಬಾವುಟ ಹಿಡಿದು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಕೆಲವರು ಕೈಗೆ ಕಪ್ಪು ಬ್ಯಾಂಡ್ ಧರಿಸಿದ್ದರು. ಮಹಿಳೆಯರು ಕಪ್ಪು ದುಪಟ್ಟಾ ಧರಿಸಿ ಪ್ರತಿಭಟನೆ ನಡೆಸಿದರು. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ಸೋನಿಪತ್, ಹಾಜಿಪುರ ಹಾಗೂ ಕೆಲವು ಪ್ರದೇಶಗಳಲ್ಲಿ ಟ್ರ್ಯಾಕ್ಟರ್ ಹಾಗೂ ಇತರ ವಾಹನಗಳನ್ನು ರಸ್ತೆಯ ಮೇಲೆ ಅಡ್ಡವಾಗಿಡಲಾಗಿತ್ತು.

'ನಮ್ಮ ಹೋರಾಟ ಕೊನೆಗೊಳ್ಳುವುದಿಲ್ಲ, ಬದಲಿಗೆ ಇನ್ನಷ್ಟು ಬಲಪಡೆದುಕೊಳ್ಳಲಿದೆ' ಎಂದು ವಿವಿಧ ರೈತ ಸಂಘಟನೆಗಳ ಮುಖಂಡರು ಹೇಳಿದ್ದಾರೆ.

ರೈತರ ಪ್ರತಿಭಟನೆಯ ನೂರನೆಯ ದಿನವಾದ ಶನಿವಾರ, ದೆಹಲಿ– ಹರಿಯಾಣ ಗಡಿಯಲ್ಲಿ ರೈತರು ಐದು ಗಂಟೆಗಳ ಕಾಲ ರಸ್ತೆ ತಡೆ ನಡೆಸಿದರು – ಪಿಟಿಐ ಚಿತ್ರ

ಪ್ರಜಾಪ್ರಭುತ್ವದ ಕಪ್ಪು ಅಧ್ಯಾಯ: 'ನೂರು ದಿನಗಳ ರೈತ ಹೋರಾಟವು ಭಾರತದ ಪ್ರಜಾಪ್ರಬುತ್ವದ ಕಪ್ಪು ಅಧ್ಯಾಯವಾಗಿದೆ' ಎಂದು ಕಾಂಗ್ರೆಸ್ ಟೀಕಿಸಿದೆ.

'ಗಡಿಭಾಗದಲ್ಲಿ ದೇಶಕ್ಕಾಗಿ ಪ್ರಾಣವನ್ನೇ ಮುಡಿಪಾಗಿಟ್ಟವರ ಪಾಲಕರು ದೆಹಲಿ ಪ್ರವೇಶಿಸುವುದನ್ನು ತಡೆಯಲು ರಸ್ತೆಯಲ್ಲಿ ಮೊಳೆಗಳನ್ನು ಚುಚ್ಚಿಡಲಾಗಿದೆ. ಅನ್ನದಾತರು ತಮ್ಮ ಹಕ್ಕಿಗಾಗಿ ಹೋರಾಟ ಮಾಡುತ್ತಿದ್ದಾರೆ. ಅವರ ವಿರುದ್ಧ ಸರ್ಕಾರ ದೌರ್ಜನ್ಯ ನಡೆಸುತ್ತಿದೆ' ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಟ್ವೀಟ್ ಮಾಡಿದ್ದಾರೆ.

#100DaysOfBJParrogance ಹ್ಯಾಷ್‌ಟ್ಯಾಗ್‌ನಲ್ಲಿ ಟ್ವೀಟ್ ಮಾಡಿದ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ, 'ಅನ್ನದಾತರು ತಮ್ಮ ಹಕ್ಕಿಗಾಗಿ ಗಾಂಧೀಜಿ, ಸರ್ದಾರ್ ಪಟೇಲ್, ನೆಹರೂ, ಶಾಸ್ತ್ರಿ ಹಾಗೂ ಹುತಾತ್ಮ ಭಗತ್ ಸಿಂಗ್ ಅವರು ಹಾಕಿಕೊಟ್ಟ ಮಾರ್ಗದಲ್ಲಿ ಹೋರಾಟ ನಡೆಸಿದ್ದಾರೆ. ಇದು ಬಿಜೆಪಿಯ ದುರಹಂಕಾರದ ನೂರು ದಿನಗಳಾಗಿವೆ' ಎಂದಿದ್ದಾರೆ.

ಮೂರು ಕೃಷಿ ಕಾಯ್ದೆಗಳನ್ನು ರದ್ದುಪಡಿಸಬೇಕು ಎಂದು ಕಾಂಗ್ರೆಸ್ ವಕ್ತಾರ ಪವನ್ ಖೇರ ಒತ್ತಾಯಿಸಿದ್ದಾರೆ.

ಪ್ರಧಾನಿ ಅಹಂಕಾರದ ನೂರನೇ ದಿನ: ಯೋಗೇಂದ್ರ ಕಿಡಿ

'ಕೃಷಿ ತಿದ್ದುಪಡಿ ಕಾಯ್ದೆಗಳು ಸತ್ತವು'

ಪ್ರಜಾವಾಣಿ ವಾರ್ತೆ

ಬಳ್ಳಾರಿ: 'ದೆಹಲಿಯಲ್ಲಿ 100 ದಿನದಿಂದ ರೈತರು ನಡೆಸುತ್ತಿರುವ ಮುಷ್ಕರದಿಂದಾಗಿ ಮೂರು ಕರಾಳ ಕೃಷಿ ಕಾಯ್ದೆಗಳು ಸತ್ತವು. ಅವುಗಳ ಮರಣಪ್ರಮಾಣ ಪತ್ರ ಸಿಕ್ಕಿಲ್ಲ ಅಷ್ಟೇ' ಎಂದು ಸಂಯುಕ್ತ ಕಿಸಾನ್ ಮೋರ್ಚಾ ಮುಖಂಡ ಯೋಗೇಂದ್ರ ಯಾದವ್ ಶನಿವಾರ ಪ್ರತಿಪಾದಿಸಿದರು.

ನಗರದ ಎಪಿಎಂಸಿ ಆವರಣದಲ್ಲಿ ರೈತ ಸಂಘ ಏರ್ಪಡಿಸಿದ್ದ 'ರೈತರೊಂದಿಗೆ ಸಂವಾದ'ದಲ್ಲಿ ಪಾಲ್ಗೊಂಡಿದ್ದ ಅವರು, 'ಪ್ರಧಾನಿ ಮೋದಿ ಹಠಮಾರಿತನ ಮುಂದುವರಿಸಿದರೆ ಮುನ್ನೂರು ದಿನವಾದರೂ ಮುಷ್ಕರ ಮುಂದುವರಿಸುತ್ತೇವೆ' ಎಂದರು.

'100 ದಿನ ಮುಷ್ಕರ ನಡೆಸಿ ಏನು ಸಾಧಿಸಿದಿರಿ' ಎಂದು ಪ್ರಶ್ನಿಸಿದ ರೈತರೊಬ್ಬರಿಗೆ ಪ್ರತಿಕ್ರಿಯಿಸಿದ ಅವರು, 'ಮುಷ್ಕರ ದೇಶದಲ್ಲಿರುವ ಎಲ್ಲ ರೈತರನ್ನು ಅಖಂಡವಾಗಿ ಒಗ್ಗೂಡಿಸಿತು. ರೈತರ ಶಕ್ತಿ ಏನೆಂದು ಸರ್ಕಾರಕ್ಕೆ ಗೊತ್ತಾಯಿತು. ಇನ್ನು ಮುಂದೆ ಬರುವ ಯಾವುದೇ ಸರ್ಕಾರವೂ ರೈತ ವಿರೋಧಿ ತೀರ್ಮಾನಗಳನ್ನು ತೆಗೆದುಕೊಳ್ಳಲು ಆಗುವುದಿಲ್ಲ' ಎಂದರು.

'ನೀವು ಪ್ರಧಾನಿ ಮೋದಿಯವರಿಗೇ ಈ ಪ್ರಶ್ನೆ ಕೇಳಬೇಕು. ಏಕೆಂದರೆ ಇದು ಕೇಂದ್ರ ಸರ್ಕಾರದ ಹಠ ಮತ್ತು ಪ್ರಧಾನಿ ನರೇಂದ್ರ ಮೋದಿಯವರ ಅಹಂಕಾರದ ನೂರನೇ ದಿನ. ನಿರ್ದಯತೆ ಮತ್ತು ದಮನ ಗುಣದ ನೂರನೇ ದಿನ' ಎಂದು ಕಿಡಿಕಾರಿದರು.

ಬಳ್ಳಾರಿಯ ಎಪಿಎಂಸಿ ಆವರಣದಲ್ಲಿ ಶನಿವಾರ ಸಂಯುಕ್ತ ಕಿಸಾನ್ ಮೋರ್ಚಾ ಮುಖಂಡ ಯೋಗೇಂದ್ರ ಯಾದವ್ ಅವರು ರೈತರೊಂದಿಗೆ ಸಂವಾದ ನಡೆಸುವ ಮುನ್ನ ನವಣೆ ಬೆಳೆ ರಾಶಿ ಬಳಿ ಬಂದು ರೈತರಿಂದ ಮಾಹಿತಿ ಪಡೆದರು.

'100 ದಿನ ಕಳೆದರೆ ಎಲ್ಲರೂ ಸಂಭ್ರಮ ಆಚರಿಸುತ್ತಾರೆ ಶುಭಾಶಯ ವಿನಿಯಮ ಮಾಡಿಕೊಳ್ಳುತ್ತಾರೆ. ಆದರೆ ನಾವು ಸಂಭ್ರಮಿಸಲು ಬಂದಿಲ್ಲ. ಬೇಡಿಕೆಗಳು ಈಡೇರಿದ ಕೂಡಲೇ ಮನೆಗಳಿಗೆ ಮರಳುತ್ತೇವೆ. ಈಗ ದೆಹಲಿಯಲ್ಲಿ ಮೈಕೊರೆಯುವ ಚಳಿಯ ನಡುವೆ ಮುಷ್ಕರ ನಡೆಸುತ್ತಿದ್ದೇವೆ. ಹೀಗಾಗಿ ಇದು ಸಂಭ್ರಮದ ದಿನವಲ್ಲ' ಎಂದು ಹೇಳಿದರು.

'ಭಾರತ ಮತ್ತು ಪಾಕಿಸ್ತಾನದ ನಡುವೆ ಇರುವುದಕ್ಕಿಂತಲೂ ಹೆಚ್ಚು ಮುಳ್ಳು ಬೇಲಿಗಳನ್ನು ದೆಹಲಿಯ ಮುಷ್ಕರದ ಸ್ಥಳದಲ್ಲಿ ಹಾಕಲಾಗಿದೆ. ಇಂಥ ಅಮಾನವೀಯ ನಡೆಗಳನ್ನು ವಿರೋಧಿಸಲೆಂದೇ ದೇಶದಾದ್ಯಂತ ಕಪ್ಪು ಬಾವುಟ ಪ್ರದರ್ಶಿಸಲಾಗುತ್ತಿದೆ. ಇದು, ದೇಶದ ಎಲ್ಲ ರೈತರ ಘನತೆಗಾಗಿ ನಡೆಸುತ್ತಿರುವ ಹೋರಾಟ' ಎಂದು ಪ್ರತಿಪಾದಿಸಿದರು.

'ಕಾಯ್ದೆಗಳ ವಿರುದ್ಧ ರೈತರ ಐತಿಹಾಸಿಕ ಆಂದೋಲನ ದೆಹಲಿಯಿಂದ ಆರಂಭವಾಗಿದೆ. ಕನಿಷ್ಠ ಬೆಂಬಲ ಬೆಲೆ ಘೋಷಿಸಿ ಆಂದೋಲನವು ಕರ್ನಾಟಕದಿಂದ ಶುರುವಾಗುತ್ತಿದೆ. ಇದು ಕೂಡ ರಾಷ್ಟ್ರವ್ಯಾಪಿ ಆಂದೋಲನವಾಗಲಿದೆ' ಎಂದರು.

ಡಿಜಿಟಲ್ ಮಾಧ್ಯಮ ನಿಯಮಾವಳಿ ಸಂಪಾದಕರ ಕೂಟದ ಕಳವಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಿಜಿಟಲ್ ಮಾಧ್ಯಮಗಳಿಗಾಗಿ ಕೇಂದ್ರ ಸರ್ಕಾರ ಜಾರಿ ಮಾಡಿರುವ ಹೊಸ ಮಾಹಿತಿ ತಂತ್ರಜ್ಞಾನ ನಿಯಮಾವಳಿ-2021 (ಮಾಧ್ಯಸ್ಥ ಸಂಸ್ಥೆಗಳಿಗೆ ಮಾರ್ಗಸೂಚಿ ಮತ್ತು ಮಾಧ್ಯಮ ನೀತಿ ಸಂಹಿತೆ) ಬಗ್ಗೆ ಭಾರತೀಯ ಸಂಪಾದಕರ ಕೂಟ (ಇಜಿಐ) ಕಳವಳ ವ್ಯಕ್ತಪಡಿಸಿದೆ.

'ಮಾಹಿತಿ ತಂತ್ರಜ್ಞಾನ ಕಾಯ್ದೆ–2000ದ ಅಡಿಯಲ್ಲಿ ಜಾರಿಮಾಡಿರುವ ಈ ನಿಯಮಾವಳಿಗಳು, ಡಿಜಿಟಲ್ ವೇದಿಕೆಯಲ್ಲಿ ಮಾಧ್ಯಮಗಳು ಕೆಲಸ ಮಾಡುವ ರೀತಿ ಮತ್ತು ಮಾಧ್ಯಮ ಸ್ವಾತಂತ್ರ್ಯದ ಮೇಲೆ ಪರಿಣಾಮ ಉಂಟುಮಾಡುತ್ತವೆ' ಎಂದು ಕೂಟದ ಅಧ್ಯಕ್ಷರಾದ ಸೀಮಾ ಮುಸ್ತಫಾ, ಪ್ರಧಾನ ಕಾರ್ಯದರ್ಶಿ ಸಂಜಯ್ ಕಪೂರ್ ಹಾಗೂ ಖಜಾಂಚಿ ಅನಂತ ನಾಥ್ ಅವರು ಪ್ರಕಟಣೆಯ ಮೂಲಕ ಹೇಳಿದ್ದಾರೆ.

'ದೇಶದ ಯಾವುದೇ ಭಾಗದಲ್ಲಿ ಪ್ರಕಟವಾಗುವ ಸುದ್ದಿಯನ್ನು ನ್ಯಾಯಾಂಗದ ಮೇಲ್ವಿಚಾರಣೆ ಇಲ್ಲದೆಯೇ, ತಡೆಯುವ, ಅಳಿಸುವ ಅಥವಾ ತಿದ್ದುಪಡಿ ಮಾಡುವ ಅಧಿಕಾರವನ್ನು ಈ ನಿಯಮಾವಳಿಗಳು ಕೇಂದ್ರ ಸರ್ಕಾರಕ್ಕೆ ನೀಡುತ್ತವೆ. ಅಲ್ಲದೆ, ಎಲ್ಲಾ ಪ್ರಕಾಶಕರೂ ಕುಂದುಕೊರತೆ ನಿವಾರಣೆಗೆ ಪ್ರತ್ಯೇಕ ವ್ಯವಸ್ಥೆಯನ್ನು ರೂಪಿಸುವಂತೆಯೂ ಒತ್ತಾಯಿಸುತ್ತವೆ. ಹೊಸ ನಿಯಮಾವಳಿಗಳಲ್ಲಿ ಕೆಲವು ಡಿಜಿಟಲ್ ಮಾಧ್ಯಮಕ್ಕೆ ಅಸಮಂಜಸವಾದವುಗಳಾಗಿವೆ' ಎಂದು ಕೂಟ ಹೇಳಿದೆ.

'ನಿಯಮಾವಳಿಯನ್ನು ಜಾರಿ ಮಾಡುವ ಸಂದರ್ಭದಲ್ಲಿ ಸಂಬಂಧಿಸಿದ ಸಂಸ್ಥೆಗಳ ಜತೆಗೆ ಸರ್ಕಾರ ಚರ್ಚಿಸಿಲ್ಲ. ಆದ್ದರಿಂದ ಸದ್ಯಕ್ಕೆ ಈ ನಿಯಮಾವಳಿಗಳನ್ನು ತಡೆ ಹಿಡಿದು, ಸಂಬಂಧಪಟ್ಟವರ ಜತೆಗೆ ಅರ್ಥಪೂರ್ಣ ಚರ್ಚೆ, ಸಂವಾದ ನಡೆಸಬೇಕು. ಅಶಿಸ್ತಿನ ಸಾಮಾಜಿಕ ಮಾಧ್ಯಮಗಳನ್ನು ನಿಯಂತ್ರಿಸುವ ನೆಪದಲ್ಲಿ, ಪ್ರಜಾಪ್ರಭುತ್ವದ ಮೂಲಾಧಾರವಾಗಿರುವ ಮುಕ್ತ ಮಾಧ್ಯಮಕ್ಕೆ ಸಂವಿಧಾನಾತ್ಮಕವಾಗಿ ಇರುವ ರಕ್ಷಣೆಯನ್ನು ನಿರಾಕರಿಸಬಾರದು' ಎಂದು ಕೂಟ ಸರ್ಕಾರವನ್ನು ಒತ್ತಾಯಿಸಿದೆ.

ಮಾ. 8ರಿಂದ ದಿನ 1.50 ಲಕ್ಷ ಮಂದಿಗೆ ಲಸಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಳವಾಗುತ್ತಿರುವ ಕಾರಣ ಎರಡು ತಿಂಗಳು ನಿರ್ಣಾಯಕವಾಗಿದ್ದು, ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸಬೇಕಿದೆ. ಸೋಮವಾರದಿಂದ ಪ್ರತಿನಿತ್ಯ 1.50 ಲಕ್ಷ ಮಂದಿಗೆ ಲಸಿಕೆ ವಿತರಿಸುವ ಗುರಿಯನ್ನು ಹಾಕಿಕೊಳ್ಳಲಾಗಿದೆ' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಇಲಾಖೆಯ ಅಧಿಕಾರಿಗಳು ಹಾಗೂ ಕೋವಿಡ್ ತಾಂತ್ರಿಕ ಸಲಹಾ ಸಮಿತಿಯ ಸದಸ್ಯರ ಜತೆ ಶನಿವಾರ ಸಭೆ ನಡೆಸಿದ ಅವರು ಮುಂಜಾಗ್ರತಾ ಕ್ರಮಗಳ ಬಗ್ಗೆ ಚರ್ಚಿಸಿದರು.

ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈ ತಿಂಗಳು ನಮಗೆ ಹೆಚ್ಚಿನ ಸವಾಲುಗಳಿವೆ. ಕೋವಿಡ್ ಹರಡುವಿಕೆ ತಡೆಯಲು ಹೆಚ್ಚಿನ ಸಂಖ್ಯೆಯಲ್ಲಿ ಫಲಾನುಭವಿಗಳು ಲಸಿಕೆ ಪಡೆದುಕೊಳ್ಳಬೇಕು' ಎಂದು ಹೇಳಿದರು.

'ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ ಸೇರಿದಂತೆ 3 ಸಾವಿರ ಕಡೆ ಲಸಿಕೆ ವಿತರಣೆಗೆ ವ್ಯವಸ್ಥೆ ಮಾಡಲಾಗುವುದು. ಅದೇ ರೀತಿ, ಕೋವಿಡ್ ಪರೀಕ್ಷೆಗಳನ್ನೂ ಹೆಚ್ಚಿಸಲಾಗುತ್ತದೆ' ಎಂದು ಹೇಳಿದರು.

ಸಮಾರಂಭಕ್ಕೆ 500 ಮಂದಿಗೆ ನಿರ್ಬಂಧ

'ಮದುವೆ ಇನ್ನಿತರ ಸಾರ್ವಜನಿಕ ಸಭೆ ಸಮಾರಂಭಗಳಲ್ಲಿ 500ಕ್ಕಿಂತ ಹೆಚ್ಚು ಜನರು ಪಾಲ್ಗೊಳ್ಳಬಾರದು. ಹೆಚ್ಚು ಜನರು ಪಾಲ್ಗೊಂಡು ಕ್ರಮ ಜರುಗಿಸುವಂತೆ ಗೃಹ ಇಲಾಖೆಗೆ ಮನವಿ ಮಾಡಲಾಗುವುದು' ಎಂದು ಸುಧಾಕರ್ ಹೇಳಿದರು.

'ಸಭೆ, ಸಮಾರಂಭ, ಧಾರ್ಮಿಕ ಕಾರ್ಯಕ್ರಮ, ಹೋರಾಟ ಸೇರಿದಂತೆ ವಿವಿಧ ಸಂದರ್ಭದಲ್ಲಿ ಜನ ಗುಂಪು ಸೇರಿದಂತೆ ನೋಡಿಕೊಳ್ಳಬೇಕಿದೆ. ಧಾರ್ಮಿಕ ಗುರುಗಳು, ರಾಜಕೀಯ ನೇತಾರರು, ಹೋರಾಟಗಾರರು, ರೈತ ಮುಖಂಡರು ಸೇರಿದಂತೆ ವಿವಿಧ ವರ್ಗದವರ ಸಹಕಾರ ಈ ಸಂದರ್ಭದಲ್ಲಿ ಅತ್ಯಗತ್ಯ ಎಂದರು.

'ಬೆಂಗಳೂರು ನಗರ, ದಕ್ಷಿಣ ಕನ್ನಡ, ಮೈಸೂರು, ಚಾಮರಾಜನಗರ, ಉಡುಪಿ, ಕೊಡಗು, ಬೆಳಗಾವಿ ಹಾಗೂ ತುಮಕೂರು ಜಿಲ್ಲೆಯಲ್ಲಿ ಹೆಚ್ಚಿನ ಪ್ರಕರಣಗಳು ವರದಿಯಾಗುತ್ತಿವೆ. ಅಲ್ಲಿನ ಜಿಲ್ಲಾಡಳಿತಗಳು ಕಟ್ಟುನಿಟ್ಟಾದ ಕ್ರಮಗಳನ್ನು ಕೈಗೊಳ್ಳಬೇಕು' ಎಂದರು

ಅಭಯಾರಣ್ಯಕ್ಕೆ ಅವನಿ ಹುಲಿಯ ಹೆಣ್ಣು ಮರಿ

ನಾಗಪುರ (ಪಿಟಿಐ): 'ನರಭಕ್ಷಕ' ಎಂದು ಘೋಷಿಸಲ್ಪಟ್ಟು 2018ರ ಕಾರ್ಯಾಚರಣೆಯಲ್ಲಿ ಗುಂಡಿಟ್ಟು ಕೊಲ್ಲಲಾಗಿದ್ದ 'ಅವನಿ' ಹುಲಿಗೆ ಜನಿಸಿದ್ದ ಹೆಣ್ಣು ಮರಿಯೊಂದನ್ನು ಎರಡು ವರ್ಷಗಳ ನಂತರ ಮಹಾರಾಷ್ಟ್ರದ ನಾಗಪುರ ಜಿಲ್ಲೆಯ ಪೆಂಚ್ ಹುಲಿ ಅಭಯಾರಣ್ಯದಲ್ಲಿ (ಪಿಟಿಆರ್) ಬಿಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪಿಟಿಆರ್‌ಎಫ್–84 ಎಂದು ನಾಮಕರಣ ಮಾಡಿರುವ ಈ ಹೆಣ್ಣು ಹುಲಿ ಮರಿಯನ್ನು ಶುಕ್ರವಾರ ಕಾಡಿಗೆ ಬಿಡಲಾಯಿತು. ಸದ್ಯ ಆ ಹೆಣ್ಣು ಹುಲಿಗೆ 3 ವರ್ಷ 2 ತಿಂಗಳು ಎಂದು ಪಿಟಿಆರ್‌ನ ನಿರ್ದೇಶಕ ಮತ್ತು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ತಿಳಿಸಿದ್ದಾರೆ.

18 ಸಾವಿರ ಹೊಸ ಪ್ರಕರಣ, 108 ಸಾವು

ನವದೆಹಲಿ (ಪಿಟಿಐ): ದೇಶದಲ್ಲಿ ಶನಿವಾರ ಬೆಳಿಗ್ಗೆ 8 ಗಂಟೆಯವರೆಗಿನ 24 ತಾಸುಗಳಲ್ಲಿ 18,327 ಕೋವಿಡ್–19 ಪ್ರಕರಣಗಳು ದೃಢಪಟ್ಟಿವೆ. ಈ ಅವಧಿಯಲ್ಲಿ 108 ಮಂದಿ ಸೋಂಕಿತರು ಮೃತಪಟ್ಟಿದ್ದಾರೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಸೋಂಕಿತರಲ್ಲಿ ಮಹಾರಾಷ್ಟ್ರ (10,216) , ಕೇರಳ (2,776), ಪಂಜಾಬ್ (808), ಕರ್ನಾಟಕ ಮತ್ತು ತಮಿಳುನಾಡು ರಾಜ್ಯದವರೇ (ಶೇ 82) ಹೆಚ್ಚಿದ್ದಾರೆ. ಮಹಾರಾಷ್ಟ್ರದಲ್ಲಿ ಸೋಂಕಿನಿಂದ 53, ಕೇರಳದಲ್ಲಿ 16 ಮತ್ತು ಪಂಜಾಬ್‌ನಲ್ಲಿ 11 ಜನರು ಮೃತಪಟ್ಟಿದ್ದಾರೆ ಎಂದು ಸಚಿವಾಲಯ ಹೇಳಿದೆ. ಇದರೊಂದಿಗೆ ದೇಶದಲ್ಲಿ ಒಟ್ಟು ಪ್ರಕರಣಗಳ ಸಂಖ್ಯೆ 1,11,92,088 ಕ್ಕೆ ಏರಿಕೆಯಾಗಿದ್ದು, ಸೋಂಕಿನಿಂದ ಮೃತಪಟ್ಟವರ ಸಂಖ್ಯೆ 1,57,656 ಏರಿದೆ.

ಕೇಂದ್ರದಿಂದ ತಂಡ: ಪ್ರಕರಣಗಳು ಹೆಚ್ಚುತ್ತಿರುವ ಮಹಾರಾಷ್ಟ್ರ ಮತ್ತು ಪಂಜಾಬ್‌ಗೆ ಎರಡು ಉನ್ನತ ಮಟ್ಟದ ಸಮಿತಿಯನ್ನು ಕೇಂದ್ರ ಕಳುಹಿಸಿದೆ. ದೆಹಲಿ, ಹರಿಯಾಣ, ಆಂಧ್ರ ಪ್ರದೇಶ, ಒಡಿಶಾ, ಹಿಮಾಚಲ ಪ್ರದೇಶ, ಉತ್ತರಾಖಂಡ, ಗೋವಾ, ಚಂಡಿಗಡದ ಕೆಲ ಜಿಲ್ಲೆಗಳಲ್ಲಿ ಕೋವಿಡ್ ಪರೀಕ್ಷೆ ಕಡಿಮೆಗೊಳಿಸಿರುವುದನ್ನು ಗಮನಿಸಲಾಗಿದೆ. ಅಲ್ಲೆಲ್ಲ ಹೆಚ್ಚು ಪರೀಕ್ಷೆ ನಡೆಸುವಂತೆ ಸೂಚಿಸಲಾಗಿದೆ ಎಂದು ಕೇಂದ್ರ ಆರೋಗ್ಯ ಇಲಾಖೆಯ ಕಾರ್ಯದರ್ಶಿ ರಾಜೇಶ್ ಭೂಷನ್ ತಿಳಿಸಿದ್ದಾರೆ.



Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರಾಜ್ಯ ಈಜು ಕೂಟ: ಅತಿಥಿ ಕ್ರೀಡಾಪಟುಗಳ ಅಮೋಘ ಪ್ರದರ್ಶನ • ಮತ್ತೆ ಮಿಂಚಿದ ಶ್ರೀಹರಿ ನಟರಾಜ್

ತನಿಶ್, ವಿದಿತ್‌ಗೆ ಎರಡು ಕೂಟ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ ಈಜು ಫೆಡರೇಷನ್‌ನ ಅತಿಥಿ ಕ್ರೀಡಾಪಟುಗಳ ಅಮೋಘ ಸಾಧನೆಗಳ ಸಾಕ್ಷಿಯಾದ ರಾಜ್ಯ ಈಜು ಕೂಟದ ಎರಡನೇ ದಿನವಾದ ಶನಿವಾರ ಒಟ್ಟು 13 ದಾಖಲೆಗಳು ಸೃಷ್ಟಿಯಾದವು.

ಇಲ್ಲಿನ ಡಾಲ್ಫಿನ್ ಅಕ್ವಾಟಿಕ್, ಪಡುಕೋಣೆ–ದ್ರಾವಿಡ್ ಸೆಂಟರ್ ಫಾರ್ ಸ್ಪೋರ್ಟ್ಸ್ ಎಕ್ಸಲೆನ್ಸ್‌ನಲ್ಲಿ ರಾಜ್ಯ ಈಜು ಸಂಸ್ಥೆ ಆಯೋಜಿಸಿರುವ ಕೂಟದಲ್ಲಿ ಬಸವನಗುಡಿ ಈಜುಕೇಂದ್ರದ ತನಿಶ್ ಜಾರ್ಜ್ ಮ್ಯಾಥ್ಯೂ, ಡಾಲ್ಫಿನ್ ಅಕ್ವಾಟಿಕ್ಸ್‌ನ ವಿದಿತ್ ಎಸ್.ಶಂಕರ್ ಮತ್ತು ಅತಿಥಿ ಈಜುಪಟು ಅದಿತ್ಯ ಡಿ ತಲಾ ಎರಡು ದಾಖಲೆಗಳನ್ನು ಬರೆದರು.

ತನಿಶ್, ಬಾಲಕರ 100 ಮೀಟರ್ ಬಟರ್‌ಫ್ಲೈ ಮತ್ತು 200 ಮೀ ಫ್ರೀಸ್ಟೈಲ್‌ನಲ್ಲಿ ದಾಖಲೆ ಬರೆದರು. ಮೊದಲ ದಿನ ಮಿಂಚಿದ್ದ ಡಾಲ್ಫಿನ್ ಅಕ್ವಾಟಿಕ್ಸ್‌ನ ಶ್ರೀಹರಿ ನಟರಾಜ್ ಎರಡನೇ ದಿನ ಪುರುಷರ 200 ಮೀ ಫ್ರೀಸ್ಟೈಲ್‌ನಲ್ಲಿ ದಾಖಲೆ ಬರೆದರು. ಡಾಲ್ಫಿನ್ ಅಕ್ವಾಟಿಕ್ಸ್‌ನ ವಿದಿತ್ ಎಸ್.ಶಂಕರ್ ಪುರುಷರ 200 ಮೀ ಮತ್ತು 50 ಮೀ ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ, ಭಾರತ ಈಜು ಫೆಡರೇಷನ್ (ಎಸ್‌ಎಫ್‌ಐ) ಅತಿಥಿ ಈಜುಪಟು ಅದಿತ್ಯ ಡಿ. ಪುರುಷರ 100 ಮೀ ಬಟರ್‌ಫ್ಲೈ ಮತ್ತು 50 ಮೀ ಫ್ರೀಸ್ಟೈಲ್‌ನಲ್ಲಿ, ಅಪೇಕ್ಷಾ ಫರ್ನಾಂಡಿಸ್ ಮಹಿಳೆಯರ 100 ಮೀ ಬಟರ್‌ಫ್ಲೈನಲ್ಲಿ ದಾಖಲೆ ಮಾಡಿದರು.

ಡಾಲ್ಫಿನ್ ಕೇಂದ್ರದ ಅತಿಥಿ ವಿಹಾನ್ ಪಿ. ಬಾಲಕರ ಗುಂಪು 1ರ 50 ಮೀ ಫ್ರೀಸ್ಟೈಲ್‌ನಲ್ಲಿ, ಎಸ್‌ಎಫ್‌ಐ ಅತಿಥಿಗಳಾದ ಕೆನಿಶಾ ಗುಪ್ತಾ ಮಹಿಳೆಯರ ಗುಂಪು 1ರ 50 ಮೀ ಫ್ರೀಸ್ಟೈಲ್‌ನಲ್ಲಿ, ಚಾಹತ್ ಅರೋರ ಮಹಿಳೆಯರ 50 ಮೀ ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ, ಶಿವಾನಿ ಕಟಾರಿಯಾ ಮಹಿಳೆಯರ 200 ಮೀ ಫ್ರೀಸ್ಟೈಲ್‌ನಲ್ಲಿ,

ತನಿಶ್ ಜಾರ್ಜ್ ಮ್ಯಾಥ್ಯೂ

ಡಾಲ್ಫಿನ್ ಅಕ್ವಾಟಿಕ್ಸ್‌ನ ಅನ್ವಿತಾ ಗೌಡ ಬಾಲಕಿಯರ 50 ಮೀ ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ ದಾಖಲೆ ಮಾಡಿದರು.

ಎರಡನೇ ದಿನದ ಫಲಿತಾಂಶಗಳು

ಪುರುಷರ 200 ಮೀ ಬ್ರೆಸ್ಟ್‌ಸ್ಟ್ರೋಕ್: ಸುನೀಶ್ (ಬಿಎಸಿಆರ್‌)–1. ಕಾಲ: 2:33.8; ಮಹಿಳೆಯರ 200 ಮೀ ಬ್ರೆಸ್ಟ್‌ಸ್ಟ್ರೋಕ್: ಸಲೋನಿ ದಲಾಲ್ (ಬಿಎಸಿ)–1. ಕಾಲ: 2:52.96, ಶ್ರೀಯಾ ಭಟ್ (ಬಿಎಸಿ)–2, ಮಹತಿ ಎಸ್.ಪಟವರ್ಧನ್ (ನೆಟ್ಟಕಲ್ಲಪ್ಪ ಈಜು ಕೇಂದ್ರ)–3; ಬಾಲಕರ ಗುಂಪು1, 200 ಮೀ ಬ್ರೆಸ್ಟ್ ಸ್ಟ್ರೋಕ್: ಮಣಿಕಂಠ (ದಾವಣಗೆರೆ)–1. ಕಾಲ: 2:31.58, ಕಲ್ಪ ಎಸ್.ಬೊಹ್ರ (ಪೂಜಾ)–2, ಪ್ರಣವ್ ಭಾರತಿ (ಪೂಜಾ)–3; ಮಹಿಳೆಯರ ಗುಂಪು1ರ 200 ಮೀ ಬ್ರೆಸ್ಟ್ ಸ್ಟ್ರೋಕ್: ಗುಣ (ಬಿಎಸಿ)–1. ಕಾಲ: 2:51.80, ಸಾನ್ವಿ ಎಸ್.ರಾವ್ (ಬಿಎಸಿಆರ್‌)–2, ಶನಿಯಾ (ಜೆಎಎಫ್‌ಆರ್‌)–3; ಬಾಲಕರ ಗುಂಪು2ರ 200 ಮೀ ಬ್ರೆಸ್ಟ್‌ಸ್ಟ್ರೋಕ್: ವಿದಿತ್ ಶಂಕರ್ (ಡಾಲ್ಫಿನ್)–1. ಕಾಲ: 2:29.33, ಸಾಹಿಲ್ ದಲಾಲ್ (ಬಿಎಸಿ)–2, ಇಂದ್ರಪ್ರಕಾಶ್ (ಪೂಜಾ)–3; ಬಾಲಕರ ಗುಂಪು1ರ 100 ಮೀ ಬಟರ್‌ಫ್ಲೈ: ತನಿಶ್ ಜಾರ್ಜ್ ಮ್ಯಾಥ್ಯೂ (ಬಿಎಸಿ)–1. ಕಾಲ:55.59, ಸಂಭವ್ (ಬಿಎಸಿಆರ್‌)–2, ಉತ್ಕರ್ಷ್ (ಬಿಎಸಿ)–3; ಮಹಿಳೆಯರ ಗುಂಪು1ರ 100 ಮೀ ಬಟರ್‌ಫ್ಲೈ: ನೀನಾ ವೆಂಕಟೇಶ್ (ಡಾಲ್ಫಿನ್)–1. ಕಾಲ: 1:07.98, ಅಕ್ಷತಾ ಗಿರೀಶ್ (ಡಾಲ್ಫಿನ್)–2, ತಿಶಾ (ಬಿಎಸಿಆರ್‌)–3; ಮಹಿಳೆಯರ 50 ಮೀ ಫ್ರೀಸ್ಟೈಲ್: ಸ್ನೇಹಾ (ಬಿಎಸಿ)–1. ಕಾಲ:29.20, ರಿಯಾ ವಿಜಯ್ (ನೆಟ್ಟಕಲ್ಲಪ್ಪ ಈಜು ಕೇಂದ್ರ)–2, ಖಾಷ್ವಿ ಗಿರೀಶ್ (ಕೆ.ವಿ.ಈಜು ಕೇಂದ್ರ)–3; ಮಹಿಳೆಯರ ಗುಂಪು1ರ 50 ಮೀ ಫ್ರೀಸ್ಟೈಲ್: ನೀನಾ ವೆಂಕಟೇಶ್ (ಡಾಲ್ಫಿನ್)–1. ಕಾಲ:28.10, ಸುವಾನ ಭಾಸ್ಕರ್ (ಡಾಲ್ಫಿನ್)–2, ಇಂಚರ (ಜೆಎಎಫ್‌ಆರ್‌)–3; ಬಾಲಕರ ಗುಂಪು 2ರ 200 ಮೀ ಮೆಡ್ಲೆ: ವಿದಿತ್ ಶಂಕರ್ (ಡಾಲ್ಫಿನ್)–1. ಕಾಲ:2:21.34, ಪವನ್ (ಜಿಎಂ)–2, ನವನೀತ್ (ಡಾಲ್ಫಿನ್)–3; ಮಹಿಳೆಯರ 50 ಮೀ ಬ್ರೆಸ್ಟ್‌ಸ್ಟ್ರೋಕ್: ಸಲೋನಿ ದಲಾಲ್ (ಬಿಎಸಿ)–1. ಕಾಲ:35.75, ಸ್ನೇಹಾ (ಬಿಎಸಿ)–2, ಮಹತಿ ಪಟವರ್ಧನ್ (ನೆಟ್ಟಕಲ್ಲಪ್ಪ ಈಜುಕೇಂದ್ರ)–3; ಪುರುಷರ 200 ಮೀ ಫ್ರೀಸ್ಟೈಲ್: ಶ್ರೀಹರಿ ನಟರಾಜ್ (ಡಾಲ್ಫಿನ್)–1. ಕಾಲ: 1:53.58, ಸಂಜಯ್ (ಡಾಲ್ಫಿನ್)–2, ಶೌನ್ಯಕ್ ಅಗರ್‌ವಾಲ್ (ಡಾಲ್ಫಿನ್)–3; ಮಹಿಳೆಯರ 4 x 200 ಮೀ ಫ್ರೀಸ್ಟೈಲ್: ಬಿಎಸಿ–1. ಕಾಲ:10:59.37, ನೆಟ್ಟಕಲ್ಲಪ್ಪ ಈಜು ಕೇಂದ್ರ–2.

ಸ್ವಿಸ್ ಬ್ಯಾಡ್ಮಿಂಟನ್ ಟೂರ್ನಿ: ಫೈನಲ್‌ಗೆ ಪಿ.ವಿ. ಸಿಂಧು

ಬಾಸೆಲ್ (ಪಿಟಿಐ): ಡೆನ್ಮಾರ್ಕ್‌ನ ಮಿಯಾ ಬ್ಲಿಚ್‌ಫೆಲ್ಟ್ ವಿರುದ್ಧ ಅಮೋಘ ಆಟವಾಡಿದ ಭಾರತದ ಪಿ.ವಿ.ಸಿಂಧು ನೇರ ಗೇಮ್‌ಗಳಿಂದ ಗೆದ್ದು ಸ್ವಿಸ್ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಮಹಿಳೆಯರ ವಿಭಾಗದ ಫೈನಲ್ ಪ್ರವೇಶಿಸಿದರು.

ಶನಿವಾರ ನಡೆದ ಸೆಮಿಫೈನಲ್ ಹಣಾಹಣಿಯಲ್ಲಿ ಸಿಂಧು 22–20, 21–10ರಲ್ಲಿ ಎದುರಾಳಿಯನ್ನು ಮಣಿಸಿದರು. ಜನವರಿಯಲ್ಲಿ ನಡೆದಿದ್ದ ಥಾಯ್ಲೆಂಡ್ ಓಪನ್ ಮೊದಲ ಸುತ್ತಿನಲ್ಲಿ ಬ್ಲಿಚ್‌ಫೆಲ್ಟ್‌ಗೆ ಮಣಿದಿದ್ದ ಸಿಂಧು ಇಲ್ಲಿ ದಿಟ್ಟ ಆಟವಾಡಿದರು. 43 ನಿಮಿಷಗಳಲ್ಲಿ ಗೆಲುವು ಸಾಧಿಸಿದರು. 2019ರಲ್ಲಿ ವಿಶ್ವ ಚಾಂಪಿಯನ್ ಆದ ನಂತರ ಸಿಂಧು ಇದೇ ಮೊದಲ ಬಾರಿ ಟೂರ್ನಿಯೊಂದರ ಫೈನಲ್ ಪ್ರವೇಶಿಸಿದ್ದಾರೆ.

ಭಾನುವಾರ ನಡೆಯಲಿರುವ ಫೈನಲ್ ಪಂದ್ಯದಲ್ಲಿ ಸಿಂಧು ಅವರು ಸ್ಪೇನ್‌ನ ಕರೋಲಿನಾ ಮರಿನ್ ಅವರನ್ನು ಎದುರಿಸಲಿದ್ದಾರೆ.

ಪಿ.ವಿ.ಸಿಂಧು

ಶ್ರೀಕಾಂತ್‌ಗೆ ಸೋಲು: ಪುರುಷರ ವಿಭಾಗದ ಸೆಮಿಫೈನಲ್‌ನಲ್ಲಿ ಕಿದಂಬಿ ಶ್ರೀಕಾಂತ್ ಅವರು 13–21 19–21 ರಿಂದ ಅಗ್ರ ಶ್ರೇಯಾಂಕದ ಆಟಗಾರ ವಿಕ್ಟರ್ ಅಕ್ಸೆಲ್ಸನ್ ಎದುರು ಸೋತರು.

ಎರಡನೇ ಶ್ರೇಯಾಂಕದ ಭಾರತದ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಪುರುಷರ ಡಬಲ್ಸ್ ನಾಲ್ಕರ ಘಟ್ಟದ ಪಂದ್ಯದಲ್ಲಿ 10–21, 17–21 ರಿಂದ ಡೆನ್ಮಾರ್ಕ್‌ನ ಕಿಮ್ ಅಸ್ಟ್ರುಪ್ ಹಾಗೂ ಆಂಡರ್ಸ್ ಸ್ಕರುಪ್ ರಾಸ್ಮುಸೆನ್ ಎದುರು ಸೋತು ಟೂರ್ನಿಯಿಂದ ನಿರ್ಗಮಿಸಿತು.

ವಿಶ್ವಾಸಮತ ಗೆದ್ದ ಪಾಕ್ ಪ್ರಧಾನಿ ಇಮ್ರಾನ್ ಖಾನ್

ಇಸ್ಲಾಮಾಬಾದ್ (ಪಿಟಿಐ): ವಿರೋಧ ಪಕ್ಷಗಳ ಬಹಿಷ್ಕಾರದ ನಡುವೆ ಪಾಕ್‌ನ ರಾಷ್ಟ್ರೀಯ ಅಸೆಂಬ್ಲಿಯಲ್ಲಿ ಪಾಕಿಸ್ತಾನ ಪ್ರಧಾನಿ ಇಮ್ರಾನ್ ಖಾನ್ ಶನಿವಾರ ವಿಶ್ವಾಸ ಮತ ಗಳಿಸಿದ್ದಾರೆ.

342 ಸದಸ್ಯರನ್ನೊಳಗೊಂಡ ಸಂಸತ್ತಿನ ಕೆಳಮನೆಯಾದ ರಾಷ್ಟ್ರೀಯ ಅಸೆಂಬ್ಲಿಯಲ್ಲಿ ಪ್ರಧಾನಿ ಇಮ್ರಾನ್ ಖಾನ್ 178 ಮತಗಳನ್ನು ಪಡೆಯುವ ಮೂಲಕ ಗೆಲುವು ಸಾಧಿಸಿದರು.

ವಿಶ್ವಾಸಮತ ಯಾಚಿಸಲು ವಿಶೇಷ ಅಧಿವೇಶನವನ್ನು ಶನಿವಾರ ಕರೆಯಲಾಗಿತ್ತು. ಆದರೆ, 11 ಪಕ್ಷಗಳ ಮೈತ್ರಿಕೂಟ ಪಾಕಿಸ್ತಾನ ಡೆಮಾಕ್ರಟಿಕ್ ಮೂವ್‌ಮೆಂಟ್ (ಪಿಡಿಎಂ) ಬಹಿಷ್ಕಾರ ಹಾಕಿತ್ತು. ಹೀಗಾಗಿ, ವಿರೋಧ ಪಕ್ಷಗಳ ಸದಸ್ಯರು ಗೈರುಹಾಜರಿಯಲ್ಲಿ ಇಮ್ರಾನ್ ಖಾನ್ ಬಹುಮತ ಸಾಬೀತುಪಡಿಸಿದರು.

ಹಣಕಾಸು ಸಚಿವ ಅಬ್ದುಲ್ ಹಫೀಜ್ ಶೇಖ್ ಅವರು ಬುಧವಾರ ನಡೆದ ಸೆನೆಟ್ ಚುನಾವಣೆಯಲ್ಲಿ ಸೋಲು ಅನುಭವಿಸಿದ್ದರಿಂದ ಇಮ್ರಾನ್ ಖಾನ್ ವಿಶ್ವಾಸ ಮತಯಾಚಿಸಿದರು. ಶೇಖ್ ಸೋಲು ಅನುಭವಿಸಿದ ಬಳಿಕ ಇಮ್ರಾನ್ ಖಾನ್ ಅವರು ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡಬೇಕು ಎಂದು ವಿರೋಧ ಪಕ್ಷಗಳು ಒತ್ತಾಯಿಸಿದ್ದವು.

‘ರಾಜ್ಯಗಳಿಗೆ ತೆರಿಗೆ ಹಂಚಿಕೆ ಪಾಲು ಶೇ 41ರಷ್ಟೇ ಇರಲಿದೆ’

ನವದೆಹಲಿ (ಪಿಟಿಐ): ‘15ನೇ ಹಣಕಾಸು ಆಯೋಗವು ಕೇಂದ್ರ ಸರ್ಕಾರ ಸಂಗ್ರಹಿಸುವ ತೆರಿಗೆ ವರಮಾನದಲ್ಲಿ ರಾಜ್ಯಗಳಿಗೆ ನೀಡುವ ಪಾಲನ್ನು ಶೇ 41ರಷ್ಟನ್ನೇ ಉಳಿಸಿಕೊಂಡಿದೆ’ ಎಂದು ಅಧ್ಯಕ್ಷ ಎನ್‌.ಕೆ. ಸಿಂಗ್ ಅವರು ಶನಿವಾರ ತಿಳಿಸಿದ್ದಾರೆ.

2021–22 ರಿಂದ 2025–26ರ ಅವಧಿಗೆ ಕೇಂದ್ರದ ಒಟ್ಟಾರೆ ತೆರಿಗೆ ಪಾಲಿನಲ್ಲಿ ರಾಜ್ಯಗಳಿಗೆ ಶೇ 41ರಷ್ಟನ್ನು ಹಂಚಿಕೆ ಮಾಡಬೇಕು ಎಂದು 15ನೇ ಹಣಕಾಸು ಆಯೋಗವು ಶಿಫಾರಸು ಮಾಡಿದೆ. 14ನೇ ಹಣಕಾಸು ಆಯೋಗ ಮಾಡಿದ್ದ ಶಿಫಾರಸು ಇದೇ ಪ್ರಮಾಣದಲ್ಲಿತ್ತು.

ಸೆಂಟರ್ ಫಾರ್ ಪಾಲಿಸಿ ರಿಸರ್ಚ್ (ಸಿಪಿಆರ್) ಆಯೋಜಿಸಿದ್ದ ವೆಬಿನಾರ್‌ನಲ್ಲಿ ಮಾತನಾಡಿದ ಅವರು, ಈ ಹಿಂದೆ ಪ್ರತಿ ಹಣಕಾಸು ಆಯೋಗವು ರಾಜ್ಯಗಳಿಗೆ ತೆರಿಗೆ ಹಂಚಿಕೆಯ ಪಾಲಿನ ಮೊತ್ತದಲ್ಲಿ ಒಂದಷ್ಟು ಏರಿಕೆ ಮಾಡಿದ್ದವು. ಕೋವಿಡ್–19 ಸಾಂಕ್ರಾಮಿಕದಿಂದ ರಾಜ್ಯಗಳು ಮತ್ತು ಕೇಂದ್ರದ ವಿತ್ತೀಯ ಸ್ಥಿತಿ ಕುಗ್ಗಿದೆ ಎನ್ನುವುದನ್ನು ಗಮನದಲ್ಲಿ ಇಟ್ಟುಕೊಂಡು 15ನೇ ಹಣಕಾಸು ಆಯೋಗವು ಎಲ್ಲಾ ಅಯ್ಕೆಗಳನ್ನು ಪರಿಗಣನೆಗೆ ತೆಗೆದುಕೊಂಡಿದೆ ಎಂದು ಅವರು ವಿವರಿಸಿದ್ದಾರೆ.

ಎನ್‌.ಕೆ. ಸಿಂಗ್

ಆಯೋಗದ ಪ್ರಕಾರ, 5 ವರ್ಷಗಳ ಅವಧಿಗೆ ಸರಾಸರಿ ತೆರಿಗೆ ವರಮಾನವು (ಜಿಟಿಆರ್) ₹ 135.2 ಲಕ್ಷ ಕೋಟಿಗಳಷ್ಟಾಗುವ ನಿರೀಕ್ಷೆ ಇದೆ. ಇದರಲ್ಲಿ ಹಂಚಿಕೆ ಮಾಡಬಹುದಾದ ಮೊತ್ತ (ಸೆಸ್, ಸರ್ಚಾರ್ಜ್ ಮತ್ತು ಸಂಗ್ರಹದ ವೆಚ್ಚವನ್ನು ಕಡಿತಗೊಳಿಸಿದಾಗ) ₹ 103 ಲಕ್ಷ ಕೋಟಿಗಳಷ್ಟಾಗುವ ಅಂದಾಜು ಮಾಡಲಾಗಿದೆ. ಹೀಗಾಗಿ 2021–26ರ ಅವಧಿಗೆ ರಾಜ್ಯಗಳ ಶೇ 41ರಷ್ಟು ಪಾಲು ₹ 42.2 ಲಕ್ಷ ಕೋಟಿಗಳಷ್ಟಾಗಲಿದೆ.

15ನೇ ಹಣಕಾಸು ಆಯೋಗದ ವರದಿಯನ್ನು ಫೆಬ್ರುವರಿ 2ರಂದು ಸಂಸತ್‌ನಲ್ಲಿ ಮಂಡಿಸಲಾಗಿದೆ.

ಸರಾಸರಿ ತೆರಿಗೆ ವರಮಾನದಲ್ಲಿ ಸೆಸ್ ಮತ್ತು ಸರ್ಚಾರ್ಜ್ ಪ್ರಮಾಣವೇ ಹೆಚ್ಚಾಗುತ್ತಿದೆ. ಹೀಗಾಗಿ ತೆರಿಗೆ ಹಂಚಿಕೆಯ ಪಾಲು ನಿಧಾನವಾಗಿ ಇಳಿಕೆಯಾಗುತ್ತಿದೆ ಎಂದು ರಾಜ್ಯಸಭೆಯ ಸಂಸದ ಸುಶೀಲ್ ಕುಮಾರ್ ಮೋದಿ ಅವರು ಗಮನ ಸೆಳೆದರು.

2011–12ರಲ್ಲಿ ಜಿಟಿಆರ್‌ನಲ್ಲಿ 10.4ರಷ್ಟಿದ್ದ ಸೆಸ್ ಮತ್ತು ಸರ್ಚಾರ್ಜ್ ಪಾಲು ಸದ್ಯ ಶೇ 20.2ಕ್ಕೆ ಏರಿಕೆಯಾಗಿದೆ ಎಂದು ಅವರು ತಿಳಿಸಿದ್ದಾರೆ.

ಕರ್ನಾಟಕ ತಂಡಕ್ಕೆ 8 ಪದಕ

ಸೈಕ್ಲಿಂಗ್: ಸತತ 6 ವರ್ಷ ಚಿನ್ನ ಗೆದ್ದ ಬೆಂಗಳೂರಿನ ನವೀನ್

ಹುಬ್ಬಳ್ಳಿ: ಕರ್ನಾಟಕದ ಸೈಕ್ಲಿಸ್ಟ್‌ಗಳು ಮುಂಬೈನಲ್ಲಿ ನಡೆಯುತ್ತಿರುವ 25ನೇ ರಾಷ್ಟ್ರೀಯ ರೋಡ್ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಎರಡನೇ ದಿನವಾದ ಶನಿವಾರ ಎರಡು ಬೆಳ್ಳಿ ಹಾಗೂ ಎರಡು ಕಂಚಿನ ಪದಕಗಳನ್ನು ಗೆದ್ದುಕೊಂಡರು. ಮೊದಲ ದಿನ ಒಂದು ಚಿನ್ನ ಮತ್ತು ಮೂರು ಬೆಳ್ಳಿ ಜಯಿಸಿದ್ದರು.

ಭಾರತ ಸೈಕ್ಲಿಂಗ್ ಫೆಡರೇಷನ್ ಮತ್ತು ಮಹಾರಾಷ್ಟ್ರ ಸೈಕ್ಲಿಂಗ್ ಸಂಸ್ಥೆ ಸಹಯೋಗದಲ್ಲಿ ನಡೆಯುತ್ತಿರುವ ಟೂರ್ನಿಯ ಪುರುಷರ 40 ಕಿ.ಮೀ. ತಂಡ ವಿಭಾಗದ ಟೈಮ್ ಟ್ರಯಲ್‌ನಲ್ಲಿ ಕರ್ನಾಟಕ ಕಂಚು ಜಯಿಸಿತು. ನವೀನ್ ಜಾನ್, ನವೀನ್ ರಾಜ್, ವಿಶ್ವನಾಥ ಗಡಾದ ಮತ್ತು ಯಲಗೂರಪ್ಪ ಗಡ್ಡಿ ಅವರನ್ನು ಒಳಗೊಂಡ ತಂಡ 52 ನಿಮಿಷ 35.464 ಸೆಕೆಂಡ್‌ಗಳಲ್ಲಿ ಈ ಸಾಧನೆ ಮಾಡಿತು.

ನವೀನ್ ಜಾನ್

ಮಹಿಳೆಯರ 30 ಕಿ.ಮೀ. ತಂಡ ವಿಭಾಗದ ಟೈಮ್ ಟ್ರಯಲ್‌ನಲ್ಲಿ ಸಾವಿತ್ರಿ ಹೆಬ್ಬಾಳಟ್ಟಿ, ಸೌಮ್ಯಾ ಅಂತಾಪುರ, ಕಾವೇರಿ ಮುರನಾಳ ಮತ್ತು ದಾನಮ್ಮ ಚಿಚಖಂಡಿ ಅವರನ್ನೊಳಗೊಂಡ ರಾಜ್ಯ ತಂಡ 47 ನಿ. 46.302ಸೆ.ಗಳಲ್ಲಿ ಗುರಿ ಮುಟ್ಟಿ ಕಂಚು ಪಡೆಯಿತು.

18 ವರ್ಷದೊಳಗಿನ ಬಾಲಕಿಯರ 20 ಕಿ.ಮೀ. ಟೈಮ್ ಟ್ರಯಲ್ ಸ್ಪರ್ಧೆಯಲ್ಲಿ ಚೈತ್ರಾ ಬೋರ್ಜಿ, ಕೀರ್ತಿ ರಂಗಸ್ವಾಮಿ, ಭಾಗ್ಯಶ್ರೀ ಮಠಪತಿ ಮತ್ತು ನಿವೇದಿತಾ ಕೊಕ್ಕನವರ ಇದ್ದ ಕರ್ನಾಟಕ ತಂಡ 33 ನಿ. 07.264 ಸೆ. ಗಳಲ್ಲಿ ಗುರಿ ತಲುಪಿ ಬೆಳ್ಳಿ ಪಡೆದುಕೊಂಡಿತು. 16 ವರ್ಷದೊಳಗಿನ ಬಾಲಕಿಯರ 20 ಕಿ.ಮೀ. ಮಾಸ್ಡ್ ಸ್ಟಾರ್ಟ್ ಸ್ಪರ್ಧೆಯಲ್ಲಿ ಅಕ್ಷತಾ ಭೂತನಾಳ ಬೆಳ್ಳಿ ಗೆದ್ದರು.

ಪುರುಷರ 40 ಕಿ.ಮೀ. ವೈಯಕ್ತಿಕ ಟೈಮ್ ಟ್ರಯಲ್‌ನಲ್ಲಿ ಬೆಂಗಳೂರಿನ ನವೀನ್ ಜಾನ್ (52 ನಿ. 35.533ಸೆ.) ಚಿನ್ನದ ಪದಕ ಗೆದ್ದು 2014ರಿಂದ ಸತತವಾಗಿ ಈ ಸಾಧನೆ ಮಾಡಿದ ಕೀರ್ತಿಗೆ ಪಾತ್ರರಾದರು.

18 ವರ್ಷದೊಳಗಿನ ಬಾಲಕಿಯರ 20 ಕಿ.ಮೀ. ವೈಯಕ್ತಿಕ ಟೈಮ್ ಟ್ರಯಲ್‌ನಲ್ಲಿ ಜಮಖಂಡಿಯ ಚೈತ್ರಾ ಬೋರ್ಜಿ (33ನಿ. 43.370ಸೆ.), 14 ವರ್ಷದೊಳಗಿನ ಬಾಲಕಿಯರ 10 ಕಿ.ಮೀ. ವೈಯಕ್ತಿಕ ಟೈಮ್ ಟ್ರಯಲ್‌ನಲ್ಲಿ ಜಮಖಂಡಿ ತಾಲ್ಲೂಕಿನ ಹುನ್ನೂರ ಗ್ರಾಮದ ಅನುಪಮಾ ಗುಳೇದ (17ನಿ.13.785ಸೆ) ಮತ್ತು ಇದೇ ವಯೋಮಾನದ ಬಾಲಕರ 10 ಕಿ.ಮೀ. ವಿಭಾಗದ ವೈಯಕ್ತಿಕ ಟೈಮ್ ಟ್ರಯಲ್‌ನಲ್ಲಿ ವಿಜಯಪುರದ ಸರ್ಕಾರಿ ಸೈಕ್ಲಿಂಗ್ ಕ್ರೀಡಾ ನಿಲಯದ ಸುಜಲ ಜಾಧವ ಬೆಳ್ಳಿ ಪದಕಗಳಿಗೆ ಕೊರಳೊಡ್ಡಿದರು.

ವೈಕುಂಠ ಸಮಾರಾಧನೆ

ಶ್ರೀ ಬಲ್ಲೆಮನೆ ಶ್ರೀ ಪಿ. ಸಿ. ಕೃಷ್ಣಾರೆಡ್ಡಿ

ದಿನಾಂಕ 25–02–2021 ನೇ ಗುರುವಾರ ಬೆಳಿಗ್ಗೆ 4.40 ಗಂಟೆಗೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ವೈಕುಂಠ ಸಮಾರಾಧನೆಯನ್ನು 07–03–2021 9:00 am to 10:30 am ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿಸುತ್ತೇವೆ.

ಇಂತಿ ದುಃಖತಪ್ತರು: ಬಲ್ಲೆಮನೆ ಕುಟುಂಬಸ್ಥರು, ಪಣತ್ತೂರು

‘ಕ್ರಿಪ್ಟೊಕರೆನ್ಸಿ ಬಳಕೆ ಪರಿಶೀಲನೆ: ಸರ್ಕಾರ ಮುಕ್ತವಾಗಿದೆ’

ನವದೆಹಲಿ (ಪಿಟಿಐ): ಆಡಳಿತದಲ್ಲಿ ಸುಧಾರಣೆ ತರುವ ನಿಟ್ಟಿನಲ್ಲಿ ಕ್ರಿಪ್ಟೊಕರೆನ್ಸಿ ಸೇರಿದಂತೆ ಹೊಸ ತಂತ್ರಜ್ಞಾನಗಳ ಬಳಕೆಯನ್ನು ಪರಿಶೀಲಿಸಲು ಮತ್ತು ಮೌಲ್ಯಮಾಪನ ಮಾಡಲು ಸರ್ಕಾರ ಮುಕ್ತವಾಗಿದೆ ಎಂದು ಕೇಂದ್ರ ಸಚಿವ ಅನುರಾಗ್ ಠಾಕೂರ್ ಶನಿವಾರ ಹೇಳಿದ್ದಾರೆ.

ಆಡಳಿತದ ವಿವಿಧ ಆಯಾಮಗಳಲ್ಲಿ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವ ಪ್ರಧಾನಿ ನರೇಂದ್ರ ಮೋದಿ ಅವರೇ ಸಮರ್ಥಿಸುತ್ತಾರೆ ಎಂದೂ ಅವರು ತಿಳಿಸಿದ್ದಾರೆ.

ಉದ್ಯಮಿಗಳ ಸಂಸ್ಥೆ ಇಂಡಿಯಾ ಪಂಜಾಬ್ ಆಯೋಜಿಸಿದ್ದ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು, ‘ನಾವಿನ್ಯತೆ ಮತ್ತು ಹೊಸ ತಂತ್ರಜ್ಞಾನವನ್ನು ನಾವು ಸ್ವಾಗತಿಸುತ್ತೇವೆ. ಬ್ಲಾಕ್‌ಚೇನ್ ಹೊಸ ಉದಯೋನ್ಮುಖ ತಂತ್ರಜ್ಞಾನವಾಗಿದೆ. ಕ್ರಿಪ್ಟೊಕರೆನ್ಸಿಯು ವರ್ಚುವಲ್ ಕರೆನ್ಸಿಯ ಒಂದು ರೂಪವಾಗಿದೆ. ನಾವು ಯಾವಾಗಲೂ ಹೊಸ ಆಲೋಚನೆಗಳನ್ನು ಮುಕ್ತ ಮನಸ್ಸಿನಿಂದ ಮೌಲ್ಯಮಾಪನ ಮಾಡಬೇಕು, ಅನ್ವೇಷಿಸಬೇಕು ಮತ್ತು ಪ್ರೋತ್ಸಾಹಿಸಬೇಕು ಎನ್ನುವುದನ್ನು ನಾನು ನಂಬುತ್ತೇನೆ’ ಎಂದು ಹೇಳಿದ್ದಾರೆ.

ಡಿಜಿಟಲ್ ಕರೆನ್ಸಿಗೆ ಸಂಬಂಧಿಸಿದಂತೆ ಆರ್ಥಿಕ ವ್ಯವಹಾರಗಳ ಕಾರ್ಯದರ್ಶಿಯ ನೇತೃತ್ವದಲ್ಲಿ ಉನ್ನತ ಮಟ್ಟದ ಆಂತರಿಕ ಸಚಿವರ ಸಮಿತಿ (ಐಎಂಸಿ) ರಚಿಸಲಾಗಿದೆ. ಅದು ತನ್ನ ವರದಿಯನ್ನು ಸಲ್ಲಿಸಿದೆ. ಐಎಂಸಿ ನೀಡಿರುವ ಶಿಫಾರಸನ್ನು ಆಧರಿಸಿ ಸರ್ಕಾರವು ನಿರ್ಧಾರ ತೆಗೆದುಕೊಳ್ಳಲಿದೆ ಎಂದೂ ಅವರು ತಿಳಿಸಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹415
12 ಮೊಟ್ಟೆಗೆ	₹55
ಮೈಸೂರು	
100 ಮೊಟ್ಟೆಗೆ	₹418

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈಂಡ್)	₹1480 (1490)
ಸೋಯಾ (ರಿಫೈಂಡ್)	₹1200 (1185)
ಸೂರ್ಯಕಾಂತಿ (ರಿಫೈಂಡ್)	₹1645 (1620)
ಪಾಮೋಲಿನ್	₹1190 (1178)

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	950-1000
ನಡುಗೋಲು	1000-1100
ರಾಶಿ	1200-1300
ರಾಶಿ ಉತ್ತಮ	1300-1400
ಜರಡಿ	1500-1600
ಹೆರಕಿದ್ದು	2000-2100
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1700-1750
ಹಸಿರು ಅತಿ ಉತ್ತಮ	1900-2000
ಕಾಳು ಮೆಣಸು	345
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-40500
ಹಳತು	42500-50500
ಬೆಳ್ತಂಗಡಿ	
ಹೊಸತು	20000-40500
ಹಳತು	39600-50500
ಚಿತ್ರದುರ್ಗ	
ಆಪಿ	41600-42000
ಬೆಟ್ಟೆ	33229-33669
ಕೆಂಪುಗೋಟು	29539-29989
ರಾಶಿ	41119-41559
ಪುತ್ತೂರು	
ಕೋಕ	14000-24500
ಹೊಸತು	35000-40000
ಸಿದ್ದಾಪುರ	
ಬಿಳಿಗೋಟು	19990-30189
ಕೋಕ	19000-27399
ಚಾಲಿ	34309-37199
ಕೆಂಪುಗೋಟು	27769-27769
ರಾಶಿ	40699-41599
ತಟ್ಟಿಬೆಟ್ಟೆ	30019-40699
ಶಿರಸಿ	
ಬೆಟ್ಟೆ	26509-38898
ಬಿಳಿಗೋಟು	18020-30591
ಚಾಲಿ	33699-37891
ಹಳೆಚಾಲಿ	39199-40699
ರಾಶಿ	39291-41599
ಸುಳ್ಯ	
ಕೋಕ	10000-23000
ಹೊಸತು	23500-40500
ರಾಮನಗರ ರೇಷ್ಮೆ	
ಮಿಶ್ರತಳಿ (ಸಿ.ಬಿ)	220-390
ದ್ವಿತಳಿ (ಬಿ.ವಿ)	236-452

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	10000	9850	9900	128.85 ಸೆಂಟ್ಸ್
ಎಸಿ	3975	3800	3875	
ಆರ್‌ಪಿ	5300	5200	5225	
ಆರ್‌ಸಿ	3000	3000	2940	1381ಡಾಲರ್ಸ್

ನಿಧನ ವಾರ್ತೆ

ಮುತ್ತೂಟ್ ಫೈನಾನ್ಸ್ ಅಧ್ಯಕ್ಷ ಎಂ.ಜಿ. ಜಾರ್ಜ್

ನವದೆಹಲಿ: ಮುತ್ತೂಟ್ ಫೈನಾನ್ಸ್‌ನ ಅಧ್ಯಕ್ಷ ಎಂ.ಜಿ.ಜಾರ್ಜ್ ಮುತ್ತೂಟ್ (71) ಅವರು ಶುಕ್ರವಾರ ಸಂಜೆ ನಿಧನರಾಗಿದ್ದಾರೆ ಎಂದು ಕಂಪನಿಯು ಶನಿವಾರ ಷೇರುಪೇಟೆಗೆ ಮಾಹಿತಿ ನೀಡಿದೆ. ಆದರೆ ಅವರ ನಿಧನದ ಕಾರಣವನ್ನು ಕಂಪನಿ ತಿಳಿಸಿಲ್ಲ.

ಹೃದಯಾಘಾತದಿಂದ ಅವರು ನಿಧನರಾಗಿದ್ದಾರೆ ಎಂದು ಕಂಪನಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ. ಆದರೆ ಕುಟುಂಬದ ಮೂಲಗಳು ‘ಅವರು ಮನೆಯಲ್ಲಿ ಕುಸಿದು ಬಿದ್ದರು. ಅವರನ್ನು ಉಳಿಸಿಕೊಳ್ಳಲು ಆಗಲಿಲ್ಲ’ ಎಂದು ತಿಳಿಸಿವೆ. ಜಾರ್ಜ್ ಅವರಿಗೆ ಪತ್ನಿ ಸಾರಾ ಜಾರ್ಜ್ ಮತ್ತು ಇಬ್ಬರು ಮಕ್ಕಳಿದ್ದಾರೆ.

ಚಿನ್ನದ ಸಾಲವನ್ನು ಸಂಘಟಿತ ವ್ಯವಹಾರವನ್ನಾಗಿ ಮಾಡುವಲ್ಲಿ ಅವರ ಪಾತ್ರ ಪ್ರಮುಖವಾದದ್ದು.

ಇರಾಕ್‌ನ ಅತ್ಯುನ್ನತ ಧರ್ಮಗುರು ಭೇಟಿಯಾದ ಪೋಪ್ ಫ್ರಾನ್ಸಿಸ್

ನಜಾಫ್, ಇರಾಕ್ (ರಾಯಿಟರ್ಸ್/ಎಪಿ): ಕ್ಯಾಥೋಲಿಕ್ ಕ್ರೈಸ್ತರ ಪರಮೋಚ್ಚ ಧರ್ಮಗುರು ಪೋಪ್ ಫ್ರಾನ್ಸಿಸ್ ಅವರು ಇರಾಕ್‌ನ ಅತ್ಯುನ್ನತ ಶಿಯಾ ಧರ್ಮಗುರು ಅಯಾತ್‌ಉಲ್ಲಾ ಅಲಿ ಅಲ್–ಸಿಸ್ತಾನಿ ಅವರನ್ನು ಶನಿವಾರ ಭೇಟಿಯಾದರು. ಈ ವೇಳೆ ಅವರು ಇರಾಕ್‌ನಲ್ಲಿ ಕ್ರೈಸ್ತ ಮತ್ತು ಇಸ್ಲಾಂ ಧರ್ಮ ಒಗ್ಗಟಿನಿಂದ ಸಹಭಾಳ್ವೆ ಮಾಡುವುದರ ಕುರಿತಾಗಿ ಚರ್ಚೆ ನಡೆಸಿದರು.

ನಜಾಫ್‌ನಲ್ಲಿರುವ ಸಿಸ್ತಾನಿ ಅವರ ನಿವಾಸದಲ್ಲಿ ಉಭಯ ನಾಯಕರು ಸಭೆ ನಡೆಸಿದರು. ಇದೇ ಮೊದಲ ಬಾರಿ ಪೋಪ್ ಫ್ರಾನ್ಸಿಸ್ ಅವರು ಇರಾಕ್‌ನ ಉನ್ನತ ಧರ್ಮಗುರುವನ್ನು ಭೇಟಿಯಾಗಿದ್ದಾರೆ. ಈ ವೇಳೆ ಅವರ ಸುರಕ್ಷತೆಗಾಗಿ ಸಾವಿರಾರು ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು.

ಶಾಂತಿಯುತ ಸಹಬಾಳ್ವೆಯ ಸಂದೇಶ: ಇಬ್ಬರೂ ಧರ್ಮಗುರುಗಳು ಶಾಂತಿಯುತ ಸಹಬಾಳ್ವೆಯ ಪ್ರಬಲ ಸಂದೇಶವನ್ನು ನೀಡಿದರು. ಅಯಾತ್‌ಉಲ್ಲಾ ಅಲಿ ಅಲ್- ಸಿಸ್ತಾನಿ ಅವರು, ’ಇರಾಕ್‌ನ ಕ್ರೈಸ್ತರು ಶಾಂತಿಯುತವಾಗಿ ಬದುಕಬೇಕು ಮತ್ತು ಇತರೆ ಇರಾಕಿಗಳಂತೆಯೇ ಅವರು ಹಕ್ಕುಗಳನ್ನು ಅನುಭವಿಸಬೇಕು. ಇಲ್ಲಿನ ಕ್ರೈಸ್ತರನ್ನು ರಕ್ಷಿಸುವಲ್ಲಿ ಧಾರ್ಮಿಕ ಅಧಿಕಾರಿಗಳು ಮಹತ್ವದ ಪಾತ್ರವಹಿಸಬೇಕು’ ಎಂದು ಕರೆ ನೀಡಿದರು.

ಇರಾಕಿನಲ್ಲಿ ದುರ್ಬಲ ಮತ್ತು ಹೆಚ್ಚು ಕಿರುಕುಳಕ್ಕೆ ಒಳಗಾದವರ ರಕ್ಷಣೆಗೆ ಸಿಸ್ತಾನಿ ಅವರು ಧ್ವನಿ ಎತ್ತಿದ್ದಾರೆ. ಅದಕ್ಕಾಗಿ ಫ್ರಾನ್ಸಿಸ್ ಅವರು ಸಿಸ್ತಾನಿ ಅವರಿಗೆ ಧನ್ಯವಾದ ಅರ್ಪಿಸಿದ್ದಾರೆ ಎಂದು ವ್ಯಾಟಿಕನ್ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

6-3-2021

ಜಾವಾ 70/80(ಹೊಸ)	10550-10600
ಜಾವಾ 80/90(ಹೊಸ)	10250-10300
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	8800-8900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1490 (1500)
ಒಂದು ವಾರದ ಡೆಲಿವರಿ	1485 (1495)
ಸೋಯಾ ಕಚ್ಚಾ	1180 (1150)
ಪಾಮ್ ವಾರದ ಡೆಲಿವರಿ	1188 (1176)
ಸೂರ್ಯಕಾಂತಿ ಎಣ್ಣೆ ಕಚ್ಚಾ	1615 (1580)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
44,550 (44,350)
ಬೆಳ್ಳಿ ಕೆ.ಜಿ 65,000 (65,150)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಸಂಕ್ಷಿಪ್ತ ಸುದ್ದಿ

ಮಂಗಳ ಗ್ರಹದಲ್ಲಿ ಪರ್ಸಿವಿಯರೆನ್ಸ್ ರೋವರ್ ತಿರುಗಾಟ

ವಾಷಿಂಗ್ಟನ್ (ಪಿಟಿಐ): ಮಂಗಳ ಗ್ರಹದಲ್ಲಿ ಪರ್ಸಿವಿಯರೆನ್ಸ್ ರೋವರ್ ತನ್ನ ಮೊದಲ ಟೆಸ್ಟ್ ಡ್ರೈವ್ (ತಿರುಗಾಟ) ಯಶಸ್ವಿಯಾಗಿ ನಡೆಸಿದೆ ಎಂದು ಅಮೆರಿಕ ಬಾಹ್ಯಾಕಾಶ ಸಂಸ್ಥೆ 'ನಾಸಾ' ತಿಳಿಸಿದೆ. ಈ ಮೂಲಕ ಕೆಂಪು ಗ್ರಹದ ಮಿಷನ್‌ನಲ್ಲಿ ನಾಸಾ ಐತಿಹಾಸಿಕ ಮೈಲುಗಲ್ಲು ಸಾಧಿಸಿದೆ.

ಮಂಗಳ ಗ್ರಹದಲ್ಲಿ ಜೀವಿಗಳು, ಸೂಕ್ಷ್ಮಾಣು ಜೀವಿಗಳ ಕುರುಹಗಳ ಬಗ್ಗೆ ಪರಿಶೀಲಿಸಲು ಮತ್ತು ಅಲ್ಲಿನ ಮಣ್ಣು--ಕಲ್ಲಿನ ಮಾದರಿಯನ್ನು ತರಲು ನಾಸಾ ಪರ್ಸಿವಿಯರೆನ್ಸ್ ರೋವರ್ ನೌಕೆಯನ್ನು ರವಾನಿಸಿತ್ತು.

ಆರು ಗಾಲಿಗಳನ್ನು ಹೊಂದಿರುವ ಪರ್ಸಿವಿಯರೆನ್ಸ್ ರೋವರ್, 33 ನಿಮಿಷಗಳ ಕಾಲ 6.5 ಮೀಟರ್ (21.3 ಅಡಿ) ಸಂಚರಿಸಿದೆ ಎಂದು ನಾಸಾ ತಿಳಿಸಿದೆ. ಈ ಸಂಬಂಧ ವಿಡಿಯೊ ಹಾಗೂ ಚಿತ್ರಗಳನ್ನು ಬಿಡುಗಡೆ ಮಾಡಿದೆ.

ಮೊಗದಿಶು ಬಾಂಬ್ ಸ್ಫೋಟ: ಮೃತರ ಸಂಖ್ಯೆ 20ಕ್ಕೆ ಏರಿಕೆ

ನೈರೋಬಿ (ಎಪಿ): ‘ಸೊಮಾಲಿಯಾದ ರಾಜಧಾನಿ ಮೊಗದಿಶುವಿನ ರೆಸ್ಟೋರೆಂಟ್‌ವೊಂದರಲ್ಲಿ ಸಂಭವಿಸಿದ ಬಾಂಬ್ ಸ್ಫೋಟದಲ್ಲಿ ಮೃತಪಟ್ಟವರ ಸಂಖ್ಯೆ 20ಕ್ಕೆ ಏರಿಕೆಯಾಗಿದ್ದು, 30ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ’ ಎಂದು ಸರ್ಕಾರಿ ಮಾಲೀಕತ್ವದ ಮಾಧ್ಯಮಗಳು ವರದಿ ಮಾಡಿವೆ.

8 ಪೊಲೀಸರನ್ನು ಹಸ್ತಾಂತರಿಸಿ: ಭಾರತಕ್ಕೆ ಮ್ಯಾನ್ಮಾರ್ ಮನವಿ

ನವದೆಹಲಿ (ರಾಯಿಟರ್ಸ್): ಭಾರತದಲ್ಲಿ ಆಶ್ರಯ ಪಡೆದಿರುವ ಮ್ಯಾನ್ಮಾರ್‌ನ ಪೊಲೀಸ್ ಅಧಿಕಾರಿಗಳನ್ನು ಹಸ್ತಾಂತರಿಸುವಂತೆ ಮ್ಯಾನ್ಮಾರ್ ಕೋರಿದೆ.

ಫೆಬ್ರುವರಿ 1ರ ಮಿಲಿಟರಿ ದಂಗೆಯನ್ನು ವಿರೋಧಿಸಿ ಮ್ಯಾನ್ಮಾರ್‌ನೆಲ್ಲೆಡೆ ಹಲವು ದಿನಗಳಿಂದ ಪ್ರತಿಭಟನೆ ನಡೆಯುತ್ತಿದೆ. ಈ ಪ್ರತಿಭಟನೆಗಳಲ್ಲಾದ ಹಿಂಸಾಚಾರದಲ್ಲಿ ಹಲವರು ಮೃತಪಟ್ಟಿದ್ದಾರೆ. ಮಿಲಿಟರಿ ಆಡಳಿತದಡಿ ಕೆಲಸ ಮಾಡಲು ಇಚ್ಛಿಸದ ಸುಮಾರು 30 ಮ್ಯಾನ್ಮಾರ್ ಪೊಲೀಸರು ಮತ್ತು ಅವರ ಕುಟುಂಬದವರು ಭಾರತದಲ್ಲಿ ಆಶ್ರಯ ಪಡೆದಿದ್ದಾರೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಬಿಲ್ಡರ್ ಎಸೆನ್ಷಿಯಲ್

Water Proofing Materials

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಸೆಲ್ಲಿಂಗ್

Sites

Vishweshwariah Layout

SITE For Sale No 148 North Facing @Vishweshwaraiah Layout 7 block 20x30 47 Lac Neg 9449425844 Brokers excuse

ಉದ್ಯೋಗಾವಕಾಶ

Cook

ಸಸ್ಯಾಹಾರಿ, ಮಾಂಸಾಹಾರಿ ಅಡುಗೆ ಮಾಡಲು ಮತ್ತು ನಾಯಿಗಳನ್ನು ನೋಡಿಕೊಳ್ಳಲು ಮಹಿಳೆ ಮಾತ್ರ ಬೇಕಾಗಿದ್ದಾರೆ. ನಮ್ಮ ಮನೆಯಲ್ಲೇ ಇರಬೇಕು ಉತ್ತಮ ಸಂಬಳ ಕೊಡಲಾಗುತ್ತದೆ.ಕನಕಪುರ ರೋಡ್, ಬೆಂಗಳೂರು.9606173617

General

ಕಂಪನಿಗಳಿಗೆ ಹೌಸ್‌ಕೀಪಿಂಗ್, ಸೆಕ್ಯೂರಿಟಿ ,ಆಫೀಸ್, ಕಾರ್ ವಾಷಿಂಗ್, ಫ್ಯಾಕ್ಟರಿಗಳಿಗೆ, ಪ್ಯಾಕಿಂಗ್‌ಗಾಗಿ ಹೆಲ್ಪರ್ಸ್‌ಗಳು, ಟೆಲಿಕಾಲರ್ಸ್‌ಗಳು. ಸಂಬಳ: 14,000 -20,000/-. ವಸತಿಯೂಟವಿದೆ. 6360238526

★ನೇರನೇಮಕಾತಿ★ ಬೆಂಗಳೂರಿನಲ್ಲಿ ನೂತನವಾಗಿ ಪ್ರಾರಂಭವಾಗಿರುವ CF AYUR ಕಂಪನಿಗೆ ಪಿ.ಯು.ಸಿ. ಡಿಗ್ರಿಯಾಗಿರುವ 19ರಿಂದ 24ವರ್ಷದೊಳಗಿನ ಯುವಕ/ಯುವತಿಯರು ತಕ್ಷಣ ಬೇಕಾಗಿದ್ದಾರೆ. ಸಂಬಳ:18,000 24,000 ವಸತಿಯೂಟವಿರುತ್ತದೆ. 9740015552/ 9743282734

ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿ ಬಳಿ ಇರುವ ಹಾಸ್ಟೆಲ್‌ಗಾಗಿ ಸೌತ್ ಇಂಡಿಯನ್ ವೆಜ್ /ನಾನ್ ವೆಜ್ ಕುಕ್ ಗಳು, ಸಪ್ಲೈಯರ್ ಗಳು. ತಕ್ಷಣ ಬೇಕಾಗಿದ್ದಾರೆ.ಆಕರ್ಷಕ ಸಂಬಳ.ಸಂಪರ್ಕಿಸಿ: 9538785122, 9900098105

ಸಾಚಾಜಿವರ್ಲ್ಡ್ ಸಂಸ್ಥೆಗೆ ಡಿಸ್ಟ್ರಿಕ್ಟ್ ಆರ್ಗನೈಸರ್ ಕೆಲಸ ಮಾಡಲು ಪುರುಷ/ಮಹಿಳಾ ಅಭ್ಯರ್ಥಿಗಳು ಬೇಕಾಗಿರುತ್ತಾರೆ.www.sachajibs.com,9108629145,9440660126

WANTED FEMALE office assistant/ Telesale for UPS company in BTM layout Bangalore. 9840091910/ 9840121767

Marketing & Sales

ARUNODAYA PRINT Pack Pvt. Ltd., is looking for marketing executive for Bangalore region with 4-5 yrs Exp. - preferably from packaging industry. Have relevant qualification & excellent communication skills. Contact: srikanth.ch@arunodayaprintpack.com, Mob: 9849192963

Part-Time Jobs

✓ ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Wanted

✓ ತಕ್ಷಣ ಬೇಕಾಗಿದ್ದಾರೆ ಹೊಸದಾದ ಕಂಪನಿಗಳಿಗೆ ಆಫೀಸ್‌ಗಳಿಗೆ MNC ಕಂಪನಿಗಳಿಗೆ ಹಾಗೂ ಎಲ್ಲಾಜಿಲ್ಲೆಗಳಿಗೆ ಯುವಕಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ 7th,SSLC, PUC, ITI Degree Pass/Fail ಆದವರಿಗೆ, ಉಚಿತ ವಸತಿಯೂಟದೊಂದಿಗೆ ESI/PF ನೊಂದಿಗೆ ಸಂಬಳ 16,800/- ರಿಂದ 45000/- ದವರೆಗೆ. 9916016092, 9739993386,

200 EXCAVATOR operators, tower crane operators, mobile ready mix plant operators. for Haliyal & Salapur projects. Pvr PROJECTS Ltd, #453, 4th Main Road, 7th cross, Dollars colony, Bangalore-94, 080-23418080, 9008826378 E-Mail I'd: pvrplblr@gmail.com

ಬೆಂಗಳೂರಿನ ದೇವಸ್ಥಾನದಲ್ಲಿ ಕೆಲಸ ಮಾಡಲು ವೇದ ಮಂತ್ರಗಳನ್ನು ಅರಿತಿರುವ ಬ್ರಾಹ್ಮಣ ಸಹಾಯಕ ಅರ್ಚಕರು ಬೇಕಾಗಿದ್ದಾರೆ. ಸಂಪರ್ಕಿಸಿ: 7019132200, 080-25300714

ವ್ಯಾಪಾರ

Business to Business

Business

ಜೋವರ್ ರೊಟ್ಟಿ, ರಾಗಿ ರೊಟ್ಟಿ, ಚಪಾತಿ, ಪುರಿ ಇತ್ಯಾದಿಗಳನ್ನು ತಯಾರಿಸಲು ಬೇಕಾದ ಯಂತ್ರಗಳಿಗೆ ಕರೆ ಮಾಡಿ. B K Engineers, Marathahalli, Bangalore, Ph:7676212917

Business Offers

Dealers And Stockists

DEALERS REQUIRED all over Karnataka for Electric Cycles and Geared 3 Wheeler, developed by IIT'ian Madras. Contact: 97404 49955

Finance

BIGLOAN AGAINST LAP, Business, Projects, Educational Institutions, Hospitals, Sick Units& Takeover 6-8%PA 9500387375, info@theintl.org

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

★ಚೌಡೇಶ್ವರಿದೇವಿ★ ಆರಾಧಕರು ಪ್ರಧಾನ ತಾಂತ್ರಿಕ್ ಮಂಜುನಾಥ್. ಪ್ರೀತಿಪ್ರೇಮ, ದಾಂಪತ್ಯ ಸಮಸ್ಯೆ, ವಶೀಕರಣ ಫೋನಿನ ಮುಖಾಂತರ ಕೆಲವೇ ನಿಮಿಷಗಳಲ್ಲಿ ಪರಿಹಾರ. 8050498041

ವೈಯಕ್ತಿಕ

Announcements

ROYAL CONSULTATION by Qualified Ayurveda Specialist. Contact: 76195 53245 For VIP's & VVIP's

Lost

ರಿಸೀಪ್ಟ್ ಪುಸ್ತಕ ಕಾಣೆಯಾಗಿದೆ

ಕೆಳಗಿನ ರಶೀದಿ ಪುಸ್ತಕಗಳು ಬೆಂಗಳೂರಿನಲ್ಲಿ ಕಳೆದುಹೋಗಿವೆ, ಪುಸ್ತಕಗಳು ಶಿಕ್ಷಾ ಫೈನಾನ್ಸಿಯಲ್ ಸರ್ವೀಸಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ ವಿವರಗಳನ್ನು ಕೆಳಗೆ ನೀಡಲಾಗಿದೆ: **ಪುಸ್ತಕ ಸಂಖ್ಯೆ 518 ರಶೀದಿ ಸಂಖ್ಯೆ 51701 ರಿಂದ 51800** ರವರೆಗೆ. ಯಾವುದೇ ಪುಸ್ತಕಗಳಲ್ಲಿ ಈ ಪುಸ್ತಕಗಳ ದುರುಪಯೋಗಕ್ಕೆ ನಾವು ಜವಾಬ್ದಾರರಾಗಿರುವುದಿಲ್ಲ. ಯಾರು ಅಧನ್ನು ಬಳಸುತಾರೋ ಅವರು ಮಾತ್ರ ಅಧಕ್ಕೆ ಜವಬ್ಧಾಧಾರರಾಗುತಾರೆ

SHIKSHA FINANCE
No. 25, 1St Floor,Amar Jyothi Layout ,4th Cross, Sanjay Nagar, Nagashettyhalli, Bangalore -560 094

ಪ್ರವಾಸ

Travel

28.3.21 ದೆಹಲಿ, ವೈಷ್ಣೋದೇವಿ, ಅಮೃತ್‌ಸರ್, ಹರಿದ್ವಾರ, ಕಾಶಿ, ಗಯಾ, ಅಲಹಾಬಾದ್. 24.4.21 ಮಧ್ಯಪ್ರದೇಶ, ಗುಜರಾತ್/ ರಾಜಸ್ಥಾನ್/ ನೇಪಾಳ.12.5.21 ಗಂಗೋತ್ರಿ, ಯಮುನೋತ್ರಿ, ಕೇದಾರನಾಥ, ಬದರಿನಾಥ. 27.6.21 ಅಮರನಾಥ. ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ) ಸಂ: 9845035349, 9482435755

ಕಾಶಿ ಪ್ರವಾಸ 2 ಜ್ಯೋತಿರ್ಲಿಂಗದೊಂದಿಗೆ, 6ದಿನಗಳು ವಿಮಾನದಲ್ಲಿ ಪ್ರಯಾಗ್‌ರಾಜ್, ಗಯಾ, ಬುದ್ಧಗಯಾ, ವೈದ್ಯನಾಥೇಶ್ವರ ಹಾಗೂ ಇತರೆ. ಪ್ರಕೃತಿ ಹಾಲಿಡೇಸ್.7259646056, 9741518956

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH ಪ್ರಜಾವಾಣಿ **Classifieds**

EFFECTIVE FROM JUNE 3rd, 2020

DECCAN HERALD & PRAJAVANI CLASSIFIEDS PACKAGE RATES

PUBLICATION	TEXT AD RATE PER INS FOR 15 WORDS	CLASSIFIEDS DISPLAY RATE PER SQCM
DH ALL KARNATAKA+ PV BENGALURU	1020/-	480/-
PV ALL KARNATAKA	900/-	430/-

*GST applicable

SPECIAL SCHEMES ALL CATEGORY

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details
Contact: 9880856233 | 9731810277
9901641752 | 9845114560 | 9886213331

ಪ್ರಜಾವಾಣಿ
ಭಾನುವಾರದ ಪುರವಣಿ
ಭಾನುವಾರ, 7 ಮಾರ್ಚ್ 2021

ಸ್ತ್ರೀ ಚಿಂತನೆಯ ನಾನಾ ಮುಖಗಳು 12

ಅಪ್ಪನ ಅಕ್ಕರೆಯ ಮಡಿಲಲ್ಲಿ 13

10

ಹೆಜ್ಜೆ ಹಿಂತೆಗೆಯದಿರಿ...

ಮಮತಾ, ಪೌರಕಾರ್ಮಿಕ ಮಹಿಳೆ, ದಾವಣಗೆರೆ

ನಾನು ಹೆಚ್ಚು ಓದಿದವಳಲ್ಲ. ಏಳನೇ ತರಗತಿ ತನಕ ಓದಿದ್ದೇನೆ. ಹೆಣ್ಣುಮಕ್ಕಳ ಬಗ್ಗೆ ಬೇರೆಯವರಂತೆ ನನಗೆ ಮಾತನಾಡಲು ಗೊತ್ತಿಲ್ಲ. ಆದರೆ, ನಾನೂ ಒಬ್ಬ ಹೆಣ್ಣಾಗಿ ಜೀವನ ಎದುರಿಸುತ್ತಿರುವ ಬಗ್ಗೆ ಹೇಳಬಲ್ಲೆ. ನಮ್ಮ ಕುಟುಂಬದಲ್ಲಿ ನಮ್ಮತ್ತೆ, ನಮ್ಮೆಜಮಾನ್ರು ಪೌರ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದರು. ಹಾರ್ಟ್ ಪ್ರಾಬ್ಲಂ ಇದ್ದುದ್ದರಿಂದ ನನ್ನ ಗಂಡ ಚಿಕ್ಕ ವಯಸ್ಸಿನಲ್ಲೇ ತೀರಿಕೊಂಡ್ರು. ನಾನೀಗ ಪೌರ ಕಾರ್ಮಿಕಳಾಗಿ ಕೆಲಸ ಮಾಡ್ತಾ ಇದ್ದೀನಿ. ಗಂಡ ಬದುಕಿರುವ ತನಕ ನಾನು ಹೊರಗಡೆ ಕೆಲಸಕ್ಕೆ ಹೋಗಿರಲಿಲ್ಲ.

ನಮ್ಮ ಸುತ್ತಮುತ್ತ ಚೆನ್ನಾಗಿರೋ ಹೆಣ್ಣುಮಕ್ಕಳನ್ನು ನೋಡಿದಾಗ ನನಗೂ ಅವರಂತೆ ಇರಬೇಕು ಅನಿಸುತ್ತೆ. ಅದಕ್ಕಾಗಿ ನಾನು ದುಡಿಯುತ್ತಿದ್ದೇನೆ. ಅವರಂತೆ ದೊಡ್ಡ ಕೆಲಸ ನನಗಿಲ್ಲ. ಆದರೆ, ನನ್ನ ಪಾಲಿಗೆ ನನ್ನ ಕೆಲಸವೇ ದೊಡ್ಡದು. ಇದರಲ್ಲೇ ದುಡಿದು ನನ್ನ ಇಬ್ಬರು ಮಕ್ಕಳ ಭವಿಷ್ಯ ಚೆನ್ನಾಗಿ ರೂಪಿಸಬೇಕು. ನನ್ನ ಮಕ್ಕಳು ಈ ವೃತ್ತಿಗೆ ಬರಬಾರದು ಅನ್ನುವ ಆಸೆ ನನ್ನದು.

ಹೆಣ್ಣುಮಕ್ಕಳು ಈಗ ಎಲ್ಲಾ ಫೀಲ್ಡಿನಲ್ಲಿದ್ದಾರೆ. ಅಂಥವರನ್ನು ನೋಡಿ ಖುಷಿ ಆಗುತ್ತೆ. ನನ್ನ ಪ್ರಕಾರ ಎಂಥದ್ದೇ ನೋವು ಬರಲಿ ಹೆಣ್ಣುಮಕ್ಕಳು ಮುಂದಿಟ್ಟ ಹೆಜ್ಜೆಯನ್ನು ಹಿಂದಕ್ಕೆ ಸರಿಸಬಾರದು. ಸಮಾಜ ಏನೇ ಅನ್ನಲಿ, ಅದಕ್ಕೆ ತಲೆಕೆಡಿಸಿಕೊಳ್ಳದೇ ನಮ್ಮ ಕೆಲಸ ನಾವು ಮಾಡಬೇಕಷ್ಟೆ. ಅವರಿವರ ಮಾತಿಗೆ ತಲೆಕೆಡಿಸಿಕೊಂಡರೆ ನಮ್ಮ ಬದುಕಿಗೆ ಅವರ್‍ಯಾರೂ ಬರೋದಿಲ್ಲ. ನಮ್ಮ ಅನ್ನ ನಾವೇ ಸಂಪಾದಿಸಬೇಕು. ಗಂಡ–ಹೆಂಡತಿ ಜತೆಗಿರಲಿ, ಬಿಡಲಿ ನಮ್ಮ ಅಸ್ತಿತ್ವವನ್ನು ನಾವು ಉಳಿಸಿಕೊಳ್ಳಬೇಕು. ಮತ್ತೊಬ್ಬರಿಗಾಗಿ ನಾವು ಬದುಕಬಾರದು. ನಮಗಾಗಿ ನಾವು ಬದುಕಬೇಕು.

ಬಹಳ ಜನ ಹೆಣ್ಣುಮಕ್ಕಳಿಗೆ ಕೆಲಸದ ಜಾಗದಲ್ಲಿ ತೊಂದರೆ ಆಗುತ್ತೆ ಅಂತ ಹೇಳ್ತಾರೆ. ಆದರೆ, ನಾನು ಕೆಲಸ ಮಾಡೋ ಜಾಗದಲ್ಲಿ ಗಂಡುಮಕ್ಕಳು ಮತ್ತು ಹೆಣ್ಣುಮಕ್ಕಳು ಅನುಸರಿಸಿಕೊಂಡು ಕೆಲಸ ಮಾಡ್ತೀವಿ.
ಹೆಣ್ಣು–ಗಂಡು ಇಬ್ಬರಿಗೂ ಒಂದೇ ಕೆಲಸ ಕೊಡ್ತಾರೆ. ಅದನ್ನು ಹಂಚಿಕೊಂಡು ಮಾಡ್ತೀವಿ. ನಮ್ಮ ನಡುವೆ ಯಾವತ್ತಿಗೂ ಭೇದ ಭಾವ ಬಂದಿಲ್ಲ.

ನಿರೂಪಣೆ: ಮಂಜುಶ್ರೀ ಎಂ. ಕಡಕೋಳ

ಸುಪ್ರೀಂ ಕೋರ್ಟ್‌ನ ಹಲವು ತೀರ್ಪುಗಳ ಹೊರತಾಗಿಯೂ ಹೆಣ್ಣಿನ ಕುರಿತ ಪೂರ್ವಗ್ರಹಗಳು ಹಾಗೆಯೇ ಉಳಿದಿವೆಯಲ್ಲ

ಬೆಳಕನಿಟ್ಟು ತೂಗಿದಾಕೆ

ಕತ್ತಲಲ್ಲಿಯೇ ಉಳಿದುದೇಕೆ?



ಮೈತ್ರೇಯಿ ಕೃಷ್ಣನ್, ವಕೀಲೆ, ಬೆಂಗಳೂರು

ಮಹಿಳಾ ದಿನ ಹತ್ತಿರವಾಗುತ್ತಿರುವ ಸಂದರ್ಭದಲ್ಲೇ, ಕಳೆದ ವಾರ ಎರಡು ಪ್ರಕರಣಗಳ ವಿಚಾರಣೆ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯವರು (ಸಿಜೆಐ) ವ್ಯಕ್ತಪಡಿಸಿದ ಅಭಿಪ್ರಾಯಗಳು ತೀವ್ರ ಪ್ರತಿರೋಧಕ್ಕೆ ಗುರಿಯಾದವು. ಮೊದಲನೇ ಪ್ರಕರಣದಲ್ಲಿ, ಸಂತ್ರಸ್ತೆಯು ಬಾಲಕಿಯಾಗಿದ್ದಾಗ ಅವಳ ಮೇಲೆ ನಿರಂತರ ಅತ್ಯಾಚಾರ ನಡೆಸಿದ ಆರೋಪ ಎದುರಿಸುತ್ತಿರುವ ಸರ್ಕಾರಿ ನೌಕರನೊಬ್ಬನಿಗೆ 'ಸಂತ್ರಸ್ತೆಯನ್ನು ಮದುವೆಯಾಗಲು ಸಿದ್ಧರಿದ್ದೀರಾ' ಎಂದು ಸಿಜೆಐ ಪ್ರಶ್ನಿಸಿದ್ದರು. ಎರಡನೇ ಪ್ರಕರಣದಲ್ಲಿ, ಪತ್ನಿಯ ಒಪ್ಪಿಗೆ ಇಲ್ಲದಿದ್ದರೂ ಸಂಭೋಗಕ್ಕಾಗಿ ಪತಿಯಿಂದ ನಡೆದ ಬಲಾತ್ಕಾರದ ವಾಸ್ತವವನ್ನು ಸಂಪೂರ್ಣವಾಗಿ ಕಡೆಗಣಿಸಿದ ಸಿಜೆಐ, 'ಇಬ್ಬರೂ ಪತಿ–ಪತ್ನಿಯಾಗಿ ಜೀವಿಸುತ್ತಿರುವಾಗ, ಪತಿ ಎಷ್ಟೇ ಕ್ರೂರನಾಗಿದ್ದರೂ ಅವರಿಬ್ಬರ ನಡುವಿನ ಲೈಂಗಿಕ ಸಂಪರ್ಕವನ್ನು ಅತ್ಯಾಚಾರ ಎಂದು ಕರೆಯಲು ಸಾಧ್ಯವೇ' ಎಂದು ಉದ್ಗಾರವೆತ್ತಿದ ಕುರಿತು ವರದಿಯಾಗಿತ್ತು.

ನಿಸ್ಸಂದೇಹವಾಗಿ, ಪುರುಷಪ್ರಧಾನ ಮನಃಸ್ಥಿತಿಯ ಹೇಳಿಕೆಗಳು ಇವು. ಇಂತಹ ಹೇಳಿಕೆಗಳನ್ನು ಸಿಜೆಐ ಅವರು ನೀಡುತ್ತಿರುವುದು ಇದೇ ಮೊದಲೇನಲ್ಲ. ರೈತರ ಪ್ರತಿಭಟನೆ ಪ್ರಕರಣದ ವಿಚಾರಣೆ ಸಂದರ್ಭದಲ್ಲಿ, 'ಮಹಿಳೆಯರನ್ನು ಪ್ರತಿಭಟನೆಯ ಭಾಗವಾಗಲು ಬಿಟ್ಟಿರುವುದೇಕೆ' ಎಂದು ಅವರು ಪ್ರಶ್ನಿಸಿದ್ದರು. ಮಹಿಳೆಯರನ್ನು ಮನೆಗೆ ಕಳುಹಿಸುವಂತೆ ಅವರು ಸಲಹೆ ನೀಡಿದ್ದನ್ನು ಸಹ ನಾವ್ಯಾರೂ ಮರೆತಿಲ್ಲ. ಕೋರ್ಟ್‌ನಲ್ಲಿ ತಾವು ನೀಡುವ ತೀರ್ಪುಗಳು ಮಾತ್ರವಲ್ಲ, ಉಲ್ಲೇಖಿಸುವ ಮಾತುಗಳೂ ಜನಾಭಿಪ್ರಾಯವನ್ನು ಪ್ರಭಾವಿಸುತ್ತವೆ ಎನ್ನುವುದನ್ನು ಸಿಜೆಐ ಅವರು ನೆನಪಿಟ್ಟುಕೊಳ್ಳುವುದು ಒಳಿತು.

ಸಮಾಜದ ದೋಷಗಳಿಗೆ ಕನ್ನಡಿಯನ್ನು ಹಿಡಿಯುತ್ತಾ, ಅದರ ಪರಿವರ್ತನೆಗೆ ಕಾರಣವಾಗುವ ಹೊಣೆ ಸುಪ್ರೀಂ ಕೋರ್ಟ್ ಹಾಗೂ ಈ ನೆಲದ ಕಾನೂನಿನ ಮೇಲಿದೆ. ಸಂವಿಧಾನವನ್ನು ಜಾರಿಗೆ ತಂದಿದ್ದಾದರೂ ಇಂತಹ ಪರಿವರ್ತನೆಯನ್ನು ತರುವ ಉದ್ದೇಶದಿಂದಲೇ. ಹೌದು, ಸಮಾಜದಲ್ಲಿ ಬೇರೂರಿರುವ ಪುರುಷಪ್ರಧಾನ ಮನಃಸ್ಥಿತಿಯನ್ನು ಹೋಗಲಾಡಿಸಿ ಲಿಂಗತ್ವ ಸಮಾನತೆಯನ್ನು ಸಾಧಿಸುವುದು ಸಂವಿಧಾನದ ಮೂಲ ಉದ್ದೇಶಗಳಲ್ಲಿ ಒಂದು. ಆದರೆ, ಇತ್ತೀಚಿನ ಕೆಲ ವರ್ಷಗಳಿಂದ ನಮ್ಮ ವ್ಯವಸ್ಥೆ ಮಹಿಳೆಯರ ಮೇಲಿನ ದಬ್ಬಾಳಿಕೆಯನ್ನು ಉತ್ತೇಜಿಸುವ ಪುರುಷಪ್ರಧಾನ ಮನಃಸ್ಥಿತಿಗೆ ಮರಳುತ್ತಿರುವುದು ದುರದೃಷ್ಟಕರ.

ಲಿಂಗತ್ವ ಸಮಾನತೆಯ ವಿಷಯವನ್ನು ಕೋರ್ಟ್‌ಗಳು ಹಾಗೂ ಕಾನೂನುಗಳು ಯಾವ ರೀತಿ ನಿಭಾಯಿಸುತ್ತಿವೆ ಎಂಬುದನ್ನು ಅರ್ಥ ಮಾಡಿಕೊಳ್ಳಲು ಮೂರು ಎಳೆಗಳನ್ನು ಹಿಡಿದು ನೋಡೋಣ. ಅವುಗಳೆಂದರೆ– ಹೆಣ್ಣಿನ ಕುರಿತ ಪೂರ್ವಗ್ರಹಪೀಡಿತ ಮನೋಭಾವ ಮತ್ತು ಘನತೆಯಿಂದ ಜೀವಿಸುವ ಹಕ್ಕು; ಸ್ವಾತಂತ್ರ್ಯ ಹಾಗೂ ವೈಯಕ್ತಿಕ ಘನತೆಯ ಮೂಲಭೂತ ಹಕ್ಕು; ಘನತೆ ಮತ್ತು ಸುರಕ್ಷತೆಯಿಂದ ಕೆಲಸ ಮಾಡುವ ಹಕ್ಕು.

ಮೊದಲು ಹೆಣ್ಣಿನ ಕುರಿತ ಪೂರ್ವಗ್ರಹಪೀಡಿತ ಮನೋಭಾವ ಮತ್ತು ಘನತೆಯಿಂದ ಜೀವಿಸುವ ಹಕ್ಕಿನ ವಿಷಯವನ್ನೇ ತೆಗೆದುಕೊಳ್ಳೋಣ. ಮೇಲೆ ಉಲ್ಲೇಖಿಸಿದ ಮೂರೂ ಪ್ರಕರಣಗಳಲ್ಲಿ ಹೆಣ್ಣಿನ ಕುರಿತ ಪೂರ್ವಗ್ರಹಗಳು ಮತ್ತಷ್ಟು ಆಳವಾಗಿ ಬೇರೂರಿರುವುದು ಎದ್ದು ಕಾಣುತ್ತದೆ. ಮಹಿಳೆಯರೆಂದರೆ ದುರ್ಬಲರು, ಅವರನ್ನು ಸಂರಕ್ಷಣೆ ಮಾಡುವ ಅಗತ್ಯವಿದೆ ಹಾಗೂ ಪುರುಷರಿಗೆ ಇರುವ ಸ್ವಾಯತ್ತತೆಯಾಗಲೀ ವ್ಯಕ್ತಿತ್ವವಾಗಲೀ ಅವರಿಗೆ ಇಲ್ಲ ಎನ್ನುವುದು ಅವುಗಳ ಆಳದಲ್ಲಿರುವ ಪ್ರತಿಪಾದನೆಯಾಗಿದೆ.

ಹೆಣ್ಣಿನ ಕುರಿತ ಪೂರ್ವಗ್ರಹಪೀಡಿತ ವಿಚಾರಗಳಿಗೆ ಮಣೆ ಹಾಕುವುದರಿಂದ ಆಗುವ ಅನಾಹುತಗಳ ಕುರಿತು ಕೋರ್ಟ್‌ಗಳಿಗೆ ಚೆನ್ನಾಗಿ ಅರಿವಿದೆ. ಇಂತಹ ಪೂರ್ವಗ್ರಹಗಳಿಗೆ ಉತ್ತೇಜನಕಾರಿಯಾಗಿದ್ದ ಹಲವು ಕಾನೂನುಗಳನ್ನು ಅನೂರ್ಜಿತಗೊಳಿಸಿದ ಉದಾಹರಣೆಗಳೂ ಇವೆ. ಹೀಗಿದ್ದೂ, ಲಿಂಗ ತಾರತಮ್ಯಕ್ಕೆ ಕಾರಣವಾಗುವ ಸನ್ನಿವೇಶಗಳು ಸೃಷ್ಟಿಯಾಗುತ್ತಿರುವುದು ಆಶ್ಚರ್ಯಕರ.

2007ರಲ್ಲಿ 'ಅನೂಜ್ ಗರ್ಗ್ ಮತ್ತು ಇತರರು ವಿರುದ್ಧ ಭಾರತೀಯ ಹೋಟೆಲ್‌ಗಳ ಒಕ್ಕೂಟ ಮತ್ತು ಇತರರು' ಪ್ರಕರಣದಲ್ಲಿ, ಬಾರ್‌ಗಳಲ್ಲಿ ಮಹಿಳೆಯರಿಗೆ ಉದ್ಯೋಗವನ್ನು ನಿರ್ಬಂಧಿಸಿದ್ದ ಕಾನೂನನ್ನು ಪ್ರಶ್ನಿಸಲಾಗಿತ್ತು.

ಮುಂದಿನ ಪುಟಕ್ಕೆ...



ಕಲೆ: ಸುಕಾಂತಿ

ಸೌಜನ್ಯ: ಎಂ. ಈಶ್ವರಯ್ಯ ಆರ್ಟ್ ಗ್ಯಾಲರಿ, ಹೈದರಾಬಾದ್

ಮಹಿಳಾ ದಿನದ ವಿಶೇಷ

ಎಷ್ಟೇ ಕಾನೂನುಗಳು ಬಂದರೂ ಸಮಾಜದ ಮನಃಸ್ಥಿತಿ ಬದಲಾಗದೆ ಲಿಂಗ ಸಮಾನತೆ ಸಾಧ್ಯವೇ ಇಲ್ಲ. ಸುಪ್ರೀಂ ಕೋರ್ಟ್‌ನ ಕೆಲವು ತೀರ್ಪುಗಳ ಆಧಾರದಲ್ಲಿ ಈ ಕುರಿತು ವಿಶ್ಲೇಷಣೆಯ ಜತೆಗೇ 'ನೀವು ಎಂದಾದರೂ ಪಾತ್ರೆ ತೊಳೆದಿದ್ದೀರಾ' ಎಂಬ ಪುರುಷರೊಬ್ಬರ ಪ್ರಶ್ನೆಯೂ ಇಲ್ಲಿ ಗಮನ ಸೆಳೆಯುತ್ತಿದೆ. ಹಾಗೆಯೇ ಸ್ತ್ರೀ ಅಸ್ಮಿತೆ ಕುರಿತು ಸಮಾಜದ ವಿವಿಧ ಸ್ತರಗಳ ಮಹಿಳೆಯರು ಮಾಡಿದ ವ್ಯಾಖ್ಯಾನಗಳು ಇಲ್ಲಿವೆ. ಮಹಿಳಾ ದಿನದ ಸಂದರ್ಭದಲ್ಲಿ ಇದೋ ಭಾನುವಾರದ ಪುರವಣಿಯ ವಿಶೇಷ

ಮಹಿಳಾ ಸಂಚಿಕೆ...

ಅಕ್ಕಂದಿರ ಸಂಖ್ಯೆ ನೂರ್ಮಡಿಯಾಗಲಿ...

ಎಂ.ಡಿ.ಪಲ್ಲವಿ, ಗಾಯಕಿ, ಬೆಂಗಳೂರು

ಜಗತ್ತಿನಲ್ಲಿ ಹೆಣ್ಣು ಓದಬಾರದು, ಕಲಿಯಬಾರದು ಎಂಬ ಸ್ಥಿತಿಯಿಂದ ಓದಿ, ಕಲಿತು ಸಾಧಿಸಬೇಕು ಎಂಬ ಸ್ಥಿತಿಗೆ ಬಂದು ತಲುಪಿದ್ದಾಳೆ. ಅನ್ಯಗ್ರಹದಲ್ಲಿ ಹೆಜ್ಜೆ ಇಡುವ ತವಕದಲ್ಲಿ ಮಹಿಳೆ ಇದ್ದಾಳೆ. ಈಗಾಗಲೇ ಯುದ್ಧ ಭೂಮಿಯಲ್ಲಿ ಹೆಜ್ಜೆ ಗುರುತು ಮೂಡಿಸಿದ್ದಾಳೆ. ಜಗತ್ತು ದೊಡ್ಡ ಪ್ರಮಾಣದಲ್ಲಿ ಬದಲಾವಣೆಗೆ ತೆರೆದುಕೊಂಡಿದ್ದರೂ ಪುರುಷ ಪ್ರಧಾನ ನೋಟ ಹೋಗಿಲ್ಲ. ಹೆಣ್ಣಿನ ಮೇಲೆ ನಿತ್ಯ ನಡೆಯುತ್ತಿರುವ ದೌರ್ಜನ್ಯ, ಕಿರುಕುಳ ಪ್ರಕರಣಗಳೇ ಇದಕ್ಕೆ ಸಾಕ್ಷಿ.

ಹೆಣ್ಣು ಕೂಡ ಮನುಷ್ಯ ಜಾತಿಗೆ ಸೇರಿದ್ದಾಳೆ ಅಲ್ಲವೇ? ಹಾಗಿದ್ದರೂ ಸ್ವತ್ತು ಎಂಬ ದೃಷ್ಟಿಕೋನವೇಕೆ? ಸಮಾಜದಲ್ಲಿ ಮನುಷ್ಯಳಾಗಿ ಗುರುತಿಸಿಕೊಳ್ಳಲು ಮಹಿಳೆ ಇನ್ನೂ ಹೋರಾಟ ನಡೆಸುತ್ತಲೇ ಇದ್ದಾಳೆ, ಮುಂದೆಯೂ ಹೋರಾಡಲೇಬೇಕಿದೆ.

ಇದು ಮನೋರೋಗವಲ್ಲ, ಪುರುಷರ ಮನಸ್ಥಿತಿಯಷ್ಟೆ. ಮನಸ್ಥಿತಿ ಬದಲಿಸಿಕೊಂಡು ಸಮಾನವಾಗಿ ನೋಡಲೇನು ಕಷ್ಟ? ಸಮಾನವಾಗಿ ಕಾಣಲು ಅವಮಾನವೇ? ಅಹಂಕಾರ ಇರಬಹುದಾ? ಬರೀ ಪ್ರಶ್ನೆಗಳೇ ಮೂಡುತ್ತವೆ.

ನಮ್ಮ ಕಲಾ ಕ್ಷೇತ್ರವನ್ನೇ ತೆಗೆದುಕೊಳ್ಳಿ, ಸೃಜನಶೀಲತೆಗೆ ಅಗಾಧ ಅವಕಾಶಗಳಿವೆ. ಹೆಣ್ಣು ನಾಲ್ಕು ಗೋಡೆಯ ಪಂಜರದಿಂದ ಹೊರಬಂದು ಹಾಡಬಹುದು, ಕುಣಿಯಬಹುದು, ನಾಟಕ ಮಾಡಬಹುದು, ಸಿನಿಮಾದಲ್ಲಿ ನಟಿಸಬಹುದು. ಕಲಾಕ್ಷೇತ್ರದಲ್ಲಿ ಸುರಕ್ಷತೆಗೆ ಕೊರತೆ ಇಲ್ಲ. ಎಲ್ಲಾ ಕ್ಷೇತ್ರಗಳಲ್ಲೂ ಮಹಿಳೆಗೆ ಸುರಕ್ಷತೆ ಇದೆ. ರಾತ್ರಿ ಪಾಳಿಯಲ್ಲಿ ಕೆಲಸಮಾಡುವ ಧೈರ್ಯ ತೋರಿದ್ದಾಳೆ. ಇಷ್ಟೆಲ್ಲಾ ಇದ್ದರೂ ಸ್ವತ್ತು ಎಂಬಂತೆ ನೋಡುವ ನೋಟ ಬದಲಾಗದೇ ಇರುವುದು ನೋವಿನ ಸಂಗತಿ.

ಇತಿಹಾಸ, ಪುರಾಣಗಳ ಪುಟ ತೆರೆದರೆ ಬರೀ ಬಸವಣ್ಣರೇ ಕಾಣಿಸುತ್ತಾರೆ, ಒಬ್ಬಳೇ ಅಕ್ಕ ಮಹಾದೇವಿ. ಹತ್ತು ಬಸವಣ್ಣರಿಗೆ ಒಬ್ಬಳೇ ಅಕ್ಕ. ಅಕ್ಕ ಮಹಾದೇವಿಯಂತಹ ಅಕ್ಕಂದಿರ ಸಂಖ್ಯೆ ನೂರ್ಮಡಿಯಾಗಬೇಕು.

ನಿರೂಪಣೆ: ಎಂ.ಎನ್.ಯೋಗೇಶ್

ಕಲೆ: ಸುಧಾ

ತಾಯಿ ಕನಿಮನೆಯೇ, ನೀ ಅಕ್ಕ ಅಕ್ಕರತೆಯೇ
ಬಾಯೆನ್ನ ತಂಗಿ ಬಾ ಮುದ್ದು ಬಂಗಾರವೇ
ನೀಯೆನ್ನ ಹೆಂಡತಿಯೊ ಮೈಗೊಂಡ ನನ್ನಿಯೋ
ಮಗಳೊ ನನ್ನೆದೆಯ ಮುಗುಳೊ?

–ದ.ರಾ. ಬೇಂದ್ರೆ

ಹೋರಾಟವೇ ಅಸ್ಮಿತೆ

ಬೇಬಿ ಸಾಲ್ಯಾನ್, ಮೀನುಗಾರ ಮಹಿಳೆ, ಮಂಗಳೂರು

ಎಲ್ಲೆಲ್ಲೂ ಆಧುನಿಕತೆ ಆವರಿಸಿಕೊಂಡಿದೆ ಎಂಬುದು ಎಲ್ಲರ ಬಾಯಲ್ಲೂ ಸುಲಭಕ್ಕೆ ಉದುರುವ ಮಾತು. ಇದರಿಂದ ಯಾರಿಗೆ ಹಿತವಾಯ್ತೊ, ಅಹಿತವಾಯ್ತೊ ಗೊತ್ತಿಲ್ಲ. ಈ ಆಧುನಿಕತೆ, ತಂತ್ರಜ್ಞಾನಗಳು ಮೀನುಗಾರ ಮಹಿಳೆಯರ ಸಂಕಟಗಳನ್ನು ತಗ್ಗಿಸಿದ್ದಂತೂ ನಿಜ.

ನಸುಕಿನಲ್ಲೆದ್ದು ಸಮುದ್ರದೆದುರು ಕೈವೊಡ್ಡಿ ತರುವ ಮೀನುಗಳು, ತುಂಬಿದ ಬುಟ್ಟಿಯನ್ನು ತಲೆಮೇಲೆ ಹೊತ್ತು, ದಾರಿಯುದ್ದಕ್ಕೂ ಪಟಪಟನೆ ಉದುರುವ ಬೆವರ ಹನಿಗಳು, ಚಪ್ಪಲಿ ಇಲ್ಲದ ಕಾಲುಗಳಲ್ಲಿ ಊರೂರು ಅಲೆದು ವ್ಯಾಪಾರ ಮಾಡುತ್ತಿದ್ದ ಕಷ್ಟದ ದಿನಗಳಿಗೆ ಈಗ ಪೂರ್ಣವಿರಾಮ ಬಿದ್ದಿದೆ. ವಾಹನ ಸೌಕರ್ಯಗಳು, ಬಲೆಗೆ ಸಿಕ್ಕ ಮೀನುಗಳನ್ನು ಕೆಡದಂತೆ ಇಡುವ ವ್ಯವಸ್ಥೆಗಳು ಶ್ರಮಜೀವಿಗಳ ಹೊಯ್ದಾಟದ ದಿನಗಳನ್ನು ತಹಬಂದಿಗೆ ನಿಲ್ಲಿಸಿವೆ. ಹೇಳಿಕೇಳಿ, ನೀರಿನ ಸಾಂಗತ್ಯದಲ್ಲಿ ಬೆಳೆದವರು ನಾವು, ನೀರಿನಂತೆ ನೆಲೆ ಸಿಕ್ಕಲ್ಲಿ ಹೊಂದಿಕೊಳ್ಳುವ ಗುಣ ಬೆಳೆಸಿಕೊಂಡಿದ್ದೇವೆ.

21ನೇ ಶತಮಾನದಲ್ಲಿರುವ ನಾವು ಸಮಾನತೆ ಪಡೆದಿದ್ದೇವಾ ಗೊತ್ತಿಲ್ಲ, ಆದರೆ, ಸಹಕಾರ ಸಿಗುತ್ತಿದೆಯೆಂಬ ನಿಟ್ಟುಸಿರು ಇದೆ. ವ್ಯಾಪಾರ–ವಹಿವಾಟು, ಸಹಕಾರ ಸಂಘಗಳು ಮೀನುಗಾರ ಮಹಿಳೆಯರನ್ನು ಆರ್ಥಿಕವಾಗಿ ಅಷ್ಟೇ ಅಲ್ಲ, ಮಾನಸಿಕವಾಗಿ ಗಟ್ಟಿಗೊಳಿಸಿವೆ. ಹೊಸಿಲಾಚೆ ಹೆಜ್ಜೆ ಇಟ್ಟಿರುವ ಹೆಣ್ಮಗಳಿಗೆ, ಸಮಾಜವನ್ನು ಎದುರಿಸುವ ತಾಕತ್ತು ಮೈಗಂಟಿದೆ. ಹಾಗೆಂದು ಕುಟುಂಬ ನಿರ್ವಹಣೆಯ ಭಾರವನ್ನು ಇಂದಿಗೂ ಹೆಗಲ ಮೇಲೆ ಹೊತ್ತಿರುವವಳು ಮಹಿಳೆಯೇ. ಕೈಗೆ ಸಿಗುವ ಕಾಸು, ಅದರಲ್ಲೇ ಬಚ್ಚಿಟ್ಟ ಗಳಿಕೆಯನ್ನು ಮಕ್ಕಳ ಶಿಕ್ಷಣಕ್ಕೆ ಧಾರೆಯೆರೆದು ಸಂತೃಪ್ತಿ ಕಾಣುತ್ತಿದ್ದಾಳೆ. ಹೋರಾಟವೇ ನಮ್ಮ ಬದುಕು. ಅಸ್ಮಿತೆಯೋ, ಅಸ್ತಿತ್ವವೋ ಅವೆಲ್ಲ ನಮಗೆ ಅರ್ಥವಾಗದ ವಿಷಯಗಳು. ಅವನ್ನೆಲ್ಲ ಯೋಚಿಸುತ್ತಿದ್ದರೆ ಬದುಕಿನ ಜಟಕಾ ಬಂಡಿ ನಡೆಯದು. ಬಂಡಿಗೆ ಹೆಗಲೊಡ್ಡಿದರಷ್ಟೇ ಜೀವನ. ಅಮ್ಮ ಪ್ರತಿದಿನ 10–15 ಕಿಲೊ ಮೀಟರ್ ನಡೆದು ಮನೆ ಬಾಗಿಲಿಗೆ ಹೋಗಿ ಮೀನು ವ್ಯಾಪಾರ ಮಾಡುತ್ತಿದ್ದರು. ಸುಡುಬಿಸಿಲಿಗೆ ದೇಹವೊಡ್ಡಿ ರಸ್ತೆ ಬದಿಯಲ್ಲಿ ವ್ಯಾಪಾರ ಮಾಡುವ ಕಷ್ಟವನ್ನು ಈಗ ಹೈಟೆಕ್ ಮಾರ್ಕೆಟ್‌ಗಳು ಮರೆಸಿವೆ. ಅದೇ ನೆಮ್ಮದಿ. ಮೀನುಗಾರ ಮಹಿಳೆಯರು–ಪುರುಷರು, ನೀರು ಮತ್ತು ದೋಣಿ ಇದ್ದ ಹಾಗೆ. ಇಬ್ಬರೂ ಪರಸ್ಪರ ಪೂರಕವಾಗಿದ್ದರೆ ಬದುಕು ಚಲನಶೀಲ.

ನಿರೂಪಣೆ: ಸಂಧ್ಯಾ ಹೆಗಡೆ

ಪುರುಷರೇ, ಪಾತ್ರೆ ತೊಳೆದಿದ್ದೀರಾ?

ಶ್ರೀಧರ್ ಕುಲಕರ್ಣಿ

'ಏ ಜಯಾ, ಪಾಪ ಅವನ ಕಡೆ ಯಾಕ ಭಾಂಡೆ ತೊಳಸ್ತಿ?' ಎಂದರು ನಮ್ಮ ಅತ್ತೆ. 'ಅಂವಾ ತೊಳದರ ಏನ ತಪ್ಪಾತು, ಅವನೂ ಊಟಾ ಮಾಡ್ತಾನ, ಮತ್ತss ಅಡುಗಿನೂ ಮಾಡಿಲ್ಲಾ, ತೊಳಿಲಿ ಬಿಡ', ಎಂದಳು ನನ್ನ ಹೆಂಡತಿ. 'ನೀವ ನೀವ ಇದ್ದಾಗ ಏನ ಬೇಕಾದ್ರು ಮಾಡಕೊಳ್ರಿ, ಆದರ ನಾ ಇರೂತನಾ ಶ್ರೀಧರ ಭಾಂಡೆ ತೊಳೆಯೂ ಹಂಗಿಲ್ಲ ನೋಡು' ಎಂದು ಸ್ಪಷ್ಟವಾಗಿ ಹೇಳಿದರು ನಮ್ಮ ಅತ್ತೆ. ಇದನ್ನೆಲ್ಲಾ ಕೇಳಿಸಿಕೊಂಡರೂ ಸಿಂಡರೆಲ್ಲಾ ತರಹ ನಿರ್ಲಿಪ್ತವಾಗಿ ಒಂದೊಂದೇ ಪಾತ್ರೆ ತೊಳೆದು ಪಕ್ಕದ ಬುಟ್ಟಿಯಲ್ಲಿ ಹಾಕುತ್ತಿದ್ದೆ.

ಅತ್ತೆಯವರು ಮಗಳ ಎರಡನೇ ಹೆರಿಗೆಗೆಂದು ಮೊದಲ ಬಾರಿಗೆ ಅಮೆರಿಕಕ್ಕೆ ಬಂದ ಕಾಲವದು. ಆಗ ಏಳರಲ್ಲಿ ಹುಟ್ಟಿದ ಕುಲದೀಪಕ ಈಗ ಐದಡಿ ಹತ್ತು ಇಂಚಿನ, ಹದಿನೆಂಟರ ತರುಣನಾಗಿದ್ದಾನೆ. ಹೇಳುವ ಉದ್ದೇಶ ಇಷ್ಟೆ, ಆ ಹದಿನೆಂಟು ವರುಷಗಳಿಂದ ನನ್ನ ಭಾಂಡೆಯ ಡ್ಯೂಟಿ ಇನ್ನೂ ನಡೀತಾ ಇದೆ. ಮೂರು ನೌಕರಿ ಬದಲಾಯಿಸಿದೆ, ನಾಲ್ಕು ಮನೆ ಬದಲಾಯಿಸಿದೆವು, ಆರು ಕಾರು ಬದಲಾಯಿಸಿದೆ, ಆದರೆ ಈ ಕರ್ತವ್ಯದಿಂದ ಮಾತ್ರ ಮುಕ್ತಿ ಸಿಕ್ಕಿಲ್ಲ. ಹಾಗೇನಾದರೂ ಹೆಂಡತಿಯ ಮುಂದೆ ದುಃಖ ಹೇಳಿಕೊಂಡರೆ 'ಅಡುಗಿ ಮಾಡಲಿಕ್ಕೆ ಒಬ್ಬರನ್ನ ಇಟಗೊ, ನಾ ಭಾಂಡೆ ಮಾಡತೇನಿ' ಎನ್ನಬೇಕೆ!

ಅಪ್ಪ ಕಟ್ಟಿದ ಮನೆಗೆ ಮಗ ಕಳಸ ಇಡಬೇಕು ಎಂಬ ಅಪೇಕ್ಷೆ ಸಹಜೀಕ. ಅಪ್ಪನ ಆಸೆಯಂತೆ ಎಂಜಿನಿಯರಿಂಗ್ ಕಲಿತು, ಒಳ್ಳೆಯ ನೌಕರಿ ಮಾಡಿಕೊಂಡು, ಒಂದು ಸ್ವಂತ ಮನೆ ಮಾಡಿಕೊಂಡಿದ್ದೇನೊ ನಿಜ. ಆದರೆ, ಇನ್ನು ಕೆಲವು ವಿಷಯಗಳಲ್ಲಿ ಹಿಂದೆ ಬಿದ್ದಂತೆನಿಸುತ್ತದೆ. ಹುಬ್ಬಳ್ಳಿಯ ತಬೀಬ್ ಲ್ಯಾಂಡಿನ ವಾಳ್ವೇಕರ ಚಾಳಿನಲ್ಲಿ ಬೆಳೆಯುತ್ತಿದ್ದಾಗ ಒಂದಿಷ್ಟು ಕುಂದುಕೊರತೆಗಳು ಇದ್ದದ್ದೇನೊ ನಿಜ. ಆದರೆ, ಈ ಕೊರತೆಗಳನ್ನೆಲ್ಲ ಮೀರಿಸುವಂತಹ ಅನುಕೂಲಗಳಿದ್ದವು. ಅಂತಹ ವಾತಾವರಣದಲ್ಲಿ, ಅಂತಹ ಆರ್ಥಿಕ ಪರಿಸ್ಥಿತಿಯಲ್ಲಿ, ಒಂದು ತರಹದ ಐಷಾರಾಮಿ ಜೀವನಶೈಲಿಯಿತ್ತು. ಹೇಗಂತೀರಾ?

ಪಡಸಾಲೆಯಲ್ಲಿದ್ದ ಸೀಲಿಂಗ್ ಫ್ಯಾನ್, ಎರಡೂ ಕೋಣೆಗಳ ನಡುವೆ ನೇತು ಹಾಕಿದ್ದ ಟ್ಯೂಬ್‌ಲೈಟು,

ಅಡುಗೆಮನೆಯಲ್ಲಿ ರಾರಾಜಿಸುತ್ತಿದ್ದ ಗ್ಯಾಸ್ ಸ್ಟೊವ್, ಒಂದು ಸಿಲಿಂಡರ್ ಖಾಲಿಯಾದರೆ ತಿಂಗಳುಗಟ್ಟಲೆ ಕಾಯಿಸಲಾರದಂತೆ ಮನೆಯಲ್ಲಿದ್ದ ಮತ್ತೊಂದು ಸಿಲಿಂಡರ್, ರೇಶನ್ ಕಾರ್ಡಿನಿಂದ ಬರೀ ಸಕ್ಕರೆ ತಂದು ಉಳಿದೆಲ್ಲಾ ಕಾಳು-ಕಡಿಗಳನ್ನು ದುರ್ಗದಬೈಲಿನ ಬೊಬ್ಬಿ ಅವರ ಅಂಗಡಿಯಿಂದ ತಿಂಗಳಿಗೊಮ್ಮೆ ಹಮಾಲನ ಹೆಗಲ ಮೇಲೆ ಹೊರಿಸಿಕೊಂಡು ಬರುವುದು, ನೆರೆಹೊರೆಯವರು ಅಸೂಯೆ ಪಡುವಂತೆ ಮನೆಗೆ ಬೆಳಿಗ್ಗೆ ಬರುತ್ತಿದ್ದ ದಿನಪತ್ರಿಕೆ, ಸೆಕೆಂಡ್ ಸ್ಯಾಟರ್ಡೆಗೊಮ್ಮೆ ಮಧ್ಯಾಹ್ನ ಅಪ್ಪ ತರುತ್ತಿದ್ದ ಬಾಂಬೆ ಬೇಕರಿಯ ಕಲಾಕಂದ ಮತ್ತು ಪಫ್ಸ್, ಒಂದೇ, ಎರಡೇ... ಆದರೆ, ಇವೆಲ್ಲವನ್ನೂ ಮೀರಿದ ಐಷಾರಾಮದ ಸಂಗತಿ ಎಂದರೆ ಪ್ರತಿದಿನ ಮನೆಗೆ ಬರುತ್ತಿದ್ದ ಅಡುಗೆಯವರು ಮತ್ತು ಪಾತ್ರೆ ಹಾಗೂ ಬಟ್ಟೆ ಶುಚಿಗೊಳಿಸುವವರು.

ಪ್ರತಿದಿನ ಬೆಳಿಗ್ಗೆ ಏಳು ಗಂಟೆಗೆಲ್ಲ ಬರುತ್ತಿದ್ದ ಅಡುಗೆ ಮಾಮಿ, ಬಿಸಿ ಬಿಸಿ ಚಪಾತಿ ಅಥವಾ ಭಕ್ಕರಿ, ಪಲ್ಯ, ಅನ್ನ ಮತ್ತು ಸಾರು ಮಾಡಿ ಹೋಗುತ್ತಿದ್ದರು. ಒಂದು ದಿನ ಚಪಾತಿಯಾದರೆ ಇನ್ನೊಂದು ದಿನ ಭಕ್ಕರಿ, ದಿನವೂ ಒಂದು ತೊಪ್ಪಲ ಪಲ್ಯ, ವಾರಕ್ಕೊಂದು ಸರ್ತಿ ಇಡ್ಲಿ ಅಥವಾ ದೋಸೆ. ಅವರು ಬಂದುಹೋದ ನಂತರ ಬರುವ ನಿಂಗಮ್ಮ ಪಾತ್ರೆ ತೊಳೆದು, ಬಟ್ಟೆ ಒಗೆದು, ಒಣಹಾಕಿ ಹೋಗುತ್ತಿದ್ದಳು. ಬ್ರಾಹ್ಮಣರಾಗಿದ್ದ ಅಡುಗೆ ಮಾಮಿ ತಿಂಗಳಲ್ಲಿ ಮೂರು ದಿನ ಬರದಾಗ ಸ್ಟೇಶನ್ ರೋಡಿನಲ್ಲಿದ್ದ ಆನಂದ ಭವನದ ಸಾಂಬಾರನ್ನು ಸವಿಯುವ ಸುಖ, ಒಂದೊಂದು ಸಾರಿ ಬ್ಲೂಸ್ಟಾರಿನಿಂದ ತರುವ ಎಗ್ ಕರಿಯ ರುಚಿ, ಹಬ್ಬ-ಹರಿದಿನಗಳಂದು ಕಾಕೂನ ಅದ್ಭುತ ಹೋಳಿಗೆ ಮತ್ತು ಘಮಘಮ ಸಾರು. ಅದು, ಸುಖಮಯ ಜೀವನ.

ಇದೆಲ್ಲದರ ಮಧ್ಯೆ ನಿಂಗಮ್ಮನ ಕೆಲಸದ ಬಗ್ಗೆ ಬಹಳ ಯೋಚಿಸುತ್ತಿರಲಿಲ್ಲ. ಅವಳು ಬೆಳಿಗ್ಗೆ ಕೆಲಸಕ್ಕೆ ಬರದಿದ್ದರೆ ಸಂಜೆಗೆ ಬರುತ್ತಿದ್ದಳು, ಕೆಲವೊಮ್ಮೆ ಯಾವುದೋ ಸಂಬಂಧಿಯ ಮಣ್ಣಿಗೆಂದು ಹೋದರೆ ತನ್ನ ಸೊಸೆಯನ್ನು ಕಳಿಸುತ್ತಿದ್ದಳು, ಅವಳೂ ಬರದಿದ್ದರೆ ಅಪ್ಪ ಇನ್ನೊಬ್ಬ ಕೆಲಸದವಳು, ಕಮಲಿಗೆ ಪಾತ್ರೆ ತೊಳೆಯಲು ಕೇಳುತ್ತಿದ್ದ. ಒಟ್ಟಿನಲ್ಲಿ ಹೇಳಬೇಕೆಂದರೆ, ನಾನಾಗಲಿ, ನನ್ನ ತಂಗಿಯಾಗಲಿ, ಚಿಕ್ಕವರಿದ್ದಾಗ ಎಂದೂ ಪಾತ್ರೆ ತೊಳೆಯಲಿಲ್ಲ! ನಿಜ ಅರ್ಥದಲ್ಲಿ ಇದು ಐಷಾರಾಮ, ಅಲ್ಲವೇ?

ಚಿಕ್ಕವನಿದ್ದಾಗ ಮತ್ತು ಮುಂದೆ ಭಾರತದಲ್ಲಿ ನೌಕರಿ ಮಾಡುವಾಗ, ಪಾತ್ರೆ ತೊಳೆಯುವ ಬಗ್ಗೆ ಎಂದೂ ತಲೆ ಕೆಡಿಸಿಕೊಳ್ಳಬೇಕಾಗಿರಲಿಲ್ಲ. ಆದರೆ ಅಮೆರಿಕಕ್ಕೆ ಬಂದಮೇಲೆ ಜೀವನದಲ್ಲಿ ಬಹಳಷ್ಟು ಬದಲಾವಣೆಗಳನ್ನು ಮಾಡಿಕೊಳ್ಳಬೇಕಾಯಿತು. ಬೊಬ್ಬಿಯವರ ಅಂಗಡಿಯಿಂದ ಕಾಳು-ಕಡಿ ತರುವ ಹಮಾಲ ಇಲ್ಲಿಲ್ಲ, ದಿನ ಬೆಳಗಾದರೆ ಬಂದು ಬಿಸಿ ಬಿಸಿ ಅಡುಗೆ ಮಾಡಿ ಕೊಡುವ ಮಾಮಿ ಇಲ್ಲಿಲ್ಲ, ತಿಂದು ಇಟ್ಟ ಪಾತ್ರೆಗಳನ್ನು ತೊಳೆಯುವ ನಿಂಗಮ್ಮ ಇಲ್ಲಿಲ್ಲ. ಇದೊಂದು ರೀತಿ ಹಿಂಬಡ್ತಿ ತಾನೇ? ಕಾಳು-ಕಡಿ ತರಲು ಕಾರು ಇದ್ದಿದ್ದರಿಂದ ಆ ಸಮಸ್ಯೆ ಬಗೆಹರಿಯಿತು. ಮನೆಯ ಒಡತಿ, ನನ್ನ ಹೆಂಡತಿ, ಮದುವೆ ಆದಾಗ ಅಡುಗೆಯ ಜವಾಬ್ದಾರಿ ತೆಗೆದುಕೊಂಡಿದ್ದಲ್ಲದೆ ಕಳೆದ 25 ವರ್ಷಗಳಿಂದ ಬಿಸಿಬಿಸಿಯಾದ, ರುಚಿರುಚಿಯಾದ, ಪೌಷ್ಟಿಕ ತಿಂಡಿ, ತಿನಿಸು ಹಾಗೂ ಊಟ ಬಡಿಸುತ್ತಿದ್ದಾಳೆ. ಅದು ನನ್ನ ಮತ್ತು ನನ್ನ ಮಕ್ಕಳ ಭಾಗ್ಯವೆಂದೇ ಹೇಳಬೇಕು. ಇದನ್ನೆಲ್ಲ ಅವಳು ನನಗೆ ಹೇಳಿಸಿ ಬರೆಸಿರಬಹುದು ಎಂದು ನಿಮಗೇನಾದರೂ ಸಂಶಯ ಬಂದಿದ್ದರೆ ಅದಕ್ಕೆ ನಾನು ಹೊಣೆಗಾರನಲ್ಲ!

ಇರಲಿ, ನಮ್ಮ ಅತ್ತೆಯವರು ನಮಗಿಂತ ಒಂದು ತಲೆಮಾರು ಹಿಂದಿನವರು. ಗೃಹಿಣಿಯಾಗಿ ಮನೆ, ಸಂಸಾರ ನಿಭಾಯಿಸಿದವರು. ಮನೆಯ ಗಂಡಸಿನ ಕೈಯಲ್ಲಿ ಪಾತ್ರೆ ತೊಳೆಸುವುದು ಅವರ ಮನಸ್ಸಿಗೆ ಹಿಡಿಸದಾಗಿತ್ತು.

ಮುಂದಿನ ಪುಟಕ್ಕೆ...

ಮಹಿಳಾ ದಿನದ ವಿಶೇಷ

ಪೂರ್ವಗ್ರಹಗಳು ದೂರವಾಗಲಿ...

ಪೂರ್ವಗ್ರಹಗಳು ಕಳೆದುಹೋದರೆ ಗಂಡು ಹೆಣ್ಣಿಗೆ, ಹೆಣ್ಣು ಗಂಡಿಗೆ ಸರಿಸಮನಾಗಿ, ಪೂರಕವಾಗಿ ನಿಂತು ಆರೋಗ್ಯಕರ ಸಮಾಜ ಕಟ್ಟಲು ಸಾಧ್ಯವಾಗುತ್ತದೆ...

ಗಾನವಿ ಲಕ್ಷ್ಮಣ್, ನಟಿ

ಹೆಣ್ಣೆಂದ ವ್ಯಕ್ತಿತ್ವ ಎಂದರೆ ಏನು ಎಂಬ ಪ್ರಶ್ನೆಗೆ ಜೀವನವಿಡೀ ಹುಡುಕಾಡಿದರೂ ಉತ್ತರ ಸಿಗುವುದಿಲ್ಲ ಅನಿಸುತ್ತೆ. ಮಹಿಳಾ ದಿನದ ಬಗ್ಗೆ ಬೇಕಾದಷ್ಟು ಮಾತಾಡ್ತೀವಿ. ಆದರೆ ಮಹಿಳೆಯರನ್ನು ಕುಗ್ಗಿಸುವ ಕೆಲಸವನ್ನೂ ಅಷ್ಟೇ ನಿರಂತರವಾಗಿ ಮಾಡ್ತಾ ಇರ್ತೀವಿ.

ಮಹಿಳೆ ಹೇಗೆ ಸ್ವಾವಲಂಬಿಯಾಗಬೇಕು ಎನ್ನುವುದರ ಬಗ್ಗೆ ಬೇಕಾದಷ್ಟು ಮಾತಾಡುತ್ತೇವೆ. ಆದರೆ ಒಟ್ಟಾರೆ ಸಮಾಜ, ಅದರಲ್ಲಿನ ವ್ಯಕ್ತಿಗಳು ಮಹಿಳೆಯನ್ನು ಹೇಗೆ ನೋಡಬೇಕು ಎಂಬುದರ ಬಗ್ಗೆ ನಾವು ಮಾತಾಡುವುದಿಲ್ಲ. ಅವರ ಮನಸಲ್ಲಿ ಮಹಿಳೆಯ ಬಗ್ಗೆ ನಿಜವಾದ ಗೌರವ ಬರದೆ ಮಹಿಳೆ ತೊಂದರೆ ಎದುರಿಸುವುದು ತಪ್ಪುವುದಿಲ್ಲ.

ಮಹಿಳೆಗೆ ಹೆಚ್ಚಿನ ಸಮಯದಲ್ಲಿ ಅವಳ ಶಕ್ತಿಯೇ ಗೊತ್ತಿರುವುದಿಲ್ಲ. ಅವಳು ಯಾವತ್ತೂ ಕುಟುಂಬ, ಹೊರಗಿನ ಜನರ ಬದುಕಿನ ಬಗ್ಗೆ ತಲೆಕೆಡಿಸಿಕೊಳ್ಳುವುದೇ ಹೆಚ್ಚು. ನನಗಿಂತ ಚೆನ್ನಾಗಿ ಅವರು ಇರಲಿ ಎಂದು ಬಯಸುತ್ತಾಳೆ. ಆದರೆ ನಾವು ಚೆನ್ನಾಗಿದ್ದರೆ ಮಾತ್ರವೇ ಬೇರೆಯವರನ್ನು ಚೆನ್ನಾಗಿ ನೋಡಿಕೊಳ್ಳಲು ಸಾಧ್ಯ ಎಂಬುದು ತುಂಬ ಸಲ ಅವಳಿಗೆ ಗೊತ್ತಿರುವುದಿಲ್ಲ. ಹಾಗಾಗಿ ಮೊದಲು ನಮ್ಮ ಬಗ್ಗೆ ಯೋಚಿಸಬೇಕು. ನಮ್ಮ ಶಕ್ತಿಯ ಬಗ್ಗೆ ಅರಿವು ಬೆಳೆಸಿಕೊಳ್ಳಬೇಕು.

ನಮ್ಮ ಅಮ್ಮಂದಿರಿಗೆ ಹೋಲಿಸಿದರೆ ನಾವು ಇಂದು ಸಾಕಷ್ಟು ಸ್ವಾವಲಂಬಿಗಳಾಗಿದ್ದೇವೆ. ಇಂದು ನಾವು ಕಾರು ಓಡಿಸುತ್ತೇವೆ. ನಮಗೆ ಬೇಕಾದ ಕೆಲಸವನ್ನು ಸ್ವತಂತ್ರವಾಗಿ ನಾವೇ ಮಾಡಿಕೊಳ್ಳುತ್ತೇವೆ. ಇಲ್ಲೆಲ್ಲ ಕಡೆಗಳಲ್ಲಿಯೂ ನಾವು ಗಟ್ಟಿಯಾಗಿದ್ದೇವೆ, ಬೆಳೆದಿದ್ದೇವೆ. ಆದರೆ ನಮ್ಮನ್ನು ನೋಡುವ ಕಣ್ಣುಗಳು ಮೊದಲಿನ ಹಾಗೆಯೇ ಇವೆ. ಹಾಗಾಗಿ ಮಹಿಳೆ ಸ್ವತಂತ್ರಳಾಗಬೇಕು ಎಂಬುದು ಎಷ್ಟು ಮುಖ್ಯವೋ, ಅವಳನ್ನು ನೋಡುವ ಸಮಾಜವೂ ತನ್ನ ಪೂರ್ವಗ್ರಹದ ದೃಷ್ಟಿಯಿಂದ ಸ್ವತಂತ್ರವಾಗುವುದು ಅಷ್ಟೇ ಅಗತ್ಯ.

'ಇದನ್ನು ಬಿಟ್ಟರೆ ಮಹಿಳೆಯರು, ಪುರುಷರು ಎಂಬುದೆಲ್ಲ ತುಂಬ ಮುಖ್ಯವೇ ಅಲ್ಲ. ಅವು ಎರಡು ಬಗೆಯ ಜೀವಗಳಷ್ಟೆ. ನಾವು ಮೇಲೆ ಬರಬೇಕು ಅವರು ಕೆಳಗೆ ಹೋಗಬೇಕು ಎಂದೆಲ್ಲ ಅಂದುಕೊಳ್ಳುವುದು ಸರಿಯಲ್ಲ. ಒಬ್ಬರಿಗೊಬ್ಬರು ಬೇಕೇ ಬೇಕು. ಬೆಂಗಳೂರಿಗೆ ನಾನು ಬಂದ ಹೊಸತರಲ್ಲಿ ನನಗೆ ಸಹಾಯ ಮಾಡಿದ ಸ್ನೇಹಿತರಲ್ಲಿ ಹೆಚ್ಚಿನವರು ಹುಡುಗರೇ ಆಗಿದ್ದರು. ನಾವು ಆ ಜೀವಗಳನ್ನು ಹೀಗೆಳೆಯಲು ಸಾಧ್ಯವಿಲ್ಲ. ಗಂಡು ಹೆಣ್ಣು ಇಬ್ಬರೂ ಅಷ್ಟೇ ಮುಖ್ಯ ಮತ್ತು ಪರಸ್ಪರ ಪೂರಕ. ಆದರೆ ಈ ಎರಡು ಘಟಕಗಳನ್ನು ಹೇಗೆ ನೋಡುತ್ತೇವೆ ಎನ್ನುವುದು ನಮ್ಮ ನಮ್ಮ ಮನಸ್ಸಿಗೆ ಸಂಬಂಧಿಸಿದ್ದು. ಮನಸ್ಸಿನ ಮೇಲೆ ಕೂತಿರುವ ಪೂರ್ವಗ್ರಹಗಳಿಗೆ ಸಂಬಂಧಿಸಿದ್ದು. ಈ ಪೂರ್ವಗ್ರಹಗಳಿಂದ ಬಿಡಿಸಿಕೊಳ್ಳಬೇಕು ಎಂದರೆ ಶಿಕ್ಷಣ ಎನ್ನುವುದು ತುಂಬ ಮುಖ್ಯ.

ಶಿಕ್ಷಣ ಎನ್ನುವುದನ್ನು ಬರೀ ಶಾಲೆ, ಪಠ್ಯಗಳಿಗೆ ಸೀಮಿತವಾಗಿ ಹೇಳುತ್ತಿಲ್ಲ. ಅದು ಅರಿವಿಗೆ ಸಂಬಂಧಿಸಿದ್ದು, ಸಂಸ್ಕಾರಕ್ಕೆ ಸಂಬಂಧಿಸಿದ್ದು. ನಾವು ಹೇಗೆ ಬೆಳೆದಿದ್ದೇವೆ ಎನ್ನುವುದಕ್ಕೆ ಸಂಬಂಧಿಸಿದ್ದು. ಮನೆಯಲ್ಲಿ ಹೇಗೆ ನಿಮ್ಮ ತಂಗಿ, ತಾಯಿಯರ ಜೊತೆಗೆ ನಡೆದುಕೊಳ್ಳುತ್ತೀರ? ಅವರ ಸಮಸ್ಯೆಗಳ ಬಗ್ಗೆ ಅರಿವು ಇದೆಯಾ? ಅವರ ದೇಹದ ಬದಲಾವಣೆಗಳ ಬಗ್ಗೆ ನಿಮಗೆಷ್ಟು ಗೊತ್ತು? ಈ ಎಲ್ಲವೂ ಹೆಣ್ಣಿನ ಬಗೆಗಿನ ಪೂರ್ವಗ್ರಹವನ್ನು ತೊಡೆದುಹಾಕಲು ತುಂಬ ಮುಖ್ಯವಾದ ಸಂಗತಿಗಳು. ಈ ಎಲ್ಲ ಅರಿವನ್ನು ಗಳಿಸಿಕೊಂಡ ಪುರುಷನಿಗೆ ಪೂರ್ವಗ್ರಹ ತಾನಾಗಿಯೇ ಕಳಚಿಹೋಗುತ್ತದೆ. ಆಗ ಗಂಡು ಹೆಣ್ಣಿಗೆ, ಹೆಣ್ಣು ಗಂಡಿಗೆ ಸರಿಸಮನಾಗಿ, ಪೂರಕವಾಗಿ ನಿಂತು ಆರೋಗ್ಯಕರ ಸಮಾಜವನ್ನು ಕಟ್ಟಲು ಸಾಧ್ಯವಾಗುತ್ತದೆ.

ನಿರೂಪಣೆ: ಪದ್ಮನಾಭ ಭಟ್

ಚಿತ್ರ: ತಾಜುದ್ದೀನ್ ಆಜಾದ್

ಪಾತ್ರೆ ತೊಳೆದಿದ್ದೀರಾ?

ಹಿಂದಿನ ಪುಟದಿಂದ...

ಆದರೆ ಅಮೆರಿಕಕ್ಕೆ ಬಂದಮೇಲೆ, ಇಲ್ಲಿಯ ಜೀವನಶೈಲಿಯನ್ನು ಅಳವಡಿಸಿಕೊಂಡಮೇಲೆ, ತನ್ನ ನೌಕರಿಯ ಜೊತೆಗೆ ಮನೆಯನ್ನೂ ಸಂಭಾಳಿಸುತ್ತಿರುವ ಹೆಂಡತಿ ಇದ್ದ ಮೇಲೆ, ನಾನು ನಾಲ್ಕು ಪಾತ್ರೆ ತೊಳೆಯುವುದು ಹೆಚ್ಚಿನ ಮಾತೇ? ಹಾಗಂತಲೆ ಕಳೆದ 21 ವರ್ಷಗಳಿಂದ ದಿನಕ್ಕೆರಡು ಸಾರಿ ಶರ್ಟಿನ ತೋಳೇರಿಸಿ ಪಾತ್ರೆ ತೊಳೆಯಲು ನಿಂತಾಗ, ಇತ್ತ ಹೆಂಡತಿ ಅಡುಗೆ ಮಾಡುತ್ತಿರುವಾಗ, ಅಲ್ಲಿ ಸುಪುತ್ರ ಟೀವಿಯ ಮುಂದೆ ಕುಳಿತು ಫುಟ್‌ಬಾಲ್ ಆಟ ನೋಡುತ್ತಿರುವುದನ್ನು ನೋಡಿದಾಗ ಅಥವಾ ಮಗಳು ಐಫೋನಿನಲ್ಲಿ ಸತತವಾಗಿ, ಬೇಸರ ಮಾಡಿಕೊಳ್ಳದೆ ಸ್ಕ್ರೋಲ್ ಮಾಡುತ್ತಿರುವಾಗ, ಬ್ರೇಕಪ್ ಚಲನಚಿತ್ರದಲ್ಲಿ ಜೆನ್ನಿಫ಼ರ್ ಆನ್ನಿಸ್ಟನ್ ತನ್ನ ಗಂಡನಿಗೆ I want you to want to do the dishes ಎಂದು ಕೂಗಾಡಿದ್ದು ನೆನಪಿಗೆ ಬರುತ್ತದೆ. ನೀವೆಂದಾದರೂ ಮನಃಪೂರ್ವಕವಾಗಿ, ಸ್ವಂತ ಇಚ್ಛೆಯಿಂದ ಪಾತ್ರೆ ತೊಳೆದಿದ್ದೀರಾ? ದಯವಿಟ್ಟು ಉತ್ತರಿಸಬೇಡಿ! ಹೀಗೆ ಕೆಲವೊಂದು ಸಾರಿ ಪಾತ್ರೆ ತೊಳೆಯಲು ಬೇಜಾರಾದಾಗ ನಿಂಗಮ್ಮನ ನೆನಪಾಗುತ್ತದೆ.

ನಿಂಗಮ್ಮ ನಮ್ಮ ಮನೆಯಲ್ಲಿ ಪಾತ್ರೆ ತೊಳೆಯುತ್ತಿದ್ದದ್ದು ಸುಮಾರು 30-40 ವರ್ಷಗಳ ಹಿಂದೆ. ಆಗಿನ ಅವಳ ಪರಿಸ್ಥಿತಿಗೂ ಈಗಿನ ನನ್ನ ಪರಿಸ್ಥಿತಿಗೂ ತುಂಬಾ ವ್ಯತ್ಯಾಸವಿದೆ. ಪ್ರತಿಸಾರಿ ನಾನು ಅಡುಗೆಮನೆಯ ಸಿಂಕಿನ ಮುಂದೆ ನಿಂತು ಪಾತ್ರೆ ತೊಳೆಯುವಾಗ ಅವಳು ಕುಕ್ಕರಗಾಲಿನಲ್ಲಿ ಕುಳಿತು ಪಾತ್ರೆ ತೊಳೆಯುತ್ತಿದ್ದ ದೃಶ್ಯ ಕಣ್ಮುಂದೆ ಬರುತ್ತದೆ.

ಎಷ್ಟೋ ವರ್ಷಗಳಿಂದ Western Toilet ಉಪಯೋಗಿಸುತ್ತಿರುವ, ಯೋಗಾಭ್ಯಾಸವನ್ನೂ ಮಾಡದ ನಾನು ಈಗ ಹಾಗೆ ಕುಳಿತುಕೊಳ್ಳುವುದನ್ನು ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ. ಸಿಂಕಿನಲ್ಲಿ ನಳದಿಂದ ನೀರು ಧಾರಾಕಾರವಾಗಿ ಸುರಿಯುತ್ತಿರುವಾಗ ನಿಂಗಮ್ಮನಿಗೆ ಒಂದು ಚಿಕ್ಕ ಬಕೇಟಿನಲ್ಲಿ ನೀರು ಕೊಟ್ಟು ಬುಟ್ಟಿಗಟ್ಟಲೆ ಪಾತ್ರೆ ತೊಳೆಯಲು ಹೇಳಿದ್ದು ನೆನಪಾಗುತ್ತದೆ. ನಳದ ಹಿಡಿಕೆಯನ್ನು ಸ್ವಲ್ಪ ಬಲಕ್ಕೆ ತಿರುಗಿಸಿದಾಗ ತಕ್ಷಣ ಬರುವ ಬೆಚ್ಚನೆಯ ನೀರು ಅವಳಿಗೆ ಕೊಟ್ಟ ತಣ್ಣೀರಿನ ನೆನಪು ಮಾಡಿ ಕೊಡುತ್ತದೆ. ಹಿಂದಿನ ರಾತ್ರಿ ಸಿಂಕಿನಲ್ಲಿ ಬಿಸಿನೀರಿನಲ್ಲಿ ನೆನೆಸಿ ಇಟ್ಟ ಪಾತ್ರೆಗಳಿಂದ ಕೊಳೆ ಮತ್ತು ಜಿಗಿ ಸರಾಗವಾಗಿ ಹೋಗುವಾಗ ಕಟುಕಾದ ಹಂಚನ್ನು ಅವಳು ಇಟ್ಟಂಗಿ ಮತ್ತು ಇದ್ದಲಿನ ಚೂರಿನಿಂದ ಗೀಚಿಗೀಚಿ ಕೆರೆದದ್ದು ಜ್ಞಾಪಕಕ್ಕೆ ಬರುತ್ತದೆ. ಪಾಪ ಗಂಡ ಭಾಂಡೆ ತೊಳಿತಾನ ಅಂತ ನನ್ನ ಹೆಂಡತಿ harsh chemicals ಇಲ್ಲದಂತಹ Dawn Platinum ಪ್ರೀತಿಯಿಂದ ತಂದು ಕೊಟ್ಟಾಗ ನಿಂಗಮ್ಮನ ಸೆಲೆತ ಕೈಗಳು ನೆನಪಿಗೆ ಬರುತ್ತವೆ.

ನನ್ನ ಐಫೋನಿನಲ್ಲಿ Spotify Premiumನಲ್ಲಿ ಹಳೆಯ ಹಿಂದಿ ಹಾಗೂ ಕನ್ನಡ ಚಿತ್ರಗೀತೆಗಳನ್ನು Bluetooth ಮುಖಾಂತರ Bose speakerನಿಂದ ಕೇಳುತ್ತಾ ತನ್ಮಯನಾಗಿ ಪಾತ್ರೆ ತೊಳೆಯುವಾಗ ಅವಳು ಒಂದಾದ ಮೇಲೆ ಒಂದರಂತೆ ಐದಾರು ಮನೆಗಳ ಪಾತ್ರೆಗಳನ್ನು ಅವಸರದಲ್ಲಿ ತೊಳೆಯುತ್ತಿದ್ದ ದೃಶ್ಯ ಕಣ್ಮುಂದೆ ಬರುತ್ತದೆ. ನಾನು ಎಲ್ಲ ಪಾತ್ರೆಗಳನ್ನು ತೊಳೆದು ಬುಟ್ಟಿಯಲ್ಲಿ ಹಾಕಿದಾಗ ಜಗತ್ತನ್ನೇ ಗೆದ್ದಂತೆ ಹೆಂಡತಿಯ ಕಡೆ ನೋಡಿ ಪ್ರಶಂಸೆ ಅಪೇಕ್ಷಿಸುವಾಗ ಪಕ್ಕದ ಮನೆಯವರು ನಿಂಗಮ್ಮನಿಗೆ 'ನೀ ಈಗೀಗ ಯಾಕೊ ಸ್ವಚ್ಛ ತೊಳಿವಲ್ಲಿ ನೋಡವಾ, ಹಿಂಗಾದರ ಬಿಡಸಬೇಕಾಗತದ' ಎಂದು ಹೆದರಿಸಿದ್ದು ನೆನಪಾಗುತ್ತದೆ. ಇಲ್ಲಿ Minimum wage $15 ಆಗಲೆಂದು ಜನ ಪ್ರತಿಭಟಿಸುವಾಗ ಅರವತ್ತರ ಮುದುಕಿ ಕೆಮ್ಮು ನೆಗಡಿ, ಜ್ವರ ಬಂದರೂ, ಬಿಟ್ಟೂ ಬಿಡದಂತೆ ದುಡಿಯುವಾಗ, ಎರಡು ರೂಪಾಯಿ ಹೆಚ್ಚಿಗೆ ಕೊಡಲು ಜನ ಹಿಂದೇಟು ಹಾಕುತ್ತಿದ್ದದ್ದು ನೆನಪಾಗುತ್ತದೆ.

ಮೂಲಭೂತ ಪ್ರಶ್ನೆ ಏನೆಂದರೆ, ಈ ತರಹದ ಕೆಲಸ ಮಾಡುವವರ ಜೀವಕ್ಕೆ ಅಷ್ಟೆ ಬೆಲೆಯೇ? ನಾನು ಅಮೆರಿಕಕ್ಕೆ ಬಂದು ನಮ್ಮ ಕೆಲಸಗಳನ್ನು ನಾನೇ ಮಾಡದೆ ಹೋಗಿದ್ದರೆ ಇಷ್ಟೆಲ್ಲಾ ವಿಚಾರ ಮಾಡುತ್ತಿದ್ದೆನೇ? ಬಹುಶಃ ಇಲ್ಲ ಎನಿಸುತ್ತದೆ. ಆಧುನೀಕರಣದಿಂದ, ಹೊಸ ತಂತ್ರಜ್ಞಾನದಿಂದ ಆಗಿರುವ ಪ್ರಗತಿ ಅದ್ಭುತ. ವಾಶಿಂಗ್ ಮಶೀನ್ ಆಗಲಿ, ಡಿಶ್ ವಾಶರ್ ಆಗಲಿ ಅಥವಾ ಈಗ ಬರುತ್ತಿರುವ self driving ಕಾರುಗಳಾಗಲಿ, ನಮ್ಮ ಜೀವನವನ್ನು ಬಹಳ ಆರಾಮದಾಯಕ ಮಾಡಿವೆ.

ಉಳಿದಂತಹ ಇನ್ನೂ ಎಷ್ಟೋ ಕೆಲಸಗಳಿಗೆ, ನಾಲ್ಕು ಕಾಸಿಗೋಸ್ಕರ ತಮ್ಮ ದೇಹ ಹಾಗೂ ಜೀವವನ್ನು ತೇಯುವ ನಮ್ಮ ಸಹಜೀವಿಗಳ ಬಗ್ಗೆ ಸ್ವಲ್ಪ ಅನುಕಂಪ ಬೇಕಲ್ಲವೇ? ಆ ಭಾವನೆ ಬರಲು ದೇಶ ಬಿಟ್ಟು ಅಮೆರಿಕಕ್ಕೆ ಬಂದು ಇಪ್ಪತ್ತು ವರ್ಷಗಟ್ಟಲೆ ಪಾತ್ರೆ ತೊಳೆಯಬೇಕಾಗಬಾರದಿತ್ತು. ಆದರೆ ಹಿಂದಿಯಲ್ಲಿ ಒಂದು ಗಾದೆ ಇದೆ, ದೇರ್ ಆಯೆ ಪರ್ ದುರುಸ್ತ್ ಆಯೆ ಅಥವಾ ಆಂಗ್ಲ ಭಾಷೆಯಲ್ಲಿ Better late than never ಎನ್ನುವ ತರಹ ಈಗ ನಾನು ನಮ್ಮ ನಿಂಗಮ್ಮನನ್ನು ಹುಡುಕಲು ಹೊರಟಿರುವೆ. ಆಗಲೇ 60 ದಾಟಿದ್ದ ಅವಳು ಈಗ ಜೀವಂತ ಇರುವ ಸಾಧ್ಯತೆ ಕಡಿಮೆ. ಆದರೆ ಅವಳ ಮಕ್ಕಳು ಹಾಗೂ ಮೊಮ್ಮಕ್ಕಳನ್ನು ಹುಡುಕಿ ಅವರಿಗೆ ನನ್ನ ಧನ್ಯವಾದ ಹೇಳುವುದು ಮುಖ್ಯವಾಗಿದೆ. ಬರೀ ಬಾಯಿಮಾತಿನಿಂದ ಅರ್ಪಿಸುವ ಕೃತಜ್ಞತೆ ಬಹುಶಃ ಸಾಕಾಗಲಿಕ್ಕಿಲ್ಲ, ಅಲ್ಲವೇ? ನನ್ನ ಮಗ ನನಗೆ ಹೇಳಿದಂತೆ Even charity is selfish. You get something out of it. ಇನ್ನೊಬ್ಬರಿಗೆ ಸಹಾಯ ಮಾಡಿದಾಗ ಆಗುವ ತೃಪ್ತಿಯನ್ನು ಅಳೆಯಲು ಸಾಧ್ಯವಿಲ್ಲ. ಅವನು ಹೇಳುವುದು ಸರಿ ತಾನೇ?

ಅಮೆರಿಕದಲ್ಲಿರುವ ನನ್ನ ಅಣ್ಣ-ತಮ್ಮಂದಿರೇ (ಅಕ್ಕ-ತಂಗಿಯರೇ ದಯವಿಟ್ಟು ಕ್ಷಮಿಸಿ), ನೀವೂ ನನ್ನ ತರಹ ಭಾರತದಲ್ಲಿ ಸುಖದ ಜೀವನ ಕಳೆದು ಈಗ ಇಲ್ಲಿ ನಿಮ್ಮ ಮನೆಯಲ್ಲಿ ನಿಂಗಮ್ಮನ ಕೆಲಸ ಮಾಡುತ್ತಿರಬಹುದು. ನನ್ನವಳ ಹಾಗೆ ನಿಮ್ಮ ಹೆಂಡತಿಯರೂ ನೌಕರಿ ಜೊತೆಗೆ ಮಕ್ಕಳು, ಸ್ವಚ್ಛತೆ, ಅಡುಗೆ ಎಲ್ಲವನ್ನೂ ನಿಭಾಯಿಸುತ್ತಿರಬಹುದು. ನಮ್ಮ ಮಕ್ಕಳ ಹಾಗೆ ನಿಮ್ಮ ಮಕ್ಕಳೂ ಸೋಫಾದ ಮೇಲೆ ಅಥವಾ ತಮ್ಮ ರೂಮಿನಲ್ಲಿ ಕುಳಿತುಕೊಂಡು Xbox, Instagram, SnapChat, TikTok ನಲ್ಲಿ ಮಗ್ನರಾಗಿರಬಹುದು. ಆಗೀಗ ನಿಮ್ಮ ಮನಸಿನಲ್ಲೂ ನಿಮ್ಮ ನಿಂಗಮ್ಮ ಬರುತ್ತಿರಬಹುದು. ಅವಳು ಈಗ ಎಲ್ಲಿದ್ದಾಳೆ ಹಾಗೂ ಹೇಗಿದ್ದಾಳೆ?

ಇನ್ನು ಭಾರತದಲ್ಲಿರುವ ನನ್ನ ಆತ್ಮೀಯ ಅಣ್ಣಂದಿರೇ ಮತ್ತು ತಮ್ಮಂದಿರೇ, ನಿಮ್ಮ ಬದುಕು ಹಾಗೂ ಜೀವನಶೈಲಿ ಈಗ ಹೇಗಿದೆ ನನಗೆ ಪೂರ್ಣ ಅರಿವಿಲ್ಲ. ಆದರೆ ನಿಮ್ಮ ತಾಯಿ ಮತ್ತು ಅತ್ತೆಯವರು ಇರುವವರೆಗೆ ನೀವು ಪಾತ್ರೆ ತೊಳೆಯಲಿಕ್ಕಿಲ್ಲ ಎಂದು ಅನಿಸಿಕೆ. ನಿಮ್ಮದು ಅಂತಹ ಸುಖದ ಜೀವನವಾಗಿದ್ದರೆ ನಿಮ್ಮಲ್ಲೊಂದು ವಿನಂತಿ. ಇಂದು ರಾತ್ರಿ ಮಲಗುವ ಮುನ್ನ ಬುಟ್ಟಿಯಲ್ಲಿರುವ ಪಾತ್ರೆಗಳನ್ನು ಒಂದು ಸಾರಿ ನೋಡಿ. ಅವು ಒಣಗಿ ಕಟಿ ಕಟಿಯಾಗಿದ್ದರೆ, ಸ್ವಲ್ಪ ನೀರುಹಾಕಿ, ಸ್ವಲ್ಪ ನೆನೆಯಲಿ. ಕೃಷ್ಣ ಪರಮಾತ್ಮ ಹೇಳಿದಂತೆ 'ಕರ್ಮಣ್ಯೇ ವಾಧಿಕಾರಸ್ತೆ ಮಾ ಫಲೇಷು ಕದಾಚನ.....'

ಲೇಖಕ: ಅಮೆರಿಕದ ಬಾಸ್ಟನ್ ನಗರದ ನಿವಾಸಿ, ಹುಬ್ಬಳ್ಳಿ ಮೂಲ

ಬೆಳಕನಿಟ್ಟು ತೂಗಿದಾಕೆ

ಹಿಂದಿನ ಪುಟದಿಂದ...

ಪ್ರಕರಣದ ವಿಚಾರಣೆ ನಡೆಸಿದ ಕೋರ್ಟ್, ಬಾರ್‌ಗಳಲ್ಲಿ ಮಹಿಳೆಯರಿಗೆ ಉದ್ಯೋಗವನ್ನು ನಿರ್ಬಂಧಿಸುವ ಬದಲು, ಅಲ್ಲಿ ಅವರಿಗೆ ಸುರಕ್ಷತೆಯನ್ನು ಒದಗಿಸುವುದು ಸರ್ಕಾರದ ಕರ್ತವ್ಯ; ಜೊತೆಗೆ ಅವರು ಬಯಸುವ ವೃತ್ತಿಯಲ್ಲಿನ ಕರ್ತವ್ಯವನ್ನು ನಿಶ್ಚಿಂತೆಯಿಂದ ನಿಭಾಯಿಸಲು ಮಹಿಳೆಯರಲ್ಲಿ ದೃಢವಿಶ್ವಾಸವನ್ನು ತುಂಬುವುದು ಅವುಗಳ ಜವಾಬ್ದಾರಿ ಎಂದು ಅಭಿಪ್ರಾಯಪಟ್ಟು, ಆ ಕಾನೂನನ್ನು ಅನೂರ್ಜಿತಗೊಳಿಸಿತ್ತು. ಇದೇ ರೀತಿ 2018ರಲ್ಲಿ, ಮಹಿಳೆಯು ವಿವಾಹೇತರ ಸಂಬಂಧ ಹೊಂದಿದರೆ ಅದು ವ್ಯಭಿಚಾರ ಎನಿಸಿಕೊಳ್ಳುವುದಲ್ಲದೆ ಅಪರಾಧವಾಗಿದೆ ಎನ್ನುತ್ತಿದ್ದ ಭಾರತೀಯ ದಂಡ ಸಂಹಿತೆಯ (ಐಪಿಸಿ) ಸೆಕ್ಷನ್ ಅನ್ನು ಸುಪ್ರೀಂ ಕೋರ್ಟ್ ರದ್ದುಪಡಿಸಿತ್ತು. ಮದುವೆಯಾದ ಮಹಿಳೆಯ ವೈಯಕ್ತಿಕ ಅಸ್ತಿತ್ವವನ್ನೇ ಈ ವಿಧಿ ಅಲ್ಲಗಳೆಯುತ್ತದೆ. ಜೊತೆಗೆ ಮಹಿಳೆಯು ತನ್ನ ಗಂಡನ ಆಸ್ತಿ ಎನ್ನುವ ಸಾಮಾಜಿಕ ಪೂರ್ವಗ್ರಹವನ್ನು ಬಲಪಡಿಸುತ್ತದೆ ಎಂದು ತೀರ್ಪಿನಲ್ಲಿ ತಿಳಿಸಲಾಗಿತ್ತು.

ಶಬರಿಮಲೆ ಪ್ರಕರಣದಲ್ಲಿ, ದೇವಸ್ಥಾನದೊಳಗೆ ಮಹಿಳೆಯರ ಪ್ರವೇಶಕ್ಕೆ ಇದ್ದ ನಿರ್ಬಂಧವನ್ನು ಸುಪ್ರೀಂ ಕೋರ್ಟ್ ರದ್ದುಗೊಳಿಸಿತ್ತು. ಮಹಿಳೆಯರೆಂದರೆ ದುರ್ಬಲರು, ಅಪವಿತ್ರರು ಮತ್ತು ಕೀಳು ಮನುಷ್ಯರು ಎನ್ನುವ ಪೂರ್ವಗ್ರಹದ ಆಧಾರದ ಮೇಲೆ ಈ ನಿರ್ಬಂಧವನ್ನು ವಿಧಿಸಲಾಗಿತ್ತು ಎನ್ನುವುದನ್ನು ಈ ತೀರ್ಪಿನಲ್ಲಿ ಗುರುತಿಸಲಾಗಿತ್ತು.

ಘನತೆ, ಗೌರವದೊಂದಿಗೆ ಬದುಕುವ ಹಕ್ಕು ಸಾಕಾರಗೊಳ್ಳಲು, ಹೆಣ್ಣಿನ ಕುರಿತ ಪೂರ್ವಗ್ರಹಗಳನ್ನು ಸಂಪೂರ್ಣವಾಗಿ ಹೋಗಲಾಡಿಸಬೇಕು. ಜೊತೆಗೆ, ಇತ್ತೀಚಿನ ದಿನಗಳಲ್ಲಿ ನಮ್ಮ ವ್ಯವಸ್ಥೆಯು ಪುರುಷಪ್ರಧಾನ ಮನಃಸ್ಥಿತಿಗೆ ಮರಳುತ್ತಿರುವುದನ್ನು ಸಂವಿಧಾನ ನೀಡಿದ ಸಮಾನತೆಯ ಭರವಸೆಗೆ ವಿರುದ್ಧವಾಗಿಯೇ ಕಾಣಬೇಕು.

ಮಹಿಳೆ, ಅವಳು ಪತ್ನಿಯಾಗಿರಲಿ, ಅಕ್ಕ-ತಂಗಿಯಾಗಿರಲಿ ಅಥವಾ ಮಗಳಾಗಿರಲಿ ಇವರೆಲ್ಲರೂ ಅಧೀನದಲ್ಲಿದ್ದಾರೆ ಹಾಗೂ ಗುಲಾಮರು ಎನ್ನುವ ಆಧಾರದಲ್ಲೇ 'ಮರ್ಯಾದೆಗೇಡು ಹತ್ಯೆ'ಗಳು ನಡೆಯುತ್ತಿವೆ ಎಂದು ಸುಪ್ರೀಂ ಕೋರ್ಟ್ 2018ರಲ್ಲಿ ಹೇಳಿತ್ತು. 'ಸದಾ ಇಂತಹ ಚೌಕಟ್ಟಿನಲ್ಲಿ ಚಲಿಸುವ ವ್ಯಕ್ತಿಗಳು ಯಾವುದೇ ವೈಯಕ್ತಿಕ ಸ್ವಾತಂತ್ರ್ಯ, ಬಯಕೆ ಮತ್ತು ಅಸ್ತಿತ್ವವನ್ನು ಹೊಂದಿರುವುದಿಲ್ಲ' ಎಂದೂ ಅಭಿಪ್ರಾಯಪಟ್ಟಿತ್ತು. ಮರ್ಯಾದೆಗೇಡು ಹತ್ಯೆಗಳನ್ನು ತಡೆಗಟ್ಟಲು ಹಾಗೂ ಅಪರಾಧಿಗಳಿಗೆ ಶಿಕ್ಷೆ ವಿಧಿಸಲು ಸರಣಿ ನಿರ್ದೇಶನಗಳನ್ನೂ ನೀಡಿತ್ತು.

ಕಲೆ: ನಭಾ

ಸಂವಿಧಾನದಡಿ ರಕ್ಷಿಸಲ್ಪಡುವ ಜೀವಿಸುವ ಹಕ್ಕಿನಡಿ ಬರುವ ಸ್ವಾಯತ್ತತೆ ಎಂಬ ಮೂಲಭೂತ ಹಕ್ಕಿನ ಕುರಿತು ಸುಪ್ರೀಂ ಕೋರ್ಟ್ ತನ್ನ ಇತ್ತೀಚಿನ ಹಲವು ತೀರ್ಪುಗಳಲ್ಲಿ ದೀರ್ಘವಾದ ವಿವರಣೆಯನ್ನು ನೀಡಿತ್ತು. ಅದರಲ್ಲಿ ಹಾದಿಯಾ ಪ್ರಕರಣದ (ಶಫಿ ಜಹಾನ್ ವಿರುದ್ಧ ಕೆ.ಎಂ.ಅಶೋಕನ್) ತೀರ್ಪು ಗಮನಾರ್ಹವಾದುದು. ಈ ಪ್ರಕರಣದಲ್ಲಿ ಕೇರಳ ಹೈಕೋರ್ಟ್ ಮದುವೆಯನ್ನೇ ಅನೂರ್ಜಿತಗೊಳಿಸಿತ್ತು. ತಾನಾಗಿಯೇ ಯಾವುದೇ ನಿರ್ಧಾರವನ್ನು ಕೈಗೊಳ್ಳಲು ಆಕೆ ಅಶಕ್ತೆ. ಪಾಲಕರೇ ಅವಳ ಭವಿಷ್ಯದ ತೀರ್ಮಾನವನ್ನು ಮಾಡಬೇಕು ಎಂದು ಅಭಿಪ್ರಾಯಪಟ್ಟಿತ್ತು. ಈ ಆದೇಶವನ್ನು ಸುಪ್ರೀಂ ಕೋರ್ಟ್ ರದ್ದುಗೊಳಿಸಿತ್ತು. ವೈಯಕ್ತಿಕ ಘನತೆಯ ಮೂಲದಲ್ಲಿ ವ್ಯಕ್ತಿಯ ಸ್ವಾಯತ್ತತೆ ಇದೆ ಎಂದು ಉಲ್ಲೇಖಿಸಿತ್ತು. ಪ್ರೀತಿಸಲು ಮಹಿಳೆಗೆ ಇರುವ ಹಕ್ಕನ್ನು ನಿರ್ಬಂಧಿಸುವ ಪ್ರಯತ್ನಗಳಿಗೂ ಸುಪ್ರೀಂ ಕೋರ್ಟ್ ಚಾಟಿ ಬೀಸಿತ್ತು. ಈ ಹಕ್ಕನ್ನು ನಿರ್ಬಂಧಿಸುವುದು ಪುರುಷಪ್ರಧಾನ ರೂಢಿಯ ಮೂಲ ಹಾಗೂ ಮಹಿಳೆಯರು ಗುಲಾಮರು ಮತ್ತು ಅವರನ್ನು ನಿಯಂತ್ರಿಸಬೇಕು ಎನ್ನುವ ನಂಬಿಕೆಯೇ ಮೂಲ ಎಂದು ಹೇಳಿತ್ತು.

ಇಷ್ಟೆಲ್ಲ ತೀರ್ಪುಗಳ ಬಲ, ಶಿಕ್ಷೆಯ ನಡುವೆಯೂ ದಿನನಿತ್ಯ ಅತ್ಯಾಚಾರ, ಮರ್ಯಾದೆಗೇಡು ಹತ್ಯೆ ಪ್ರಕರಣಗಳು ವರದಿಯಾಗುತ್ತಲೇ ಇವೆ. ಇಂತಹ ಗಂಭೀರ ವಿಷಯಗಳ ಕುರಿತು ಸರ್ಕಾರಗಳು ಕ್ರಮ ಕೈಗೊಳ್ಳುತ್ತಿಲ್ಲ. ಬದಲಾಗಿ ಮರ್ಯಾದೆಗೇಡು ಹತ್ಯೆಗಳನ್ನು ಎತ್ತಿಹಿಡಿಯುವಂತಹ 'ಖಾಪ್ ಪಂಚಾಯಿತಿ'ಯಂತೆ ಪಾತ್ರವಹಿಸುತ್ತಿವೆ. ಇತ್ತೀಚೆಗೆ ಉತ್ತರ ಪ್ರದೇಶ ಸರ್ಕಾರವು ಧಾರ್ಮಿಕ ಮತಾಂತರ ತಡೆ ಸುಗ್ರೀವಾಜ್ಞೆ 2020 ಜಾರಿಗೆ ತಂದಿದ್ದು, ಪ್ರೀತಿಯನ್ನು ಅಪರಾಧ ಎನ್ನುವಂತೆ ಬಿಂಬಿಸಿದೆ. ಜೊತೆಗೆ ಇದು ವೈಯಕ್ತಿಕ ಸ್ವಾಯತ್ತತೆಯ ಮೇಲಿನ ದಾಳಿಯಾಗಿದೆ. ಇಂತಹ ಕಾನೂನನ್ನು ಕರ್ನಾಟಕದಲ್ಲೂ ಜಾರಿಗೊಳಿಸಲು ಇಲ್ಲಿನ ಸರ್ಕಾರ ಉತ್ಸುಕವಾಗಿದೆ.

ಘನತೆಯಿಂದ ಕೆಲಸ ಮಾಡುವ ಹಕ್ಕು: ಘನತೆಯಿಂದ ಬದುಕುವ ಹಕ್ಕಿನ ಪರಿಧಿಯಲ್ಲೇ ಘನತೆಯಿಂದ ಕೆಲಸ ಮಾಡುವ ಹಕ್ಕು ಸಹ ಸೇರಿದ್ದು, 'ವಿಶಾಖಾ ವಿರುದ್ಧ ರಾಜಸ್ಥಾನ ಸರ್ಕಾರ' ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿದ ತೀರ್ಪು ಇದನ್ನು ಅತ್ಯಂತ ಸ್ಪಷ್ಟವಾಗಿ ಎತ್ತಿತೋರಿದೆ. ಈ ಪ್ರಕರಣಕ್ಕೆ ಸಂಬಂಧಿಸಿದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಅಷ್ಟೊಂದು ತ್ವರಿತವಾಗಿ ಪರಿಗಣಿಸಲು ಕಾರಣ, ಆಗಷ್ಟೇ ನಡೆದಿದ್ದ ದಲಿತ ಮಹಿಳೆ ಭನ್ವರಿ ದೇವಿ ಅವರ ಮೇಲೆ ನಡೆದ ಕ್ರೂರ ಸಾಮೂಹಿಕ ಅತ್ಯಾಚಾರ ಪ್ರಕರಣ. ಪ್ರಬಲ ಕೋಮಿನ ಬಾಲ್ಯವಿವಾಹವನ್ನು ತಡೆದ ತಪ್ಪಿಗೆ, ಆ ಕೋಮಿನ ಪುರುಷರು ಸಾಮೂಹಿಕ ಅತ್ಯಾಚಾರ ನಡೆಸಿದ್ದಲ್ಲದೆ ಅವರ ಗಂಡನ ಮೇಲೆ ಹಲ್ಲೆಯನ್ನೂ ಮಾಡಿದ್ದರು. ಈ ಘಟನೆಯು ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳದ ವಿಷಯವನ್ನು ಮುಂಚೂಣಿಗೆ ತಂದಿತ್ತು.

ವಿಶಾಖಾ ಪ್ರಕರಣದಲ್ಲಿ, ಈ ರೀತಿಯ ಪ್ರತಿಯೊಂದು ಘಟನೆಯೂ ಸಂವಿಧಾನದತ್ತ ಮೂಲಭೂತ ಹಕ್ಕುಗಳಾದ 'ಲಿಂಗ ಸಮಾನತೆ' ಹಾಗೂ ಬದುಕುವ ಮತ್ತು ಸ್ವಾತಂತ್ರ್ಯದ ಹಕ್ಕುಗಳ ಸ್ಪಷ್ಟ ಉಲ್ಲಂಘನೆ ಎಂದು ಸುಪ್ರೀಂ ಕೋರ್ಟ್ ಗುರುತಿಸಿದೆ. ಘನತೆಯಿಂದ ಕೆಲಸ ಮಾಡುವ ಹಕ್ಕು ಮತ್ತು ಲೈಂಗಿಕ ಕಿರುಕುಳದಿಂದ ರಕ್ಷಣೆ – ಇವುಗಳಿಂದ ಮಾತ್ರ ಲಿಂಗ ಸಮಾನತೆಯನ್ನು ಸಾಧಿಸಬಹುದು ಎಂಬ ನಿಲುವು ತಾಳಿದ ಕೋರ್ಟ್, ಕೆಲಸದ ಸ್ಥಳದಲ್ಲಿ ಮಹಿಳೆಯರ ರಕ್ಷಣೆಯನ್ನು ಖಚಿತಪಡಿಸಿಕೊಳ್ಳಲು ಸರಣಿ ಮಾರ್ಗಸೂಚಿಗಳನ್ನು ಹೊರಡಿಸಿದೆ.

ವಿಪರ್ಯಾಸವೆಂದರೆ, ದಲಿತ ಮಹಿಳೆಯ ಹೋರಾಟದಿಂದಾಗಿಯೇ 'ವಿಶಾಖಾ ಪ್ರಕರಣ'ದಲ್ಲಿ ಮಹತ್ವದ ತೀರ್ಪು ಬಂದರೂ ಅದರ ಪ್ರಯೋಜನ ದೇಶದ ಬಹುಪಾಲು ಮಹಿಳೆಯರಿಗೆ, ಅದರಲ್ಲೂ ದಲಿತ ಮಹಿಳೆಯರಿಗೆ ಸಿಗದಂತಾಗಿರುವುದು. ವೃತ್ತಿಗೆ ಸಂಬಂಧಿಸಿದ ತಾರತಮ್ಯದ ನೋಟವೇ ಇಂತಹ ತೀರ್ಪುಗಳಿಗೆ ಕಾರಣ. ದೇಶದಲ್ಲಿ ಶೇ 94ರಷ್ಟು ಹೆಚ್ಚು ಮಹಿಳಾ ಉದ್ಯೋಗಿಗಳು ಅಸಂಘಟಿತರಾಗಿದ್ದಾರೆ. ಪೌರಕಾರ್ಮಿಕರು, ಗಾರ್ಮೆಂಟ್ಸ್ ಕಾರ್ಮಿಕರು ಮತ್ತು ಮನೆಗೆಲಸದವರು ಸೇರಿದಂತೆ ವಿವಿಧ ವಲಯಗಳಲ್ಲಿ ಅವರು 'ಅದೃಶ್ಯ'ರಾಗಿ ಇದ್ದಾರೆ. ಈ ಕಾರ್ಮಿಕರು, ಮಹಿಳೆಯರು, ತುಳಿತಕ್ಕೊಳಗಾದ ವರ್ಗಗಳಿಗೆ ಸೇರಿದವರು ಮತ್ತು ಹೆಚ್ಚಾಗಿ ತುಳಿತಕ್ಕೊಳಗಾದ ಸಮುದಾಯಗಳಿಗೆ ಸೇರಿದವರಾಗಿದ್ದು ಮೂರು ಆಯಾಮಗಳಿಂದಲೂ ದಬ್ಬಾಳಿಕೆಗೆ ಒಳಗಾಗುತ್ತಿದ್ದಾರೆ.

ಮಹಿಳಾ ಕಾರ್ಮಿಕರ ಕೆಲಸದ ವಾತಾವರಣ ನೋಡಿ. ಅವರಿಗೆ ಅಧಿಕೃತವಾಗಿ ಸಿಗಬೇಕಾದಷ್ಟು ಕನಿಷ್ಠ ವೇತನವೂ ಸಿಗುವುದಿಲ್ಲ. ಕೆಲಸದ ಸಮಯ ದೀರ್ಘವಾಗಿರುತ್ತದೆ. ಸುರಕ್ಷತೆ ಇರುವುದಿಲ್ಲ. ಲೈಂಗಿಕ ಕಿರುಕುಳ ಕೂಡ ಸಾಮಾನ್ಯವಾಗಿರುತ್ತದೆ. ಘನತೆಯಿಂದ ಕೆಲಸ ಮಾಡುವ ಅವರ ಹಕ್ಕನ್ನು ದಶಕಗಳಿಂದಲೂ ಕಸಿಯುತ್ತಾ ಬರಲಾಗಿದೆ.

ಸ್ಟೀಲ್ ಅಥಾರಿಟಿ ಆಫ್ ಇಂಡಿಯಾ ವಿರುದ್ಧ ನ್ಯಾಷನಲ್ ಯೂನಿಯನ್ ಆಫ್ ವಾಟರ್‌ಫ್ರಂಟ್ ವರ್ಕರ್ಸ್ (2001) ಹಾಗೂ ಕರ್ನಾಟಕ ಸರ್ಕಾರದ ಕಾರ್ಯದರ್ಶಿ ವಿರುದ್ಧ ಉಮಾದೇವಿ (2006) ಪ್ರಕರಣಗಳಲ್ಲಿ ಸುಪ್ರೀಂ ಕೋರ್ಟ್ ನೀಡಿದ ಎರಡು ಆದೇಶಗಳು ಲಕ್ಷಾಂತರ ಗುತ್ತಿಗೆ ಹಾಗೂ ದೈನಂದಿನ ಕೂಲಿ ಕಾರ್ಮಿಕರ ಪಾಲಿಗೆ 'ಶಿಕ್ಷೆ' ಎನಿಸಿದವು. ಅವರ ಸಾಂಸ್ಥಿಕ ಶೋಷಣೆಗೂ ದಾರಿ ಮಾಡಿಕೊಟ್ಟವು. ಈ ಎರಡೂ ತೀರ್ಪುಗಳು, ಮಹಿಳೆಯರ ದೃಷ್ಟಿಕೋನದಿಂದ ತೀರ್ಪುಗಳೇ ಅಲ್ಲ, ಭಾರತದ ಮಹಿಳಾ ಉದ್ಯೋಗ ಬಲದ ಮೇಲೆ ಗಂಭೀರವಾದ ಪರಿಣಾಮವನ್ನೂ ಬೀರಿದವು. ಘನತೆಯಿಂದ ಕೂಡಿರದ ಕೆಲಸದ ವಾತಾವರಣದ ಕುರಿತು ಅವರು ಧ್ವನಿ ಎತ್ತದಂತೆ ಮಾಡಿದವು. ಅದರ ಪರಿಣಾಮವೇ ಸಾಮಾಜಿಕ ಹಾಗೂ ಆರ್ಥಿಕವಾಗಿ ಅವರು ಪ್ರಗತಿ ಸಾಧಿಸಲಾಗದೆ, ಇದ್ದಲ್ಲೇ ಉಳಿಯುವಂತಾಯಿತು.

ಭಾರತೀಯ ಸಮಾಜವು ಹೆಣ್ಣನ್ನು ಲಿಂಗ ತಾರತಮ್ಯದಿಂದ ನೋಡುತ್ತದೆ. ಪೂರ್ವಗ್ರಹಗಳು, ದಬ್ಬಾಳಿಕೆ ಮನೋಭಾವಗಳು ತುಂಬಿಹೋಗಿವೆ. ಒಡೆದು ಹೋಗಿರುವ ಸಮಾಜವನ್ನು ಸ್ವಾತಂತ್ರ್ಯ, ಸಮಾನತೆ ಹಾಗೂ ಭ್ರಾತೃತ್ವದ ಆಧಾರದ ಮೇಲೆ ಒಂದುಗೂಡಿಸುವ ಆಶಯವನ್ನು ಸಂವಿಧಾನ ಹೊಂದಿದೆ. ಸಂವಿಧಾನದ ಈ ಆಶಯಗಳನ್ನು ಅನುಷ್ಠಾನಕ್ಕೆ ತರುವುದೆಂದರೆ ಆಳವಾಗಿ ಬೇರೂರಿರುವ ಶ್ರೇಣೀಕೃತ ವ್ಯವಸ್ಥೆಗೆ ಸವಾಲು ಹಾಕುವುದು. ಈ ಶ್ರೇಣೀಕೃತ ವ್ಯವಸ್ಥೆ ಲಿಂಗ, ವರ್ಗ ಹಾಗೂ ಜಾತಿ ತಾರತಮ್ಯ ಎಲ್ಲದರಲ್ಲೂ ಹರಡಿದೆ. ಮಹಿಳೆಯು ಸಮಾನತೆ ಸಾಧಿಸುವಂತಾಗಲು ಆಕೆ ಇದುವರೆಗೆ ಎದುರಿಸುತ್ತಾ ಬಂದಿರುವ ಲಿಂಗ, ವರ್ಗ ಹಾಗೂ ಜಾತಿ ತಾರತಮ್ಯ –ಮೂರಕ್ಕೂ ಸುಪ್ರೀಂ ಕೋರ್ಟ್ ಮದ್ದು ಅರೆಯಬೇಕಿದೆ. ಶಬರಿಮಲೆ ದೇವಸ್ಥಾನದ ಪ್ರವೇಶಕ್ಕೆ ಕೋರ್ಟ್ ಏನೋ ಮಹಿಳೆಯರಿಗೆ ಅವಕಾಶ ಕಲ್ಪಿಸಿತು. ಆದರೆ, ಕೋರ್ಟ್ ಆದೇಶವನ್ನೇ ರಾಜಾರೋಷವಾಗಿ ಉಲ್ಲಂಘಿಸಲಾಯಿತು. ಅಲ್ಲದೆ, ಅದರ ವಿರುದ್ಧ ಕೋರ್ಟ್‌ಗಳು ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಕೋರ್ಟ್ ಆದೇಶಗಳು ಸರಿಯಾಗಿ ಪಾಲನೆಯಾಗಲು ಸರ್ಕಾರ ಹಾಗೂ ಜನರ ಇಚ್ಛಾಶಕ್ತಿಯೂ ಮುಖ್ಯ. ಆದ್ದರಿಂದಲೇ ಚಳವಳಿಗಳು, ಹೋರಾಟಗಳು ಸಾಮಾಜಿಕ ಪರಿವರ್ತನೆಯನ್ನು ತಂದು, ನೈಜ ಪ್ರಜಾಪ್ರಭುತ್ವ ಸಮಾಜ ನಿರ್ಮಿಸುವ ಶಕ್ತಿ ಹೊಂದಿವೆ ಎಂಬುದನ್ನು ಒತ್ತಿ ಹೇಳಬೇಕಿದೆ.

'ಬೇಕು ಲಿಂಗ ಸಂವೇದನೆಗೆ ಪೂರಕವಾದ ಪಠ್ಯಕ್ರಮ'

ಶ್ರುತಿ ಬಿ.ಆರ್, ಕವಯಿತ್ರಿ, ಕೆಎಎಸ್ ಅಧಿಕಾರಿ, ಮೈಸೂರು

ಸ್ತ್ರೀ ಅಸ್ಮಿತೆ ಎಂಬುದು ಹೆಣ್ಣು ಸಹ ತನ್ನ ಅಭಿಪ್ರಾಯ ಮತ್ತು ಅಪೇಕ್ಷೆಯಂತೆ ನಡೆಯಬಹುದೆಂಬ ಪ್ರಜ್ಞೆಯಾಗಿದೆ. ಕೌಟುಂಬಿಕ, ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯವಾಗಿ ಮಹಿಳೆ ಹೊಂದಿರುವ ಸ್ಥಾನಮಾನವೂ ಅವಳ ಅಸ್ಮಿತೆಯ ಪ್ರತೀಕ. ಹೆಣ್ಣು ಮನೆಯಿಂದ ಹೊರಗೆ ಕಾಲಿಡಲು ಸಾಧ್ಯವಿಲ್ಲದ ಕಾಲವೊಂದಿತ್ತು. ಅಂತರಿಕ್ಷಕ್ಕೂ ಹಾರುವ ಅವಕಾಶವಿರುವ ಆಧುನಿಕ ಪ್ರಪಂಚದಲ್ಲಿ ನಾವಿದ್ದೇವೆ. ಯಾವುದೇ ರಂಗದಲ್ಲೂ ಮಹಿಳೆ, ಪುರುಷನಿಗೆ ಸಮನಾಗಿ ಕೆಲವೊಮ್ಮೆ ಪುರುಷನಿಗೂ ಮಿಗಿಲಾಗಿ ಕೆಲಸ ಮಾಡಬಲ್ಲಳೆಂಬುದು ಸಾಬೀತಾದ ಕಾಲಘಟ್ಟವಿದು. ಆದರೂ ಸ್ತ್ರೀ ಅಸ್ಮಿತೆಗೆ ಧಕ್ಕೆ ತರುವ ಹಲವಾರು ಅಂಶಗಳು ಇಂದಿಗೂ ಜ್ವಲಂತವಾಗಿವೆ.

ಮಹಿಳೆಯರು, ಜಾತಿವಾರು ಗುಂಪುಗಳಷ್ಟು ಪ್ರಬಲ ಒತ್ತಡ ಗುಂಪಾಗಿ ಒಟ್ಟಾಗದಿರುವುದು, ಅತ್ಯಾಚಾರ, ಲೈಂಗಿಕ ಕಿರುಕುಳದಂತಹ ಸಮಸ್ಯೆಗಳಿಂದ ಮಹಿಳೆಯರನ್ನು ರಕ್ಷಿಸಲು ಪ್ರಬಲವಾದ ಕಾನೂನುಗಳನ್ನು ತರುವಲ್ಲಿ ಶಾಸಕಾಂಗ ಇಚ್ಛಾಶಕ್ತಿ ಪ್ರದರ್ಶಿಸದಿರಲು ಕಾರಣವಾಗಿದೆ. ಮಹಿಳೆಯರ ನಿಜವಾದ ರಾಜಕೀಯ ಸಹಭಾಗಿತ್ವ, ಪ್ರಾತಿನಿಧ್ಯ ಹೆಚ್ಚಾಗಬೇಕು. 2020ರ ಲಾಕ್‌ಡೌನ್ ಸಂದರ್ಭದಲ್ಲಿ ಕೌಟುಂಬಿಕ ಹಿಂಸೆ ಪ್ರಕರಣಗಳು ದುಪ್ಪಟ್ಟಾಗಿದ್ದನ್ನು ರಾಷ್ಟ್ರೀಯ ಮಹಿಳಾ ಆಯೋಗದ ತಜ್ಞರ ವರದಿ ಎತ್ತಿ ತೋರಿತ್ತು. ಕೌಟುಂಬಿಕ ಹಿಂಸೆಯು ಮಾನಸಿಕ ಮತ್ತು ದೈಹಿಕವಾಗಿ ಗಾಸಿಗೊಳಿಸಿ ಆತ್ಮವಿಶ್ವಾಸವನ್ನು ಕುಗ್ಗಿಸುತ್ತದೆ. ಬಾಲ್ಯದಿಂದಲೇ ಹೆಣ್ಣು ಮತ್ತು ಗಂಡು ಮಕ್ಕಳಿಬ್ಬರಲ್ಲೂ ಲಿಂಗ ಸಂವೇದನೆಯನ್ನು (Gender sensitivity) ಬೆಳೆಸಲು ಪೂರಕವಾದ ಪಠ್ಯಕ್ರಮಗಳನ್ನು ರೂಪಿಸುವುದು ಇಂದಿನ ಜರೂರು.

ಮುನ್ನೋಟ 07-03-2021 ರಿಂದ 13-03-2021

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — **ಅಶ್ವಿನಿ, ಭರಣಿ, ಕೃತ್ತಿಕಾ 1**
ಕೆಲಸ ಕಾರ್ಯಗಳಿಂದ ಬಿಡುವು ಮಾಡಿಕೊಂಡು ಸಂತೋಷದಿಂದ ಕಾಲ ಕಳೆಯುವಿರಿ. ಮನೆಯನ್ನು ಕಟ್ಟುತ್ತಿರುವವರು ಕೆಲಸ ಪೂರ್ಣಗೊಂಡು ನೆಮ್ಮದಿ ಕಾಣುವರು. ಅಪರಿಚಿತ ವ್ಯಕ್ತಿಗಳಿಂದ ನಿಮಗೆ ಸಹಾಯ ದೊರೆಯುತ್ತದೆ. ಆಸ್ತಿ ಖರೀದಿಮಾಡುವ ಸಾಧ್ಯತೆ ಇದೆ. ಮಕ್ಕಳ ವಿವಾಹದ ವಿಷಯದಲ್ಲಿ ಪ್ರಗತಿಯನ್ನು ಕಾಣಬಹುದು. ಸಾಲದಿಂದ ಮುಕ್ತಿ ಹೊಂದಬಹುದು.

ವೃಷಭ — **ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2**
ಹೊಸದಾಗಿ ಆರಂಭಿಸಬೇಕೆಂದು ಇರುವ ಯೋಜನೆಗಳ ಬಗ್ಗೆ ಸರಿಯಾಗಿ ತಿಳಿದುಕೊಳ್ಳಿ ಹಾಗೂ ಅದರಲ್ಲಿನ ಆಗು ಹೋಗುಗಳ ಬಗ್ಗೆ ಅರಿವು ಮೂಡಿಸಿಕೊಳ್ಳಿರಿ. ಆರ್ಥಿಕ ಸ್ಥಿತಿಯು ನಿಧಾನವಾಗಿ ಸುಧಾರಿಸುತ್ತದೆ. ವಿದೇಶಾಂಗ ಇಲಾಖೆಗಳಲ್ಲಿ ಕೆಲಸಮಾಡುವವರ ಭತ್ಯೆಗಳು ಹೆಚ್ಚಾಗಬಹುದು. ಪ್ರವಾಸಿ ಸಂಸ್ಥೆಗಳನ್ನು ನಡೆಸುತ್ತಿರುವವರ ಆದಾಯ ನಿಧಾನವಾಗಿ ಏರುತ್ತದೆ.

ಮಿಥುನ — **ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3**
ರಾಜಕೀಯ ಕ್ಷೇತ್ರದಲ್ಲಿರುವವರಿಗೆ ತುರ್ತು ಕೆಲಸಗಳು ಎದುರಾಗುವ ಸಾಧ್ಯತೆ ಇದೆ ಹಾಗೂ ಅನಿವಾರ್ಯ ಪ್ರಯಾಣಗಳು ಒದಗಿ ಬರಬಹುದು. ಕೆಲವು ರಾಜಕೀಯ ವ್ಯಕ್ತಿಗಳಿಗೆ ತಮ್ಮ ಪ್ರಭಾವವನ್ನು ಹೆಚ್ಚಿಸಿಕೊಳ್ಳುವ ಅವಕಾಶವಿರುತ್ತದೆ. ಅನಿರೀಕ್ಷಿತ ಆದಾಯ ಮತ್ತು ಖರ್ಚುಗಳು ಆಗಬಹುದು. ತಂದೆಯಿಂದ ಸಾಕಷ್ಟು ಧನ ಸಹಾಯ ನಿರೀಕ್ಷಿಸಬಹುದು. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಪ್ರಗತಿ ಇರುತ್ತದೆ.

ಕಟಕ — **ಪುನರ್ವಸು 4 ಪುಷ್ಯ, ಆಶ್ಲೇಷ**
ಹೊಸ ಉದ್ಯಮ ಪ್ರಾರಂಭಕ್ಕೆ ಇದು ಉತ್ತಮ ಕಾಲ. ಮಹಿಳೆಯರು ತಮ್ಮ ವ್ಯವಹಾರಗಳನ್ನು ಅನ್ಯರಿಗೆ ವಹಿಸುವುದು ಬೇಡ, ಹೀಗೆ ಮಾಡಿದಲ್ಲಿ ವ್ಯವಹಾರದ ಮೇಲಿನ ಹಿಡಿತವನ್ನು ಕಳೆದುಕೊಳ್ಳುವಿರಿ. ವಕೀಲಿ ವೃತ್ತಿಯನ್ನು ಮಾಡುತ್ತಿರುವವರಿಗೆ ವೃತ್ತಿಯಲ್ಲಿನ ಹೆಚ್ಚಿನ ಒತ್ತಡವನ್ನು ತಡೆದುಕೊಳ್ಳಲು ವಿಶ್ರಾಂತಿ ಅಗತ್ಯ. ಧಾರ್ಮಿಕ ಕಾರ್ಯಕ್ರಮಗಳನ್ನು ಸಂಘಟಿಸಿ ಸಂತೋಷವನ್ನು ಕಾಣುವಿರಿ.

ಸಿಂಹ — **ಮುಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1**
ಆಭರಣ ತಯಾರಕರಿಗೆ ಹೆಚ್ಚಿನ ತಯಾರಿಕೆಗಾಗಿ ಹೊಸ ಖರೀದಿ ಆದೇಶಗಳು ದೊರೆಯಬಹುದು. ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಸಾಕಷ್ಟು ನಿಗಾವಹಿಸುವುದು ಬಹಳ ಉತ್ತಮ. ಕೃಷಿ ಭೂಮಿಯನ್ನು ಕೊಳ್ಳುವ ಯೋಗವಿದೆ. ಪಾಲುದಾರಿಕೆ ವ್ಯವಹಾರದಲ್ಲಿ ಸ್ವಲ್ಪ ಜಿಜ್ಞಾಸೆಗಳು ಮೂಡಿ ಹಿಂಜರಿಕೆಯನ್ನು ಕಾಣಬಹುದು. ವಿದ್ಯಾರ್ಥಿಗಳ ಶ್ರಮ ಸಫಲವಾಗಿ ಉತ್ತಮ ಫಲಿತಾಂಶವನ್ನು ಕಾಣಬಹುದು.

ಕನ್ಯಾ — **ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2**
ಜಮೀನಿನಲ್ಲಿ ಕೃಷಿ ಕಾರ್ಯಗಳನ್ನು ಭರದಿಂದ ಮಾಡುವಿರಿ. ಹಣಕಾಸು ಸಂಸ್ಥೆಗಳ ಸಾಲಗಳನ್ನು ತೀರಿಸಬಹುದು. ಹಿರಿಯರ ಆರೋಗ್ಯದ ವಿಚಾರದಲ್ಲಿ ಹೆಚ್ಚಿನ ಕಾಳಜಿ ಅಗತ್ಯ. ಶಿಕ್ಷಣ ಕ್ಷೇತ್ರದಲ್ಲಿರುವವರು ತಮ್ಮ ಸೇವೆಗಾಗಿ ಗುರುತಿಸಲ್ಪಡುವರು. ಅವರಿವರ ಏಳಿಗೆಯ ಬಗ್ಗೆ ಅಸಹನೆ ಪಡುವುದನ್ನು ಬಿಟ್ಟು ನಿಮ್ಮ ಏಳಿಗೆಯ ಬಗ್ಗೆ ಚಿಂತಿಸಿರಿ. ನಿಮ್ಮ ಮಕ್ಕಳಿಂದ ನೀವು ಧನಸಹಾಯ ನಿರೀಕ್ಷಿಸಬಹುದು.

ತುಲಾ — **ಚಿತ್ತಾ 3,4 ಸ್ವಾತಿ, ವಿಶಾಖೆ 1,2,3**
ಹೊಸ ಆಸ್ತಿಯನ್ನು ಖರೀದಿ ಮಾಡುವಾಗ ದಾಖಲಾತಿಗಳ ಬಗ್ಗೆ ಸಾಕಷ್ಟು ಗಮನ ವಹಿಸಿರಿ, ಮೋಸ ಹೋಗುವ ಸಾಧ್ಯತೆಯಿದೆ. ವೈಯಕ್ತಿಕ ವಿಚಾರಗಳಿಗೆ ಸಾಕಷ್ಟು ಗಮನಹರಿಸಬೇಕಾದ ಅನಿವಾರ್ಯತೆ ಇದೆ. ಆರ್ಥಿಕ ಸ್ಥಿತಿಯು ಅಗತ್ಯಕ್ಕೆ ತಕ್ಕಷ್ಟು ಇರುತ್ತದೆ. ಕೈಕೆಳಗಿನ ಕೆಲಸಗಾರರ ಜೊತೆ ಸಾಕಷ್ಟು ಹೊಂದಾಣಿಕೆ ಮಾಡಿಕೊಳ್ಳಲೇಬೇಕಾದ ಅನಿವಾರ್ಯತೆ ಇದೆ. ವಿದ್ಯಾರ್ಥಿಗಳಿಗೆ ಉತ್ತಮ ಸಾಧನೆ ಮಾಡುವ ಕಾಲ.

ವೃಶ್ಚಿಕ — **ವಿಶಾಖೆ 4 ಅನೂರಾಧ, ಜ್ಯೇಷ್ಠ**
ಗೃಹಾಲಂಕಾರ ವಸ್ತುಗಳನ್ನು ಖರೀದಿ ಮಾಡುವಿರಿ. ತಾಯಿಯ ಇಚ್ಛೆಯನ್ನು ಪೂರೈಸಲು ಅವರು ಆಸೆಪಟ್ಟ ವಸ್ತುಗಳನ್ನು ಕೊಡಿಸುವಿರಿ. ವೃತ್ತಿ ಕ್ಷೇತ್ರದಲ್ಲಿನ ಸಮಸ್ಯೆಗಳಿಗೆ ಆಲೋಚಿಸಿ ಪರಿಹಾರವನ್ನು ಕಂಡುಕೊಳ್ಳುವಿರಿ. ವ್ಯವಹಾರಗಳಲ್ಲಿ ಹೊಸತನವನ್ನು ತರಲು ಸಾಕಷ್ಟು ಪ್ರಯತ್ನ ಮಾಡುವಿರಿ.

ಧನುಸ್ಸು — **ಮೂಲ, ಪೂರ್ವಾಷಾಢ, ಉತ್ತರಾಷಾಢ 1**
ತುರ್ತು ವಿಷಯಗಳಿಗಾಗಿ ಸಂಬಂಧಿಕರ ನೆರವನ್ನು ಪಡೆಯುವಿರಿ. ಗಣಕಯಂತ್ರಗಳು ಮತ್ತು ಅದರ ಬಿಡಿಭಾಗಗಳನ್ನು ಮಾರುವವರಿಗೆ ವ್ಯಾಪಾರದಲ್ಲಿ ಅಭಿವೃದ್ಧಿ ಇದೆ. ನಿಂತಿದ್ದ ಹಣ ಈಗ ಬರಲು ಆರಂಭಿಸುತ್ತದೆ. ಆರ್ಥಿಕ ಸಮಸ್ಯೆಗಳಿಗೆ ಪರಿಹಾರ ದೊರೆತು ಈಗ ಸುಭದ್ರತೆಯತ್ತ ಸಾಗುತ್ತದೆ. ನಿಮ್ಮ ಪರಿಶ್ರಮದಿಂದ ಉದ್ಯೋಗದಲ್ಲಿ ಸಾಕಷ್ಟು ಯಶಸ್ಸನ್ನು ಕಾಣಬಹುದು.

ಮಕರ — **ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2**
ಸ್ತ್ರೀಯರಿಗೆ ಉನ್ನತ ಸ್ಥಾನಮಾನಗಳು ಪ್ರಾಪ್ತವಾಗುವುದರ ಜೊತೆಗೆ ಗೌರವಾದರಗಳು ದೊರೆಯುತ್ತವೆ. ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಕೊಂಡಿರುವವರಿಗೆ ಸೂಕ್ತ ಮಾರ್ಗದರ್ಶನ ಹಾಗೂ ಸೂಕ್ತ ಸ್ಥಾನ ಸಹ ದೊರೆಯುತ್ತದೆ. ಹೊಸ ವ್ಯಾಪಾರಗಳತ್ತ ಗಮನಹರಿಸಿ ಅದರ ಆಗುಹೋಗುಗಳನ್ನು ತಿಳಿಯಲು ಯತ್ನಿಸುವಿರಿ. ವಿದ್ವಾಂಸರಿಗೆ ಹೆಚ್ಚಿನ ಪ್ರಾಮುಖ್ಯತೆ ದೊರೆಯುತ್ತದೆ.

ಕುಂಭ — **ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3**
ಉದ್ಯಮವೊಂದರ ಮಂಜೂರಾತಿ ಸರ್ಕಾರದಿಂದ ದೊರೆಯುತ್ತದೆ. ದಕ್ಷತೆಯನ್ನು ಅಳವಡಿಸಿಕೊಂಡು ಉದ್ಯಮದಲ್ಲಿ ಆರ್ಥಿಕ ಶಿಸ್ತನ್ನು ತರುವಿರಿ. ಆಭರಣ ತಯಾರಿಕೆಯನ್ನು ಮಾಡುವವರಿಗೆ ಕೈತುಂಬಾ ಕೆಲಸವಿರುತ್ತದೆ. ಭೂಮಿ ಅಥವಾ ನಿವೇಶನ ಖರೀದಿ ಮಾಡುವ ಸಾಧ್ಯತೆಯಿದೆ.

ಮೀನ — **ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ**
ಹೊಸ ವ್ಯಕ್ತಿಯ ಪರಿಚಯವಾಗಿ ಅವರೊಡನೆ ಹೊಸ ವ್ಯಾಪಾರಕ್ಕೆ ಕೈಹಾಕುವ ಸಾಧ್ಯತೆಗಳಿವೆ. ಹಣ್ಣು-ತರಕಾರಿಗಳನ್ನು ಮಾರಾಟ ಮಾಡುವವರ ವ್ಯವಹಾರ ವಿಸ್ತರಿಸಿ ಆದಾಯ ಹೆಚ್ಚುತ್ತದೆ. ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ದೊರೆಯಬಹುದು. ಬಂಧುಗಳ ಸಂತೋಷ ಕಾರ್ಯಗಳಲ್ಲಿ ಭಾಗವಹಿಸುವ ಲಕ್ಷಣಗಳಿವೆ. ಹೈನುಗಾರಿಕೆ ಮಾಡುವವರ ಆದಾಯ ವೃದ್ಧಿಸುತ್ತದೆ.

ಪದಬಂಧ 2677



ಮೇಲಿನಿಂದ ಕೆಳಕ್ಕೆ
1. ಮನುಷ್ಯನಾದವ ಪಾಲಿಸಬೇಕಾದ ಸಹಜ ಕರ್ತವ್ಯ 5
2. ಪ್ರವಾಹದ ಆತಂಕ 4
3. ಹೊಸೆದು ಬಾಣಲೆಯ ಬಿಸಿಯಲ್ಲಿ ಅರಳುವಂತೆ ಮಾಡು 3
4. ಶಿವ ಕುಮಾರನಿಗೆ ಪ್ರೀತಿಯ ರಾಗ 5
6. ಹರಿ ಸೇವೆ ಮಾಡಿದ ಶ್ರೇಷ್ಠರ ಹಾಡು 5
7. ಈ ಮೂಡಲ ಕೆರೆಯಲ್ಲಿ ಮೂಡಿ ಬರ್ತಾನೆ ಚಂದಿರಾಮ 4
10. ಮೀಟಿಂಗ್‌ಗಳಿಗೆ ಹಾಜರಾಗಿ ಕಳೆಕಟ್ಟುವವರು 5
11. ನಿಶಾಚರ ಹಕ್ಕಿಯ ದೃಷ್ಟಿ 4
12. ಮೂರ್ಖ ಶಿಷ್ಯರನ್ನು ಪಡೆದ ಅತಿ ಸಂತೋಷದ ಗುರುಗಳು 5
13. ತಾಳ್ಮೆಯಿಂದ ಸಹಿಸಿಕೊಳ್ಳುವ ಗುಣ ರೂಢಿಸಿಕೊಂಡವ 5
15. ಮನವನ್ನು ಆಕರ್ಷಿಸುವ ವಿಷ್ಣು ಪತ್ನಿ; ಮಲಯಾಳ ಪತ್ರಿಕೆಯ ಪ್ರಚಲಿತ ನಾಮ 4
17. ಶಿವನಿಂದ ಆರಂಭಿಸಿ ವ್ಯಾಪಿಸು 3

ಎಡದಿಂದ ಬಲಕ್ಕೆ
1. ಹೆಣ್ಣುಕೊಟ್ಟವನ ಗೃಹ ಜೈಲೂ ಆಗಬಹುದು 5
3. ವ್ಯಾಘ್ರನಂತೆ ಮೈಮೇಲೆ ಪಟ್ಟೆ ಬಳಿದು ಕುಣಿಯುವ ಅವತಾರ 4
5. ಕೇಳಿದನ್ನು ಕೊಡುವ ದೀರ್ಘ ಅಭಯ 3
7. ಅದಿರು ಸಿಗುವ ಹಯವದನ ಸ್ಥಳ 5
8. ಆಪತ್ತಿನಲ್ಲಿ ಕರೆ ಮಾಡಿದಾಗ ಕೇಳಿಸುವ ನೆರವಿನ ಧ್ವನಿ 5
10. ಎಲ್ಲೆಯನ್ನು ಸಮೀಪಿಸಿದ ಕಾಲ 5
11. ಯಾವ ಪ್ರಶ್ನೆಗಾದರೂ ಉತ್ತರ ಕೊಡಬಲ್ಲ ಜಾಲತಾಣ 3
13. ನವರಾತ್ರಿಗೆ ಮನೆಮನೆಯಲ್ಲೂ ಸಿಂಹಾಸನವೇರುವ ರಾಜಾರಾಣಿ ಪುತ್ಥಳಿ 5
14. ವಿರಳವಾಗಿ ಬರುವ ಗಾಂಧಿ ಪಿತ 5
16. ರಸಪೂರಿ, ಬಾದಾಮಿ, ಮಲ್ಲಿಕಾ ಇತ್ಯಾದಿಯಾಗಿ ನೀರೂರಿಸುವ ಆಮ್ರ ಫಲ 5
18. ರೋಗಕ್ಕೆ ಅಂಟಿಕೊಂಡ ಕಾಯಿಲೆ 3
19. ಒತ್ತೊತ್ತಾಗಿ ಮರಗಳು ಹಬ್ಬಿರುವ ವನ 4
20. ಗಂಧದ ಗಾಳಿ ಬೀಸುವ ಪುರಾಣಪರ್ವತ 5

ಪದಬಂಧ ಉತ್ತರ -2676

ಮೇಲಿಂದ ಕೆಳಕ್ಕೆ
1. ವಿನಮ 2. ನೂಲುಹುಣ್ಣಿಮೆ 3.ನವೀನಭಾವ 4.ನಿರಾತಂಕ 6.ಕರಡಿಗೆ 8.ಹಾವೇರಿ 10.ದಾಯಕ 12.ರಕ್ಷಣೆ 13.ಕಲಾಗ್ರಾಮ 14.ಡಕಾಯಿತರು 15.ವಿಮಾನಪುರ 16.ಹರಸು 17.ಹರಿವಂಶ 19.ಮಲಯ

ಎಡದಿಂದ ಬಲಕ್ಕೆ
1. ವಿಶ್ವವಿನೂತನ 4.ನಿರ್ಗಮನ 5.ವೀಕ್ಷಕ 7.ಮಹಾಬಾಹು 9.ಕವಲುದಾರಿ 11.ಮೆರವಣಿಗೆ 13.ಕನ್ನಡಕವಿ 16.ಹಣೆಬರಹ 18.ನವಸುಮ 20.ಮರುತ 21.ಲವಲೇಶ 22.ರುದ್ರರಮಣೀಯ

ರಂಗಭೂಮಿ ಚರಿತ್ರೆಯಲ್ಲಿ ಸ್ತ್ರೀ ಕಥನದ ಹುಡುಕಾಟ

'ರಂಗ ವೃತ್ತಾಂತ' ಕಳೆದುಹೋದ ಕೆಲವು ಮಿಸ್ಸಿಂಗ್ ಲಿಂಕ್‌ಗಳನ್ನು ಶೋಧಿಸುವತ್ತ ಗಮನ ಹರಿಸುವ ಕೃತಿ. ಅದರಲ್ಲಿರುವ ಲೇಖನಗಳು ರಂಗಭೂಮಿಯ ಅನೇಕ ಆಯಾಮಗಳನ್ನು ಚರಿತ್ರೆಯ ದೃಷ್ಟಿಯಿಂದ ನೋಡಿ ದಾಖಲಿಸುವ ರೀತಿಯವು.

ಆರ್.ತಾರಿಣಿ ಶುಭದಾಯಿನಿ

ಪ್ರದರ್ಶನ ಕಲೆಯೂ ಸಾಹಿತ್ಯ ಪ್ರಕಾರವೂ ಆಗಿರುವ ನಾಟಕವೆಂಬ ಪ್ರಕಾರವನ್ನೇ ತಮ್ಮ ಅಧ್ಯಯನದ ಆಸಕ್ತಿಯನ್ನಾಗಿ ಮಾಡಿಕೊಂಡ ಹೇಮಾ ಪಟ್ಟಣಶೆಟ್ಟಿ ಅವರ ಕೃತಿ 'ರಂಗ ವೃತ್ತಾಂತ'. ನಾಟಕಗಳ ಅಧ್ಯಯನವು ರಂಗಭೂಮಿ ಮತ್ತು ಸಾಹಿತ್ಯಗಳೆಂಬ ಎರಡೂ ಜಗತ್ತುಗಳನ್ನು ಒಳಗೊಳ್ಳುವಂಥದ್ದು. ಇದನ್ನು ಅರಿತವರಂತೆ ಹೇಮಾ ಅವರು ನಾಟಕ ಸಾಹಿತ್ಯ ಮತ್ತು ರಂಗಭೂಮಿಗಳೆರಡರ ಮೇಲೆ ಅಧ್ಯಯನ ಮಾಡಿದ್ದಾರೆ. ಗಂಡುಮೆಟ್ಟಿನ ಕ್ಷೇತ್ರವೆನಿಸಿದ ನಾಟಕ ಪ್ರಕಾರವನ್ನು ಸ್ತ್ರೀವಾದಿ ನೆಲೆಯಿಂದ ಪ್ರವೇಶಿಸಿದಾಗ ಸಿಗುವ ಒಳನೋಟಗಳು, ಒಳಬಾಳುಗಳ ಸತ್ಯಗಳು ಕೃತಿಯಲ್ಲಿ ಕಾಣಸಿಗುತ್ತವೆ. ಈಗಾಗಲೇ 'ಕನ್ನಡ ನಾಟಕಗಳಲ್ಲಿ ಸ್ತ್ರೀಲೋಕ' ಎನ್ನುವ ಸಂಶೋಧನಾ ಕೃತಿ ತಂದಿದ್ದ ಹೇಮಾ ಅವರ ಆಸಕ್ತಿಯ ಮುಂದುವರೆದ ಭಾಗವಾಗಿ ಪ್ರಸ್ತುತ 'ರಂಗ ವೃತ್ತಾಂತ' ಕೃತಿ ಬಂದಿದೆ.

ಪ್ರಸ್ತುತ ಈ ಪುಸ್ತಕವು ಸ್ತ್ರೀಪಕ್ಷಪಾತಿ! ನಾಟಕಗಳು, ರಂಗಭೂಮಿ, ನಾಟಕಕಾರರನ್ನೆಲ್ಲ ಸ್ತ್ರೀದೃಷ್ಟಿಯಿಂದ ನಿವಾಳಿಸುವ ತಂತ್ರದಿಂದ ಈ ಪುಸ್ತಕ ಸೂಕ್ಷ್ಮವಾದ ಗ್ರಹಿಕೆಗಳನ್ನು ಕಾಣಿಸುತ್ತದೆ. ರಂಗಭೂಮಿಯ ಅನುಭವಗಳಿಂದ ಹಾಗೂ ನಾಟಕಗಳ ಓದು/ ಅನುವಾದಗಳಿಂದ ಕಟ್ಟಿಕೊಂಡ ದೃಷ್ಟಿ ಇದಾದುದರಿಂದ ಇಲ್ಲಿನ ಲೇಖನಗಳಿಗೆ ಒಂದು ಅಧಿಕೃತತೆ ಬಂದಿದೆ. ಮುಖ್ಯವಾಹಿನಿಯಲ್ಲಿ ಹುದುಗಿ ಹೋದಂತಿರುವ ರಂಗಭೂಮಿ ಮತ್ತು ಹೆಣ್ಣಿನ ಸಂಬಂಧ ಹಾಗೂ ಆಕೆಯ ಪ್ರಾತಿನಿಧ್ಯವನ್ನು ಕೆದಕಿ ನೋಡುವುದನ್ನು ಇಲ್ಲಿನ ಲೇಖನಗಳು ಮಾಡುತ್ತವೆ. 'ರಂಗ ವೃತ್ತಾಂತ'ದ ನಾಂದಿ ನುಡಿಯಲ್ಲಿಯೇ ಬಾಳಪ್ಪ ಏಣಗಿ ಅವರ ಎರಡನೇ ಹೆಂಡತಿ ಲಕ್ಷ್ಮೀಬಾಯಿಯವರ ಜೀವನ ಕಥೆಯನ್ನು ಹೇಳಗೊಡದಂತೆ ಮಾಡುವ ಪುರುಷ ಪ್ರಾಧಾನ್ಯವನ್ನು ಕುರಿತು ಲೇಖಕಿ ಪ್ರಸ್ತಾಪ ಮಾಡಿದ್ದಾರೆ. ಪ್ರಸ್ತುತ ಪುಸ್ತಕದಲ್ಲಿ 'ವೃತ್ತಿರಂಗಭೂಮಿಯ ಸ್ತ್ರೀ ಕಥನ', 'ಹವ್ಯಾಸಿ ರಂಗಭೂಮಿಯಲ್ಲಿ ಮಹಿಳೆ', 'ಲೇಖಕಿಯರ ನಾಟಕಗಳು', 'ಸರಸ್ವತಿಬಾಯಿ ರಾಜವಾಡೆಯವರ ನಾಟಕಗಳು', 'ನಾಟಕ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ' ಮುಂತಾದ ಲೇಖನಗಳಿರುವುದು ಹೇಮಾ ಅವರ ಅಧ್ಯಯನದಲ್ಲಿ ಸ್ತ್ರೀದೃಷ್ಟಿಕೋನವು ಪ್ರಮುಖವಾಗಿದೆ ಎನ್ನುವುದನ್ನು ತೋರುತ್ತದೆ.

ಹೇಮಾ ಅವರ ಸ್ತ್ರೀವಾದಿ ಅಧ್ಯಯನವು ಬಹುಮುಖಿಯಾಗಿದೆ. ರಂಗಭೂಮಿಯಲ್ಲಿ ನಟಿಸುವ ನಟಿಯರ ವೃತ್ತಾಂತಗಳು, ಲೇಖಕಿಯರು ನಾಟಕಕಾರ್ತಿಯರಾಗಿರುವುದನ್ನು ಗಮನಿಸುವುದು ಹಾಗೂ ಲೇಖಕರ ನಾಟಕಗಳಲ್ಲಿ ಸ್ತ್ರೀಸಂವೇದನೆಯು ಹೇಗೆ ಅಭಿವ್ಯಕ್ತವಾಗುತ್ತದೆ ಎನ್ನುವುದನ್ನು ನೋಡುವುದು - ಈ ಮೂರನ್ನೂ ಅವರ ಅಧ್ಯಯನವು ಗಮನಿಸುತ್ತದೆ. ಹಾಗೆಂದು ಸ್ತ್ರೀವಾದಿ ಅಧ್ಯಯನಕ್ಕೆ ಮಾತ್ರವೇ ಸೀಮಿತಗೊಳಿಸಿಕೊಳ್ಳದೆ ಕುವೆಂಪು, ಬೇಂದ್ರೆಯಂತಹ ಲೇಖಕರ ನಾಟಕಗಳನ್ನೂ ವಿಶ್ಲೇಷಣೆ ಮಾಡುತ್ತಾರೆ. 'ರಂಗಭೂಮಿಗೆ ದಿಕ್ಸೂಚಿ ಧಾರವಾಡ', 'ಡಾ. ಅಣ್ಣಾಜಿರಾವ್ ಸಿರೂರ ರಂಗಮಂದಿರ' ಎಂಬ ಲೇಖನಗಳು ನಾಟಕವಷ್ಟೇ ಅಲ್ಲದೆ ಅದನ್ನು ಪ್ರದರ್ಶಿಸುವ ರಂಗಭೂಮಿ ವೇದಿಕೆಗಳ ಬಗೆಗೂ ಮಾಹಿತಿಯನ್ನು ಒಳಗೊಂಡಿವೆ.

ಪ್ರಸ್ತುತ ಸಂಕಲನದಲ್ಲಿರುವ 'ವೃತ್ತಿ ರಂಗಭೂಮಿಯ ಸ್ತ್ರೀ ಕಥನ' ಎನ್ನುವ ಲೇಖನವು ಹೆಣ್ಣು ಮತ್ತು ರಂಗಭೂಮಿಯ ನಡುವಿನ ನಂಟನ್ನು ವಿವರಿಸುತ್ತದೆ. ಸಾರ್ವಜನಿಕವಾಗಿ ಪ್ರದರ್ಶನಗೊಳ್ಳುವ ಕಲೆಗಳಲ್ಲಿ ಭಾಗವಹಿಸುವುದಕ್ಕೆ ಇರುವ ಸಾಮಾಜಿಕ ಕಟ್ಟಳೆಗಳು ಸ್ತ್ರೀಯರನ್ನು ಕುಲೀನ ಸ್ತ್ರೀ, ಪಾತರದ ಸ್ತ್ರೀ ಎಂದು ಭಾಗಮಾಡಿ ನೋಡಿದ್ದ ವಸಾಹತುಶಾಹಿ ಕಾಲದಿಂದ ಆಧುನಿಕ ಕಾಲದವರೆಗೆ ರಂಗಪ್ರಪಂಚದಲ್ಲಿ ಸ್ತ್ರೀಯರ ಪ್ರಾತಿನಿಧ್ಯ ತೊಡಕಿನದೇ ಆಗಿತ್ತು. ರಂಗಕ್ಕೆ ಪ್ರವೇಶ ಪಡೆದು ಹೆಸರು ಮಾಡಿದ ಅನೇಕ ನಟಿಯರು ನಮ್ಮ ಮಧ್ಯೆ ಇಂದು ಇದ್ದರೂ ಸ್ತ್ರೀಯರು ರಂಗಪ್ರವೇಶ ಮಾಡಿದುದಕ್ಕೆ ವೃತ್ತಿರಂಗಭೂಮಿಯ ಚರಿತ್ರೆಯತ್ತ ನೋಡುವ 'ವೃತ್ತಿರಂಗಭೂಮಿಯ ಸ್ತ್ರೀ ಕಥನ' ಈ ಹಾದಿಯನ್ನು 'ಕೆಂಡ ಹಾಯ್ದು ಬಂದ ಕತೆ' ಎನ್ನುವುದು ಸೂಕ್ತವೇ ಆಗಿದೆ.

ಸ್ತ್ರೀಯರ ರಂಗಪ್ರವೇಶದ ಚರಿತ್ರೆಯನ್ನು ವಿವರಿಸುವಾಗ ಹಲವಾರು ಸ್ವಾರಸ್ಯಕರ ಸಂಗತಿಗಳನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ. ಹೆಣ್ಣುಪಾತ್ರಗಳನ್ನು ರಂಗದ ಮೇಲೆ ಅಭಿನಯಿಸುತ್ತಿದ್ದವರು ಈ ಮೊದಲು ಪುರುಷರು. ನಾಟಕ ಕಂಪನಿಗಳಲ್ಲಿ ಸ್ತ್ರೀಯರನ್ನು ಕರೆದುಕೊಂಡರೆ ತಮ್ಮ ಘನತೆ ಇಳಿಯುತ್ತದೆ ಎಂಬ ಭಾವನೆ ಇತ್ತು. 'ಸ್ತ್ರೀ ಪ್ರವೇಶದಿಂದ ರಂಗಭೂಮಿ ಪಾವಿತ್ರ್ಯ ಕಳೆದುಹೋಗುವುದಷ್ಟೇ ಅಲ್ಲ ಅಲ್ಲಿಯ ಗಂಡಸರ ಶೀಲಕ್ಕೆ ಸಂಚಕಾರ ಬರುತ್ತದೆ ಎಂಬ ಭಯ, ಅಭದ್ರತೆಯೇ ಅದಕ್ಕೆ ಕಾರಣವಾಗಿತ್ತು' (ಪು.45) ಎಂದು ಹೇಮಾ ಬರೆಯುತ್ತಾರೆ. ಆದರೆ ಕಾಲಕ್ರಮೇಣ ಹೆಣ್ಣುಪ್ರವೇಶ ಅನಿವಾರ್ಯವಾಯಿತು. ಗರುಡ ಸದಾಶಿವರಂತಹ ಮಡಿವಂತರಿಗೂ ಇದನ್ನು ಸ್ವಾಗತಿಸುವುದು ಅನಿವಾರ್ಯವಾಯಿತು. ಹೀಗೆ ರಂಗಭೂಮಿಯ ಇತಿಹಾಸದಲ್ಲಿ ಹುದುಗಿಹೋದ ಹೆಣ್ಣಿನ ಚರಿತ್ರೆಯನ್ನು ಕೆದಕುವುದರಿಂದ ಸ್ತ್ರೀ ಚರಿತ್ರೆಯನ್ನು ಕಟ್ಟಿಕೊಳ್ಳುವ ಸಾಧ್ಯತೆಗಳನ್ನು ಹೇಮಾ ಕಾಣಿಸುತ್ತಾರೆ.

ಲೇಖಕಿಯರು ಬರೆದ ನಾಟಕಗಳ ಬಗ್ಗೆ ಇರುವ ಲೇಖನವು ಅವರು ನಾಟಕಕಾರ್ತಿಯರಾಗಿ ಎತ್ತಿಕೊಳ್ಳುವ ವಸ್ತು ನಿರ್ವಹಿಸುವ ರೀತಿಗಳನ್ನು ಕುರಿತು ಚರ್ಚಿಸುತ್ತದೆ. ನವೋದಯ ಕಾಲದಲ್ಲಿ ಬರೆಯುತ್ತಿದ್ದ ಲೇಖಕಿಯರಲ್ಲನೇಕರು ನಾಟಕಗಳನ್ನು ಬರೆದಿದ್ದಾರೆ. ಅವುಗಳ ಸತ್ವ, ಗುಣಾಗುಣಗಳನ್ನು ಗಮನಿಸುವುದಕ್ಕಿಂತ ಚಾರಿತ್ರಿಕವಾಗಿ ಲೇಖಕಿಯರು ನಾಟಕ ಪ್ರಕಾರದ ಬಗ್ಗೆ ಆಸಕ್ತಿ ತಳೆದಿದ್ದರು ಎನ್ನುವುದನ್ನು ಗಮನಿಸಬೇಕು. ಆದರೆ ಇವುಗಳ ರಂಗಪ್ರಯೋಗಗಳಾಗಲೀ ಅವುಗಳ ಓದುವಿಕೆಯಾಗಲಿ ಮುಖ್ಯವಾಹಿನಿಯಲ್ಲಿ ನಡೆದಂತೆ ದಾಖಲೆಗಳಿಲ್ಲ. ಈ ಹಿನ್ನೆಲೆಯಲ್ಲಿ 'ಸರಸ್ವತಿಬಾಯಿ ರಾಜವಾಡೆಯವರ ನಾಟಕಗಳು' ಲೇಖನವನ್ನು ಸಹ ಗಮನಿಸಬಹುದು.

'ಬೇಂದ್ರೆ ನಾಟ್ಯಯೋಗ' ಲೇಖನವು ವಾಸ್ತವವಾದೀ ನೆಲೆಯನ್ನಾಧರಿಸಿ ಬರೆದ ಬೇಂದ್ರೆ ನಾಟಕಗಳನ್ನು ವಿವರಿಸುತ್ತದೆ. ಇಲ್ಲಿ ಬೇಂದ್ರೆಯವರ ನಾಟಕಗಳನ್ನು ಸಾದ್ಯಂತವಾಗಿ ಪರಿಚಯಿಸುವ ಬದಲು ನಾಟಕಗಳಾಗಿ ಬೇಂದ್ರೆಯವರ ರಚನೆಗಳು ಎಲ್ಲಿ ನಿಲ್ಲುತ್ತವೆ ಎನ್ನುವ ವಿಶ್ಲೇಷಣೆ ಮಾಡಿದ್ದಿದ್ದರೆ ಚೆನ್ನಾಗಿತ್ತು. ಅಂತೆಯೇ ಕುವೆಂಪು ನಾಟಕಗಳನ್ನು ವಿಶ್ಲೇಷಿಸುವಾಗ ಅವರ ಗುಣಾತ್ಮಕ ಅಂಶಗಳನ್ನು ಎತ್ತಿ ಹಿಡಿಯಲಾಗಿದೆ.

'ರಂಗ ವೃತ್ತಾಂತ' ಕಳೆದುಹೋದ ಕೆಲವು ಮಿಸ್ಸಿಂಗ್ ಲಿಂಕ್‌ಗಳನ್ನು ಶೋಧಿಸುವತ್ತ ಗಮನ ಹರಿಸುವ ಕೃತಿ. ಅದರಲ್ಲಿರುವ ಲೇಖನಗಳು ರಂಗಭೂಮಿಯ ಅನೇಕ ಆಯಾಮಗಳನ್ನು ಚರಿತ್ರೆಯ ದೃಷ್ಟಿಯಿಂದ ನೋಡಿ ದಾಖಲಿಸುವ ರೀತಿಯವು. ಹೇಮಾ ಅವರಿಗೆ ರಂಗಭೂಮಿಯ ಒಟ್ಟೂ ಚರಿತ್ರೆಯು ಮುಖ್ಯವಾದಂತೆಯೇ ಅದರಲ್ಲಿ ಹುದುಗಿರುವ ಸ್ತ್ರೀಬಾಳುಗಳ ಅಲಕ್ಷಿತ ಧೋರಣೆಯನ್ನು ಗಮನಿಸುವುದೂ ಮುಖ್ಯವಾಗಿದೆ. ರಂಗಭೂಮಿಯ ನೆಪದಲ್ಲಿ ಸ್ತ್ರೀ ಬದುಕುಗಳನ್ನು ನೋಡುವುದು ಸ್ತ್ರೀವಾದಿ ಶೋಧನೆಯ ದೃಷ್ಟಿಯಿಂದ ಮುಖ್ಯವೆನಿಸುತ್ತದೆ. ಕೃತಿಯು ಮಾಹಿತಿ ಪ್ರಧಾನವಾಗಿದ್ದು ದಾಖಲೀಕರಣದ ದೃಷ್ಟಿಯಿಂದ ಉಪಯುಕ್ತವಾಗಿ ನಿಲ್ಲುತ್ತದೆ.



ರಂಗ ವೃತ್ತಾಂತ
ಲೇ: ಹೇಮಾ ಪಟ್ಟಣಶೆಟ್ಟಿ
ಪ್ರ:ಅನನ್ಯ ಪ್ರಕಾಶನ
ಪು: 172
₹150

ಅವಮಾನವುಂಡರೂ ಜೀವಂತಿಕೆ ಹೊಮ್ಮಿಸುವೆವು

ಎ.ಎನ್.ಸಿದ್ದೇಶ್ವರಿ, ಉಪನ್ಯಾಸಕಿ, ಬಳ್ಳಾರಿ

ಸ್ವಾತಂತ್ರ್ಯ ಮತ್ತು ಸಮಾನತೆ ಎಂಬುದು ಇವತ್ತಿಗೂ ಮಹಿಳೆಯರಿಗೆ ದಕ್ಕದ ಫಲ. ಪ್ರಗತಿಪರ ಎನ್ನಿಸಿಕೊಂಡ ಕುಟುಂಬಗಳಲ್ಲೂ ಹೆಣ್ಣುಮಕ್ಕಳು ಅತ್ಯಧಿಕ ಅಂಕ ಗಳಿಸಿದರೂ ಮನೆಯ ಗಂಡುಮಕ್ಕಳೊಂದಿಗೆ ತಾರತಮ್ಯವನ್ನು ಎದುರಿಸಲೇಬೇಕಾದ ಪರಿಸ್ಥಿತಿ ಇದೆ. ಆದರೆ ಅವರ ಅಂಕಗಳಿಕೆಯಲ್ಲಿ ವ್ಯತ್ಯಾಸವಾಗಿಲ್ಲ. ಅದೇ ಸ್ತ್ರೀ ಅಸ್ಮಿತೆ. ಅವಮಾನವುಂಡ ಕಡೆ ನಗುತ್ತಲೇ ಜೀವಂತಿಕೆಯನ್ನು ಹೊಮ್ಮಿಸುವುದು.

ಸಾಧನೆಯ ಹಾದಿಯಲ್ಲಿ ಪುರುಷರಿಗಿಂತಲೂ ಹೆಚ್ಚು ಪೆಟ್ಟುಗಳನ್ನು ತಿನ್ನುವವರು ಮಹಿಳೆಯರೇ. ಈಗಲೂ ಅದು ಬದಲಾಗಿಲ್ಲ. ಆದರೆ ಮತ್ತಷ್ಟು ಗಟ್ಟಿಗೊಳ್ಳುವ ದಾರಿಯಲ್ಲಿ ಹಲವರಿದ್ದಾರೆ.

ಮಿಕ್ಸಿ, ವಾಷಿಂಗ್ ಮಷೀನ್, ಫ್ರಿಜ್‌ನಂತೆ ಯಂತ್ರವಾಗಿ ಎಷ್ಟೆಂದು ದುಡಿಯುವುದು ಎಂಬ ಪ್ರಶ್ನೆಯನ್ನು ಮಹಿಳೆಯರು ದಿಟ್ಟವಾಗಿ ಕೇಳಿಕೊಂಡಿದ್ದಾರೆ. ಅದನ್ನೇ ಪುರುಷಪರವಾದ ಸಮಾಜದ ಮುಖಕ್ಕೂ ಹಿಡಿದಿದ್ದಾರೆ. ಹಾಗೆ ಕೇಳುವ ಸಾಹಸದ ಫಲವೇನು ಎಂದರೆ ವಿಷಾದ ಆವರಿಸುತ್ತದೆ. ಅದರ ನಡುವೆ ಅಲ್ಲೊಂದು ಇಲ್ಲೊಂದು ಹೊಳೆವ ಒಂದೆರಡು ಚುಕ್ಕಿಗಳೇ ಭರವಸೆಗಳು.

ಮುಂದಕ್ಕೆ ಹೋದಷ್ಟೂ ಕಳಂಕವನ್ನು ಅಂಟಿಸಿ ಹಿಂದಕ್ಕೆಳೆಯುವ ಪ್ರವೃತ್ತಿಯನ್ನು ಹೆಣ್ಣುಮಕ್ಕಳು ಪ್ರಶ್ನಿಸುತ್ತಿದ್ದಾರೆ. ಅಂಥವರಲ್ಲಿ ನೋವಿನ ಕಡಲೇ ಇರುತ್ತದೆ. ಹೆಣ್ಣುಮಕ್ಕಳಿಗೆ ವಿದ್ಯೆ ಕೊಡಿಸಿದರೆ, ಉದ್ಯೋಗ ದೊರಕಿಸಿದರೆ ಸಾಲದು. ಅವರನ್ನು ಸಮಾನ ನೆಲೆಯಲ್ಲಿ ಗ್ರಹಿಸಿ ಜೊತೆಗೇ ನಡೆಯಬೇಕು.

ಹಿಂದೆ ಮಹಿಳೆಯನ್ನು ಮನೆಯೊಳಗೇ ಕೂಡಿಡುತ್ತಿದ್ದರು. ಈಗ ಹೊರಕ್ಕೆ ಬಂದರೂ ಶೋಷಣೆ ಕಡಿಮೆಯಾಗಿಲ್ಲ. ಮನೆಯ ಹೊರಗೂ ದುಡಿಯುವ ಮಹಿಳೆಯರಲ್ಲಿ ಹಣವಿದೆ. ಅದೇ ಕಾರಣಕ್ಕೆ ನೂರಾರು ತಾಕಲಾಟಗಳನ್ನು ಎದುರಿಸಬೇಕು. ಹಣವಿಲ್ಲದಿದ್ದಾಗ ಸಂತೋಷವಾಗಿದ್ದರೇ? ಅದೂ ಇಲ್ಲ.

ನಿರೂಪಣೆ: ಕೆ.ನರಸಿಂಹಮೂರ್ತಿ

ಮನೆಮನೆಯಲಿ ದೀಪ ಮುಡಿಸಿ
ಹೊತ್ತು ಹೊತ್ತಿಗೆ ಅನ್ನ ಉಣಿಸಿ
ತಂದೆ ಮಗುವ ತಬ್ಬಿದಾಕೆ...

ಕಲೆ: ನಭಾ ವಕ್ಕುಂದ

'ರೈತಹೋರಾಟ'ವೆಂಬ ತಾಯಿ

ಜ.ನಾ. ತೇಜಶ್ರೀ

ನ್ಯಾಯಕ್ಕಾಗಿ, ಪ್ರೀತಿಯಿಂದ, ಹಿಂಸೆಯಿಲ್ಲದೆ ನಡೆಯುವ ಎಲ್ಲ ಪ್ರತಿಭಟನೆ ಮತ್ತು ಹೋರಾಟಗಳ ಕೇಂದ್ರದಲ್ಲೂ ಹೆಣ್ಣು-ಹೃದಯ, ತಾಯಿಕರುಳು ಇರುತ್ತದೆ. ಜಗತ್ತಿನಲ್ಲಿ ಮತ್ತು ಭಾರತದಲ್ಲಿ ನಡೆಯುತ್ತಿರುವ ಹತ್ತು ಹಲವು ಹೋರಾಟಗಳ ಮುನ್ನೆಲೆಯಲ್ಲಿ ಮೊದಲಿನಿಂದಲೂ ಹೆಣ್ಣು ಮಕ್ಕಳಿದ್ದಾರೆ. ಮಹಾಶ್ವೇತಾದೇವಿ, ಮೇಧಾ ಪಾಟ್ಕರ್, ಅರುಂಧತಿ ರಾಯ್, ವಂದನಾ ಶಿವ, ಅರುಣಾ ರಾಯ್, ಗ್ರೇಟಾ ಥನ್ಬರ್ಗ್ ಎಲ್ಲರೂ ಇಂಥ 'ರಾಜಕಾರಣ'ವಲ್ಲದ ಹೋರಾಟಗಳ ಮುಂದಾಳುಗಳು. ಕಳೆದ ಕೆಲವು ತಿಂಗಳುಗಳಿಂದ ಉತ್ತರದಲ್ಲಿ ನಡೆದಿರುವ ರೈತ ಹೋರಾಟಕ್ಕೂ ಮೂಲಪ್ರೇರಣೆ ಈ 'ತಾಯಿತತ್ವ'ವೇ.

ಕರ್ನಾಟಕ ರೈತಸಂಘದ ಹಾಸನ ಜಿಲ್ಲಾ ಘಟಕದ ಅಧ್ಯಕ್ಷರಾಗಿರುವ ಎಚ್.ಆರ್.ನವೀನ್ ಕುಮಾರ್ ಅವರು, ದೆಹಲಿಯಂಚಿನಲ್ಲಿ ನಡೆಯುತ್ತಿರುವ ರೈತಹೋರಾಟದಲ್ಲಿ ಪಾಲ್ಗೊಂಡು, ಅಲ್ಲಿನ ಅನುಭವಗಳನ್ನು ದಾಖಲಿಸಿರುವ ಪುಸ್ತಕ 'ಕದನ ಕಣ'. ಆತ್ಮಕಥೆಯಂತೆ ಹರಿಯುವ ಈ ಕೃತಿಯು 'ಕೇವಲ ತನಗೆ' ಸೀಮಿತವಾಗದೆ ಸಮುದಾಯಗಳ ಕಡೆಗೆ ವಿಸ್ತರಿಸಿಕೊಂಡಿದೆ.

'ಮಹಿಳಾ ಶಕ್ತಿ' ಎನ್ನುವ ಎರಡು ಪುಟಗಳ ಅಧ್ಯಾಯವು ಈ ಪುಸ್ತಕದ ಮತ್ತು ರೈತ ಹೋರಾಟದ ಸೂತ್ರವನ್ನು ಹಿಡಿದಿಟ್ಟುಕೊಂಡಿದೆ. ಹೋರಾಟದಲ್ಲಿರುವ ರಾಜಸ್ಥಾನದ ಮಹಿಳೆಯೊಬ್ಬರು 'ಭಾಷಣಕ್ಕೆ ನಿಂತರೆ ಅವರ ಮುಂದೆ ಯಾರೂ ಸಾಟಿಯಿಲ್ಲದಂತೆ ಮಾತನಾಡುತ್ತಿದ್ದರು. ಮಾತ್ರವಲ್ಲ, ಇವರು ತಮ್ಮ ಭೂಮಿಯಲ್ಲಿ ಸ್ವತಃ ಟ್ರ್ಯಾಕ್ಟರ್ ಚಲಾಯಿಸುವ ಮೂಲಕ ಕೃಷಿಯನ್ನೂ ಮಾಡುತ್ತಿದ್ದಾರೆ' ಎಂದು ಬರೆಯುತ್ತಾರೆ ಲೇಖಕರು. 'ಕೃಷಿ ಮಾಡಿದ ಅದೇ ಕೈಗಳಲ್ಲಿ ಕೆಂಬಾವುಟವನ್ನು ಹಿಡಿದು ಇಡೀ ರಾಜಸ್ಥಾನವನ್ನು ಸುತ್ತಾಡಿ ರೈತರನ್ನು ಸಂಘಟಿಸಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿರುದ್ಧ ರೈತ ಚಳವಳಿಯನ್ನು ರೂಪಿಸಿ ಸಾವಿರಾರು ಸಂಖ್ಯೆಯಲ್ಲಿ ರೈತ ಮಹಿಳೆಯರನ್ನು ಹೋರಾಟಕ್ಕಿಳಿಸಿದ್ದಾರೆ' ಎಂದೂ ವಿವರಿಸುತ್ತಾರೆ.

ಪ್ರತಿಭಟನೆಯಲ್ಲಿ ಭಾಗವಹಿಸಲು ಬಂದ ಎಲ್ಲ ಮಹಿಳೆಯರಿಗೂ ಟ್ರ್ಯಾಕ್ಟರ್ ಚಲಾಯಿಸುವ ತರಬೇತಿ ನೀಡಲಾಗುತ್ತಿತ್ತು ಎಂಬ ಗಮನಿಸುವಿಕೆಯು ಲೇಖಕರ ಸೂಕ್ಷ್ಮದೃಷ್ಟಿಗೂ, ಸ್ತ್ರೀಶಕ್ತಿಯು ವಿಸ್ತರಿಸುತ್ತಿರುವ ಬಗೆಗೂ ಹಿಡಿದ ಕನ್ನಡಿಯಂತಿದೆ. ಪ್ರಸ್ತುತ ರೈತಹೋರಾಟದಲ್ಲಿ ಪುರುಷರಿಗೆ ಹೋಲಿಸಿದರೆ ಮಹಿಳೆಯರ ಸಂಖ್ಯೆ ಕಡಿಮೆಯೇ. ಆದರೆ, ಪುರುಷರು ತಿಂಗಳುಗಟ್ಟಲೆ ಮನೆಯಿಂದ ದೂರ ಉಳಿದಾಗ ಮನೆ, ಕೃಷಿ ಚಟುವಟಿಕೆಯನ್ನು ಸಂಪೂರ್ಣವಾಗಿ ನಿಭಾಯಿಸುತ್ತಿರುವುದು ಹೆಣ್ಣುಮಕ್ಕಳೇ. ಆದ್ದರಿಂದಲೇ ಇಂಥ ಸುದೀರ್ಘ ಹೋರಾಟ ಸಾಧ್ಯವಾಗಿದೆ ಎನ್ನುವ ಒಳನೋಟವೂ ಈ ಕೃತಿಯಲ್ಲಿ ಸಿಗುತ್ತದೆ.

ಸಿಖ್‌ಧರ್ಮದ ಸ್ಥಾಪಕರಾದ ಗುರುನಾನಕ್‌ರಿಂದ ಆರಂಭಗೊಂಡ 'ಲಂಗರ್' (ಅನ್ನದಾಸೋಹ ಕೇಂದ್ರ) ಪರಂಪರೆಯ ಬಗ್ಗೆ; ಚಳವಳಿಯು ಆರಂಭಗೊಂಡ ಗಳಿಗೆಯಿಂದ ಈ ಕ್ಷಣದವರೆಗೂ ಬಂದವರಿಗೆಲ್ಲ ಊಟ, ವಸತಿ ವ್ಯವಸ್ಥೆ ಕಲ್ಪಿಸಿರುವ ತಿಳಿವಳಿಕೆಯ ಬಗ್ಗೆ; ನಿವೃತ್ತ ಸೇನಾಯೋಧರು, 'ಗಡಿ ಕಾಯುವುದು ನಾವೇ, ದೇಶ ಕಾಯುವುದು ನಾವುಗಳೇ, ರೈತ ಮಕ್ಕಳೇ. ಆ ಕಾರಣಕ್ಕಾಗಿ ನಾವು ನಮ್ಮ ಅನ್ನದಾತ ರೈತರ ಜೊತೆಯಲ್ಲಿ ನಿಂತಿದ್ದೇವೆ' ಎಂದು ಮಕ್ಕಳಾದಿಯಾಗಿ ಇಡೀ ಕುಟುಂಬವನ್ನು ಇದರಲ್ಲಿ ತೊಡಗಿಸಿರುವ ಬಗ್ಗೆ; ರೈತರು ಪ್ರತಿಭಟನೆ ನಡೆಸುತ್ತಿರುವ ಜಾಗಗಳನ್ನೇ ಪುಟ್ಟ ಹಳ್ಳಿಗಳನ್ನಾಗಿ ಪರಿವರ್ತಿಸಿಕೊಂಡ ಬಗ್ಗೆ; ಅಲ್ಲಲ್ಲೇ ರೂಪುಗೊಂಡಿರುವ ಗ್ರಂಥಾಲಯಗಳು, ಪೋಸ್ಟರ್ ತಯಾರಿಕೆಯ ಮೂಲಕ ಮಕ್ಕಳಿಗೆ ಹೊಸ ಆಲೋಚನಾ ವಿಧಾನಗಳನ್ನು ಕಲಿಸುತ್ತಿರುವ ಬಗ್ಗೆ ಹಲವು ವಿವರಗಳು ಕೃತಿಯಲ್ಲಿವೆ. ಇಂತಹ ಭಿನ್ನ ದೃಷ್ಟಿಕೋನಗಳಿಂದ ಚಳವಳಿಯನ್ನು ಕಾಣಿಸುವ ಹೊಸಬಗೆ ಈ ಪುಸ್ತಕದ ವಿಶೇಷ. ಜೊತೆಗೇ, ಹೋರಾಟವನ್ನು ಹತ್ತಿಕ್ಕಲು ಸರ್ಕಾರವು ಮಾಡುತ್ತಿರುವ ಸಂಚುಗಳು, ಅಸಾಂವಿಧಾನಿಕ ಕ್ರಮಗಳು ಮತ್ತು ಮಾಧ್ಯಮಗಳ ದುಷ್ಟತನವನ್ನೂ ಕೃತಿಯು ಕಾಣಿಸುತ್ತದೆ.

ರೈತ ಹೋರಾಟದ ನಿಕಟ ಪರಿಚಯವಿರುವ ಪ್ರೊ. ಪುರುಷೋತ್ತಮ ಬಿಳಿಮಲೆಯವರ ಸಂದರ್ಶನವು ನಮಗೆ ಮೇಲ್ನೋಟಕ್ಕೆ ತೋರದ ಹಲವು ಆಯಾಮಗಳನ್ನು ಬಿಚ್ಚಿಡುತ್ತದೆ. ಬಿಳಿಮಲೆಯವರನ್ನು 'ಸರ್, ಇಡೀ ಚಳವಳಿಯಲ್ಲಿ ನಿಮಗೆ ಅತ್ಯಂತ ಇಷ್ಟವಾದ ಸಂಗತಿ ಯಾವುದು?' ಎಂದು ಕೇಳಿದಾಗ, ಅವರು, 'ಇಲ್ಲಿಯ ರೈತರು ಈ ಚಳವಳಿಗೆ ಬಂದವರನ್ನು ನಡೆಸಿಕೊಳ್ಳುತ್ತಿರುವ ರೀತಿ, ಆ ಆತ್ಮೀಯತೆ ತುಂಬ ಇಷ್ಟವಾಯಿತು. ಚಳವಳಿಯ ಜಾಗಕ್ಕೆ ಯಾರೇ ಬಂದರೂ ಅವರಿಗೆ ಕುಡಿಯಲು ನೀರು, ಮಜ್ಜಿಗೆ, ಚಾ, ಊಟ ನೀಡುತ್ತಾರೆ. ಎಷ್ಟರಮಟ್ಟಿಗೆ ಅಂದರೆ ಇದೇ ರೈತರನ್ನು ತಡೆದು ಲಾಠಿ ರುಚಿ ತೋರಿಸಿದ ಪೊಲೀಸಿನವರಿಗೂ ಊಟ ಕೊಟ್ಟು ಉಪಚರಿಸುತ್ತಿದ್ದಾರೆ. ಕುತೂಹಲಕ್ಕೆ ನಾನು ಒಬ್ಬ ರೈತರನ್ನು ಮಾತನಾಡಿಸಿ ಈ ವಿಚಾರವನ್ನು ಕೇಳಿದೆ. ಅದಕ್ಕೆ ಅವರು ಕೊಟ್ಟ ಉತ್ತರ: 'ಪೊಲೀಸಿನವರು ನಮ್ಮ ಮಕ್ಕಳೇ. ಬದುಕಿನ ಸಲುವಾಗಿ ಅಲ್ಲಿ ಕೆಲಸ ಮಾಡುತ್ತಿದ್ದಾರೆ. ಕೆಲಸ ಮಾಡುವ ಜಾಗದಲ್ಲಿ ಅವರು ಮೇಲಿನ ನಿರ್ದೇಶನದಂತೆ ವರ್ತಿಸುತ್ತಾರೆ ಅಷ್ಟೆ. ಅದರಲ್ಲಿ ವೈಯಕ್ತಿಕವಾಗಿ ಅವರ ತಪ್ಪೇನೂ ಇಲ್ಲ. ಇದಕ್ಕಾಗಿ ಅವರಿಗೆ ಊಟ ಕೊಡದೆ ಇರುವುದು ಸರಿಯಲ್ಲ' ಎಂದಿದ್ದಾರೆ.

ಬಿಳಿಮಲೆ ಅವರ ಮಾತು ಕೇಳಿದ ನವೀನ್ ಕುಮಾರ್ ಬರೆಯುತ್ತಾರೆ, 'ಮನುಷ್ಯನ ವಿಕಾಸದ ದಾರಿಯಲ್ಲಿ ಅವನು ಕೃಷಿ ಮಾಡಲು ಪ್ರಾರಂಭ ಮಾಡಿದಾಗಿನಿಂದ ಇಲ್ಲಿಯವರೆಗೆ ಅವರು ಸಮಾಜವನ್ನು ಕೃಷಿಯ ಮೂಲಕ ಪೋಷಿಸಿಕೊಂಡು ಬಂದಿದ್ದಾರೆ. ಈಗಲೂ ರೈತರು ತಮ್ಮ ಕಾಯಕದಿಂದ ಸಂಪೂರ್ಣ ವಿಮುಖರಾಗಿಲ್ಲ. ಯಾಕೆಂದರೆ ಅಲ್ಲಿ ಒಂದು ರೀತಿಯ ತಾಯಿಯ ವಾತ್ಸಲ್ಯ ಇದೆ. ತಾಯಿ ತಾನು ಉಪವಾಸವಿದ್ದರೂ ಎಂದಿಗೂ ತನ್ನ ಮಕ್ಕಳನ್ನು ಉಪವಾಸ ಕೆಡಹುವುದಿಲ್ಲ. ನನಗೆ ದೇಶದ ಇಡೀ ರೈತ ಸಮುದಾಯ ಮಕ್ಕಳನ್ನು ಸಾಕಿ ಸಲಹುವ ತಾಯಿಯಂತೆ ಕಾಣಿಸುತ್ತದೆ'. ತಾಯ್ತನದ ಪ್ರತೀಕದಂತಿರುವ ಈ ಪುಸ್ತಕ ಮತ್ತು ಲೇಖಕರ ನಿಲುವು ಹೆಣ್ಣಿನ ನಿಜದ ನೆಲೆಗಳನ್ನು ಅರ್ಥಪೂರ್ಣವಾಗಿ ವಿಸ್ತರಿಸಿದೆ. ಎಲ್ಲ ಹೋರಾಟಗಳ ಹಿಂದೆ ಮೌನವಾಗಿ ದುಡಿಯುವ, ಪ್ರೀತಿಯಿಂದ ಸ್ಪಂದಿಸುವ ಹೆಣ್ತನದ ಸತ್ವಕ್ಕೆ ಈ ಹೋರಾಟ ಮತ್ತು ಈ ಬರವಣಿಗೆ ಕೈಗನ್ನಡಿ.

ಅಂಚು/ಗಡಿಗಳನ್ನು ಹೋರಾಟದ ಕಣ/ ಕೇಂದ್ರವಾಗಿ ಪರಿವರ್ತಿಸಿಕೊಂಡಿರುವ, ರಾಜಕೀಯ ಪಕ್ಷಗಳು ಮತ್ತು ಮುಖಂಡರನ್ನು ಬದಿಗೆ ಸರಿಸಿರುವ ಈ ಚಳವಳಿಯ ನಡೆಯು ವಿಭಿನ್ನ, ಅಪರೂಪದ್ದು. ನನ್ನ ಜೊತೆ ಇರುವವನು ಮಾತ್ರವಲ್ಲ ನನ್ನನ್ನು ವಿರೋಧಿಸುತ್ತಿರುವವನು ಕೂಡ ನನ್ನ ಹಾಗೆಯೇ ಮನಸ್ಸು, ಮನಸ್ಸಾಕ್ಷಿ ಉಳ್ಳವನು ಎಂದು ನಂಬುವ ಮೂಲಕ ವಿರೋಧಿಯೊಳಗೂ ಆತ್ಮಸಾಕ್ಷಿಯನ್ನು ಸೃಷ್ಟಿಸುವ, ಅದನ್ನು ಕಲಕುವ, ಮುಟ್ಟುವ, ಬದಲಿಸುವ ಪ್ರಯತ್ನವೇ 'ಚಳವಳಿ' ಎಂಬ ಗಾಂಧಿಯ ದೃಷ್ಟಿಕೋನಕ್ಕೆ ಇದು ನಮ್ಮ ಕಾಲದಲ್ಲಿ ಹೊಸಜೀವ ಕೊಟ್ಟಿದೆ.



ಕದನ ಕಣ
ಲೇ: ಎಚ್.ಆರ್.ನವೀನ್ ಕುಮಾರ್
ಪ್ರ: ಕ್ರಿಯಾ ಮಾಧ್ಯಮ
ಮೊಬೈಲ್: 90360 82005
ಪು: 132
₹120

ಸಮಾಜಕ್ಕೆ ಮಹಿಳೆಯ ಮಹತ್ವದ ಅರಿವಾಗಿದೆ

ಜಯಮ್ಮ ಚನ್ನಗೌಡರ, ರೈತ ಮಹಿಳೆ, ಮೌಲ್ಯವರ್ಧನೆ ತಜ್ಞೆ, ದೊಡ್ಡಗುಬ್ಬಿ (ಹಾವೇರಿ)

'ಆಕಿಗೇನು ಗೊತ್ತಿದೆ?' ಎಂದು ಮೂದಲಿಕೆಯೋ ಕೀಳಾಗಿಯೋ ಮಹಿಳೆಯನ್ನು ಕಾಣುತ್ತಿದ್ದ ಗ್ರಾಮೀಣ ಸಮುದಾಯ, ಈಗ ಆಕೆಯ ಸಾಧನೆಯನ್ನು ಅಚ್ಚರಿಯಿಂದ ಗಮನಿಸುತ್ತಿದೆ. ಹತ್ತು ಹಲವು ವಲಯಗಳಲ್ಲಿ ಮಹಿಳೆಯು ತನ್ನ ಛಾಪು ಬೀರುತ್ತಿರುವುದನ್ನು ಕಂಡು ನನಗೂ ಖುಷಿ ಅನಿಸುತ್ತಿದೆ. ಖುಷಿ ಯಾಕೆಂದರೆ, ಪುರುಷ ಪ್ರಾಬಲ್ಯದ ಆಧುನಿಕ ಕೃಷಿ ಪದ್ಧತಿಯಲ್ಲಿ ಮಹಿಳೆಯರು ಈಗ ಸಾಧನೆಯ ಹಾದಿಯಲ್ಲಿದ್ದು ಆ ಪಟ್ಟಿಯಲ್ಲಿ ನನ್ನ ಹೆಸರು ಕೂಡ ಆಗಾಗ್ಗೆ ಕಾಣಿಸುತ್ತಿರುತ್ತದೆ.

ವ್ಯವಸಾಯ ಕ್ಷೇತ್ರದಲ್ಲಿ ಮಹಿಳೆಯ ಪಾತ್ರ ಹೆಚ್ಚು. ಬಿತ್ತನೆ, ಬೀಜ ಸಂರಕ್ಷಣೆಯಿಂದ ಹಿಡಿದು ಇಡೀ ವ್ಯವಸಾಯದ ಕೆಲಸಗಳಲ್ಲಿ ಆಕೆಯದು 'ಕಾಣಿಸದ' ಕೊಡುಗೆ. ಆದರೆ ಹಸಿರುಕ್ರಾಂತಿಯ ಭರಾಟೆಯಲ್ಲಿ ಏಕಬೆಳೆ ಕಾಲಿಟ್ಟ ಕೂಡಲೇ ಮಹಿಳೆಯ ಪಾತ್ರ ನಗಣ್ಯವಾಯಿತು. ಹಣಕಾಸು, ಕೃಷಿ ನಿರ್ಧಾರಗಳಿಂದ ಆಕೆ ದೂರ ಉಳಿದಳು.

ಆದರೀಗ ಕಾಲಚಕ್ರ ಮತ್ತೊಂದು ಸುತ್ತು ತಿರುಗಿದೆ. ಕೊರೊನಾದಿಂದಾಗಿಯೋ ಹತ್ತು ಹಲವು ಕಾಯಿಲೆಗಳಿಂದಾಗಿಯೋ ಆರೋಗ್ಯದತ್ತ ಜನರ ಗಮನ ಹರಿದಿದೆ. ಆರೋಗ್ಯ ಅಂದರೆ ಶುದ್ಧ ಆಹಾರ ಸೇವನೆ ತಾನೇ? ವಿಶೇಷ ಇರುವುದೇ ಇಲ್ಲಿ! ಹಳ್ಳಿ ಭಾಗದ ಹಾಳುಬಿದ್ದ ಜಮೀನುಗಳಲ್ಲಿ ಮತ್ತೆ ಚಟುವಟಿಕೆ ಕಾಣಿಸುತ್ತಿದೆ. ಓದಿ, ಪಟ್ಟಣದಲ್ಲಿ ಕೆಲಸಕ್ಕಿದ್ದವರು ಉದ್ಯೋಗ ಕಳೆದುಕೊಂಡು ಹಳ್ಳಿಗೆ ಮರಳಿದ್ದಾರೆ. ವ್ಯವಸಾಯದ ಕೆಲಸಗಳು ಶುರುವಾಗಿವೆ. ಯಾವ್ಯಾವುದೋ ಕಾರಣದಿಂದಾಗಿ ನಿಸ್ತೇಜವಾಗಿದ್ದ ಮಹಿಳಾ ಸ್ವಸಹಾಯ ಸಂಘಗಳಲ್ಲೀಗ ಚುರುಕುತನ. ಗ್ರಾಮೀಣ ಪ್ರದೇಶದಲ್ಲಿ ಒಂದು ಕಾಲದಲ್ಲಿ ತಮ್ಮ ಆರ್ಥಿಕ ನಿರ್ವಹಣೆಯಿಂದ ಗಮನ ಸೆಳೆದಿದ್ದ ಸ್ವಸಹಾಯ ಸಂಘಗಳು ಮತ್ತೆ ಹಳಿಗೆ ಮರಳಿವೆ.

ಆರೋಗ್ಯ ದೃಷ್ಟಿಯಿಂದ ಈಗ ಕೃಷಿಯತ್ತ ಹೊರಳುವವರ ಸಂಖ್ಯೆ ಸಾಕಷ್ಟಿದೆ. ಅಕ್ಕಡಿ ಕಾಳು ಅಂಗಡಿಯಲ್ಲಿ ಸಿಗುತ್ತಿಲ್ಲ. ಬೇಳೆ ಕಾಳು, ಸಿರಿಧಾನ್ಯ, ತರಕಾರಿ, ಸೊಪ್ಪುಗಳಿಗೆ ಬೆಲೆ ಬಂದಿದೆ. ಅದಕ್ಕಾಗಿಯೋ ಏನೋ, ಏಕಬೆಳೆಯ ಬದಲಾಗಿ ಮಿಶ್ರ ಬೆಳೆ ವಿಧಾನ ಚಾಲ್ತಿಗೆ ಬಂದಿದೆ. ಇಲ್ಲೆಲ್ಲ ಮಹಿಳೆಯರದೇ ಕೌಶಲ ಹೆಚ್ಚು. ಈವರೆಗೆ ತೆರೆಮರೆಗೆ ಸರಿದಿದ್ದ ಮಹಿಳೆಯ ಸ್ಥಾನಮಾನಕ್ಕೆ ಮತ್ತೆ ಪ್ರಾಮುಖ್ಯ ಸಿಗುತ್ತಿದೆ.

ಪದವಿ ಪಡೆದವರು, ದೊಡ್ಡ ಉದ್ಯೋಗ ಬಿಟ್ಟು ಬಂದವರು ನೆಲಮೂಲಕ್ಕೆ ಮರಳುತ್ತಿದ್ದಾರೆ. ಮಹಿಳೆಯರ ಸಬಲೀಕರಣ, ಆರ್ಥಿಕ ಚಟುವಟಿಕೆಗೆ ಉತ್ತೇಜನದಂಥ ಕ್ರಮಗಳಿಂದಾಗಿ ಗ್ರಾಮೀಣ ಭಾಗದ ಆರ್ಥಿಕ ಚಟುವಟಿಕೆಗಳಲ್ಲಿ ಮಹಿಳೆ ಮುಖ್ಯ ಪಾತ್ರ ವಹಿಸುವ ಸ್ಪಷ್ಟ ಲಕ್ಷಣಗಳು ಗೋಚರಿಸುತ್ತಿವೆ.

ನಿರೂಪಣೆ: ಆನಂದತೀರ್ಥ ಪ್ಯಾಟಿ

ಕಲೆ: ನಭಾ

ನನ್ನವ್ವ ಫಲವತ್ತಾದ ಕಪ್ಪು ನೆಲ
ಅಲ್ಲಿ ಹಸಿರು ಪತ್ರದ ಹರವು, ಬಿಳಿಯ ಹೂ ಹಬ್ಬ;
ಸುಟ್ಟಷ್ಟು ಕಸುವು, ನೊಂದಷ್ಟು ಹೂ ಹಣ್ಣು
ಮಕ್ಕಳೊದ್ದರೆ ಅವಳ ಅಂಗಾಂಗ ಪುಲಕ;
ಹೊತ್ತ ಬುಟ್ಟಿಯ ಇಟ್ಟು ನರಳಿ ಎವೆ ಮುಚ್ಚಿದಳು ತೆರೆಯದಂತೆ.

–ಪಿ.ಲಂಕೇಶ್

ಕುರ್ಚಿಯಲ್ಲಿ ಅವಳೇ ಕೂರಬೇಕಿದೆ..

ಸವಿತಾ ಪಾತ್ರೋಟಿ, ಗ್ರಾಮ ಪಂಚಾಯ್ತಿ ಸದಸ್ಯೆ, ನೀರಲಕೇರಿ (ಬಾಗಲಕೋಟೆ)

ಅವಳ (ಮಹಿಳೆ) ಕುರ್ಚಿಯಲ್ಲಿ ಇನ್ನಾರೋ ಬಂದು ಕೂರುವ ಸಂಪ್ರದಾಯ ಬಹುತೇಕ ಪಂಚಾಯ್ತಿಗಳಲ್ಲಿದೆ. ಆದರೆ ನಮ್ಮೂರ ಪಂಚಾಯ್ತಿಯಲ್ಲಿ ಮಾತ್ರ ಆ ಜಾಗದಲ್ಲಿ ಅವಳೇ ಕೂತು ಅಧಿಕಾರ ನಡೆಸಬೇಕು. ಮತ್ತೊಬ್ಬರಿಗೆ ಅವಕಾಶ ನೀಡೊಲ್ಲ. ಊರ ಜನರ ಸಮಸ್ಯೆಗೆ ಆಕೆಯೇ ಮುಕ್ತವಾಗಿ ಸ್ಪಂದಿಸಬೇಕು. ಇದು ಇಂದು ನಮ್ಮೆದುರಿಗೆ ಇರುವ ದೊಡ್ಡ ಸವಾಲು ಹೌದು. ಅದನ್ನು ನಿಭಾಯಿಸಿಯೇ ತೀರುತ್ತೇವೆ. ಹೆಣ್ಣು ಮಕ್ಕಳು ಮನೆಯಲ್ಲಿ ಇರಲು ಲಾಯಕ್ಕು, ಅಡುಗೆ ಮನೆಗೆ ಮಾತ್ರ ಸೀಮಿತ ಎಂಬುದು ಈಗ ಸವಕಲು ಮಾತು. ಜಗತ್ತು ಏನಿದೆ ಎಂಬುದನ್ನು ಆಕೆಯೂ ಈಗ ಅರಿತಿದ್ದಾಳೆ. ಹೊರಗಿನ ಪ್ರಪಂಚದ ಜ್ಞಾನವೂ ಅಕೆಗೂ ಇದೆ. ಹೀಗಾಗಿ ಅಧಿಕಾರದ ದಂಡ ಹಿಡಿಯಲು ನಮಗೆ ಯಾರೂ ಊರುಗೋಲು ಆಗಬೇಕಿಲ್ಲ.

ನಸುಕು ಹರಿಯುವ ಮುನ್ನ ಚೊಂಬು ಹಿಡಿದು ಮರೆಯ ಅರಸುತ್ತಾ ಹೋಗುವುದು ನಮ್ಮೂರ ಹೆಣ್ಣುಮಕ್ಕಳಿಗೆ ಜನ್ಮದತ್ತ ಬಳುವಳಿಯಾಗಿ ಬಂದ ಶಾಪ. ಶೌಚಾಲಯ ಕಟ್ಟಿಸಿಕೊಟ್ಟು ಅದನ್ನು ಬಳಸುವುದಕ್ಕೆ ಅವರಲ್ಲಿ ತಿಳಿವಳಿಕೆ ಮೂಡಿಸಿ ಬಯಲು ಬಹಿರ್ದೆಸೆ ಎಂಬ ಕಳಂಕದಿಂದ ಹೊರ ತರಲು ಮುಂದಾಗುವೆ. ಜಾಬ್ ಕಾರ್ಡ್ ಕೊಡಿಸಿ ಉದ್ಯೋಗ ಖಾತರಿಯಡಿ ಅವರಿಗೆ ಕೆಲಸಕೊಡಿಸಿ ಅನ್ನಕ್ಕೆ ದಾರಿ ಮಾಡಿಕೊಡುವೆ. ನನ್ನ ಪಾಲಿಗೆ ಸ್ತ್ರೀ ಅಸ್ಮಿತೆ ಎಂದರೆ ಇದೇ ನೋಡಿ.

ನಿರೂಪಣೆ: ವೆಂಕಟೇಶ ಜಿ.ಎಚ್.

ವಾರದ ಕಥೆ

ಎಚ್.ಸಿ.ಭವ್ಯ ನವೀನ್ ಬರೆದ ಕಥೆ

ಸೇವಂತಿ... ಅಚ್ಚುತ... ಚಂದ್ರಾ

'ಮತ್ತು ಅವರೆಲ್ಲಾ ಸುಖವಾಗಿದ್ದರು' ಅನ್ನುವ ಸಾಲು ಯಾವತ್ತೂ ಕತೆಯ ಕಡೇಗೆ ಬರಬೇಕು.

ಒಂದು ಕಾಲವಿತ್ತು, ನಾವು ಸುಖವಾಗಿದ್ದೆವು. ಹೀಗೆ ಶುರುವಾಗುವ ನನ್ನ ಕತೆಯಲ್ಲಿ ಮೂವರಿದ್ದೆವು. ನಾನು ಅಂದರೆ ಸೇವಂತಿ, ನಾನು ಅಂದರೆ ಅಚ್ಚುತ ಮತ್ತು ನಾನು ಅಂದರೆ ಚಂದ್ರಶೇಖರ. ಇಲ್ಲಿ ನಾನು ಅಂದರೆ ನಮ್ಮ ಮೂವರಲ್ಲಿ ಯಾರೊಬ್ಬರೂ. ಅದೊಂದು ತೀವ್ರವಾದ ಭಾವಬಂಧ. ಹೇಳಬೇಕೆಂದರೆ, ತೀವ್ರತೆ ಅನ್ನುವುದು ನಿಜಕ್ಕೂ ಸಾಮಾನ್ಯ ಮನಃಸ್ಥಿತಿಯೇ ಅಲ್ಲ. ಕಡುಪ್ರೀತಿಗೂ ಮತ್ತು ಕಡುದ್ವೇಷಕ್ಕೂ ಯಾವಾಗಲೂ ಒಂದೇ ಮನಃಸ್ಥಿತಿ. ಅದು ನಮ್ಮನ್ನು ತುದಿಗಾಲಲ್ಲಿ ನಿಲ್ಲಿಸುತ್ತದೆ. ನಾನು ಸೇವಂತಿ, ನಾನು ಅಚ್ಚುತ, ನಾನು ಚಂದ್ರ ಇದೇ ತೀವ್ರತೆಯವರು. ಒಂದು ಕಾಲಕ್ಕೆ ನಮ್ಮನ್ನು ಕಟ್ಟಿಹಾಕಿದ್ದು ಕಡುಪ್ರೀತಿ. ಕಡೆ ಕಡೆಗೆ ನಾವು ಬೆಳೆದೆವು, ದೊಡ್ಡವರಾದೆವು, ಬುದ್ಧಿವಂತರಾದೆವು, ಸೂಕ್ಷ್ಮತೆಯ ಸೂಕ್ಷ್ಮತೆ ತಿಳಿಯಿತು, ಕಡುಪ್ರೀತಿಯ ಪ್ರೀತಿಯಿಂದ ಪ್ರೀತಿಯ ಲೋಭ ಶುರುವಾಯಿತು, ಮೋಹಿಸಿದೆವು, ಕಾಮಿಸಿದೆವು, ಮದ ಅನ್ನುವುದು ಮುಖ್ಯವಾಗಿ ಎದೆಗೆ ಬಡಿಯುವ ಸಂಗತಿ, ಮತ್ಸರವೂ ಶುರುವಾಯಿತು, ಕ್ರೋಧ ಇವೆಲ್ಲದರ ಮಧ್ಯೆ ಯಕಃಶ್ಚಿತ್. ಮುಂದ...

ಕಥೆಯನ್ನು ಓದಲು ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/short-story

ವಾರದ ಕವಿತೆ

ನಾಗರೇಖಾ ಗಾಂವಕರ
ಬರೆದ ಕವಿತೆ

ಬೇರಿಲ್ಲದ ಚಿಗುರು, ಚಿಗುರಿಲ್ಲದ ಬೇರು



ಅಮ್ಮ
ಬಯಸಿದ್ದು ಬೇರುಳ್ಳ ಚಿಗುರು
ಚಿಗುರುಳ್ಳ ಬೇರು.
ಹೊಲದ ತುಂಬಾ ಹಸಿರು ತೇಪೆ
ಬಾವಿ ತುಂಬಾ ನೀರ ಒರತೆ
ಕಣ್ಣ ತುಂಬಾ ಕನಸಗಾಥೆ

ಪೂರ್ಣ ಕವಿತೆಗೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/poetry

ಅಪ್ಪನ ಅಕ್ಕರೆಯ ಮಡಿಲಲ್ಲಿ

ಮಹಿಳೆಯರ ಪ್ರಗತಿಗೆ, ಅವರ ಖುಷಿಗೆ ಪುರುಷ ಯಾವಾಗಲೂ ಕಂಟಕವೇ? ಹಾಗೇನಿಲ್ಲ ಎನ್ನುತ್ತವೆ ಇಲ್ಲಿನ ಎರಡು ಕಥೆಗಳು. ಒಂಬತ್ತು ವಿಭಿನ್ನ ಶೈಲಿಗಳಲ್ಲಿ ಇಂಗ್ಲಿಷ್ ಮಾತನಾಡುವ ಭಾರತದ ಬಾಲಕಿ, ನೂರಾರು ತರಹದ ಡ್ರೆಸ್‌ಗಳನ್ನು ಹೊಂದಿದ ಚೀನಿ ಬಾಲಕಿ – ಇಬ್ಬರ ಖುಷಿಗೂ ಅವರ ಅಪ್ಪಂದಿರೇ ಪ್ರೇರಣೆ. ಅಂದಹಾಗೆ, ಈ ಪ್ರೇರಣೆದಾಯಕ ಕಥೆಗಳನ್ನು ಇಲ್ಲಿ ಹೆಕ್ಕಿಕೊಟ್ಟವರು ನೀಳಾ ಎಂ.ಎಚ್.

ನೂರು ಉಡುಪು; ನೂರಾರು ನೆನಪು

ಅಮೆರಿಕದ ಲೇಖಕಿ ಎಲೆನೋರ್ ಎಸ್ಟೀಸ್ ಅವರು 1944ರಲ್ಲಿ ಬರೆದ 'ದಿ ಹಂಡ್ರೆಡ್ ಡ್ರೆಸಸ್' ಎಂಬ ಪುಸ್ತಕಕ್ಕೆ ಚಿಣ್ಣರ ಲೋಕದಲ್ಲಿ ಇಂದಿಗೂ ವಿಶೇಷ ಪ್ರಾಶಸ್ತ್ಯ. ಬಡತನದಿಂದಾಗಿ ಮಾಸಲು ಬಣ್ಣದ ಬಟ್ಟೆ ಧರಿಸಿ ಶಾಲೆಗೆ ಬರುವ ವಾಂಡಾ ಪೆಟ್ರಾನ್ಸ್‌ಕಿ ಎಂಬ ಬಾಲಕಿ, ಸಹಪಾಠಿಗಳ ಅವಹೇಳನದಿಂದ ಪಾರಾಗಲು ತನ್ನ ಬಳಿ 100 ಬಗೆಯ ಉಡುಪುಗಳಿರುವುದಾಗಿ ಕಥೆ ಕಟ್ಟುತ್ತಾಳೆ. ಇದನ್ನು ನಂಬದ ಸ್ನೇಹಿತೆಯರ ಅಪಹಾಸ್ಯ ಮಿತಿಮೀರಿದಾಗ, ಅವಳ ಕುಟುಂಬ ಊರನ್ನೇ ತ್ಯಜಿಸಬೇಕಾಗುತ್ತದೆ. ಆದರೆ, ಅದಕ್ಕೆ ಮುಂಚೆ ಶಾಲೆಯಲ್ಲಿ ಏರ್ಪಡಿಸಿದ್ದ '100 ವಸ್ತ್ರ ವಿನ್ಯಾಸ' ಸ್ಪರ್ಧೆಯಲ್ಲಿ, ತನ್ನ ಕನಸಿನರಮನೆಯಲ್ಲಿ ರಾಜಕುವರಿಯಾಗಿ ತಾನು ತೊಟ್ಟು ನಲಿದಿದ್ದ ಉಡುಪುಗಳ ವಿಧವಿಧ ವಿನ್ಯಾಸಗಳನ್ನು ಅವಳು ಕಾಗದದ ಮೇಲೆ ಅರಳಿಸಿರುತ್ತಾಳೆ. ಅಂದಚಂದದ ಆ ವಿನ್ಯಾಸಗಳು ಮೊದಲ ಬಹುಮಾನ ಗಿಟ್ಟಿಸುವುದಲ್ಲದೆ ಅವಳ ಸ್ನೇಹಿತೆಯರ ಕಣ್ಣನ್ನೂ ತೆರೆಸುತ್ತವೆ. ತಾರತಮ್ಯದ ನಡೆಗಾಗಿ ತಮ್ಮ ಬಗ್ಗೆ ನಾಚಿಕೆಪಟ್ಟುಕೊಳ್ಳುವಂತೆ ಮಾಡುತ್ತವೆ.

ಹೊಸ ವಿನ್ಯಾಸದ ಉಡುಗೆಯಲ್ಲಿ ಷಿಷಿ . ಮಗಳ ಉಡುಗೆ ಹೊಲಿಯುತ್ತಿರುವ ಷು ರಿಕಿನ್

ಷು ಹೊಲಿದ ಉಡುಗೆಗಳಿಗೆ ಷಿಷಿಯೇ ಮಾಡೆಲ್

ಇದೀಗ ಚೀನಾದಲ್ಲೊಬ್ಬ ಅಪ್ಪ ತನ್ನ ಕನಸಿನರಮನೆಯ ರಾಜಕುಮಾರಿಯಾದ ಮಗಳಿಗೆ 100ಕ್ಕೂ ಹೆಚ್ಚು ಉಡುಪುಗಳನ್ನು ಕೈಯಾರೆ ಹೊಲಿದು, ತೊಡಿಸಿ ಕಣ್ತುಂಬಿಕೊಂಡಿದ್ದಾನೆ. ಜಿಯಾಂಗ್‌ಷಿ ಪ್ರಾಂತ್ಯದ ಷು ರಿಕಿನ್ ಈಗ 'ಹಂಡ್ರೆಡ್ ಡ್ರೆಸಸ್ ಫಾದರ್' ಅಥವಾ 'ಟೈಲರ್ ಅಪ್ಪ' ಎಂದೇ ಖ್ಯಾತ. ಏಳೆಂಟು ವರ್ಷಗಳ ಹಿಂದೆ ಪುಟ್ಟ ಮಗಳು ಷಿಷಿಯನ್ನು ನೋಡಿಕೊಳ್ಳಲು ಗಂಡ, ಹೆಂಡತಿ ಇಬ್ಬರಲ್ಲಿ ಒಬ್ಬರು ಕೆಲಸ ಬಿಡಬೇಕಾಗಿ ಬಂದಾಗ, ತನಗಿಂತ ಒಳ್ಳೆಯ ನೌಕರಿಯಲ್ಲಿದ್ದ ಹೆಂಡತಿಯನ್ನು ಕೆಲಸಕ್ಕೆ ಕಳಿಸಿ, ತಾವೇ ಮನೆಯಲ್ಲಿದ್ದು ಮಗಳನ್ನು ಸಲಹುವ ಹೊಣೆ ಹೊರುತ್ತಾರೆ ಷು. ಒಮ್ಮೆ ರಸ್ತೆ ಬದಿಯಲ್ಲಿ ಕಣ್ಸೆಳೆದ ಬಟ್ಟೆಯಿಂದ ಮಗಳಿಗಾಗಿ ಫ್ರಾಕೊಂದನ್ನು ಹೊಲಿಯಬಾರದೇಕೆ ಅನಿಸಿದ್ದೇ ತಡ, ತನ್ನಮ್ಮ ಎಂದೋ ಕೊಟ್ಟಿದ್ದ ಹೊಲಿಗೆ ಮಷೀನ್ ಅಟ್ಟದಿಂದ ಕೆಳಗಿಳಿಯುತ್ತದೆ. ಟೈಲರ್ ಸ್ನೇಹಿತನ ನೆರವಿನಿಂದ ಫ್ರಾಕ್ ಹೊಲಿದು ಮಗಳಿಗೆ ತೊಡಿಸೇಬಿಡುವ ಷುಗೆ ಎಲ್ಲಿಲ್ಲದ ರೋಮಾಂಚನ. ಮಗಳು ಷಿಷಿಗೂ ಹಿರಿಹಿರಿ ಹಿಗ್ಗು.

ಈ ಖುಷಿಯನ್ನು ನಿರಂತರವಾಗಿಸಲು ಬಯಸುವ ಷುಗೆ ಹೊಲಿಗೆ ಬಾರದ್ದು ತೊಡಕೆನಿಸುವುದೇ ಇಲ್ಲ. ಕಲಿಕೆಗೆ ಆನ್‌ಲೈನ್, ತೊಟ್ಟು ನಲಿಯಲು ಮಗಳು, ಇನ್ನೇನು ಬೇಕು? ಬಟ್ಟೆಗೆ ಬಿದ್ದ ಒಂದೊಂದು ಹೊಲಿಗೆಯ ನೂಲಿನಲ್ಲೂ ಅಪ್ಪನ ಬೆಚ್ಚನೆಯ ಪ್ರೀತಿ ಉಕ್ಕಿ ಹರಿಯುತ್ತದೆ. ಸಾಧಾರಣ ಉಡುಪಿನಿಂದ ಹಿಡಿದು ಅನುಭವಿ ದರ್ಜಿಗೂ ಸವಾಲೊಡ್ಡುವ ಕುಸುರಿ ಕೆಲಸ, ಸೂಕ್ಷ್ಮ ಹೊಲಿಗೆ ಬೇಡುವ ಚೀನಾ, ಜಪಾನ್‌ನ ಸಾಂಪ್ರದಾಯಿಕ ಉಡುಪುಗಳವರೆಗೂ ಷು ಕೈಚಳಕ ಮುಂದುವರಿಯುತ್ತದೆ. ಫ್ರಾನ್ಸ್‌ನಲ್ಲಿ ತಾವು ಪಡೆದು ಬಂದಿದ್ದ ಇಂಟರ್‌ನ್ಯಾಷನಲ್ ಟ್ರೇಡ್ ಆ್ಯಂಡ್ ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್ ಪದವಿಯಿಂದ ಈ ಕಾಯಕಕ್ಕೆ ಚಿಕ್ಕಾಸಿನ ಪ್ರಯೋಜನವಾಗದಿದ್ದರೂ ಚಿಕ್ಕಂದಿನಲ್ಲಿ ಕಲಿತಿದ್ದ ಚಿತ್ರಕಲೆ ಅವರ ಕೈಹಿಡಿಯುತ್ತದೆ, ಉಡುಪುಗಳ ಸೊಬಗು ಹೆಚ್ಚಿಸುತ್ತದೆ. ಕೆಲವು ಉಡುಪುಗಳು 24 ಗಂಟೆಗಳಲ್ಲೇ ಸಿದ್ಧಗೊಂಡರೆ, ಇನ್ನು ಕೆಲವಕ್ಕೆ ವಾರಗಟ್ಟಲೆ ತಗುಲಿದ್ದೂ ಉಂಟು. ಸಹನೆ ಕಳೆಯುವ, ರೇಜಿಗೆ ಹುಟ್ಟಿಸುವ ಗಳಿಗೆಗಳೂ ಅಪ್ಪನ ವಾತ್ಸಲ್ಯದ ಮುಂದೆ ಶರಣಾಗುತ್ತವೆ.

ಒಮ್ಮೆ ಅಣ್ಣನ ಒತ್ತಾಸೆಯಿಂದ ತನ್ನ ವಸ್ತ್ರವಿನ್ಯಾಸದ ವಿಡಿಯೊ ತುಣುಕನ್ನು ಆನ್‌ಲೈನ್‌ಗೆ ಹಾಕಿದಾಗ ಬಂದ ಜನರ ಅನಿರೀಕ್ಷಿತ ಪ್ರತಿಕ್ರಿಯೆಯಿಂದ ಪುಳಕಗೊಳ್ಳುವ ಷು, ಮುಂದೆ ಮಗಳಿಗಾಗಿ ಹೊಲಿದದ್ದನ್ನೆಲ್ಲ ಪೋಸ್ಟ್ ಮಾಡತೊಡಗುತ್ತಾರೆ. ಅದಕ್ಕೆಲ್ಲ ಮಗಳೇ ರೂಪದರ್ಶಿ. ಇದೀಗ ಷು ಮಕ್ಕಳ ಫ್ಯಾಷನ್ ಉಡುಪುಗಳ ಮಳಿಗೆಯನ್ನೇ ತೆರೆದಿದ್ದಾರೆ.

'ಮಗಳೊಂದಿಗೆ ನಾನು ಕಳೆಯುವ ಮಧುರ ಕ್ಷಣಗಳಿಗೆ ಈ ಉಡುಪುಗಳು ನಿಮಿತ್ತವಾಗಲಿವೆ. ಅವಳ ಬಾಲ್ಯದ ನೆನಪುಗಳನ್ನು ವಸ್ತ್ರಗಳ ಮೂಲಕ ಅಮರವಾಗಿಸಲು ನಾನು ನಿರ್ಧರಿಸಿದೆ. ಮುಂದೆ ದೊಡ್ಡವಳಾದಾಗ, ತನ್ನಪ್ಪನ ಈ ವಾತ್ಸಲ್ಯದ ಹೊನಲನ್ನು ಅವಳು ತನ್ನ ಮಗಳ ಮೇಲೂ ಹರಿಸುವಂತಾಗಲಿ' ಎಂದು ಭಾವುಕರಾಗಿ ನುಡಿಯುತ್ತಾರೆ ಷು. ಭಾರತದಂತೆ ಗಂಡು ಮಗುವಿಗೇ ಹೆಚ್ಚು ಪ್ರಾಶಸ್ತ್ಯವಿರುವ ಚೀನಾದಲ್ಲಿ, ತನ್ನ ಮಗಳಿಗೂ ಮಗಳಾಗಲಿ ಎಂದು ಬಯಸುವ ಷು ಎಲ್ಲ ಬಗೆಯಲ್ಲೂ ಮಾದರಿ ಅಪ್ಪನಂತೆ ಕಾಣುತ್ತಾರೆ.

ಎಲೆನಾರ್ ಅವರ 'ದಿ ಹಂಡ್ರೆಡ್ ಡ್ರೆಸಸ್' ವಾಂಡಾಳ ಸ್ನೇಹಿತೆಯರ ಕಣ್ಣು ತೆರೆಸಿದಂತೆ, ಈ ಅಪ್ಪನ 'ಹಂಡ್ರೆಡ್ ಡ್ರೆಸಸ್' ಹೆಣ್ಣುಮಕ್ಕಳ ವಿಷಯದಲ್ಲಿ ಕುರುಡಾಗಿರುವವರ ಕಣ್ಣು ತೆರೆಸುವಂತಾದರೆ...

ಭಾರತದ ವಾಕ್ ಚತುರೆ

ದೆಹಲಿಯ ಕೆಂಪುಕೋಟೆಯಲ್ಲಿ ಪುಟ್ಟ ಮಗಳ ಕೈಹಿಡಿದು ಸಾಗುತ್ತಿದ್ದ ಅಪ್ಪ, ಬದಿಯಲ್ಲಿ ಕಂಡ ವಿದೇಶಿ ಪ್ರವಾಸಿಗರನ್ನು ಕುತೂಹಲದಿಂದ ಮಾತಿಗೆಳೆಯುತ್ತಾನೆ. ಆ 'ಹೊಸ ಮನುಷ್ಯ'ರನ್ನೇ ಎವೆಯಿಕ್ಕದೆ ದಿಟ್ಟಿಸುತ್ತಿದ್ದ ಮಗಳು, ಅವರು ಅತ್ತ ಹೋದಕೂಡಲೆ, ಆವರೆಗೂ ಅವರಾಡುತ್ತಿದ್ದ ಮಾತುಗಳನ್ನು ಡಿಟ್ಟೊ ಅವರದೇ ಶೈಲಿಯಲ್ಲಿ ಮರುನುಡಿಯುತ್ತಾಳೆ. ಇದನ್ನು ಕೇಳಿದ ಅಪ್ಪ ಬೆಕ್ಕಸಬೆರಗಾಗುತ್ತಾನೆ. ಮನೆಗೆ ಬಂದು, ಬೇಕೆಂದೇ ವಿದೇಶಿ ಭಾಷೆಯ ಆಡಿಯೊವೊಂದನ್ನು ಮಗಳಿಗೆ ಕೇಳಿಸುತ್ತಾನೆ. ಅದನ್ನೂ ಅವಳು ಅದೇ ಉಚ್ಚಾರಣಾ ಶೈಲಿಯಲ್ಲಿ ಯಥಾವತ್ ಒಪ್ಪಿಸುತ್ತಾಳೆ. ಅವನಿಗಾಗ ಮನದಟ್ಟಾಗುತ್ತದೆ. ಮಗಳ ಅಗಾಧ ಪ್ರತಿಭೆಗೆ ನೀರೆರೆಯುವ ದೃಢ ಸಂಕಲ್ಪ ಅಪ್ಪನ ಮನಸ್ಸಿನಲ್ಲಿ ಹರಳುಗಟ್ಟಿದರೆ, ಅದಕ್ಕೆ ತಕ್ಕಂತೆ, ಮಗಳಲ್ಲಿ ಸುಪ್ತವಾಗಿದ್ದ ಕಲಿಕೆಯ ಹಸಿವು ಭುಗಿಲೇಳುತ್ತದೆ.

ವಿದೇಶಿ ಭಾಷೆಗಳ ವಿಡಿಯೊ ತುಣುಕುಗಳ ರಾಶಿಯನ್ನೇ ಅಪ್ಪ ತನ್ನ ಮಗಳ ಮುಂದಿರಿಸುತ್ತಾನೆ. ಬಿಬಿಸಿ, ಸಿಎನ್‌ಎನ್ ವಾರ್ತಾ ಸಂಚಿಕೆಗಳನ್ನು ಆಲಿಸುವುದು ನಿತ್ಯದ ರೂಢಿಯಾಗುತ್ತದೆ. ಅವುಗಳ ಬ್ರಿಟನ್ ಮತ್ತು ಅಮೆರಿಕನ್ ಶೈಲಿಯ ಭಿನ್ನ ಉಚ್ಚಾರಣೆ ಕರಗತವಾದಂತೆಲ್ಲಾ ಇಂಗ್ಲಿಷ್ ಭಾಷೆಯ ಬೇರೆ ಬೇರೆ ಶೈಲಿಗಳ ಬೆನ್ನುಹತ್ತುವ ಅವಳಿಗೆ, ಭಾಷೆಯ ಸೊಗಡಿನ ರುಚಿ ಹತ್ತುತ್ತದೆ. ಅದೇ ಜಾಡು ಹಿಡಿದು ಹೊರಟಾಗ ಭಾಷಾ ಲೋಕದ ಬೆರಗಿನ ಲೋಕವೇ ತೆರೆದುಕೊಳ್ಳುತ್ತದೆ. ಅನ್ಯಭಾಷೆಗಳನ್ನು ಹೇಗಾದರೂ ಒಲಿಸಿಕೊಳ್ಳಬೇಕೆಂಬ ಅವಳ ಬಯಕೆಗೆ ಯುಟ್ಯೂಬ್ ವಿಡಿಯೊಗಳು ಸಾಥ್ ನೀಡುತ್ತವೆ. ಸ್ವಪ್ರಯತ್ನದಿಂದಲೇ ಅವುಗಳ ಮೇಲೆ ಹಿಡಿತ ಸಾಧಿಸಿ, ಬಗೆಬಗೆಯ ಭಾಷೆಗಳ ಲಾಲಿತ್ಯದಿಂದ ಕೇಳುಗರನ್ನು ನಿಬ್ಬೆರಗಾಗಿಸುವ ಜಾಹ್ನವಿ ಪನ್ವಾರ್ ಇಂದು 'ಭಾರತದ ಅದ್ಭುತ ಬಾಲಕಿ'!

ಇಂಗ್ಲಿಷ್ ಭಾಷೆ ನಮ್ಮ ಎಷ್ಟೋ ಗ್ರಾಮೀಣ ಪ್ರತಿಭೆಗಳಿಗೆ ಕಬ್ಬಿಣದ ಕಡಲೆ. ಇದೇ ಕಾರಣಕ್ಕೆ ಅವರು ಅವಕಾಶ ವಂಚಿತರಾಗುತ್ತಿರುವಾಗ, ಜಾಹ್ನವಿ ಒಂದಲ್ಲ, ಎರಡಲ್ಲ 9 ವಿಭಿನ್ನ ಶೈಲಿಗಳಲ್ಲಿ ಇಂಗ್ಲಿಷ್ ಭಾಷೆಯನ್ನು ಅರಳು ಹುರಿದಂತೆ ಪಟಪಟನೆ ಮಾತನಾಡುತ್ತಾಳೆ. ಅದರ ಜೊತೆಗೆ ಹಿಂದಿ, ಹರಿಯಾಣವಿ, ಜಪಾನಿ, ಫ್ರೆಂಚ್ ಭಾಷೆಗಳೂ ಆಕೆಗೆ ನಿರರ್ಗಳ. ಹಾಗೆಂದ ಮಾತ್ರಕ್ಕೆ ಅವಳು ಯಾವುದೋ ಮೆಟ್ರೊಪಾಲಿಟನ್ ಸಿಟಿಯ 'ಕಾನ್ವೆಂಟ್ ಕಿಡ್' ಅಲ್ಲ. ಅವಳೂ ಅಪ್ಪಟ ಹಳ್ಳಿಸೊಗಡಿನ ಹೆಣ್ಣುಮಗಳೇ.

ಹರಿಯಾಣದ ಮಾಲ್ಪುರ ಎಂಬ ಹಳ್ಳಿಯವಳಾದ ಜಾಹ್ನವಿಯ ಅಪ್ಪ- ಅಮ್ಮನಿಗೆ ಇಂಗ್ಲಿಷ್ ಬಾರದು. ಅಪ್ಪ ಶಿಕ್ಷಕರಾಗಿದ್ದರೂ ಹಿಂದಿ ಮತ್ತು ಹರಿಯಾಣವಿಯಲ್ಲಷ್ಟೇ ಅವರಿಗೆ ಪರಿಣತಿ. ಗೃಹಿಣಿ ಅಮ್ಮನಿಗೂ ಇಂಗ್ಲಿಷ್ ಬರುವುದು ಅಷ್ಟಕ್ಕಷ್ಟೆ. ಅಷ್ಟೇ ಏಕೆ, ಆಕೆ ಓದಿದ ಶಾಲೆಯಲ್ಲೂ ಇಂಗ್ಲಿಷ್ ವಾತಾವರಣ ಇರಲಿಲ್ಲ. ಆದರೂ ಒಂದು ವರ್ಷದವಳಿದ್ದಾಗಲೇ ಸುಮಾರು 500 ಇಂಗ್ಲಿಷ್ ಪದಗಳನ್ನು ಆಕೆ ಸರಾಗವಾಗಿ ಉಚ್ಚರಿಸುತ್ತಿದ್ದಳು. ಗೊಂಬೆಯಾಟಕ್ಕಿಂತ ಪ್ರಾಣಿ- ಪಕ್ಷಿಗಳ ಚಿತ್ರ ನೋಡುವುದು, ಪಜಲ್ ಬಿಡಿಸುವುದೇ ಜಾಹ್ನವಿಗೆ ಅಚ್ಚುಮೆಚ್ಚು. ಅವಳ ಅಗಾಧ ಸಾಮರ್ಥ್ಯ, ಅಪರಿಮಿತ ನೆನಪಿನ ಶಕ್ತಿಗೆ ಮನ್ನಣೆ ನೀಡುವ ಶಾಲಾ ಆಡಳಿತ ಮಂಡಳಿ, ಮೂರನೇ ವಯಸ್ಸಿಗೇ ಆಕೆಗೆ ಯುಕೆಜಿಗೆ ಪ್ರವೇಶ ನೀಡುತ್ತದೆ. ಒಂದೇ ಬಾರಿಗೆ ಎರಡೆರಡು ತರಗತಿಗಳ ಪರೀಕ್ಷೆ ಬರೆಯಲು ವಿಶೇಷ ಅನುಮತಿ ದೊರೆಯುತ್ತದೆ. ಅದರಂತೆ 7ನೇ ವಯಸ್ಸಿಗೇ 8ನೇ ತರಗತಿ ಪ್ರವೇಶಿಸುವ ಜಾಹ್ನವಿ, ತನ್ನ ವಯಸ್ಸಿನ ಮಕ್ಕಳು 8ನೇ ತರಗತಿ ಓದುತ್ತಿರುವ ಹೊತ್ತಿಗಾಗಲೇ ದೆಹಲಿ ವಿಶ್ವವಿದ್ಯಾಲಯದ ಸತ್ಯವತಿ ಕಾಲೇಜಿನಲ್ಲಿ ಕಲಾ ವಿಭಾಗದ ಪದವಿ ತರಗತಿಯ ವಿದ್ಯಾರ್ಥಿನಿಯಾಗುತ್ತಾಳೆ. ಪ್ರತಿಭಾವಂತ ಬಡ ವಿದ್ಯಾರ್ಥಿಗಳನ್ನು ಐಐಟಿ- ಜೆಇಇ ಪ್ರವೇಶ ಪರೀಕ್ಷೆಗೆ ಸಜ್ಜುಗೊಳಿಸುವ ಆನಂದ್ ಕುಮಾರ್ ಅವರ 'ಸೂಪರ್ 30' ತರಬೇತಿಗೆ, ಅರ್ಹತಾ ಪರೀಕ್ಷೆಯನ್ನೇ ಬರೆಯದೆ ಆಯ್ಕೆಯಾಗಲು ಭಾಷಾ ಪ್ರೌಢಿಮೆಯೊಂದೇ ಆಕೆಗೆ ಸಾಕಾಗುತ್ತದೆ.

ಈಗ 17 ವರ್ಷದವಳಾಗಿರುವ ಜಾಹ್ನವಿಯ ಸ್ಫೂರ್ತಿದಾಯಕ ಭಾಷಣಗಳು ದೇಶದಾದ್ಯಂತ ಹಲವಾರು ಶಿಕ್ಷಣ ಸಂಸ್ಥೆಗಳಲ್ಲಿ, ಐಎಎಸ್ ತರಬೇತಿ ಅಕಾಡೆಮಿಗಳಲ್ಲಿ ಚಿರಪರಿಚಿತ. ತನ್ನದೇ ಯುಟ್ಯೂಬ್ ಚಾನೆಲ್‌ನಲ್ಲಿ ತನ್ನ ಅಸ್ಖಲಿತ ಇಂಗ್ಲಿಷ್ ಹಾಗೂ ವಿದೇಶಿ ಭಾಷೆಗಳ ಮೇಲಿನ ಹಿಡಿತದ ರಹಸ್ಯವನ್ನು ಆಕೆ ತೆರೆದಿಟ್ಟಿದ್ದಾಳೆ. ಟಿ.ವಿ ಮುಂದೆ ಕುಳಿತು ವಾರ್ತಾ ವಾಚಕರ ಉಚ್ಚಾರಣಾ ಶೈಲಿಯನ್ನು ತದೇಕಚಿತ್ತದಿಂದ ಆಲಿಸುತ್ತಿದ್ದ ಅದೇ ಬಿಬಿಸಿ ಚಾನೆಲ್ ಆಕೆಯ ಸಂದರ್ಶನವನ್ನು ಪ್ರಸಾರ ಮಾಡಿದೆ. ಐಎಎಸ್ ಆಕಾಂಕ್ಷಿಗಳಿಗೆ ತನ್ನ ಭಾಷಣಗಳ ಮೂಲಕ ಪ್ರೇರಣೆ ನೀಡುವ ಜಾಹ್ನವಿಗೆ ಮುಂದೊಂದು ದಿನ ತಾನೂ ಆ ಪರೀಕ್ಷೆ ಪಾಸು ಮಾಡುವ, ಬಿಬಿಸಿ ವಾರ್ತಾ ವಾಚಕಿಯಾಗುವ ಮಹತ್ವಾಕಾಂಕ್ಷೆ ಇದೆ.

'ನನ್ನ ಪತ್ನಿ ಗರ್ಭಿಣಿಯಾಗಿದ್ದಾಗ, ಸಾಮಾನ್ಯವಾಗಿ ಎಲ್ಲರೂ ಬಯಸುವಂತೆ ನಮ್ಮ ಮನೆಯಲ್ಲೂ ಗಂಡು ಮಗುವಾಗಲಿ ಎಂಬ ಅಪೇಕ್ಷೆ ಇತ್ತು. ಆದರೆ ಮಗಳು ಹುಟ್ಟಿದಾಗ ನಾನು ಅಷ್ಟೇ ಸಂಭ್ರಮದಿಂದ ಬರಮಾಡಿಕೊಂಡೆ. ಅವಳು ಮೊದಲಿನಿಂದಲೂ ನನ್ನ ಹೆಮ್ಮೆಯ ಪುತ್ರಿಯಾಗಿಯೇ ಬೆಳೆದಳು' ಎನ್ನುತ್ತಾರೆ ಜಾಹ್ನವಿಯ ತಂದೆ ಬ್ರಿಜ್‌ಮೋಹನ್ ಪನ್ವಾರ್.

'ನಮಗೆ ಎಷ್ಟೇ ಸಮಯದ ಅಭಾವ ಇದ್ದರೂ ಮಕ್ಕಳಿಗೆ ನಾವು ಒಂದಷ್ಟು ಸಮಯವನ್ನು ಕೊಡಲೇಬೇಕು. ಅವರು ಓದುವುದರಲ್ಲಿ ಮುಂದೆ ಇರಲಿ ಅಥವಾ ಇಲ್ಲದಿರಲಿ ಅವರಲ್ಲಿ ನಂಬಿಕೆ ಇಟ್ಟು ಅವರ ಕನಸುಗಳ ಸಾಕಾರಕ್ಕೆ ಪ್ರೋತ್ಸಾಹಿಸುವುದು ಅತ್ಯಂತ ಮುಖ್ಯ. ಅದರಲ್ಲೂ ಹೆಣ್ಣುಮಕ್ಕಳು ಯಾವುದರಲ್ಲೂ ಗಂಡುಮಕ್ಕಳಿಗಿಂತ ಕಡಿಮೆಯಿಲ್ಲ' ಎನ್ನುವ ಅವರ ಮಾತು, ದಿನನಿತ್ಯದ ಜಂಜಡಗಳಲ್ಲಿ ಕಳೆದುಹೋಗುತ್ತಿರುವವರಿಗೆ, ಹೆಣ್ಣುಮಕ್ಕಳನ್ನು ತಾತ್ಸಾರದಿಂದ ಕಾಣುವವರಿಗೆ ಚಾಟಿ ಏಟಿನಂತೆ ಭಾಸವಾಗುತ್ತದೆ.

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಡಣ್ಣ ಚಕ್ಕು ಶೀಶ್ರುಷ್ಟು ಕಥೆಯ

ಹಚಿಕೊ

• ಕಲೆ–ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ

ಹಚಿಕೊ – ಜಗತ್ತಿನಲ್ಲೇ ಹೆಸರಾದ ಜಪಾನಿನ ಒಂದು ನಾಯಿ. ಹೈಡ್ಸ್‌ಬುರೊ ವೆನೊ ಎಂಬ ಪ್ರಾಧ್ಯಾಪಕರಿಗೆ ಈ ನಾಯಿ ಮರಿ ಸಿಗುತ್ತದೆ. ಅದನ್ನು ಸಾಕಲು ಅವರು ನಿರ್ಧರಿಸಿ, ಮನೆಗೆ ತರುತ್ತಾರೆ

ನಾಯಿ ಮರಿಯನ್ನು ತಂದಿದ್ದೇಕೆ ಎಂದು ಬೈಯುವ ವೆನೊ ಅವರ ಪತ್ನಿ ಅದನ್ನು ಬಿಟ್ಟು ಬರುವಂತೆ ಹೇಳುತ್ತಾರೆ. ವೆನೊ ಅದನ್ನು ಬೇರೆಡೆ ಬಿಟ್ಟುಬಂದರೂ ಆ ಮರಿ ಮತ್ತೆ ಇವರ ಮನೆಗೆ ಬರುತ್ತದೆ

ವೆನೊ ಅವರು ಪ್ರತಿದಿನ ಕೆಲಸಕ್ಕೆ ಹೊರಟು ನಿಂತಾಗ ಜಪಾನಿನ ಶಿಬುಯಾ ರೈಲು ನಿಲ್ದಾಣದವರೆಗೆ ಅವರ ಜತೆಗೆ ಬಂದು, ರೈಲಿನಲ್ಲಿ ಅವರನ್ನು ಬೀಳ್ಕೊಟ್ಟ ಬಳಿಕ ಮನೆಗೆ ವಾಪಸ್ ಹೋಗುತ್ತಿತ್ತು



ಸಂಜೆ ವೆನೊ ಅವರು ಬರುವಹೊತ್ತಿಗೆ ರೈಲು ನಿಲ್ದಾಣಕ್ಕೆ ಬಂದು ಕಾದಿರುತ್ತಿದ್ದ ಈ ನಾಯಿ, ಅವರು ರೈಲಿನಿಂದ ಇಳಿಯುವುದೇ ತಡ, ಅವರ ಮೇಲೆ ಪ್ರೀತಿಯ ಮಳೆ ಸುರಿಸಿ, ಮನೆಗೆ ಕರೆದೊಯ್ಯುತ್ತಿತ್ತು



ಈ ಪರಿಪಾಟ ನಿತ್ಯ ನಡೆಯುತ್ತಿರಬೇಕಾದರೆ ಒಂದು ದಿನ ವೆನೊ ನಿಧನ ಹೊಂದಿದರು. ಅದರ ಪರಿವೇ ಇಲ್ಲದೆ ತನ್ನ ಮಾಲೀಕನಿಗಾಗಿ ಒಂಬತ್ತು ವರ್ಷ ಕಾಯುತ್ತಾ ಕುಳಿತ ನಾಯಿ, ಒಂದು ದಿನ ನಿಲ್ದಾಣದ ಬಳಿಯೇ ಅಸುನೀಗಿತು



ಶಿಬುಯಾ ರೈಲು ನಿಲ್ದಾಣದ ಮುಂಭಾಗದಲ್ಲಿ ಹಚಿಕೊ ನಾಯಿಯ ಪ್ರತಿಮೆಯನ್ನು ಅಲ್ಲಿನ ಜನ ಸ್ಥಾಪಿಸಿದರು. ನಾಯಿಯ ಸ್ವಾಮಿನಿಷ್ಠೆಯ ದ್ಯೋತಕವಾಗಿ ಈಗಲೂ ಆ ಊರಲ್ಲಿ ಹಚಿಕೊ ಪ್ರತಿಮೆ ಇದೆ

ಮಜ ಮಜ ಮಜಕೂರದ ಫೆ. 28ರ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಗಣಿತದಲ್ಲಿ ಗರ್ದಿ ಗಮ್ಮತ್ತು

ಶೇಷ–ವಿಶೇಷ–ಭಾಗಾಕಾರ

ಇಲ್ಲೊಂದು ಸಂಖ್ಯೆ ಇದೆ. ಅದನ್ನು 6ರಿಂದ ಭಾಗಿಸಿದರೆ 5 ಶೇಷ, 5ರಿಂದ ಭಾಗಿಸಿದರೆ 4 ಶೇಷ, 4ರಿಂದ ಭಾಗಿಸಿದರೆ 3 ಶೇಷ, 3ರಿಂದ ಭಾಗಿಸಿದರೆ 2 ಶೇಷ, 2ರಿಂದ ಭಾಗಿಸಿದರೆ 1 ಶೇಷ ಉಳಿಯುತ್ತದೆ. ಆ ಸಂಖ್ಯೆಯೇ 59. ಭಾಗಿಸಿ ಆನಂದ ಪಡೆಯಿರಿ

ಟ್ವೆಂಟಿ – 20 ಮ್ಯಾಚ್

ಒಗಟುಗಳಿಗೂ ಉತ್ತರಗಳಿಗೂ ಹೊಂದಿಸಿರಿ

1	ತಗಿ–ಒಗಿ	A	ಬೆಳಕು
2	ಬೆಟ್ಟದ ಮೇಲೆ ಬೆಟ್ಟ	B	ಕುಂಬಳ
3	ಚಿಕ್ಕಕ್ಕನಿಗೆ ಉದ್ದನೆ ಪುಕ್ಕ	C	ಹೊಸ್ತಿಲು
4	ಲಟಪಟ ಲೇಡಿಗೆ ಒಂದೇ ಕಣ್ಣು	D	ತೆಂಗು
5	ಕಣ್ಣಿಗೆ ಹತ್ತಿರ ಕಾಲಿಗೆ ದೂರ	E	ತುಟಿ
6	ಕೈ ಹಿಡಿತಾನೆ ಆದರೆ ಗಂಡನಲ್ಲ	F	ಬಳೆಗಾರ
7	ಕರಿಹೊಲದಾಗ ಕದರ ಬಿದ್ದೈತಿ	G	ಸೂಜಿ
8	ಹಸಿರು ತೋಟ ಬೆಳ್ಳಿಗೂಟ	H	ಬೆಳದಿಂಗಳು
9	ಹತ್ತುತಲೆ ಕೆಂಪು ಆರುತಲೆ ಕಪ್ಪು	I	ಬಾರುಕೋಲು
10	ಕೈ ಮುಂದೇನು?	J	ತತ್ತಿ
11	ಗುಡ್ಡದ ಹಿಂದೆ ಗುಂಡುಕಲ್ಲ	K	ಕೊ
12	ಹತ್ತ ಅಂದ್ರೆ ಹತ್ತುದಿಲ್ಲ ಇಪ್ಪತ್ತಂದ್ರೆ ಹತ್ತೈತಿ	L	ಮುಳ್ಳು
13	ಹೊಟ್ಟೆ ಪುಟ್ಟಗೆ ಜುಟ್ಟು ನೆಟ್ಟಗೆ	M	ತುರುಬು
14	ಪೆದ್ದ ಮುಂಡೆಗಂಡ ಅಡ್ಡ ಬಿದ್ದವ್ನೆ	N	ಕೆಂಡ
15	ಅಂಗಳದಾಗ ಹಾಲು ಚೆಲ್ಲೈತಿ	O	ಆಕಾಶ
16	ಗಿಡ್ಡ ಹುಡುಗ ಸೊಡ್ಡ ಹೊಡೀತಾನ	P	ಸೌಟು
17	ಹಗ್ಗ ಹಾಸೈತಿ ಗೂಳಿ ಮಲಗೈತಿ	Q	ಸಿಂಬಳ
18	ಗಚ್ಚಿನ ಮನೆಗೆ ಬಾಗಿಲಾನೇ ಇಲ್ಲ	R	ಬೈತಲೆ
19	ನಮ್ಗ ನಟ್ಟ ನಮ್ಮನ್ನೇ ಬಗ್ಗಸ್ತೈತಿ	S	ಒಂಟೆ
20	ಹಿಡಿದ್ರೆ ಹಿಡಿತುಂಬಾ ಬಿಟ್ರೆ ಮನೆತುಂಬಾ	T	ಮೂಲಂಗಿ

ಶಬ್ದಗಳಲ್ಲಿ ಸರಸ

ಪದ–ಪರಿಚಯ–ಪರೀಕ್ಷೆ

ಇಲ್ಲಿ ಕೊಟ್ಟಿರುವ ಅಕ್ಷರಗಳನ್ನು ಬೇರ್ಪಡಿಸಿ ಸೂರ್ಯನ ಆರು ಹೆಸರುಗಳನ್ನು ರಚಿಸಿರಿ

ಆ	ರ	ವಿ	ಕ	ನೇ	ಇ
ಅ	ನ	ದಿ	ಸ್ಕ	ರ	ಸ
ದಿ	ರು	ಭಾ	ರ	ತ್ಯ	ರ

ಪುಟಾಣಿ ಪದಬಂಧ

ಇಲ್ಲಿ ಕೊಟ್ಟಿರುವ ಅನುಸ್ವಾರದ ಆಚೀಚೆ ಸುಳಿವು ಆಧರಿಸಿ, ಅಕ್ಷರ ಪಟ್ಟಿಯಿಂದ ಎರಡಕ್ಷರ ತುಂಬಿ ಪದ ರಚಿಸಿ.

ಪದ ಪಟ್ಟಿ

ಹ	ದಿ	ಚು	ಮ	ದ
ದು	ಇ	ದು	ದು	ಡ

◯	ಂ	◯	ಪಾಲು ಮಾಡು
◯	ಂ	◯	ಜುಲ್ಮಾನೆ
◯	ಂ	◯	ಅಪವ್ಯಯ
◯	ಂ	◯	ಈ ದಿನ
◯	ಂ	◯	ಜನ

ಸರಿ ಉತ್ತರ ನೀಡಿದ ಆಯ್ದ ಮೂರು ಪುಟಾಣಿಗಳು

ಶ್ರೀಯಾ ಚಿವಟೆ
ಬೆಂಗಳೂರು

ಮಾನ್ಯ.ಎಂ.ಎ
ಹಾಸನ



ಚೇತನ್‌ರಾಜ್ ಭಂಡಿ
ಬಾಗಲಕೋಟೆ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪುಟಾಣಿ ಪದಬಂಧ

1-ಕುಂಭ 2-ಕುಂದು 3-ಸಂಗ 4-ತುಂಗೆ 5-ಮಂಕು

ಟ್ವೆಂಟಿ–20 ಮ್ಯಾಚ್

1-E, 2-O, 3-D, 4-K, 5-C, 6-G, 7-J, 8-H, 9-B, 10-F, 11-N, 12-I, 13-M, 14-P, 15-A, 16-L, 17-Q, 18-T, 19-S, 20-R.

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ–20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ವಾಷಿಂಗ್ಟನ್ ಸುಂದರ್‌ಗೆ ಕೈಗೂಡದ ಶತಕದ ಆಸೆ; ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಅಕ್ಷರ್–ಅಶ್ವಿನ್ ಸ್ಪಿನ್ ಮೋಡಿ

ವಿರಾಟ್ ಕೊಹ್ಲಿ ಪಡೆಗೆ ಸರಣಿ ಕಿರೀಟ

ಪ್ರಜಾವಾಣಿ ವಾರ್ತೆ

ವಿಕೆಟ್ ಗಳಿಸಿದ ಅಶ್ವಿನ್ ಅವರಿಗೆ ಸಹ ಆಟಗಾರರ ಅಭಿನಂದನೆ–ಪಿಟಿಐ ಚಿತ್ರ

ಅಹಮದಾಬಾದ್: ಗುಜರಾತಿ ಪ್ರತಿಭೆ ಅಕ್ಷರ್ ಪಟೇಲ್ ಶನಿವಾರ ಮೊಟೇರಾದ ನರೇಂದ್ರ ಮೋದಿ ಕ್ರೀಡಾಂಗಣಗದಲ್ಲಿ ಎರಡು ಜೊತೆಯಾಟಗಳಲ್ಲಿ ಮಿಂಚಿದರು. ಬೆಳಿಗ್ಗೆ ಬ್ಯಾಟಿಂಗ್‌ನಲ್ಲಿ ವಾಷಿಂಗ್ಟನ್ ಸುಂದರ್ ಜೊತೆಗೂಡಿ ಭಾರತ ತಂಡಕ್ಕೆ ಉತ್ತಮ ಮುನ್ನಡೆಯ ಬಲ ತುಂಬಿದರು ಮಧ್ಯಾಹ್ನ ಆಫ್‌ಸ್ಪಿನ್ನರ್ ಆರ್. ಅಶ್ವಿನ್ ಜೊತೆಗೂಡಿ ಇಂಗ್ಲೆಂಡ್ ತಂಡದ ಬ್ಯಾಟಿಂಗ್ ಪಡೆಯನ್ನು ದೂಳೀಪಟ ಮಾಡಿದರು.

ಆತಿಥೇಯರು ಮೊದಲ ಇನಿಂಗ್ಸ್‌ನಲ್ಲಿ ಸಾಧಿಸಿದ್ದ 160 ರನ್‌ಗಳ ಮುನ್ನಡೆ ಮೊತ್ತವನ್ನು ಚುಕ್ತಾ ಮಾಡುವ ಜೋ ರೂಟ್ ಬಳಗವು 54.5 ಓವರ್‌ಗಳಲ್ಲಿ 135 ರನ್ ಗಳಿಸಲು ಮಾತ್ರ ಶಕ್ತವಾಯಿತು. ಇದರಿಂದಾಗಿ ಇನಿಂಗ್ಸ್ ಮತ್ತು 25 ರನ್‌ಗಳ ಅಂತರದಿಂದ ಪರಾಭವಗೊಂಡಿತು. ಮೂರೇ ದಿನಗಳಲ್ಲಿ ಟೆಸ್ಟ್ ಪಂದ್ಯ ಮುಗಿಯಿತು. ಹೋದ ಪಂದ್ಯವು ಎರಡು ದಿನಗಳಲ್ಲಿ ಮುಕ್ತಾಯವಾಗಿತ್ತು. ಇಂಗ್ಲೆಂಡ್ ತಂಡವು ಮೊದಲ ಇನಿಂಗ್ಸ್‌ನಲ್ಲಿ ಗಳಿಸಿದ್ದ 205 ರನ್‌ಗಳಿಗೆ ಉತ್ತರವಾಗಿ ಭಾರತವು ಮೊದಲ ಇನಿಂಗ್ಸ್‌ನಲ್ಲಿ 114.4 ಓವರ್‌ಗಳಲ್ಲಿ 365 ರನ್ ಗಳಿಸಿತು.

ವಿರಾಟ್ ಕೊಹ್ಲಿ ಪಡೆಯು 3–1ರಿಂದ ಸರಣಿ ಜಯಿಸಿತು. ಇದರೊಂದಿಗೆ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ (ಡಬ್ಲುಟಿಸಿ) ಪಾಯಿಂಟ್ ಪಟ್ಟಿಯಲ್ಲಿಯೂ ಅಗ್ರಸ್ಥಾನ ಪಡೆದು ಫೈನಲ್ ಪ್ರವೇಶಿಸಿತು. ಅದರಿಂದಾಗಿ ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾ ತಂಡಗಳ ಡಬ್ಲುಟಿಸಿ ಫೈನಲ್ ಕನಸು ಕಮರಿತು.

ನಾಲ್ಕನೇ ಪಂದ್ಯದ ಮುನ್ನ ಭಾರತ ತಂಡವು ಸರಣಿಯಲ್ಲಿ 2–1ರ ಮುನ್ನಡೆ ಸಾಧಿಸಿತ್ತು. ಆದರೆ, ನಾಲ್ಕನೇ ಪಂದ್ಯದಲ್ಲಿ ಒಂದೊಮ್ಮೆ ಸೋತಿದ್ದರೆ ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್ ತಂಡಗಳಿಗೆ ಡಬ್ಲ್ಯುಟಿಸಿ ಫೈನಲ್‌ಗೆ ಸಾಗಲು ಮತ್ತೊಂದು ಸಣ್ಣ ಅವಕಾಶ ಇರುತ್ತಿತ್ತು. ಆದರೆ ಈಗ ಗೆಲುವು ಮತ್ತು ಪಾಯಿಂಟ್ಸ್ ಸರಾಸರಿಯಲ್ಲಿ ಭಾರತವು ಅಗ್ರಸ್ಥಾನ ಗಳಿಸಿದೆ. ಈ ಮೊದಲೇ ಫೈನಲ್ ಅರ್ಹತೆ ಗಿಟ್ಟಿಸಿದ್ದ ನ್ಯೂಜಿಲೆಂಡ್ ಎರಡನೇ ಸ್ಥಾನಕ್ಕಿಳಿದಿದೆ. ಕಿವೀಸ್ ಮತ್ತು ಭಾರತ ಲಾರ್ಡ್ಸ್‌ನಲ್ಲಿ ಜೂನ್‌ನಲ್ಲಿ ಮುಖಾಮುಖಿಯಾಗಲಿವೆ.

ಸುಂದರ್‌ಗೆ ಒಲಿಯದ ಶತಕ: ರವೀಂದ್ರ ಜಡೇಜ ಅವರ ಗೈರುಹಾಜರಿಯನ್ನು ಸಮರ್ಥವಾಗಿ ತುಂಬಿದ ವಾಷಿಂಗ್ಟನ್ ಸುಂದರ್ (ಔಟಾಗದೆ 96; 174ಎಸೆತ, 10ಬೌಂಡರಿ, 1 ಸಿಕ್ಸರ್) ಕೇವಲ ನಾಲ್ಕು ರನ್‌ಗಳ ಅಂತರದಿಂದ ಶತಕ ತಪ್ಪಿಸಿಕೊಂಡರು. ಆದರೆ, ಇನಿಂಗ್ಸ್‌ನಲ್ಲಿ ಎರಡನೇ ಶತಕದ ಜೊತೆಯಾಟ ಆಡುವಲ್ಲಿ ಯಶಸ್ವಿಯಾದರು.

ಶುಕ್ರವಾರ ಅಲ್ಪಮೊತ್ತಕ್ಕೆ ಕುಸಿಯುವ ಭೀತಿಯಲ್ಲಿದ್ದ ಭಾರತಕ್ಕೆ ರಿಷಭ್ ಪಂತ್ ಮತ್ತು ವಾಷಿಂಗ್ಟನ್ ಸುಂದರ್ ಅವರ 113 ರನ್‌ಗಳ ಜೊತೆಯಾಟವು ಬಲ ತುಂಬಿತ್ತು. ರಿಷಭ್ ಅಮೋಘ ಶತಕ ದಾಖಲಿಸಿದ್ದರು. ದಿನದಾಟದ ಮುಕ್ತಾಯಕ್ಕೆ ಕ್ರೀಸ್‌ನಲ್ಲಿದ್ದ ಸುಂದರ್ ಮತ್ತು ಅಕ್ಷರ್ ಮೂರನೇ ದಿನ ಬೆಳಿಗ್ಗೆಯೂ ಚೆಂದದ ಬ್ಯಾಟಿಂಗ್ ಮಾಡಿದರು. ಇವರಿಬ್ಬರೂ ಎಂಟನೇ ವಿಕೆಟ್ ಜೊತೆಯಾಟದಲ್ಲಿ 106 ರನ್ ಗಳಿಸಿದರು.

ಆದರೆ, ಜೋ ರೂಟ್ ಮತ್ತು ಜಾನಿ ಬೆಸ್ಟೊ ಅವರ ಚುರುಕಾದ ಫೀಲ್ಡಿಂಗ್ ಮತ್ತು ಥ್ರೋ ದಿಂದಾಗಿ ಅಕ್ಷರ್ (43; 97ಎಸೆತ, 5ಬೌಂಡರಿ, 1ಸಿಕ್ಸರ್) ರನ್‌ಔಟ್ ಆದರು. ಇದರಿಂದಾಗಿ ಜೊತೆಯಾಟವೂ ಮುರಿಯಿತು. ಬಾಲಂಗೋಚಿ ಬ್ಯಾಟ್ಸ್‌ಮನ್‌ಗಳಾದ ಇಶಾಂತ್ ಶರ್ಮಾ ಮತ್ತು ಮೊಹಮ್ಮದ್ ಸಿರಾಜ್ ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ನಿಲ್ಲಲಿಲ್ಲ. ಇದರಿಂದಾಗಿ ವಾಷಿಂಗ್ಟನ್ ಶತಕದ ಅಸೆ ಕೈಗೂಡಲಿಲ್ಲ.

ಸರಣಿಯಲ್ಲಿ ಅತಿ ಹೆಚ್ಚು ರನ್ ಗಳಿಸಿದವರು

ಬ್ಯಾಟ್ಸ್‌ಮನ್	ತಂಡ	ಪಂದ್ಯ	ರನ್	ಗರಿಷ್ಠ	ಶತಕ	ಅರ್ಧಶತಕ
ಜೋ ರೂಟ್	ಇಂಗ್ಲೆಂಡ್	4	368	218	1	-
ರೋಹಿತ್ ಶರ್ಮಾ	ಭಾರತ	4	345	161	1	1
ರಿಷಭ್ ಪಂತ್	ಭಾರತ	4	270	101	1	2
ಬೆನ್ ಸ್ಟೋಕ್ಸ್	ಇಂಗ್ಲೆಂಡ್	4	203	82	-	2
ಆರ್.ಅಶ್ವಿನ್	ಭಾರತ	4	189	106	1	-

ಸರಣಿಯಲ್ಲಿ ಅತಿ ಹೆಚ್ಚು ವಿಕೆಟ್ ಗಳಿಸಿದವರು

ಬೌಲರ್	ತಂಡ	ಪಂದ್ಯ	ವಿಕೆಟ್	ಶ್ರೇಷ್ಠ (ಇನಿಂಗ್ಸ್)
ಆರ್.ಅಶ್ವಿನ್	ಭಾರತ	4	32	61ಕ್ಕೆ6
ಅಕ್ಷರ್ ಪಟೇಲ್	ಭಾರತ	3	27	38ಕ್ಕೆ6
ಜ್ಯಾಕ್ ಲೀಚ್	ಇಂಗ್ಲೆಂಡ್	4	18	54ಕ್ಕೆ4
ಜೇಮ್ಸ್ ಆ್ಯಂಡರ್ಸನ್	ಇಂಗ್ಲೆಂಡ್	3	8	17ಕ್ಕೆ3
ಮೊಯಿನ್ ಅಲಿ	ಇಂಗ್ಲೆಂಡ್	1	8	98ಕ್ಕೆ4

ಸ್ಕೋರ್‌ಕಾರ್ಡ್

ಇಂಗ್ಲೆಂಡ್ (ಮೊದಲ ಇನಿಂಗ್ಸ್) 205 (75.5 ಓವರ್‌ಗಳಲ್ಲಿ)
ಭಾರತ (ಮೊದಲ ಇನಿಂಗ್ಸ್) 365 (114.4 ಓವರ್‌ಗಳಲ್ಲಿ)
(ಶುಕ್ರವಾರ 94 ಓವರ್‌ಗಳಲ್ಲಿ 7ಕ್ಕೆ 294)

ವಾಷಿಂಗ್ಟನ್ ಸುಂದರ್ ಔಟಾಗದೆ	96
ಅಕ್ಷರ್ ಪಟೇಲ್ ರನ್ ಔಟ್ (ಜಾನಿ ಬೆಸ್ಟೊ/ ಜೋ ರೂಟ್)	43
ಇಶಾಂತ್ ಶರ್ಮಾ ಎಲ್‌ಬಿಡಬ್ಲ್ಯು ಬಿ ಬೆನ್ ಸ್ಟೋಕ್ಸ್	0
ಮೊಹಮ್ಮದ್ ಸಿರಾಜ್ ಬಿ ಬೆನ್ ಸ್ಟೋಕ್ಸ್	0
ಇತರೆ (ಬೈ 10, ಲೆಗ್‌ಬೈ 6, ನೋಬಾಲ್ 3)	19

ವಿಕೆಟ್ ಪತನ: 8-365 (ಅಕ್ಷರ್, 113.6), 9-365 (ಇಶಾಂತ್, 114.1), 10-365 (ಸಿರಾಜ್, 114.4)

ಬೌಲಿಂಗ್: ಜೇಮ್ಸ್ ಆ್ಯಂಡರ್ಸನ್ 25–14–44–3, ಬೆನ್ ಸ್ಟೋಕ್ಸ್ 27.4–6–89–4, ಜ್ಯಾಕ್ ಲೀಚ್ 27–5–89–2, ಡಾಮ್ ಬೆಸ್ 17–1–71–0, ಜೋ ರೂಟ್ 18–1–56–0

ಇಂಗ್ಲೆಂಡ್ (ಎರಡನೇ ಇನಿಂಗ್ಸ್) 135 (54.5 ಓವರ್‌ಗಳಲ್ಲಿ)

ಜ್ಯಾಕ್ ಕ್ರಾವ್ಲಿ ಸಿ ಅಜಿಂಕ್ಯ ರಹಾನೆ ಬಿ ಆರ್.ಅಶ್ವಿನ್	5
ಡಾಮ್ ಸಿಬ್ಲಿ ಸಿ ರಿಷಭ್ ಪಂತ್ ಬಿ ಅಕ್ಷರ್ ಪಟೇಲ್	3
ಜಾನಿ ಬೆಸ್ಟೊ ಸಿ ರೋಹಿತ್ ಶರ್ಮಾ ಬಿ ಆರ್.ಅಶ್ವಿನ್	0
ಜೋ ರೂಟ್ ಎಲ್‌ಬಿಡಬ್ಲ್ಯು ಬಿ ಆರ್.ಅಶ್ವಿನ್	30
ಬೆನ್ ಸ್ಟೋಕ್ಸ್ ಸಿ ವಿರಾಟ್ ಕೊಹ್ಲಿ ಬಿ ಅಕ್ಷರ್ ಪಟೇಲ್	2
ಒಲಿ ಪೋಪ್ ಸ್ಟಂಪ್ಡ್ ರಿಷಭ್ ಪಂತ್ ಬಿ ಅಕ್ಷರ್ ಪಟೇಲ್	15
ಡ್ಯಾನ್ ಲಾರೆನ್ಸ್ ಬಿ ಆರ್.ಅಶ್ವಿನ್	50
ಬೆನ್ ಫೋಕ್ಸ್ ಸಿ ಅಜಿಂಕ್ಯ ರಹಾನೆ ಬಿ ಅಕ್ಷರ್ ಪಟೇಲ್	13
ಡಾಮ್ ಬೆಸ್ ಸಿ ರಿಷಭ್ ಪಂತ್ ಬಿ ಅಕ್ಷರ್ ಪಟೇಲ್	2
ಜ್ಯಾಕ್ ಲೀಚ್ ಸಿ ಅಜಿಂಕ್ಯ ರಹಾನೆ ಬಿ ಆರ್.ಅಶ್ವಿನ್	2
ಜೇಮ್ಸ್ ಆ್ಯಂಡರ್ಸನ್ ಔಟಾಗದೆ	1
ಇತರೆ (ಬೈ 4, ಲೆಗ್‌ಬೈ 8)	12

ವಿಕೆಟ್ ಪತನ: 1-10 (ಕ್ರಾವ್ಲಿ, 4.4), 2-10 (ಬೆಸ್ಟೊ, 4.5), 3-20 (ಸಿಬ್ಲಿ, 9.6), 4-30 (ಸ್ಟೋಕ್ಸ್, 13.1), 5-65 (ಪೋಪ್, 24.5), 6-65 (ರೂಟ್, 25.1), 7-109 (ಫೋಕ್ಸ್, 43.1), 8-111 (ಡಾಮ್ ಬೆಸ್, 45.1), 9-134 (ಲೀಚ್, 54.2), 10-135 (ಡ್ಯಾನ್ ಲಾರೆನ್ಸ್, 54.5)

ಬೌಲಿಂಗ್: ಮೊಹಮ್ಮದ್ ಸಿರಾಜ್ 4–0–12–0, ಅಕ್ಷರ್ ಪಟೇಲ್ 24–6–48–5, ಆರ್.ಅಶ್ವಿನ್ 22.5–4–47–5, ವಾಷಿಂಗ್ಟನ್ ಸುಂದರ್ 4–0–16–0

ಫಲಿತಾಂಶ: ಭಾರತಕ್ಕೆ ಇನಿಂಗ್ಸ್ ಮತ್ತು 25 ರನ್‌ಗಳ ಜಯ; 3–1ರಲ್ಲಿ ಸರಣಿ ಗೆಲುವು.

ಪಂದ್ಯಶ್ರೇಷ್ಠ: ರಿಷಭ್ ಪಂತ್

ಸರಣಿ ಶ್ರೇಷ್ಠ: ರವಿಚಂದ್ರನ್ ಅಶ್ವಿನ್

ಗಾವಸ್ಕರ್‌ಗೆ ಸನ್ಮಾನ

ಸ್ಮರಣಿಕೆಯಾಗಿ ನೀಡಿದ ಟೆಸ್ಟ್ ಕ್ಯಾಪ್‌ನೊಂದಿಗೆ ಸುನಿಲ್ ಗಾವಸ್ಕರ್ –ಪಿಟಿಐ ಚಿತ್ರ

ಅಹಮದಾಬಾದ್: ಸುನೀಲ್ ಗಾವಸ್ಕರ್ ಅವರು ಟೆಸ್ಟ್ ಕ್ರಿಕೆಟ್ ಪದಾರ್ಪಣೆಗೆ ಶನಿವಾರ 50 ವರ್ಷ ತುಂಬಿತು. ಈ ಸಂದರ್ಭದಲ್ಲಿ ಅವರನ್ನು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು (ಬಿಸಿಸಿಐ) ಸತ್ಕರಿಸಿತು.

ಮೊಟೇರಾ ಟೆಸ್ಟ್ ಪಂದ್ಯದ ಮೂರನೇ ದಿನದಾಟದ ಊಟದ ವಿರಾಮದ ಸಂದರ್ಭದಲ್ಲಿ 71 ವರ್ಷದ ಗಾವಸ್ಕರ್ ಅವರನ್ನು ಬಿಸಿಸಿಐ ಅಧ್ಯಕ್ಷ ಸೌರವ್ ಗಂಗೂಲಿ ಮತ್ತು ಕಾರ್ಯದರ್ಶಿ ಜಯ್ ಶಾ ಅವರು ಸನ್ಮಾನಿಸಿದರು.

‘ಭಾರತ ತಂಡದ ಮಾಜಿ ನಾಯಕ ಗಾವಸ್ಕರ್ ಮತ್ತು ಅವರ ಆಗಿನ ಸಹ ಆಟಗಾರರು ದೇಶದ ಕ್ರಿಕೆಟ್‌ಗೆ ಮಜಬೂತಾದ ಅಡಿಪಾಯ ಹಾಕಿದರು. ಅದು ಈಗಲೂ ದೃಢವಾಗಿದೆ’ ಎಂದು ಗಂಗೂಲಿ ಹೇಳಿದರು.

ಸಚಿನ್ ಟ್ವೀಟ್: ‘ನನಗೆ ಗಾವಸ್ಕರ್ ಅವರು ಸಾರ್ವಕಾಲಿಕ ಹೀರೊ. ಅವರ ಆಟವನ್ನು ನೋಡುತ್ತ, ಅದರಿಂದ ಕಲಿಯುತ್ತ ಬೆಳೆದೆ. ಅವರನ್ನೇ ಅನುಸರಿಸಿದೆ’ ಎಂದು ದಿಗ್ಗಜ ಆಟಗಾರ ಸಚಿನ್ ತೆಂಡೂಲ್ಕರ್ ಟ್ವೀಟ್ ಮಾಡಿದ್ದಾರೆ.

ಟೆನಿಸ್: ನಿಕ್ಷೇಪ್ ಜೋಡಿಗೆ ಪ್ರಶಸ್ತಿ

ಬೆಂಗಳೂರು: ಕರ್ನಾಟಕದ ಬಿ.ಆರ್. ನಿಕ್ಷೇಪ್ ಹಾಗೂ ಅಸ್ಸಾಂನ ಶೇಖ್ ಇಫ್ತಿಕಾರ್ ಜೋಡಿಯು ಹೈದರಾಬಾದ್‌ನಲ್ಲಿ ನಡೆದ ಎಐಟಿಎ ರಾಷ್ಟ್ರೀಯ ರ್‍ಯಾಂಕಿಂಗ್ ಟೆನಿಸ್ ಟೂರ್ನಿಯ ಡಬಲ್ಸ್ ವಿಭಾಗದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದರು.

ಟೂರ್ನಿಯ ಫೈನಲ್ ಹಣಾಹಣಿಯಲ್ಲಿ ನಿಕ್ಷೇಪ್ ಹಾಗೂ ಇಫ್ತಿಕಾರ್ 7-6(3), 6-4ರಿಂದ ತಮಿಳುನಾಡಿನ ಇರ್ಫಾನ್ ಹುಸೇನ್–ಇಹಸಾನ್ ಹುಸೇನ್ ಎದುರು ಜಯಭೇರಿ ಮೊಳಗಿಸಿದರು. ಕರ್ನಾಟಕ–ಅಸ್ಸಾಂ ಜೋಡಿಗೆ ಇರ್ಫಾನ್ ಹಾಗೂ ಇಹಸಾನ್ ಉತ್ತಮ ಸವಾಲು ಒಡ್ಡಿದರು.

ಪ್ರತಿಮಾ ರಾವ್ ಮತ್ತು ವೀರಸಾಮಿ ಶೇಖರ್ ಅವರಿಗೆ ಪ್ಯಾರಾ ಅಥ್ಲೀಟ್ ಕೆ.ವೈ. ವೆಂಕಟೇಶ್ ಪ್ರಶಸ್ತಿ ವಿತರಿಸಿದರು

ವ್ಹೀಲ್ ಚೇರ್ ಟೆನಿಸ್ ಟೂರ್ನಿ: ವೀರಸಾಮಿ, ಪ್ರತಿಮಾಗೆ ಪ್ರಶಸ್ತಿ

ಬೆಂಗಳೂರು: ಕರ್ನಾಟಕದ ಪ್ರತಿಮಾ ರಾವ್ ಹಾಗೂ ವೀರಸಾಮಿ ಶೇಖರ್ ಇಲ್ಲಿ ಶನಿವಾರ ಮುಕ್ತಾಯಗೊಂಡ ಕೆಎಸ್‌ಎಲ್‌ಟಿಎ–ಎಐಟಿಎ ಆಶ್ರಯದ ವ್ಹೀಲ್ ಚೇರ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಮಹಿಳೆಯರ ಮತ್ತು ಪುರುಷರ ವಿಭಾಗದ ಪ್ರಶಸ್ತಿ ಗೆದ್ದುಕೊಂಡರು.

ಅಗ್ರ ಶ್ರೇಯಾಂಕದ ಪ್ರತಿಮಾ ಫೈನಲ್ ಹಣಾಹಣಿಯಲ್ಲಿ ಕರ್ನಾಟಕದವರೇ ಆದ ಎರಡನೇ ಶ್ರೇಯಾಂಕಿತೆ ಕೆ.ಪಿ.ಶಿಲ್ಪಾ ಅವರನ್ನು 6-4, 1-6, 16-14ರಲ್ಲಿ ಮಣಿಸಿದರು. ವೀರಸಾಮಿ, ತಮಿಳುನಾಡಿನ ಸುಬ್ರಮಣಿಯನ್ ಬಾಲಚಂದರ್ ವಿರುದ್ಧ 6-3, 6-4ರಲ್ಲಿ ಗೆಲುವು ಸಾಧಿಸಿದರು.

ಪುರುಷರ ಡಬಲ್ಸ್‌ನಲ್ಲಿ ಕರುಣಾಕರಣ್ ಕಾರ್ತಿಕ್ ಮತ್ತು ದುರ್ಮೈ ಮರಿಯಪ್ಪನ್ 6-1, 7-6 (5)ರಲ್ಲಿ ಸುಬ್ರಮಣಿಯನ್ ಬಾಲಚಂದರ್ ಮತ್ತು ವೀರಸಾಮಿ ಶೇಖರ್ ಅವರನ್ನು ಸೋಲಿಸಿದರು. ಮಹಿಳೆಯರ ಡಬಲ್ಸ್‌ನಲ್ಲಿ ನಳಿನ ಕುಮಾರಿ ಜೊತೆಗೂಡಿ ಆಡಿದ ಶಿಲ್ಪಾ 6-1, 6-2ರಲ್ಲಿ ಪ್ರತಿಮಾ ಮತ್ತು ಎಂ.ಕೆ.ಮುಬೀನಾ ಜೋಡಿಯ ಸವಾಲು ಗೆದ್ದರು.

ಸಂಕ್ಷಿಪ್ತ ಸುದ್ದಿ

ಅರ್ಜುನ್‌ಗೆ ಕಂಚು

ದಾವಣಗೆರೆ: ಕರ್ನಾಟಕದ ಅರ್ಜುನ್ ಹಲಕುರ್ಕಿ ಅವರು ಇಟಲಿಯ ರೋಮ್‌ನಲ್ಲಿ ನಡೆಯುತ್ತಿರುವ ಮ್ಯಾಟಿಯೊ ಪೆಲಿಕಾನ್ ರ್‍ಯಾಂಕಿಂಗ್ ಸರಣಿಯಲ್ಲಿ (ರೋಮ್ ರ್‍ಯಾಂಕಿಂಗ್ ಸೀರೀಸ್) ಗ್ರೀಕೊ ರೋಮನ್ ಕುಸ್ತಿ 55 ಕೆ.ಜಿ. ವಿಭಾಗದಲ್ಲಿ ಕಂಚಿನ ಪದಕ ಪಡೆದಿದ್ದಾರೆ.

ಶುಕ್ರವಾರ ನಡೆದ ಪಂದ್ಯದಲ್ಲಿ ಪೋರ್ಚುಗಲ್‌ನ ಕಾರ್ಡೋಸೊ ಆಲಿವ್ ಎ.ಅವರನ್ನು 8–0 ಅಂತರದಿಂದ ಮಣಿಸಿ ಪದಕ ಗೆದ್ದರು.

ಸರಿತಾಗೆ ಬೆಳ್ಳಿ: ಸರಿತಾ ಮೋರ್ ಅವರು ಮಹಿಳೆಯರ 57 ಕೆಜಿ ವಿಭಾಗದ ಫೈನಲ್ ಬೌಟ್‌ನಲ್ಲಿ ಬೆಳ್ಳಿಪದಕ ತಮ್ಮದಾಗಿಸಿಕೊಂಡರು.

ಅಂಧರ ವಾಲಿಬಾಲ್: ‘ದೀಪಾಂಜಲಿ’ಗೆ ಜಯ

ಚಿತ್ರದುರ್ಗ: ಬೆಂಗಳೂರಿನ ದೀಪಾಂಜಲಿ ಅಂಧರ ತಂಡವು ಇಲ್ಲಿ ನಡೆಯುತ್ತಿರುವ ಅಂಧರ ರಾಜ್ಯಮಟ್ಟದ ವಾಲಿಬಾಲ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು. ಇಲ್ಲಿಯ ಹಳೆ ಮಾಧ್ಯಮಿಕ ಶಾಲಾ ಆವರಣದಲ್ಲಿ ತಾಲ್ಲೂಕಿನ ಮಾಳಪ್ಪನಹಟ್ಟಿಯ ತೀಕ್ಷ್ಣ ಅಂಧ ಮಕ್ಕಳ ವಸತಿಶಾಲೆ ಆಯೋಜಿಸಿರುವ ಟೂರ್ನಿಯಲ್ಲಿ ಈ ತಂಡ ರಾಣೆಬೆನ್ನೂರು ತಂಡವನ್ನು 2–1ರಿಂದ ಮಣಿಸಿತು.

ಐಎಸ್‌ಎಲ್ ಟೂರ್ನಿ: ಎಟಿಕೆಎಂಬಿ–ನಾರ್ತ್ ಈಸ್ಟ್ ಪಂದ್ಯ ಡ್ರಾ

ಬ್ಯಾಂಬೊಲಿಮ್, ಗೋವಾ: ಇಂಜುರಿ ಅವಧಿಯಲ್ಲಿ ಎಟಿಕೆ ಮೋಹನ್ ಬಾಗನ್ ತಂಡದ ರಕ್ಷಣಾ ವಿಭಾಗಕ್ಕೆ ಚಳ್ಳೆಹಣ್ಣು ತಿನ್ನಿಸಿ ಸುಲಭ ಗೋಲು ಗಳಿಸಿದ ಇದ್ರಿಸಾ ಸಿಲ್ಲಾ, ನಾರ್ತ್ ಈಸ್ಟ್ ಯುನೈಟೆಡ್ ತಂಡದ ಕೈ ಹಿಡಿದರು. ಇಲ್ಲಿನ ಜಿಎಂಸಿ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಟೂರ್ನಿಯ ಎರಡನೇ ಸೆಮಿಫೈನಲ್‌ನ ಮೊದಲ ಲೆಗ್‌ನ ಪಂದ್ಯ 1–1ರಲ್ಲಿ ಡ್ರಾಗೊಂಡಿತು.

ಕ್ರಿಕೆಟ್: ಮಿಥಾಲಿ ಬಳಗಕ್ಕೆ ದಕ್ಷಿಣ ಆಫ್ರಿಕಾ ಸವಾಲು

ಲಖನೌ (ಪಿಟಿಐ): ಒಂದು ವರ್ಷದ ನಂತರ ಭಾರತ ಮಹಿಳೆಯರ ಕ್ರಿಕೆಟ್ ತಂಡ ಸ್ಪರ್ಧಾ ಕಣಕ್ಕೆ ಇಳಿಯಲು ಸಜ್ಜಾಗಿದೆ. ದಕ್ಷಿಣ ಆಫ್ರಿಕಾ ಮಹಿಳಾ ತಂಡದ ಎದುರಿನ ಏಕದಿನ ಪಂದ್ಯಗಳ ಸರಣಿಯ ಮೊದಲ ಪಂದ್ಯ ಭಾನುವಾರ ಇಲ್ಲಿ ನಡೆಯಲಿದ್ದು ಈ ಸರಣಿ, ವಿಶ್ವಕಪ್ ಟೂರ್ನಿಗೆ ಸಿದ್ಧತೆ ನಡೆಸಲು ಭಾರತಕ್ಕೆ ಅನುಕೂಲ ಆಗಲಿದೆ.

ಆರಂಭ: ಬೆಳಿಗ್ಗೆ 9.00
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

‘ಏ. 9ರಿಂದ ಐಪಿಎಲ್ ಟೂರ್ನಿ’

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡವು ಇಂಗ್ಲೆಂಡ್ ವಿರುದ್ಧ ನಡೆಯುತ್ತಿರುವ ಸರಣಿ ಪೂರ್ಣಗೊಳಿಸಿದ 12 ದಿನಗಳ ನಂತರ, ಏಪ್ರಿಲ್ 9 ರಂದು ಬಹುನಿರೀಕ್ಷಿತ ಇಂಡಿಯನ್ ಪ್ರೀಮಿಯರ್ ಲೀಗ್ ಆರಂಭವಾಗಲಿದೆ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ. ಇಂಗ್ಲೆಂಡ್ ವಿರುದ್ಧದ ಏಕದಿನ ಸರಣಿಯ ಕೊನೆಯ ಪಂದ್ಯ ಮಾರ್ಚ್ 28 ರಂದು ಪುಣೆಯಲ್ಲಿ ನಡೆಯಲಿದೆ.